ಸೋಮವಾರ, ಸೆಪ್ಟೆಂಬರ್ 26, 2022 | ₹ 6.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

/prajavani.net @prajavani /prajavani http://bit.ly/Prajavani

ನೃತ್ಯ

ದುರ್ಗಾ ಪೂಜೆಯ ಅಂಗವಾಗಿ ಕೋಲ್ಕತ್ತದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಂಗಾಳಿ ಚಿತ್ರನಟಿಯರಾದ ಸಾಯಂತಿಕಾ ಬ್ಯಾನರ್ಜಿ ಮತ್ತು ಸುಭಾಶ್ರೀ ಗಂಗೂಲಿ ನೃತ್ಯ ಪ್ರದರ್ಶಿಸಿದರು



ಸಂಕ್ಷಿಪ್ತ ಸುದ್ದಿ

ಮಡಿಕೇರಿ ದಸರೆಗೆ ಕರಗೋತ್ಸವ ಮುನ್ನುಡಿ

ಮಡಿಕೇರಿ: 'ಬೆಳಕಿನ ದಸರಾ' ಮಡಿಕೇರಿ ದಸರೆಗೆ ಸೆ. 26ರಂದು ಕರಗೋತ್ಸವ ಮುನ್ನುಡಿ ಬರೆಯಲಿದೆ. ಶಕ್ತಿ ದೇವತೆಗಳಾದ ಕೋಟೆ ಮಾರಿಯಮ್ಮ, ಕುಂದೂರು ಮೊಟ್ಟೆ ಚೌಟಿ ಮಾರಿಯಮ್ಮ, ದಂಡಿನ ಮಾರಿಯಮ್ಮ, ಕಂಚಿಕಾಮಾಕ್ಷಮ್ಮ ಕರಗಗಳು ಒಟ್ಟಿಗೇ ಹೊರಡಲಿವೆ.

ಶಾರ್ಟ್ ಸರ್ಕಿಟ್: ವೈದ್ಯ, ಇಬ್ಬರು ಮಕ್ಕಳು ಸಾವು

ತಿರುಪತಿ (ಪಿಟಿಐ): ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದಾಗಿ ಮೂರು ಅಂತಸ್ತಿನ ಮನೆಯಲ್ಲಿ ಬೆಂಕಿ ಹೊತ್ತಿದ್ದರಿಂದ ರೇಡಿಯಾಲಜಿ ತಜ್ಞ ಮತ್ತು ಅವರ ಇಬ್ಬರು ಮಕ್ಕಳು ಮೃತಪಟ್ಟಿರುವ ಘಟನೆ ತಿರುಪತಿಯ ರೇಣಿಗುಂಟದಲ್ಲಿ ಭಾನುವಾರ ಬೆಳಿಗ್ಗೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವೈದ್ಯರ ಪತ್ನಿ ಮತ್ತು ಅತ್ತೆ ಈ ದುರಂತದಲ್ಲಿ ಪಾರಾಗಿದ್ದಾರೆ. ಅಡುಗೆ ಮನೆಯಲ್ಲಿ ಶಾರ್ಟ್ ಸರ್ಕಿಟ್ ಸಂಭವಿಸಿದೆ. ಅದೇ ವೇಳೆ ಅಡುಗೆ ಅನಿಲದ ಸಿಲಿಂಡರ್‌ನಿಂದ ಸೋರಿಕೆಯಿಂದಾಗಿ ಬೆಂಕಿಯು ಇಡೀ ಮನೆಗೆ ಹಬ್ಬಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನೆಲ ಮಹಡಿಯಲ್ಲಿ ದಟ್ಟ ಹೊಗೆ ಬರುತ್ತಿರುವುದನ್ನು ನೋಡಿ ಅವರ 11 ವರ್ಷ ವಯಸ್ಸಿನ ಮಗಳು ಮತ್ತು ಏಳು ವರ್ಷ ವಯಸ್ಸಿನ ಮಗ ಶೌಚಾಲಯಕ್ಕೆ ಹೋಗಿ ಬಾಗಿಲಿನ ಚಿಲಕ ಹಾಕಿಕೊಂಡ ಕಾರಣ ಉಸಿರುಗಟ್ಟಿ ಮೃತಪಟ್ಟಿದ್ದಾರೆ ಎಂದಿದ್ದಾರೆ.

ಇಬ್ಬರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಉತ್ತರ ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿ ಭಾನುವಾರ ಭದ್ರತಾ ಪಡೆಗಳು ಹಾಗೂ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಇಬ್ಬರು ಉಗ್ರರನ್ನು ಹತ್ಯೆ ಮಾಡಿದ್ದಾರೆ.

ಮಚಿಲ್ ಪ್ರದೇಶದಲ್ಲಿನ ಎಲ್‌ಒಸಿ ಸಮೀಪ ಜಂಟಿ ಕಾರ್ಯಾಚರಣೆ ನಡೆಸಿ ಉಗ್ರರನ್ನು ಹತ್ಯೆ ಮಾಡಲಾಗಿದೆ.



ಮಂಗಳೂರು ದಸರಾ ಹಬ್ಬದ ಪ್ರಯುಕ್ತ ವಿದ್ಯುದ್ದೀಪಾಲಂಕಾರಗೊಂಡ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಪುಷ್ಕರಣಿಯಲ್ಲಿ ಚಿಮ್ಮಿದ ಕಾರಂಜಿ –ಪ್ರಜಾವಾಣಿ ಚಿತ್ರ/ ಗಣೇಶ ಅದ್ಯಪಾಡಿ

ನವರಾತ್ರಿ: ಮಂಗಳೂರು ಸಜ್ಜು

ಪ್ರಜಾವಾಣಿ ವಾರ್ತೆ

ಮಂಗಳೂರು: ನವರಾತ್ರಿ ಹಾಗೂ ದಸರಾ ಹಬ್ಬವನ್ನು ಸಡಗರದಿಂದ ಆಚರಿಸಲು ನಗರ ಸಜ್ಜಾಗಿದೆ.

ಬೋಳಾರದ ಮಂಗಳಾದೇವಿ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ಸೋಮವಾರದಿಂದ ಅ.6ರವರೆಗೆ ವಿಶೇಷ ಪೂಜೆ ಪುನಸ್ಕಾರಗಳು ನಡೆಯಲಿವೆ. ಈ ಬಾರಿ ಶ್ರೀ ದೇವಿಗೆ ಸುವರ್ಣ ಪಾದುಕೆ ಹಾಗೂ ಬಲಿಮೂರ್ತಿಯ ಪುಷ್ಪ ಕನ್ನಡಿಗೆ ಚಿನ್ನದ ಹೊದಿಕೆ ಅರ್ಪಿಸಲಾಗುತ್ತಿದೆ. ಒಟ್ಟು 2 ಕೆ.ಜಿ ತೂಕದ ಚಿನ್ನದ ಪರಿಕರಗಳಿಗೆ ಅಂದಾಜು ₹ 1.25 ಕೋಟಿ ವೆಚ್ಚವಾಗಿದೆ. ಈ ಬಾರಿ ದೇವಸ್ಥಾನದ ಮುಖಮಂಟಪಕ್ಕೆ ಹಾಗೂ ನಾಗದೇವರಿಗೆ ಬೆಳ್ಳಿಯ ಹೊದಿಕೆಗಳನ್ನು ದಾನಿಗಳು ಅರ್ಪಿಸಿದ್ದಾರೆ.

ಮಂಗಳೂರಿನ ರಥಬೀದಿ ಆಚಾರ್ಯ ಮಠ ವಠಾರದಲ್ಲಿ ಏರ್ಪಡಿಸುವ ಸಾರ್ವಜನಿಕ ಮಂಗಳೂರು ಶ್ರೀ ಶಾರದಾ ಮಹೋತ್ಸವಕ್ಕೆ ಈ ಬಾರಿ ಶತಮಾನದ ಸಡಗರ. ಈ ಪ್ರಯುಕ್ತ ಭಾನುವಾರ 'ಹೊರೆಕಾಣಿಕೆ ಜಾಥಾ' ನಡೆಯಿತು. ಶತಮಾನೋತ್ಸವ ಅಂಗವಾಗಿ ಶಾರದಾ ಮಾತೆಗೆ ಅರ್ಪಣೆಯಾಗಲಿರುವ ರಜತಪೀಠ, ಪ್ರಭಾವಳಿ, ಚಿನ್ನದ ಆರತಿ, ಸ್ವರ್ಣ ನವಿಲು, ಸ್ವರ್ಣ ವೀಣೆ, ಚಿನ್ನದ ಕೈಬಳೆಗಳನ್ನು ಮೆರವಣಿಗೆಯಲ್ಲಿ ಸಾಗಿಸಲಾಯಿತು.

ಕುದ್ರೋಳಿಯ ಗೋಕರ್ಣನಾಥ ಕ್ಷೇತ್ರದ ವತಿಯಿಂದ ನಡೆಸುವ ಮಂಗಳೂರು ದಸರಾ ಪ್ರಯುಕ್ತ ನಗರದಾದ್ಯಂತ ವಿದ್ಯುದ್ದೀಪಾಲಂಕಾರ ಮಾಡಲಾಗಿದೆ. ಮಂಗಳೂರು ದಸರಾ ಕಾರ್ಯಕ್ರಮಕ್ಕೆ ಬಿ.ಜನಾರ್ದನ ಪೂಜಾರಿ ಅವರು ಸೋಮವಾರ ಚಾಲನೆ ನೀಡಲಿದ್ದಾರೆ.

ಸುದ್ದಿ 2 ನಿಮಿಷ

ಎಸ್‌.ಎಂ. ಕೃಷ್ಣ ಆಸ್ಪತ್ರೆಗೆ ದಾಖಲು

ಬೆಂಗಳೂರು: ತೀವ್ರ ಉಸಿರಾಟದ ಸೋಂಕಿನಿಂದ ಬಳಲುತ್ತಿದ್ದ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಮುಖಂಡ ಎಸ್‌.ಎಂ. ಕೃಷ್ಣ ಅವರು ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

90 ವರ್ಷದ ಅವರಿಗೆ ಶನಿವಾರ ರಾತ್ರಿಯೇ ಜ್ವರ ಹಾಗೂ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಶ್ವಾಸಕೋಶ ತಜ್ಞರಾದ ಡಾ. ಸತ್ಯನಾರಾಯಣ ಮೈಸೂರು ಮತ್ತು ಡಾ. ಸುನೀಲ್ ಕಾರಂತ್ ನೇತೃತ್ವದ ವೈದ್ಯರ ವಿಶೇಷ ತಂಡ ಅವರಿಗೆ ಚಿಕಿತ್ಸೆ ನೀಡುತ್ತಿದೆ.

'ಅವರಿಗೆ ಕೃತಕ ಉಸಿರಾಟದ ಸಂಪರ್ಕ ಕಲ್ಪಿಸಲಾಗಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ಅವರ ಆರೋಗ್ಯದ ಮೇಲೆ ನಿಗಾ ಇರಿಸಲಾಗಿದೆ' ಎಂದು ಆಸ್ಪತ್ರೆ ತಿಳಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಬಿ.ಎಸ್. ಯಡಿಯೂರಪ್ಪ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸೇರಿ ಹಲವರು ಆಸ್ಪತ್ರೆಗೆ ಭೇಟಿ ನೀಡಿ, ಆರೋಗ್ಯ ವಿಚಾರಿಸಿದರು.

'ಎಸ್‌.ಎಂ ಕೃಷ್ಣ ಅವರು ಎರಡು, ಮೂರು ದಿನಗಳಲ್ಲಿ ಆಸ್ಪತ್ರೆಯಿಂದ ಮನೆಗೆ ತೆರಳಲಿದ್ದಾರೆ. ಅವರು ಜ್ವರದಿಂದ ಬಳಲುತ್ತಿದ್ದರು. ಹೀಗಾಗಿ, ಅವರನ್ನು ವೈದೇಹಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಉಸಿರಾಟದ ತೊಂದರೆ ಕಾಣಿಸಿಕೊಂಡಿದ್ದರಿಂದ ಮಣಿಪಾಲ್ ಆಸ್ಪತ್ರೆಗೆ ಸೇರಿಸಲಾಗಿದೆ. ನಿರಂತರ ಚಿಕಿತ್ಸೆಯಿಂದ ಅವರು ಚೇತರಿಸಿಕೊಳ್ಳುತ್ತಿದ್ದಾರೆ. ಜನರು ಯಾವುದೇ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ' ಎಂದು ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು.



ರಸ್ತೆ ಅಪಘಾತ: ನಾಲ್ವರ ಸಾವು

ಬೆಳಗಾವಿ: ಜಿಲ್ಲೆಯ ಸವದತ್ತಿ ತಾಲ್ಲೂಕಿನ ಬೂದಿಗೊಪ್ಪ ಕ್ರಾಸ್ ಬಳಿ, ರಾಜ್ಯ ಹೆದ್ದಾರಿ ಮೇಲೆ ಭಾನುವಾರ ಮಧ್ಯಾಹ್ನ ಲಾರಿ, ಕಾರು ಹಾಗೂ ಬೈಕ್ ನಡುವೆ ಡಿಕ್ಕಿ ಸಂಭವಿಸಿದ್ದು, ಎಎಸ್ಐವೊಬ್ಬರ ಪತ್ನಿ, ಪುತ್ರಿ ಸೇರಿ ನಾಲ್ವರು ಮೃತಪಟ್ಟಿದ್ದಾರೆ. ಇನ್ನೂ ಇಬ್ಬರಿಗೆ ಗಂಭೀರ ಗಾಯಗಳಾಗಿವೆ.

ಕುಡಚಿ ಎಎಸ್ಐ ಪರಶುರಾಮ ಹಲಕಿ ಅವರ ಪತ್ನಿ ರುಕ್ಮಿಣಿ (48), ಪುತ್ರಿ ಅಕ್ಷತಾ (22) ಕಾರು ಚಾಲಕ ನಿಖಿಲ್ ಕದಂ (24) ಸ್ಥಳದಲ್ಲೇ ಸಾವನ್ನಪ್ಪಿದರು. ಬೈಕಿನಲ್ಲಿದ್ದ ಹಣಮವ್ವ ಚಿಪ್ಪಲಕಟ್ಟಿ ಎಂಬುವವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ಎಎಸ್ಐ ಪರಶುರಾಮ ಅವರು ವಾಹನದಲ್ಲಿ ಇರಲಿಲ್ಲ. ಅವರ ಪತ್ನಿ, ಪುತ್ರಿ ಕಾರಿನಲ್ಲಿ ಯರಗಟ್ಟಿ ಕಡೆಗೆ ಹೊರಟಿದ್ದರು. ಇದೇ ವೇಳೆ ಯರಗಟ್ಟಿ ಕಡೆಯಿಂದ ಬೆಳಗಾವಿ ಮಾರ್ಗವಾಗಿ ಸಂಚರಿಸುತ್ತಿದ್ದ ಸಿಮೆಂಟ್ ತುಂಬಿದ್ದ ಲಾರಿ ಮಧ್ಯೆ ಡಿಕ್ಕಿ ಸಂಭವಿಸಿತು. ಕಾರಿನ ಹಿಂದೆಯೇ ಹೊರಟಿದ್ದ ಬೈಕ್ ಸವಾರರಿಗೂ ಈ ವಾಹನಗಳು ಗುದ್ದಿದವು. ಅಪಘಾತದ ರಭಸಕ್ಕೆ ಕಾರು, ಬೈಕ್ ಸಂಪೂರ್ಣ ನಜ್ಜುಗುಜ್ಜಾದವು. ಬೈಕ್ ಸವಾರ ಹಾಗೂ ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿದ್ದು, ಬೆಳಗಾವಿಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚುನಾವಣಾ ತಯಾರಿ: ಕ್ಷೇತ್ರವಾರು ಸಮೀಕ್ಷೆ ವರದಿ ನವೆಂಬರ್ ಕೊನೆಯಲ್ಲಿ ಸಲ್ಲಿಕೆ

150 'ಕೈ' ಅಭ್ಯರ್ಥಿಗಳ ಘೋಷಣೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆಗೆ ಆರು ತಿಂಗಳು ಇರುವಾಗಲೇ 150 ಕ್ಷೇತ್ರಗಳಿಗೆ ಪಕ್ಷದ ಅಭ್ಯರ್ಥಿಗಳನ್ನು ಘೋಷಿಸಿ, ಅಖಾಡಕ್ಕಿಳಿಯಲು ಕಾಂಗ್ರೆಸ್ ಗಂಭೀರ ಚಿಂತನೆ ನಡೆಸಿದೆ. ಆ ಮೂಲಕ, ಕೊನೆ ಕ್ಷಣದಲ್ಲಿ ಅಭ್ಯರ್ಥಿಯ ಹೆಸರು ಪ್ರಕಟಿಸುವುದರಿಂದ ಎದುರಾಗುವ ಅಪಸ್ವರ, ಭಿನ್ನಮತದ ಸುಳಿಯಿಂದ ಪಾರಾಗುವ ತಂತ್ರಗಾರಿಕೆಯ ಮೊರೆ ಹೋಗಲು 'ಕೈ' ನಾಯಕರು ಮುಂದಾಗಿದ್ದಾರೆ.

ಪಕ್ಷದ ವರಿಷ್ಠರ ಸೂಚನೆಯಂತೆ ಚುನಾವಣಾ ತಂತ್ರಜ್ಞ ಸುನೀಲ್ ಕುನುಗೋಳ್ ನೇತೃತ್ವದ ತಂಡ ಪ್ರತಿ ವಿಧಾನಸಭಾ ಕ್ಷೇತದಲ್ಲಿ ಅಭ್ಯರ್ಥಿಗಳ ಗೆಲ್ಲುವ ಸಾಧ್ಯತೆಯನ್ನು ಆಧರಿಸಿ ಸಮೀಕ್ಷೆ ನಡೆಸುತ್ತಿದೆ. ಈ ವರದಿ ನವೆಂಬರ್ ಕೊನೆಯಲ್ಲಿ ಎಐಸಿಸಿಗೆ ಸಲ್ಲಿಕೆ ಆಗಲಿದೆ. ವರದಿಯಲ್ಲಿರುವ ಅಂಶಗಳನ್ನು ಆಧರಿಸಿ ಕನಿಷ್ಠ 150 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿ, ಡಿಸೆಂಬರ್‌ನಲ್ಲಿ ಹೆಸರು ಪ್ರಕಟಿಸಲು ಚರ್ಚೆ ನಡೆದಿದೆ ಎಂದು ಕಾಂಗ್ರೆಸ್‌ನ ಮೂಲಗಳು ತಿಳಿಸಿವೆ.

'ಪ್ರತಿ ಚುನಾವಣೆಯಲ್ಲೂ ನಾಮಪತ್ರ ಸಲ್ಲಿಕೆಗೆ ಅಂತಿಮ ದಿನ ಸಮೀಪಿಸಿದಾಗ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಪರಿಪಾಠ ಪಕ್ಷದಲ್ಲಿದೆ. ಇದು ಪಕ್ಷದೊಳಗೆ ಆಂತರಿಕ ಭಿನ್ನಮತ ಸೃಷ್ಟಿಗೆ ಕಾರಣವಾಗುವ ಜೊತೆಗೆ, ಅಭ್ಯರ್ಥಿಗಳು ಮತದಾರರ ಬಳಿ ತಲುಪಲು ಸಮಯಾವಕಾಶದ ಕೊರತೆಯೂ ಎದುರಾಗುತ್ತದೆ. ಇದು ಚುನಾವಣಾ ಫಲಿತಾಂಶದ ಮೇಲೂ ಪರಿಣಾಮ ಬೀರುತ್ತದೆ. ಈ ಗೊಂದಲಗಳಿಗೆ ಅವಕಾಶ ನೀಡದಂತೆ ಅಭ್ಯರ್ಥಿಗಳ ಆಯ್ಕೆ ಮತ್ತು ಚುನಾವಣಾ ಪ್ರಚಾರ ತಂತ್ರಗಳನ್ನು ರೂಪಿಸಬೇಕಾದ ಕುರಿತು ಚರ್ಚೆ ನಡೆದಿದೆ' ಎಂದೂ ಮೂಲಗಳು ಹೇಳಿವೆ.

ಪಕ್ಷದ ಶಾಸಕರು ಇರುವ ಕ್ಷೇತ್ರಗಳು ಮತ್ತು ಕಳೆದ ಚುನಾವಣೆಯಲ್ಲಿ ಕನಿಷ್ಠ ಅಂತರದಲ್ಲಿ ಅಭ್ಯರ್ಥಿ ಸೋಲು ಕಂಡ ಕ್ಷೇತ್ರಗಳಲ್ಲಿ ಮೊದಲ ಹಂತದಲ್ಲಿ ಅಭ್ಯರ್ಥಿಗಳನ್ನು ಘೋಷಿಸಲು ಉದ್ದೇಶಿಸಲಾಗಿದೆ. ಅಭ್ಯರ್ಥಿಯ ಹೆಸರು ಘೋಷಿಸುವ ಜೊತೆಗೆ, ಅಂದಿನಿಂದಲೇ ಕ್ಷೇತ್ರದಾದ್ಯಂತ ಸುತ್ತಾಡಿ ಜನಮತ ಪಡೆಯಲು ಕೆಲಸ ಮಾಡುವಂತೆ ಸೂಚನೆ ನೀಡಲಾಗುವುದು. ಪ್ರತಿ ಮತದಾರರನ್ನು ತಲುಪಲು ಸಾಧ್ಯವಾಗುವಂತೆ ಪ್ರಚಾರ ಕಾರ್ಯತಂತ್ರ ರೂಪಿಸುವಂತೆ ಈ ಅಭ್ಯರ್ಥಿಗಳಿಗೆ ತಿಳಿಸಲಾಗುವುದು ಎಂದೂ ಮೂಲಗಳು ತಿಳಿಸಿವೆ.

ಚುನಾವಣೆಗೆ ಕೆಲವು ತಿಂಗಳು ಇರುವಾಗಲೇ ಪಕ್ಷದ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಕುರಿತಂತೆ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಜೊತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಾಥಮಿಕ ಚರ್ಚೆ ನಡೆಸಿದ್ದಾರೆ. ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೊ' ಯಾತ್ರೆ ರಾಜ್ಯದಲ್ಲಿ 21 ದಿನ ಸಂಚರಿಸಲಿದೆ. ಮುಂಬರುವ ಚುನಾವಣೆಯ ದೃಷ್ಟಿಯಿಂದ ಈ ಯಾತ್ರೆ ಮಹತ್ವದ್ದು. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ಎಲ್ಲ ಪ್ರಮುಖ ನಾಯಕರು ರಾಹುಲ್ ಜೊತೆ ಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ ಎಂದೂ ಮೂಲಗಳು ಹೇಳಿವೆ.

ಅಭ್ಯರ್ಥಿಗಳತ್ತ ಜನರ ಒಲವು ಪರೀಕ್ಷೆ

'ಈಗಾಗಲೇ ಕ್ಷೇತ್ರವಾರು ಪಕ್ಷದ ಸ್ಥಿತಿಗತಿಯ ಮೊದಲ ಸಮೀಕ್ಷಾ ವರದಿ ನೀಡಿರುವ ಸುನೀಲ್ ತಂಡ, ಇದೀಗ 2ನೇ ಹಂತದಲ್ಲಿ ಪ್ರತಿ ಕ್ಷೇತ್ರದಲ್ಲಿ ಅಭ್ಯರ್ಥಿಗಳನ್ನು ಕೇಂದ್ರೀಕರಿಸಿ ಸಮೀಕ್ಷೆ ನಡೆಸುತ್ತಿದೆ. ಪಕ್ಷದ ಶಾಸಕರಿರುವ ಕ್ಷೇತ್ರದಲ್ಲಿ ಜನರ ಒಲವು ಯಾವ ಕಡೆ ಇದೆ, ಶಾಸಕರ ವಿರುದ್ಧ ಇದೆಯೇ? ಕಳೆದ ಚುನಾವಣೆಯಲ್ಲಿ ಕನಿಷ್ಠ ಮತಗಳಿಂದ ಸೋತ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿ ಪರ ಅನುಕಂಪ ಇದೆಯೇ? ಟಿಕೆಟ್‌ಗಾಗಿ ತೀವ್ರ ಪೈಪೋಟಿ ಇರುವ ಕ್ಷೇತ್ರಗಳಲ್ಲಿ ಯಾರಿಗೆ ಟಿಕೆಟ್ ನೀಡಿದರೆ ಅನುಕೂಲ, ಸಂಭವನೀಯ 3–4 ಅಭ್ಯರ್ಥಿಗಳಿರುವ ಕ್ಷೇತ್ರಗಳಲ್ಲಿ ಪ್ರತಿಯೊಬ್ಬರ ಸಕಾರಾತ್ಮಕ– ನಕಾರಾತ್ಮಕ ಅಂಶಗಳೇನು? ಅಭ್ಯರ್ಥಿಗಾಗಿ ಹುಡುಕಾಡಬೇಕಾದ ಕ್ಷೇತ್ರಗಳಲ್ಲಿ ಯಾವ ರೀತಿಯ ನಿಲುವು ತೆಗೆದುಕೊಳ್ಳಬೇಕು ಮುಂತಾದ ವಿಚಾರಗಳಲ್ಲಿ ಈ ತಂಡ ವರದಿ ನೀಡಲಿದೆ. ಮುಂದಿನ ಚುನಾವಣೆಯಲ್ಲಿ ಅಭ್ಯರ್ಥಿ ಆಯ್ಕೆಗೆ ಈ ವರದಿಯಲ್ಲಿರುವ ಅಂಶಗಳೂ ಮಾನದಂಡ ಆಗಲಿವೆ' ಎಂದೂ ಮೂಲಗಳು ಹೇಳಿವೆ.



ಕೆಪಿಸಿಸಿ ಹಿಂದುಳಿದ ವರ್ಗದ ಅಧ್ಯಕ್ಷರಾಗಿ ನೇಮಕಗೊಂಡ ಬಳಿಕ ಮೊದಲ ಬಾರಿಗೆ ಶಿವಮೊಗ್ಗಕ್ಕೆ ಬಂದ ಮಧು ಬಂಗಾರಪ್ಪ ಅವರನ್ನು ಶನಿವಾರ ಪಕ್ಷದ ಮುಖಂಡರು ಅಭಿನಂದಿಸಿದರು. ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್‌.ಎಸ್‌. ಸುಂದರೇಶ್, ಕೆಪಿಸಿಸಿ ಉಪಾಧ್ಯಕ್ಷ ಎಚ್‌.ಎಂ. ರೇವಣ್ಣ ಇದ್ದಾರೆ

'ಭ್ರಷ್ಟಾಚಾರ ಮುಚ್ಚಲು ಜಾತಿ ಮೊರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಲಿಂಗಾಯತ ವಿರೋಧಿ' ಎಂಬ ಬಿಜೆಪಿ ಅಸ್ತ್ರಕ್ಕೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದ್ದು ಯಾರು? ಯಡಿಯೂರಪ್ಪ ಲಿಂಗಾಯತರಲ್ಲವೇ? ವಿಜಯೇಂದ್ರನನ್ನು ಮಂತ್ರಿ ಮಾಡದಿರುವುದು ಯಾಕೆ? ವಿಜಯೇಂದ್ರ ಲಿಂಗಾಯತ ಅಲ್ಲವೇ' ಎಂದು ಪ್ರತ್ಯಸ್ತ್ರ ಪ್ರಯೋಗಿಸಿದ್ದಾರೆ.



ಸಿದ್ದರಾಮಯ್ಯ

'ಶೇ 40 ಕಮಿಷನ್ ಸರ್ಕಾರ' ಎಂದು ರಾಜ್ಯ ಬಿಜೆಪಿ ಸರ್ಕಾರ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿ ಕಾಂಗ್ರೆಸ್ 'ಪೇಸಿಎಂ' ಅಭಿಯಾನ ಚುರುಕುಗೊಳಿಸಿದೆ. ಈ ಅಭಿಯಾನ ಮುಖ್ಯಮಂತ್ರಿ ಬೊಮ್ಮಾಯಿಯವರ ಉತ್ತಮ ಆಡಳಿತವನ್ನು ಸಹಿಸಲು ಸಾಧ್ಯವಾಗದೆ, ಲಿಂಗಾಯತ ಸಮುದಾಯದವರ ವಿರುದ್ಧದ ಕಾಂಗ್ರೆಸ್ ನಡೆ ಎಂದು ಬಿಜೆಪಿ ನಾಯಕರು ಟೀಕಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, 'ಜಾತಿಗೂ ಭ್ರಷ್ಟಾಚಾರಕ್ಕೂ ಏನು ಸಂಬಂಧ? ತಮ್ಮ ಭ್ರಷ್ಟಾಚಾರ ಮುಚ್ಚಿಕೊಳ್ಳಲು ಬಿಜೆಪಿಯವರು ಜಾತಿ ಮೊರೆ ಹೋಗಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಸಿದ್ದರಾಮಯ್ಯ ಸರ್ಕಾರ ಶೇ 10 ಸರ್ಕಾರ ಎಂದು ಯಾವುದೇ ಆಧಾರ ಇಲ್ಲದೆ ನರೇಂದ್ರ ಮೋದಿ ಸುಳ್ಳು ಆರೋಪ ಮಾಡಿದ್ದರು. ಸಿದ್ದರಾಮಯ್ಯ ಕುರುಬ ಎಂಬ ಕಾರಣಕ್ಕೆ ಮೋದಿ ಈ ಆರೋಪ ಮಾಡಿದ್ರಾ' ಎಂದೂ ಪ್ರಶ್ನಿಸಿದರು.

'ನಮ್ಮಲ್ಲಿಯೂ ಲಿಂಗಾಯತ ನಾಯಕರಿಲ್ಲವೇ? ನನ್ನ ಮೇಲೂ ಸುಳ್ಳು, ಸುಳ್ಳು ಪುಸ್ತಕವನ್ನು ಬಿಜೆಪಿವರು ಹೊರಡಿಸಿದ್ದಾರೆ. ನಾನು ಕುರುಬ ಎಂಬ ಕಾರಣಕ್ಕೆ ಹೀಗೆ ಮಾಡುತ್ತಿದ್ದಾರೆಂದು ನಾನು ಹೇಳಬಹುದೇ' ಎಂದೂ ಕೇಳಿದರು.

ಪೇಸಿಎಂ ಅಭಿಯಾನದಿಂದ ಹತಾಶೆಗೊಳಗಾಗಿರುವ ರಾಜ್ಯ ಸರ್ಕಾರವು ಈಗ ಜಾತಿ ವಿಚಾರ ಪ್ರಸ್ತಾಪಿಸಿ ಜನರ ದಿಕ್ಕು ತಪ್ಪಿಸುತ್ತಿದೆ

ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್ ಶಾಸಕ

ಸರ್ಕಾರ, ಸಿ.ಎಂ ಬೊಮ್ಮಾಯಿ ಅವರ ತೇಜೋವಧೆಗೆ 'ಪೇಸಿಎಂ' ಅಭಿಯಾನ ನಡೆಸಲಾಗುತ್ತಿದೆ. ಕಾಂಗ್ರೆಸ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲಾಗುವುದು

ವೈ.ಎ.ನಾರಾಯಣಸ್ವಾಮಿ, ವಿಧಾನ ಪರಿಷತ್ತಿನ ಮುಖ್ಯ ಸಚೇತಕ

ಲಂಚ ಕೊಡಬೇಕಾಗಿಲ್ಲ: ಫಲಕ ಅಳವಡಿಕೆಗೆ ಮನವಿ

ಬೆಂಗಳೂರು: 'ನನಗೆ ಯಾರೂ ಲಂಚ ಕೊಡಬೇಕಾಗಿಲ್ಲ, ನಾನು ಭ್ರಷ್ಟ ಅಧಿಕಾರಿಯಾಗಲಾರೆ' ಎಂಬ ಫಲಕಗಳನ್ನು ರಾಜ್ಯದ ಎಲ್ಲ ಸರ್ಕಾರಿ ಕಚೇರಿಗಳಲ್ಲೂ ಅಳವಡಿಸಲು ಆದೇಶ ನೀಡಬೇಕು ಎಂದು ಸಿಟಿಜನ್ ಎನ್‌ಕ್ವೈರಿ ಕೌನ್ಸಿಲ್ ಮತ್ತು ಸಿಟಿಸಿ ಟ್ರಸ್ಟ್ ಮುಖ್ಯಮಂತ್ರಿಯವರಿಗೆ ಮನವಿ ಪತ್ರ ಸಲ್ಲಿಸಿದೆ.

ಈ ಮನವಿ ಪತ್ರದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಸೂಚಿಸಿದ್ದಾರೆ.

ರಾಹುಲ್ ಗಾಂಧಿ ಹೋದಲ್ಲೆಲ್ಲಾ ಕಮಲ ಅರಳಿದೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಕಾಂಗ್ರೆಸ್‌ನ ರಾಹುಲ್ ಗಾಂಧಿ ಹೋದಲ್ಲೆಲ್ಲಾ ಕಮಲ ಅರಳಿದೆ. ಅವರು ನಡೆಸುತ್ತಿರುವ 'ಭಾರತ್ ಜೋಡೊ' ಯಾತ್ರೆಯಿಂದ ನಮಗೆ ವ್ಯತಿರಿಕ್ತ ಪರಿಣಾಮವೇನೂ ಆಗುವುದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಪಾದಿಸಿದರು.

ನಾಡಹಬ್ಬ ಮೈಸೂರು ದಸರಾ ಉದ್ಘಾಟನೆಗಾಗಿ ಇಲ್ಲಿನ ವಿಮಾನ ನಿಲ್ದಾಣಕ್ಕೆ ಭಾನುವಾರ ಆಗಮಿಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ರಾಹುಲ್‌ಗಾಂಧಿ ಬರುತ್ತಾರೆ, ಹೋಗುತ್ತಾರೆ. ಅದರಿಂದ ಏನೂ ವ್ಯತ್ಯಾಸವಾಗುವುದಿಲ್ಲ. ರಾಜ್ಯದಲ್ಲೂ ಮುಂದೆ ಕಮಲವೇ ಅರಳಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಪೇ ಸಿಎಂ ಅಭಿಯಾನವನ್ನು ರಾಜ್ಯದಾದ್ಯಂತ ನಡೆಸಲಿ. ಸ್ವಾಗತಿಸುತ್ತೇನೆ. ಅದಕ್ಕೆ ಒಳ್ಳೆಯದಾಗಲಿ. ಸರ್ಕಾರದ ವಿರುದ್ಧ ಕಾಂಗ್ರೆಸ್‌ನ ಭ್ರಷ್ಟಾಚಾರದ ಆರೋಪ ಸುಳ್ಳು ಎಂಬುದು ಜನರಿಗೆ ಗೊತ್ತಿದೆ. ಕೆಟ್ಟ ರಾಜಕಾರಣದ ಮೂಲಕ ಕರ್ನಾಟಕದ ಮರ್ಯಾದೆಯನ್ನು ಹಾಳು ಮಾಡುತ್ತಿದೆ. ಈ ವಿಚಾರದಲ್ಲಿ ರಕ್ಷಣೆಗಾಗಿ ನಾನು ಜಾತಿಯನ್ನು ಬಳಸಿಕೊಂಡಿಲ್ಲ. ಕಾಂಗ್ರೆಸ್ ನಡೆಯನ್ನು ನೋಡಿದ ಕೆಲವರು ನೋವಿನಿಂದ ಜಾತಿ ವಿಚಾರ ಪ್ರಸ್ತಾಪಿಸಿದ್ದಾರೆ. ಅದನ್ನು ನಾನು ಸಮರ್ಥಿಸುವುದಿಲ್ಲ' ಎಂದರು.

'ಭ್ರಷ್ಟಾಚಾರದ ಬಗ್ಗೆ ದಾಖಲೆಗಳಿದ್ದರೆ ಕೊಡಿ ಎಂದು ಕಾಂಗ್ರೆಸ್‌ನವರನ್ನು ಕೇಳಿದ್ದೆವು. ಸದನದಲ್ಲೂ ದಾಖಲೆ ಕೊಡಲಿಲ್ಲ. ಸುಮ್ಮನೆ ಆರೋಪಿಸುತ್ತಿದ್ದಾರೆ' ಎಂದರು.

ಚನ್ನಹಳ್ಳಿ: ವಿದ್ಯುತ್ ಸ್ಪರ್ಶ 2 ಕಾಡಾನೆಗಳ ಸಾವು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ತಾಲ್ಲೂಕಿನ ಆಯನೂರು ಸಮೀಪದ ಚನ್ನಹಳ್ಳಿ ಬಳಿ ಭಾನುವಾರ ಬೆಳಗಿನ ಜಾವ ಆಹಾರ ಅರಸಿ ಬಂದಿದ್ದ ಎರಡು ಗಂಡು ಕಾಡಾನೆಗಳು ವಿದ್ಯುತ್ ತಂತಿ ಸ್ಪರ್ಶದಿಂದ ಸಾವಿಗೀಡಾಗಿವೆ.

ಚನ್ನಹಳ್ಳಿಯ ಚಂದ್ರಾನಾಯಕ್ ಎಂಬುವವರು ಕಾಡಂಚಿನ ಮೂರು ಜಮೀನಿನಲ್ಲಿ ಮೆಕ್ಕೆಜೋಳ ಬೆಳೆದಿದ್ದು, ಬೆಳೆ ರಕ್ಷಣೆಗೆ ಹೊಲಕ್ಕೆ ಸುತ್ತಲೂ ವಿದ್ಯುತ್ ಬೇಲಿ ಹಾಕಿ ಅದಕ್ಕೆ ಅಕ್ರಮವಾಗಿ ಮೇನ್ ಲೈನ್‌ನಿಂದಲೇ ವಿದ್ಯುತ್ ಸಂಪರ್ಕ ಕಲ್ಪಿಸಿದ್ದರು.

ಸಮೀಪದ ಶೆಟ್ಟಿಹಳ್ಳಿ ಅಭಯಾರಣ್ಯಕ್ಕೆ ಭದ್ರಾ ಅಭಯಾರಣ್ಯದಿಂದ ಏಳು ಆನೆಗಳು ಬಂದಿದ್ದವು. ಆ ಪೈಕಿ ಸಮೀಪದ ಆನೆಸರ ಗ್ರಾಮದ ಮೂಲಕ ಚನ್ನಹಳ್ಳಿಯ ಹೊಲದತ್ತ ಬಂದಿದ್ ಎರಡು ಆನೆಗಳು ಮೃತಪಟ್ಟಿವೆ. ಇವುಗಳ ವಯಸ್ಸು 10ರಿಂದ 12 ವರ್ಷ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಟಿ. ಹನುಮಂತಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.



ಹೊಲದಲ್ಲಿ ಭಾನುವಾರ ನಸುಕಿನಲ್ಲಿ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ಆನೆ

'ಹೊಲದ ಮಾಲೀಕನ ವಿರುದ್ಧ ವನ್ಯಜೀವಿ ಸಂರಕ್ಷಣೆ ಕಾಯ್ದೆಯ ಅನ್ವಯ ಆನೆಗಳ ಕೊಲೆ ಪ್ರಕರಣ ಹಾಗೂ ಕಾನೂನು ಬಾಹಿರವಾಗಿ ವಿದ್ಯುತ್ ಸಂಪರ್ಕ ಪಡೆದಿರುವುದರ ಬಗ್ಗೆ ಪ್ರಕರಣ ದಾಖಲಿಸಲಾಗಿದೆ' ಎಂದು ತಿಳಿಸಿದರು.

ಸ್ಥಳದಲ್ಲೇ ಕಳೇಬರಗಳ ಮರಣೋತ್ತರ ಪರೀಕ್ಷೆ ನಡೆಸಿ, ಅಂತ್ಯಕ್ರಿಯೆ ನಡೆಸಲಾಯಿತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.18	5,074	7,123
ಹಾರಂಗಿ	2,859	2,857.42	745	1,350
ಕಬಿನಿ	2284	2,282.91	4,920	1,000
ಹೇಮಾವತಿ	2,922	2,921.95	3,299	3,235
ಲಿಂಗನಮಕ್ಕಿ	1,819	1,816	6,229	7,313
ಸೂಪಾ (ಮೀ)	564	554.04	2,580	3,430
ಮಾಣಿ	595	590	329	720
ತುಂಗಭದ್ರಾ	1,633	1,633	13,627	13,095
ಮಲಪ್ರಭಾ	2079.5	2,079.50	1,094	1,094
ಘಟಪ್ರಭಾ	2175	2,175	2,205	2,205
ಭದ್ರಾ	186	184	4,255	2,750
ಆಲಮಟ್ಟಿ (ಮೀ)	519.6	519.60	7,636	7,636
ನಾರಾಯಣಪುರ (ಮೀ)	492.25	492.07	8,000	8,600

* ನೆಲಮಟ್ಟದಿಂದ

ಅಸ್ಪೃಶ್ಯತೆ ಖಂಡಿಸಿ ಉಳ್ಳೇರಹಳ್ಳಿ ಚಲೋ

ಸಂತ್ರಸ್ತ ಕುಟುಂಬಕ್ಕೆ ಬೆಂಬಲ: ಗ್ರಾಮದೆಲ್ಲೆಡೆ ಮೊಳಗಿದ ಜೈ ಭೀಮ್ ಘೋಷಣೆ

ಪ್ರಜಾವಾಣಿ ವಾರ್ತೆ

ಮಾಲೂರು (ಕೋಲಾರ): ತಾಲ್ಲೂಕಿನ ಟೇಕಲ್ ಹೋಬಳಿಯ ಉಳ್ಳೇರಹಳ್ಳಿ ಗ್ರಾಮದಲ್ಲಿ ದೇವರ ಗುಜ್ಜಕೋಲು ಮುಟ್ಟಿದ ಕಾರಣಕ್ಕೆ ಪರಿಶಿಷ್ಟ ಜಾತಿಯ ಬಾಲಕನಿಗೆ ದಂಡ ವಿಧಿಸಿದ್ದನ್ನು ಖಂಡಿಸಿ ಭಾನುವಾರ ನಡೆದ 'ಉಳ್ಳೇರಹಳ್ಳಿ ಚಲೋ'ದಲ್ಲಿ ಜೈ ಭೀಮ್ ಘೋಷಣೆ ಮೊಳಗಿತು.

'ಸೌಹಾರ್ದ ನಡಿಗೆ' ಹೆಸರಿನಲ್ಲಿ ನಡೆದ ಬೃಹತ್ ಜಾಥಾದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು. ಈ ಮೂಲಕ ಸಂತ್ರಸ್ತ ಪರಿಶಿಷ್ಟ ಕುಟುಂಬಕ್ಕೆ ಧೈರ್ಯ ತುಂಬುವ, ಆರೋಪಿಗಳಿಗೆ ಎಚ್ಚರಿಕೆ ರವಾನಿಸುವ ಪ್ರಯತ್ನ ಮಾಡಿದರು. ಅಸ್ಪೃಶ್ಯತೆ ಆಚರಣೆ ಖಂಡಿಸಿದರು. ಇಂತಹ ಘಟನೆಗೆ ಮತ್ತೊಮ್ಮೆ ಅವಕಾಶ ನೀಡದಂತೆ ಸರ್ಕಾರವನ್ನು ಒತ್ತಾಯಿಸಿದರು.

ಟೇಕಲ್ ರೈಲು ನಿಲ್ದಾಣದಿಂದ 'ಸೌಹಾರ್ದ ನಡಿಗೆ' ಆರಂಭವಾಗಿ, ಉಳ್ಳೇರಹಳ್ಳಿಯ ಸಂತ್ರಸ್ತ ಕುಟುಂಬದ ನಿವಾಸದತ್ತ ದಾಪುಗಾಲು ಇಟ್ಟಿತು. ಯುವಕರು 'ಜೈ ಭೀಮ್' ಘೋಷಣೆ ಕೂಗುತ್ತಾ, ಕ್ರಾಂತಿ ಗೀತೆ ಹಾಡುತ್ತಾ, ನೀಲಿ ಧ್ವಜ ಹಾರಿಸುತ್ತಾ ದ್ವಿಚಕ್ರ ವಾಹನಗಳಲ್ಲಿ ಸಾಗಿ ಬಂದರು.

ಗ್ರಾಮದ ಭೂತಮ್ಮನ ದೇಗುಲ ಪಕ್ಕದ ಅರಳಿ ಕಟ್ಟೆ ಬಳಿ ಜಮಾವಣೆಗೊಂಡು ಸರ್ಕಾರ ಹಾಗೂ ಸಮಾಜದ ವ್ಯವಸ್ಥೆ ವಿರುದ್ಧ ಮುಖಂಡರು ವಾಗ್ದಾಳಿ ನಡೆಸಿದರು. ಆರೋಪಿಗಳಿಗೆ ಶಿಕ್ಷೆ ಆಗುವ ತನಕ ಹೋರಾಟ ನಿಲ್ಲಿಸಬಾರದು ಎಂದು ಒತ್ತಾಯಿಸಿದರು.

ದಲಿತ, ರೈತ, ಮಹಿಳೆ ಸಂಘಟನೆಗಳು, ಎಡಪಂಥೀಯ, ಕನ್ನಡಪರ ಹಾಗೂ ಮುಸ್ಲಿಂ ಸಂಘಟನೆಗಳು, ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು, ಜಿಲ್ಲೆಯ ವಿವಿಧ ಗ್ರಾಮಗಳ ಯುವಕರು ಪಾಲ್ಗೊಂಡಿದ್ದರು.

ದಲಿತ ಸಂಘರ್ಷ ಸಮಿತಿಯ ಮುಖಂಡ ವಕ್ಕಲೇರಿ ರಾಜಪ್ಪ ಮಾತನಾಡಿ, 'ಮತಾಂತರ ಕಾಯ್ದೆ ಜಾರಿ ಮಾಡಿದ್ದೀರಿ. ನೀವೂ ನಮ್ಮನ್ನು ಸೇರಿಸಲ್ಲ. ಬೇರೆ ಕಡೆ ಹೋಗಲೂ ನಮಗೆ ಬಿಡಲ್ಲ. ನಾವು ಬೀದಿಗೆ ಬಿದ್ದಿದ್ದೇವೆ' ಎಂದು ವಾಗ್ದಾಳಿ ನಡೆಸಿದರು. ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಚಿನ್ ಘೋರ್ಪಡೆ ಅವರಿಗೆ ಮನವಿ ಪತ್ರ ಸಲ್ಲಿಸಿದರು.



ಮಾಲೂರು ತಾಲ್ಲೂಕಿನ ಟೇಕಲ್ ಹೋಬಳಿಯಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳು ನಡೆಸಿದ 'ಉಳ್ಳೇರಹಳ್ಳಿ ಚಲೋ'ದಲ್ಲಿ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು

ಗುಜ್ಜಕೋಲು ಹೊರತಂದ ಯುವಕರು!

ಗ್ರಾಮದ ಭೂತಮ್ಮನ ದೇಗುಲದ ಬಾಗಿಲು ತೆಗೆಸಿ ಒಳನುಗ್ಗಿದ ದಲಿತ ಸಂಘಟನೆಗಳ ಯುವಕರು ವಿವಾದಕ್ಕೆ ಕಾರಣವಾದ ಗುಜ್ಜಕೋಲು ಹೊರ ತಂದರು. 'ಪ್ರಕರಣಕ್ಕೆ ಇದೇ ಗುಜ್ಜಕೋಲು' ಕಾರಣ ಎಂದು ಘೋಷಣೆ ಕೂಗಿದರು.

ಈ ಸಂದರ್ಭದಲ್ಲಿ ತಳ್ಳಾಟ, ನೂಕಾಟ ನಡೆಯಿತು. ಪೊಲೀಸರು ಸುತ್ತವರಿದು ವಾತಾವರಣ ತಿಳಿಗೊಳಿಸಲು ಪ್ರಯತ್ನಿಸಿದರು. ಯುವಕರನ್ನು ದೇಗುಲದಿಂದ ಹೊರಗೆ ಕಳುಹಿಸಿದರು. ಯುವಕರು ಗುಜ್ಜಕೋಲನ್ನು ಪ್ರತಿಭಟನಕಾರರು ಜಮಾವಣೆಗೊಂಡ ಅರಳಿ ಕಟ್ಟೆ ಬಳಿ ತಂದಿಟ್ಟುಕೊಂಡರು. 'ಜೈ ಭೀಮ್' ಎಂದು ಬರೆದಿದ್ದ ಧ್ವಜಗಳನ್ನು ದೇಗುಲದ ಮೇಲೆ ಕಟ್ಟಲು ಯುವಕರು ಪ್ರಯತ್ನಿಸಿದರು. ಆಗ ಸಂಘಟಕರು, 'ದೇಗುಲ ನಮಗೆ ಬೇಕಿಲ್ಲ; ಏಕೆ ಧ್ವಜ ಕಟ್ಟಬೇಕು?' ಎಂದು ವಾಪಸ್ ಕರೆತಂದರು.

'ಪರಿಶಿಷ್ಟರನ್ನು ದೂರವಿಟ್ಟರೆ ಅದು ಹಿಂದುತ್ವ ಅಲ್ಲ'

ಕೋಲಾರ: 'ನಾವು ಹಿಂದುತ್ವ ಹಾಗೂ ಮತಾಂತರದ ಬಗ್ಗೆ ಬಹಳ ಮಾತನಾಡುತ್ತೇವೆ. ಆದರೆ, ದಲಿತರನ್ನು ಹೊರತುಪಡಿಸಿದ ಹಿಂದುತ್ವ ಇಲ್ಲ. ದೇವರು ಬೇಕೆಂದು ಹಿಂದುತ್ವ ಪಾಲಿಸುತ್ತಿದ್ದೇವೆ. ದೇವರಿಂದ ದೂರವಿರಿ ಎನ್ನುವವರು ಹಿಂದುತ್ವ ವಿರೋಧಿಗಳು' ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಛಲವಾದಿ ನಾರಾಯಣಸ್ವಾಮಿ ಪ್ರತಿಪಾದಿಸಿದರು.

ಭಾನುವಾರ ಉಳ್ಳೇರಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ಹೇಳಿ ಅವರು ಮಾತನಾಡಿದರು. 'ದೇವರ ಗುಜ್ಜಕೋಲು ಮುಟ್ಟಿದ ಎಂದು ಬಾಲಕನಿಗೆ ದಂಡ ವಿಧಿಸಿದ್ದಾರೆ. ಅಕಸ್ಮಾತ್ ದೇವರೇ ಬಂದು ಬಾಲಕನನ್ನು ಮುಟ್ಟಿದ್ದರೆ ಅವರು ಏನು ಮಾಡುತ್ತಿದ್ದರು? ದೇವರ ರೂಪ ಎಂದು ಬಾಲಕನನ್ನೇ ಪೂಜೆ ಮಾಡುತ್ತಿದ್ದರು. ಇದೊಂದು ಮೂಢ ಸಮಾಜ' ಎಂದು ಟೀಕಿಸಿದರು.

ಬಳ್ಳಾರಿ ವಿಮಾನ ನಿಲ್ದಾಣ: ಕೆಎಸ್‌ಐಡಿಸಿಯಿಂದ ನಿರ್ಮಾಣ?

'ಮಾರ್ಗ್' ಒಪ್ಪಂದ ರದ್ದತಿಗೆ ಹಸಿರು ನಿಶಾನೆ

• ಹೊನಕೆರೆ ನಂಜುಂಡೇಗೌಡ

ಬಳ್ಳಾರಿ: ಇಲ್ಲಿನ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಚೆನ್ನೈ ಮೂಲದ 'ಮಾರ್ಗ್' ಕಂಪನಿಯ ಜತೆ ಮಾಡಿಕೊಂಡಿರುವ ಒಪ್ಪಂದ ರದ್ದುಪಡಿಸಲು ಮೂಲಸೌಕರ್ಯ ಇಲಾಖೆ (ಐಡಿಡಿ) ಹಸಿರು ನಿಶಾನೆ ತೋರಿದೆ. ಮುಂದಿನ ಸಚಿವ ಸಂಪುಟ ಸಭೆ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಿದೆ.

ರಾಜ್ಯ ಮೂಲಸೌಕರ್ಯ ಅಭಿವೃದ್ಧಿ ನಿಗಮದಿಂದಲೇ (ಕೆಎಸ್‌ಐಐಡಿಸಿ) ವಿಮಾನ ನಿಲ್ದಾಣ ನಿರ್ಮಾಣವಾಗಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಸಮೀಪದ ಚಾಗನೂರಿನಲ್ಲಿ ಸ್ವಾಧೀನಪಡಿಸಿಕೊಂಡಿರುವ 900 ಎಕರೆ ಜಮೀನಿನಲ್ಲಿ ವಿಮಾನ ನಿಲ್ದಾಣ ನಿರ್ಮಿಸಲು 2010ರ ಆಗಸ್ಟ್‌ನಲ್ಲಿ 'ಮಾರ್ಗ್' ಜತೆ ರಾಜ್ಯ ಸರ್ಕಾರ ಒಪ್ಪಂದ ಮಾಡಿಕೊಂಡಿದೆ. 12 ವರ್ಷ ಕಳೆದರೂ ಯೋಜನೆ ಪ್ರಗತಿ ಆಗದಿದ್ದರಿಂದ ಒಪ್ಪಂದ ರದ್ದುಪಡಿಸುವಂತೆ ಹೇಳಲಾಗಿದೆ.

ಮುಖ್ಯಾಂಶಗಳು

- **12 ವರ್ಷ ಕಳೆದರೂ ಯೋಜನೆಯಲ್ಲಿ ಕಾಣದ ಪ್ರಗತಿ**
- **ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ತೀರ್ಮಾನ**

ಮೂಲಸೌಕರ್ಯ ಸಚಿವ ವಿ.ಸೋಮಣ್ಣ ಅವರ ಸಮ್ಮುಖದಲ್ಲಿ ಬೆಂಗಳೂರಲ್ಲಿ ಶುಕ್ರವಾರ ಸೇರಿದ್ದ ಉನ್ನತ ಮಟ್ಟದ ಸಭೆಯಲ್ಲಿ, ಈ ಕುರಿತಂತೆ ಟಿಪ್ಪಣಿಯನ್ನು ಸಿದ್ಧಪಡಿಸಿ ಸಂಪುಟ ಸಭೆ ಕಾರ್ಯಸೂಚಿಯಲ್ಲಿ ಸೇರ್ಪಡೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಪ್ರಕ್ರಿಯೆ ತ್ವರಿತಗೊಳಿಸಿ, ಒಂದು ತಿಂಗಳೊಳಗೆ ಅಂತಿಮ ರೂಪ ನೀಡಲು ನಿರ್ದೇಶಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ. ಶ್ರೀರಾಮುಲು, ಮೂಲಸೌಕರ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಶಾಸಕ ಎನ್‌.ವೈ. ಗೋಪಾಲಕೃಷ್ಣ, ಕೆಎಸ್‌ಐಐಡಿಸಿ ವ್ಯವಸ್ಥಾಪಕ ನಿರ್ದೇಶಕ ಎಂ.ಆರ್. ರವಿ, ಕಾರ್ಯನಿರ್ವಾಹಕ ನಿರ್ದೇಶಕ ಡಿ.ಪಿ. ಪ್ರಕಾಶ್ ಮತ್ತಿತರರು ಸಭೆಯಲ್ಲಿದ್ದರು.

ರಾಜ್ಯದಲ್ಲಿ ಖಾಸಗಿ ಮತ್ತು ಸಾರ್ವಜನಿಕ ಪಾಲುದಾರಿಕೆಯಲ್ಲಿ (ಪಿಪಿಪಿ ಮಾದರಿ) ಆರಂಭಿಸಿದ ವಿಮಾನ ನಿಲ್ದಾಣಗಳ ನಿರ್ಮಾಣ ಯೋಜನೆಗಳು ವಿಫಲವಾಗಿರುವುದರಿಂದ ರಾಜ್ಯ ಸರ್ಕಾರವೇ ಎಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಹಾಗೂ ಕನ್‌ಸ್ಟ್ರಕ್ಷನ್ (ಇಪಿಸಿ) ಮಾದರಿಯಲ್ಲಿ ಸ್ವಂತ ಸಂಪನ್ಮೂಲದಲ್ಲಿ ಯೋಜನೆ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

'ಸರ್ಕಾರ ಮಾರ್ಗ್‌ಗೆ ಎಲ್ಲಾ ಅನುಕೂಲ ಮಾಡಿಕೊಟ್ಟು, ಸಾಕಷ್ಟು ಕಾಲಾವಕಾಶ ನೀಡಿದರೂ ಯೋಜನೆ ಪ್ರಗತಿ ಆಗಿಲ್ಲ. ತೋರಣಗಲ್‌ನಲ್ಲಿರುವ ಖಾಸಗಿ ವಿಮಾನ ನಿಲ್ದಾಣವನ್ನು 'ಉಡಾನ್ ಯೋಜನೆ'ಯಲ್ಲಿ ಸೇರಿಸಿದ್ದರೂ ವಿಮಾನಗಳ ಹಾರಾಟ ನಡೆಯುತ್ತಿಲ್ಲ. ವಿಶೇಷ ವಿಮಾನಗಳು ಇಲ್ಲಿಗೆ ಬಂದು ಹೋಗುತ್ತಿವೆ. ಬಳ್ಳಾರಿಯಲ್ಲಿ ವಿಮಾನ ನಿಲ್ದಾಣಕ್ಕೆ ಸಿಕ್ಕಾಪಟ್ಟೆ ಬೇಡಿಕೆಯಿದೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಚಾಗನೂರು ಗ್ರಾಮದಲ್ಲಿ 987ಎಕರೆ ಭೂಮಿಯಲ್ಲಿ ₹330 ಕೋಟಿ ವೆಚ್ಚದಲ್ಲಿ ನಿರ್ಮಾಣ, ನಿರ್ವಹಣೆ ಮತ್ತು ವರ್ಗಾವಣೆ (ಬಿಲ್ಡ್‌– ಆಪರೇಟ್ ಅಂಡ್ ಟ್ರಾನ್ಸ್‌ಫರ್) ಆಧಾರದಲ್ಲಿ 30 ವರ್ಷಗಳ ಅವಧಿಗೆ ಮಾರ್ಗ್ ಜತೆ ಒಪ್ಪಂದ ಏರ್ಪಟ್ಟಿದೆ. ರೈತರ ತೀವ್ರ ಪ್ರತಿಭಟನೆ ನಡುವೆ ಫಲವತ್ತಾದ ಜಮೀನು ವಶಪಡಿಸಿಕೊಳ್ಳಲಾಗಿದೆ.

ಸೋಮವಾರ, ಸೆಪ್ಟೆಂಬರ್ 26, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ

ನ್ಯೂಯಾರ್ಕ್‌ನ ಸೆಂಟ್ರಲ್ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ 'ಗ್ಲೋಬಲ್ ಸಿಟಿಜನ್ ಫೆಸ್ಟಿವಲ್'ನಲ್ಲಿ ಬಾಲಿವುಡ್ ನಟಿ ಪ್ರಿಯಾಂಕಾ ಚೋಪ್ರಾ ಪಾಲ್ಗೊಂಡಿದ್ದರು



ಟಿಡಿಆರ್ ಅಕ್ರಮ • ಹೆಚ್ಚುವರಿ ವಿಸ್ತೀರ್ಣಕ್ಕೆ ಹಕ್ಕುಪತ್ರ ನೀಡಿ ಬಿಬಿಎಂಪಿಗೆ ವಂಚಿಸಿರುವ ಆರೋಪ

ಆರು ನಿವೃತ್ತ ಅಧಿಕಾರಿಗಳ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಿಬಿಎಂಪಿ ವಿಶೇಷ ಭೂ ಸ್ವಾಧೀನಾಧಿಕಾರಿ ರಾಜೇಶ್ವರಿ ಅವರಿಂದ ದೂರು
- 221 ಚ.ಮೀ. ಬದಲು 895 ಚ.ಮೀ ವಿಸ್ತೀರ್ಣಕ್ಕೆ ಟಿಡಿಆರ್
- ಆರೋಪಿಗಳು ಲಕ್ಷಾಂತರ ರೂಪಾಯಿ ಪಡೆದಿರುವ ಶಂಕೆ

ಬೆಂಗಳೂರು: ನಿವೇಶನ ಹಾಗೂ ಕಟ್ಟಡಗಳಿಗೆ ಅಕ್ರಮವಾಗಿ ಟಿಡಿಆರ್ (ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಪತ್ರ) ಪಡೆದು ಬಿಬಿಎಂಪಿಗೆ ನೂರಾರು ಕೋಟಿ ರೂಪಾಯಿ ವಂಚಿಸಿದ್ದ ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿರುವಾಗಲೇ, ಇದೇ ಆರೋಪಕ್ಕೆ ಸಂಬಂಧಪಟ್ಟಂತೆ ಇದೀಗ ಮತ್ತೊಂದು ಎಫ್ಐಆರ್ ದಾಖಲಾಗಿದೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ ಹೋಬಳಿಯ ದೇವಸಂದ್ರ ಗ್ರಾಮದಲ್ಲಿದ್ದ ನಿವೇಶನದ ನಿಗದಿತ ವಿಸ್ತೀರ್ಣಕ್ಕಿಂತ ಹೆಚ್ಚುವರಿ ವಿಸ್ತೀರ್ಣಕ್ಕೆ ಟಿಡಿಆರ್ ನೀಡಿ ಬಿಬಿಎಂಪಿಗೆ ನಷ್ಟ ಉಂಟುಮಾಡಿದ್ದ ಆರೋಪದಡಿ ನಿವೃತ್ತ ಜಂಟಿ ಆಯುಕ್ತ ಸೇರಿ ಆರು ನಿವೃತ್ತ ಅಧಿಕಾರಿಗಳ ವಿರುದ್ಧ ಹಲಸೂರುಗೇಟ್ ಠಾಣೆಯಲ್ಲಿ ಸೆ. 22ರಂದು ಪ್ರಕರಣ ದಾಖಲಾಗಿದೆ.

'ಬಿಬಿಎಂಪಿ ವಿಶೇಷ ಭೂ ಸ್ವಾಧೀನಾಧಿಕಾರಿ ರಾಜೇಶ್ವರಿ ಅವರು ದೂರು ನೀಡಿದ್ದಾರೆ. ಮಹದೇವಪುರ ವಲಯದ ನಿವೃತ್ತ ಜಂಟಿ ಆಯುಕ್ತ ಕೆ.ಎಸ್. ದೇವರಾಜ್, ನಿವೃತ್ತ ಉಪ ಜಂಟಿ ಆಯುಕ್ತ ಉಮಾನಂದ ರೈ, ನಿವೃತ್ತ ಕಾರ್ಯಪಾಲಕ ಎಂಜಿನಿಯರ್ ಡಿ. ರಾಮೇಗೌಡ, ನಿವೃತ್ತ ಉಪ ತಹಶೀಲ್ದಾರ್ ಎಂ.ಎ. ಗಂಗೇಗೌಡ, ನಿವೃತ್ತ ಭೂಮಾಪಕ ಗುಳಪ್ಪ ಹಾಗೂ ನಿವೃತ್ತ ಗ್ರಾಮ ಲೆಕ್ಕಾಧಿಕಾರಿ ಬಿ.ಆರ್. ಅಗಸಿಮನಿ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು, ತಮ್ಮ ಅಧಿಕಾರಾವಧಿಯಲ್ಲಿ ಅಕ್ರಮ ಟಿಡಿಆರ್ ನೀಡಿದ್ದರು. ಇವರ ಕೃತ್ಯದ ಕಡತಗಳೂ ನಾಪತ್ತೆ ಆಗಿದ್ದವು. ಈ ಬಗ್ಗೆ ಮಹದೇವಪುರ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿತ್ತು. ಆರೋಪಿಗಳ ಕೃತ್ಯಕ್ಕೆ ಈಗ ಪುರಾವೆಗಳು ಲಭ್ಯವಾಗಿದ್ದು, ಅವುಗಳನ್ನು ಉಲ್ಲೇಖಿಸಿಯೇ ದೂರು ನೀಡಲಾಗಿದೆ' ಎಂದೂ ತಿಳಿಸಿವೆ.

'2021ರಲ್ಲಿ ಟಿಡಿಆರ್ ಅಕ್ರಮಕ್ಕೆ ಸಂಬಂಧಿಸಿದಂತೆ ಹಲವು ಠಾಣೆಗಳಲ್ಲಿ ಎಫ್ಐಆರ್‌ಗಳು ದಾಖಲಾಗಿದ್ದವು. ಈ ಬಗ್ಗೆ ಅಂದಿನ ಎಸಿಬಿ (ಭ್ರಷ್ಟಾಚಾರ ನಿಗ್ರಹ ದಳ) ಅಧಿಕಾರಿಗಳು ತನಿಖೆ ನಡೆಸಿ, ಹಲವರನ್ನು ಬಂಧಿಸಿದ್ದರು. ಇದೀಗ ಎಸಿಬಿ ರದ್ದಾಗಿದ್ದು, ಟಿಡಿಆರ್ ಪ್ರಕರಣಗಳು ಲೋಕಾಯುಕ್ತಕ್ಕೆ ವರ್ಗವಾಗಿವೆ. ಹೊಸದಾಗಿ ದಾಖಲಾಗಿರುವ ಎಫ್ಐಆರ್ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದು, ಪ್ರಕರಣವು ಲೋಕಾಯುಕ್ತ ಪೊಲೀಸರಿಗೆ ವರ್ಗಾವಣೆ ಆಗುವ ಸಾಧ್ಯತೆ ಇದೆ' ಎಂದೂ ತಿಳಿಸಿವೆ.

221 ಚ.ಮೀ. ಬದಲು 895 ಚ.ಮೀ ವಿಸ್ತೀರ್ಣಕ್ಕೆ ಟಿಡಿಆರ್

'ದೇವಸಂದ್ರ ಗ್ರಾಮದ ಡಿ.ಕೆ.ವೇಣುಗೋಪಾಲ್ ಅವರಿಗೆ 2015ರಲ್ಲಿ ಟಿಡಿಆರ್ ನೀಡಲಾಗಿತ್ತು. ಇದೇ ಪತ್ರವನ್ನು ಸಿಯಾರ್ ರಿಯಾಲ್ಟಿ ಆ್ಯಂಡ್ ಇನ್ಫ್ರಾಸ್ಟ್ರಕ್ಚರ್ ಕಂಪನಿ ಖರೀದಿ ಮಾಡಿತ್ತು. ಪತ್ರದ ಹಕ್ಕುಗಳನ್ನು ಬಳಸಲೆಂದು ಕಂಪನಿಯವರು, ಮಹದೇವಪುರ ವಲಯಕ್ಕೆ ಪ್ರಸ್ತಾವ ಸಲ್ಲಿಸಿದ್ದರು. ಅದರ ಪರಿಶೀಲನೆ ನಡೆಸಿದಾಗಲೇ ಅಕ್ರಮ ಪತ್ತೆಯಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವೇಣುಗೋಪಾಲ್ ಅವರ ನಿವೇಶನದ ವಿಸ್ತೀರ್ಣ 57 ಚ.ಮೀ. ಇತ್ತು. 2014–15ನೇ ಸಾಲಿನ ನಿಯಮಗಳ ಪ್ರಕಾರ 221 ಚ.ಮೀ. ವಿಸ್ತೀರ್ಣಕ್ಕೆ ಟಿಡಿಆರ್ ನೀಡಲು ಅವಕಾಶವಿತ್ತು. ಆದರೆ, ಆರೋಪಿಗಳು 895 ಚ.ಮೀ. ವಿಸ್ತೀರ್ಣಕ್ಕೆ ಅಕ್ರಮವಾಗಿ ಟಿಡಿಆರ್ ನೀಡಿದ್ದರು. ಈ ಮೂಲಕ ನಿಯಮಗಳನ್ನು ಗಾಳಿಗೆ ತೂರಿ, ಬಿಬಿಎಂಪಿಗೆ ನಷ್ಟವನ್ನುಂಟು ಮಾಡಿದ್ದಾರೆ. ಕೃತ್ಯ ಎಸಗಲು ಆರೋಪಿಗಳು, ಲಕ್ಷಾಂತರ ರೂಪಾಯಿ ಪಡೆದಿರುವ ಶಂಕೆಯೂ ಇದೆ' ಎಂದೂ ತಿಳಿಸಿವೆ.



ಕಾಮಗಾರಿ ಚುರುಕು ನಗರದ ಹೊರವರ್ತುಲ ರಸ್ತೆಯಲ್ಲಿ ನಾಗವಾರ ಮೆಟ್ರೊ ನಿಲ್ದಾಣ ಕಾಮಗಾರಿಯು ಚುರುಕಿನಿಂದ ಸಾಗಿದೆ -ಪ್ರಜಾವಾಣಿ ಚಿತ್ರ/ ರಂಜು ಪಿ.

ಸಂಜೆ ವೇಳೆಗೆ ಸಹಾಯವಾಣಿ ಕರೆ ಸೇವೆ ಪುನರಾರಂಭ

108 ಸಹಾಯವಾಣಿ: ಆಂಬುಲೆನ್ಸ್ ಸೇವೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ '108' ಸಹಾಯವಾಣಿಯಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಭಾನುವಾರ ವಿವಿಧೆಡೆ ಆಂಬುಲೆನ್ಸ್ ಸೇವೆಯಲ್ಲಿ ವ್ಯತ್ಯಯವಾಗಿ, ರೋಗಿಗಳು ಪರದಾಡಬೇಕಾಯಿತು. ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಐಡಿಹಳ್ಳಿ ಗ್ರಾಮದಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ ಜಯಮ್ಮ (65) ಎಂಬುವವರು ಸಕಾಲಕ್ಕೆ ಆಂಬುಲೆನ್ಸ್ ಬಾರದ ಕಾರಣ ಮನೆಯಲ್ಲೇ ಮೃತಪಟ್ಟರು.

108 ಆಂಬುಲೆನ್ಸ್ ಸೇವೆಯನ್ನು ಜಿವಿಕೆ- ಇಎಂಆರ್‌ಐ ಸಂಸ್ಥೆ ನಿರ್ವಹಿಸುತ್ತಿದೆ. ಮದರ್ ಬೋರ್ಡ್, ತಂತ್ರಾಂಶ ಹಾಗೂ ಸರ್ವರ್ ಸಮಸ್ಯೆ ಉಂಟಾಗಿತ್ತು. ಇದರಿಂದಾಗಿ, ದೂರವಾಣಿ ಕರೆಗಳ ಮೇಲ್ವಿಚಾರಣೆ ಸಿಬ್ಬಂದಿಗೆ ಸಮಸ್ಯೆಯಾಗಿ, ಆಂಬುಲೆನ್ಸ್ ಸೇವೆಯಲ್ಲಿ ವ್ಯತ್ಯಯವಾಯಿತು. ತುರ್ತು ಸಂದರ್ಭಕ್ಕಾಗಿ ಇಲಾಖೆ 112 ಸಂಖ್ಯೆಗೂ ಕರೆ ಮಾಡುವಂತೆ ಮನವಿ ಮಾಡಿಕೊಂಡಿತ್ತು. ಇಷ್ಟಾಗಿಯೂ ಆಂಬುಲೆನ್ಸ್ ಸೇವೆ ಸಿಗದೆ, ಕೆಲವರು ಖಾಸಗಿ ವಾಹನಗಳನ್ನು ಅವಲಂಬಿಸಬೇಕಾಯಿತು. ಸಂಜೆ ವೇಳೆಗೆ ಸಮಸ್ಯೆ ನಿವಾರಿಸಿ, ಸಹಾಯವಾಣಿ ಕರೆ ಸೇವೆ ಪುನರಾರಂಭಿಸಲಾಯಿತು.

ಸೇವೆ ವ್ಯತ್ಯಯದ ಬಗ್ಗೆ ಸ್ಪಷ್ಟನೆ ನೀಡಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, '108 ಆಂಬುಲೆನ್ಸ್ ಸೇವೆಗಳ ಸಹಾಯವಾಣಿಯಲ್ಲಿ ಕೆಲ ತಾಂತ್ರಿಕ ಸಮಸ್ಯೆಗಳು ಸೃಷ್ಟಿಯಾಗಿದ್ದವು. 15 ವರ್ಷಗಳಷ್ಟು ಹಳೆಯ ತಾಂತ್ರಿಕ ವ್ಯವಸ್ಥೆ ಇದಾಗಿರುವುದರಿಂದ ಸರ್ವರ್‌ಗೆ ವೈರಸ್ ದಾಳಿ ಆಗಿತ್ತು. ಜಿವಿಕೆ- ಇಎಂಆರ್‌ಐ ಸಂಸ್ಥೆ ಸಮಸ್ಯೆ ಬಗೆಹರಿಸಿದೆ' ಎಂದು ಹೇಳಿದರು.

'ಈ ಮೊದಲು 108 ಸಹಾಯವಾಣಿ ಕರೆಗಳನ್ನು ಸ್ವಯಂಚಾಲಿತವಾಗಿ ಸ್ವೀಕರಿಸಿ, 2 ನಿಮಿಷಗಳಲ್ಲಿ ಆಂಬುಲೆನ್ಸ್ ವಾಹನಗಳ ಹಂಚಿಕೆ ಕಾರ್ಯ ಮಾಡಲಾಗುತ್ತಿತ್ತು. ತಾಂತ್ರಿಕ ಸಮಸ್ಯೆಯಿಂದ ಈ ಪ್ರಕ್ರಿಯೆಗೆ 6 ರಿಂದ 7 ನಿಮಿಷಗಳ ಕಾಲ ತೆಗೆದುಕೊಳ್ಳಲಾಯಿತು. ಪ್ರತಿದಿನ 7 ರಿಂದ 8 ಸಾವಿರ ಕರೆಗಳನ್ನು ಸ್ವೀಕರಿಸಲಾಗುತ್ತಿತ್ತು. ಆ ಸಂಖ್ಯೆ 2 ರಿಂದ 2.5 ಸಾವಿರಕ್ಕೆ ಇಳಿಕೆಯಾಯಿತು. ಆಂಬುಲೆನ್ಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ತಮ್ಮ ಮೊಬೈಲ್ ಸಂಖ್ಯೆಗಳಿಗೆ ಕರೆ ಬಂದರೂ ಸ್ವೀಕರಿಸಿ, ಅಗತ್ಯ ಸೇವೆಗಳನ್ನು ನೀಡುವಂತೆ ಸೂಚಿಸಲಾಗಿದೆ' ಎಂದು ತಿಳಿಸಿದರು.

ಹೆಚ್ಚಿನ ಸಿಬ್ಬಂದಿ: 'ತುರ್ತು ಸೇವೆ ಒದಗಿಸುವ 112 ಸಹಾಯವಾಣಿಯಲ್ಲಿ 2-3 ಸಿಬ್ಬಂದಿ ಇರುತ್ತಿದ್ದರು. ಆ ಸಂಖ್ಯೆಯನ್ನು 7-8ಕ್ಕೆ ಹೆಚ್ಚಿಸಲು ಸೂಚಿಸಲಾಗಿದೆ. 104 ಸಹಾಯವಾಣಿಯನ್ನೂ ಬಳಸಿಕೊಂಡು, 108 ಸಹಾಯವಾಣಿ ಮೇಲಿನ ಒತ್ತಡ ಕಡಿಮೆ ಮಾಡಲಾಯಿತು' ಎಂದು ಸುಧಾಕರ್ ಹೇಳಿದರು.

ಸೇವೆ ಪುನರಾರಂಭ: ಇಲಾಖೆ ಆಯುಕ್ತ ಡಿ. ರಂದೀಪ್, 'ಕರೆ ಸ್ವೀಕಾರ ಸೇವೆ ಪುನರಾರಂಭಗೊಂಡಿದೆ. ಆದರೂ ಮುನ್ನೆಚ್ಚರಿಕೆ ಕ್ರಮವಾಗಿ ತುರ್ತು ಸಂದರ್ಭದಲ್ಲಿ ಸಂಪರ್ಕ ಸಾಧಿಸಲು ಜಿಲ್ಲಾ ಆರೋಗ್ಯಾಧಿಕಾರಿಗಳು ಪರ್ಯಾಯ ದೂರವಾಣಿ ಸಂಖ್ಯೆಯನ್ನೂ ಜನರಿಗೆ ಒದಗಿಸುತ್ತಿದ್ದಾರೆ' ಎಂದು ಟ್ವೀಟ್ ಮಾಡಿದ್ದಾರೆ. ಇದಕ್ಕೆ ಮೊದಲು, ಮೈಸೂರಿನಲ್ಲಿ ಮಾತನಾಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಮದರ್ ಬೋರ್ಡ್‌ನಲ್ಲಿ ತಾಂತ್ರಿಕ ತೊಡಕಾಗಿದ್ದು, ಆರೋಗ್ಯ ಸಚಿವರೊಂದಿಗೆ ಚರ್ಚಿಸಿದ್ದೇನೆ. ಶೀಘ್ರವೇ ಪರಿಹರಿಸಲಾಗುತ್ತದೆ' ಎಂದಿದ್ದರು.

ಮಾದರಿ ಆಂಬುಲೆನ್ಸ್ ಸೇವೆಗೆ ಕ್ರಮ


'ಸದ್ಯ ಆಂಬುಲೆನ್ಸ್ ಸೇವೆ ನೀಡುತ್ತಿರುವ ಜಿವಿಕೆ ಕಾನೂನಾತ್ಮಕ ಹೋರಾಟ ಮಾಡಿದೆ. ಆದರೆ, ಅವರ ಸೇವೆ ಸರ್ಕಾರಕ್ಕೆ ಸಮಾಧಾನ ತಂದಿಲ್ಲ. ಈಗಾಗಲೇ ಕೋರ್ಟ್ ಮಾರ್ಗಸೂಚಿಯಂತೆ ಹೊಸ ಟೆಂಡರ್ ಆಗಿದೆ. ಇನ್ನೊಂದು ತಿಂಗಳಲ್ಲಿ ಉತ್ತಮ ಸಂಸ್ಥೆ 108 ಆರೋಗ್ಯ ಸೇವೆ ನೀಡಲಿದೆ. ಇದು ತಾಂತ್ರಿಕವಾಗಿ ಉತ್ಕೃಷ್ಟ ಸೇವೆಯಾಗಿರಲಿದ್ದು, ದೇಶದಲ್ಲೇ ಮಾದರಿಯಾಗಿರಲಿದೆ' ಎಂದು ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಟೀಕೆಗಳೇ ನನಗೆ ಟಾನಿಕ್'

ಮೈಸೂರು: 'ಟೀಕೆಗಳೇ ನನಗೆ ಟಾನಿಕ್. ನನ್ನ ಆತ್ಮಸ್ಥೈರ್ಯ ಮತ್ತು ಸಂಕಲ್ಪವನ್ನು ಹೆಚ್ಚಿಸುವ ಅವುಗಳನ್ನು ಸ್ವಾಗತಿಸುತ್ತೇನೆ. ವಿರೋಧವನ್ನು ಮೆಟ್ಟಿಲಾಗಿಸಿಕೊಂಡು ಗುರಿಯ ಕಡೆಗೆ ಹೋಗುತ್ತೇನೆ. ಹೇಡಿಗಳ ಕೆಲಸಕ್ಕೆ ಹೆದರುವುದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಗುಡುಗಿದರು.

ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ವಿದ್ಯಾರಣ್ಯಪುರಂನಲ್ಲಿ ನಡೆದ 'ಮೋದಿ ಯುಗ ಉತ್ಸವ'ದ ಸಮಾರೋಪದಲ್ಲಿ ಅವರು, 'ಗೋಡೆಗಳ ಮೇಲೆ ಪೋಸ್ಟರ್ ಅಂಟಿಸುವುದು ಯಾವ ಶೌರ್ಯದ ಕೆಲಸ?' ಎಂದು ವಾಗ್ದಾಳಿ ನಡೆಸಿದರು.



'ಮೈಸೂರಿನ ಪರಂಪರೆಯನ್ನು ಉಳಿಸಿ- ಬೆಳೆಸಿಕೊಂಡು ಹೋಗಲು ನಮ್ಮ ಸರ್ಕಾರ ಒತ್ತು ಕೊಟ್ಟಿದೆ. ಜನರಿಗೆ ಒಳಿತು ಮಾಡಲು ಶಾಸಕ ರಾಮದಾಸ್ ಮತ್ತು ನಾಗೇಂದ್ರ ಪೈಪೋಟಿ ಮೇಲೆ ಕೆಲಸ ಮಾಡುತ್ತಿದ್ದಾರೆ. ಇದು ಅಭಿವೃದ್ಧಿ ರಾಜಕಾರಣ. ಅವಕಾಶ ಇದ್ದಾಗ ಏನನ್ನೂ ಮಾಡದಿದ್ದವರು ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾರೆ. ನಮ್ಮ ಬೆಂಬಲ ಅಭಿವೃದ್ಧಿಗೋ- ಕ್ಷುಲ್ಲಕ ಕೀಳು ರಾಜಕಾರಣಕ್ಕೋ ಎಂಬುದನ್ನು ಜನ ನಿರ್ಧರಿಸಲಿ' ಎಂದರು.

ಯುವ ದಸರಾ ಏಳಲ್ಲ, 6 ದಿನ!

ಮೈಸೂರು: ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿದ್ದ 'ಯುವ ದಸರಾ' ಕಾರ್ಯಕ್ರಮವನ್ನು 7 ದಿನಗಳ ಬದಲಿಗೆ 6 ದಿನಗಳಿಗೆ ಕಡಿತಗೊಳಿಸಲಾಗಿದೆ!

ಈ ಮುಂಚೆ ತಿಳಿಸಿದಂತೆ ಸೆ.27ರಿಂದ 7 ದಿನಗಳವರೆಗೆ ಹಮ್ಮಿಕೊಳ್ಳಲಾಗಿತ್ತು. ಪರಿಷ್ಕೃತ ಪಟ್ಟಿಯ ಪ್ರಕಾರ ಸೆ.27ರ ಬದಲಿಗೆ ಸೆ.28ರಂದು ಚಾಲನೆ ಪಡೆಯಲಿದೆ. ಸೆ.28ರಂದು ಸಂಜೆ 6ಕ್ಕೆ ಉದ್ಘಾಟನೆ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನೆರವೇರಿಸಲಿದ್ದಾರೆ. ನಟ ಸುದೀಪ್ ಭಾಗವಹಿಸದಿರುವ ಕಾರಣದಿಂದಾಗಿ ವಿಶೇಷ ಆಹ್ವಾನಿತರನ್ನಾಗಿ ನಟ ಶಿವರಾಜ್ ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಪತ್ನಿ ಅಶ್ವಿನಿ ಅವರನ್ನು ಆಹ್ವಾನಿಸಲಾಗಿದೆ.

'ಯುವ ಜನರಿಗೆ ಸ್ಫೂರ್ತಿ ದೊರೆಯಲೆಂದು ಮೊದಲ ದಿನವೇ 'ಅಪ್ಪು ನಮನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಎಸ್ಪಿ ಆರ್.ಚೇತನ್ ತಿಳಿಸಿದರು.

ಮತಾಂತರ ಯತ್ನ: ಬೆಂಗಳೂರಿಗೆ ಪ್ರಕರಣ ವರ್ಗಾಯಿಸಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಲವಂತದಿಂದ ಮುಂಜಿ (ಕತ್ನಾ) ಮಾಡಿಸಿ ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಿರುವ ಕುರಿತು ಇಲ್ಲಿನ ನವನಗರ ಪೊಲೀಸ್ ಠಾಣೆಯಿಂದ ದಾಖಲಾದ ಪ್ರಕರಣವನ್ನು ಬೆಂಗಳೂರಿಗೆ ವರ್ಗಾಯಿಸುವ ಪ್ರಕ್ರಿಯೆ ನಡೆಯುತ್ತಿದೆ.

ಈ ನಿಟ್ಟಿನಲ್ಲಿ ಹು-ಧಾ ಪೊಲೀಸ್ ಕಮಿಷನರೇಟ್ ಸಿದ್ಧತೆ ಮಾಡಿಕೊಂಡಿದ್ದು, ಒಂದೆರಡು ದಿನಗಳಲ್ಲಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಈ ನಡುವೆ ಪ್ರಕರಣ ದಾಖಲಿಸಿರುವ ಶ್ರೀಧರ ಅಲಿಯಾಸ್ ಸಲ್ಮಾನ್ ಮಾತನಾಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶ್ರೀಧರ ಅವರನ್ನು ಬಲವಂತವಾಗಿ ಮತಾಂತರ ಮಾಡಿರುವುದು ಬೆಂಗಳೂರಿನಲ್ಲಿ. ಈ ಹಿನ್ನೆಲೆಯಲ್ಲಿ ಅಲ್ಲಿನ ಬನಶಂಕರಿ ಠಾಣೆಗೆ ಪ್ರಕರಣ ಸ್ಥಳಾಂತರಿಸಲು ಸಿದ್ಧತೆ ನಡೆದಿದೆ. ಈ ಸಂಬಂಧ ಎಸಿಪಿ ನೇತೃತ್ವದ ತಂಡ ಬೆಂಗಳೂರಿಗೆ ತೆರಳಿ, ಮಾಹಿತಿ ಸಂಗ್ರಹಿಸಿದೆ ಎಂದು ಮೂಲಗಳು ತಿಳಿಸಿವೆ.

ವಿಡಿಯೊ ವೈರಲ್: ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊದಲ್ಲಿ ಶ್ರೀಧರ, ಇಸ್ಲಾಂ ಧರ್ಮಕ್ಕೆ ಮತಾಂತರವಾಗಲು ಹೇಗೆಲ್ಲ ಆಮಿಷ ಒಡ್ಡಿದ್ದರು, ಎಷ್ಟೆಲ್ಲ ಹಿಂಸೆ ನೀಡಿದ್ದರು, ಹೇಗೆ ಹುಬ್ಬಳ್ಳಿಗೆ ಬಂದೆ ಎನ್ನುವ ಕುರಿತು ಮಾತನಾಡಿದ್ದಾರೆ. ಆದರೆ, ಎಲ್ಲಿಂದ ವಿಡಿಯೊ ಮಾಡಿ ಕಳುಹಿಸಿದ್ದಾರೆ ಎಂಬುದು ಬಹಿರಂಗವಾಗಿಲ್ಲ.

'ಯುವತಿಯನ್ನು ಮತಾಂತರ ಮಾಡುವ ಜವಾಬ್ದಾರಿ ನನಗೆ ನೀಡಿದ್ದು, ಅದಕ್ಕಾಗಿ ಹುಬ್ಬಳ್ಳಿಗೆ ಬಂದಿದ್ದೆ. ಯುವತಿಯ ಮಾಹಿತಿಯನ್ನು ನನಗೆ ಮೇಲ್‌ನಲ್ಲಿ ಕಳುಹಿಸಿ, ₹5 ಸಾವಿರ ನೀಡಿದ್ದರು. ಯುವತಿಯ ವಿಳಾಸ ಹುಡುಕುವ ಸಂದರ್ಭದಲ್ಲಿ ಸ್ಥಳೀಯರು ನನ್ನ ಪತ್ತೆ ಹಚ್ಚಿದ್ದಾರೆ' ಎಂದು ಶ್ರೀಧರ ವಿಡಿಯೊದಲ್ಲಿ ಹೇಳಿದ್ದಾರೆ.

ಏರ್ ಆಂಬುಲೆನ್ಸ್ ಮೂಲಕ ಸಿಪಿಐ ಇಲ್ಲಾಳ ಬೆಂಗಳೂರಿಗೆ

ಕಲಬುರಗಿ: ಮಹಾರಾಷ್ಟ್ರ ಗಡಿಯಲ್ಲಿ ಗಾಂಜಾ ಬೆಳೆಯುತ್ತಿದ್ದ ದುಷ್ಕರ್ಮಿಗಳನ್ನು ಬಂಧಿಸಲು ತೆರಳಿದ್ದ ವೇಳೆ ಸುಮಾರು 50 ಜನರಿಂದ ಹಲ್ಲೆಗೊಳಗಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಕಮಲಾಪುರ ವೃತ್ತದ ಸಿಪಿಐ ಶ್ರೀಮಂತ ಇಲ್ಲಾಳ ಅವರನ್ನು ಸೋಮವಾರ (ಸೆ 26) ಬೆಳಿಗ್ಗೆ ಏರ್ ಆಂಬುಲೆನ್ಸ್ ಮೂಲಕ ಬೆಂಗಳೂರಿಗೆ ಕರೆದೊಯ್ಯಲು ತೀರ್ಮಾನಿಸಲಾಗಿದೆ.

ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಈಶಾನ್ಯ ವಲಯದ ಐಜಿಪಿ ಮನೀಷ್ ಖರ್ಬೀಕರ್, ಕಲಬುರಗಿ ಎಸ್ಪಿ ಇಶಾ ಪಂತ್ ಅವರೊಂದಿಗೆ ಮಾತುಕತೆ ನಡೆಸಿ ಅಗತ್ಯ ಬಿದ್ದರೆ ಬೆಂಗಳೂರಿಗೆ ಕರೆತರುವಂತೆ ಸೂಚಿಸಿದ್ದರು.

ಅದರಂತೆ ಶನಿವಾರವೇ ಏರ್ ಆಂಬುಲೆನ್ಸ್ ಮೂಲಕ ಕರೆದೊಯ್ಯುವ ಯೋಜನೆ ರೂಪಿಸಲಾಗಿತ್ತು. ಅದಕ್ಕಾಗಿ ಕಲಬುರಗಿ ವಿಮಾನ ನಿಲ್ದಾಣವನ್ನು ಸಂಜೆ 5.30ರವರೆಗೂ ತೆರೆದಿರುವಂತೆ ವಿಮಾನ ನಿಲ್ದಾಣದ ನಿರ್ದೇಶಕರಿಗೆ ಸೂಚನೆ ನೀಡಲಾಗಿತ್ತು. ಆದರೆ, ವೈದ್ಯರ ಸಲಹೆ ಮೇರೆಗೆ ಒಂದು ದಿನ ಕಾಯಲು ತೀರ್ಮಾನಿಸಲಾಗಿತ್ತು.

26ರ ಬೆಳಿಗ್ಗೆ ಜೀರೊ ಟ್ರಾಫಿಕ್ ಮೂಲಕ ನಗರದ ಯುನೈಟೆಡ್ ಆಸ್ಪತ್ರೆಯಿಂದ ವಿಮಾನ ನಿಲ್ದಾಣಕ್ಕೆ ಸಿಪಿಐ ಅವರನ್ನು ಕರೆದೊಯ್ಯಲಾಗುತ್ತದೆ. ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸಿದ್ಧತೆ ನಡೆದಿದೆ ಎಂದು ತಿಳಿದುಬಂದಿದೆ.

ಕೊಡಿಗೆಹಳ್ಳಿಯ ಕೆನರಾ ಬ್ಯಾಂಕ್ ಕಾಲೊನಿಯಲ್ಲಿರುವ ಪಾರ್ಕ್‌ನಲ್ಲಿ ಪುತ್ಥಳಿ ನಿರ್ಮಾಣಕ್ಕೆ ಭೂಮಿಪೂಜೆ

ಕೆನರಾ ಬ್ಯಾಂಕ್ ಕಾಲೊನಿ ಉದ್ಯಾನಕ್ಕೆ ದೀನ ದಯಾಳ್ ಉಪಾಧ್ಯಾಯರ ನಾಮಕರಣ



ಕೊಡಿಗೆಹಳ್ಳಿಯ ಕೆನರಾ ಬ್ಯಾಂಕ್ ಕಾಲೊನಿಯಲ್ಲಿರುವ ಪಾರ್ಕ್‌ಗೆ ದೀನ ದಯಾಳ್ ಉಪಾಧ್ಯಾಯರ ಹೆಸರನ್ನು ನಾಮಕರಣ ಮಾಡಲಾಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಹಿರಿಯ ಮುಖಂಡ ಕೆ.ಎನ್. ಚಕ್ರಪಾಣಿ, ವಸತಿ ಮತ್ತು ಮೂಲಭೂತ ಸೌಕರ್ಯ ಸಚಿವ ವಿ. ಸೋಮಣ್ಣ ಇದ್ದಾರೆ



ಕೊಡಿಗೆಹಳ್ಳಿಯ ಕೆನರಾ ಬ್ಯಾಂಕ್ ಕಾಲೊನಿಯಲ್ಲಿರುವ ಉದ್ಯಾನದಲ್ಲಿ ಪಂಡಿತ್ ದೀನ ದಯಾಳ್ ಉಪಾಧ್ಯಾಯ ಅವರ ಪುತ್ಥಳಿ ನಿರ್ಮಾಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭೂಮಿಪೂಜೆ ನೆರವೇರಿಸಿದರು. ಬಿಜೆಪಿ ಹಿರಿಯ ಮುಖಂಡ ಕೆ.ಎನ್. ಚಕ್ರಪಾಣಿ, ವಸತಿ ಮತ್ತು ಮೂಲಭೂತ ಸೌಕರ್ಯ ಸಚಿವ ವಿ. ಸೋಮಣ್ಣ ಇದ್ದಾರೆ

ಧೀಮಂತ ನಾಯಕ, ಚಿಂತಕ ಹಾಗೂ ಅಪ್ರತಿಮ ದೇಶಭಕ್ತ ದೀನ ದಯಾಳ್ ಉಪಾಧ್ಯಾಯರ ಹೆಸರನ್ನು ಅವರ ಜನ್ಮದಿನದ ಅಂಗವಾಗಿ ಕೊಡಿಗೆಹಳ್ಳಿಯ ಕೆನರಾ ಬ್ಯಾಂಕ್ ಕಾಲೊನಿಯಲ್ಲಿರುವ ಪಾರ್ಕ್‌ಗೆ ದೀನ ದಯಾಳ್ ಉಪಾಧ್ಯಾಯರ ಪಾರ್ಕ್ ಎಂದು ನಾಮಕರಣ ಮಾಡಲಾಯಿತು.

ಬಿಜೆಪಿ ಹಿರಿಯ ಮುಖಂಡ ಕೆ.ಎನ್.ಚಕ್ರಪಾಣಿಯವರ ಚಕ್ರಪಾಣಿ ಫೌಂಡೇಶನ್ ನೇತೃತ್ವದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ವಸತಿ ಸಚಿವ ವಿ.ಸೋಮಣ್ಣ ಸೇರಿದಂತೆ ಹಲವು ಬಿಜೆಪಿ ನಾಯಕರು ಭೂಮಿ ಪೂಜೆ ಮಾಡಿ ಉದ್ಯಾನವನಕ್ಕೆ ದೀನ ದಯಾಳರ ಹೆಸರನ್ನಿಡಲಾಯಿತು.

ಉದ್ಯಾನಕ್ಕೆ ನಾಮಕರಣ ಮಾಡಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ದೀನ ದಯಾಳ್ ಉಪಾಧ್ಯಾಯರು ಭಾರತ ದೇಶಕಂಡ ಅಪರೂಪದ ದೇಶಪ್ರೇಮಿ. ಶಿಕ್ಷಕರಾಗಿ, ಪತ್ರಕರ್ತರಾಗಿ, ರಾಷ್ಟ್ರಸೇವೆಗೆ ಧುಮುಕಿದವರು. ಭಾರತೀಯರ ಸಂಸ್ಕೃತಿ ಹಾಗೂ ಬದುಕು, ಅವರ ಮೌಲ್ಯಗಳು, ಆದರ್ಶಗಳು ಇತರ ದೇಶಗಳಿಗಿಂತ ಭಿನ್ನವಾಗಿವೆ ಎಂದು ಪ್ರತಿಪಾದಿಸಿದವರು. ದೀನ ದಯಾಳ್‌ರ ಬದುಕೇ ಸಂಚಾರಿತನದಿಂದ ಕೂಡಿತ್ತು' ಎಂದರು.

'ಭಾರತ ಸಮೃದ್ಧ ಪರಂಪರೆ ಮತ್ತು ಸಂಸ್ಕೃತಿಯಿಂದ ಹಾಸುಹೊಕ್ಕಿರುವ ದೇಶವಾಗಿದೆ. ಬ್ರಿಟಿಷರು ಭಾರತಕ್ಕೆ ಬರುವ ಸಾವಿರಾರು ವರ್ಷಗಳ ಮುಂಚೆಯೇ ಖಗೋಳ ಜ್ಞಾನ, ಗಣಿತಶಾಸ್ತ್ರ ಸೇರಿದಂತೆ ಹಲವು ಜ್ಞಾನಶಾಖೆಗಳು ಪ್ರಖರವಾಗಿ ಬೆಳೆದಿದ್ದವು ಎಂದು ನಂಬಿದ್ದವರು. ಪಾಶ್ಚಾತ್ಯ ಮಾದರಿ ಅಭಿವೃದ್ಧಿ ಪರಿಕಲ್ಪನೆಯ ಐಬುಗಳನ್ನು ಮುಂದಾಗಿ ಗ್ರಹಿಸಿದ್ದರು. ದೇಶದ ಅಭಿವೃದ್ಧಿ ಮಾದರಿಯಲ್ಲಿ ಭಾರತೀಯತೆ ಮೇಳೈಸಬೇಕು ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು' ಎಂದರು.

'ಅಂತ್ಯೋದಯ ಕಲ್ಪನೆ, ಏಕ ಆತ್ಮಮಾನವತ್ವ ಎನ್ನುವ ಚಿಂತನೆ, ಅಖಂಡತೆ, ಏಕತೆ, ಸತ್ಯ ಮಾರ್ಗದ ಬೋಧನೆ ಅವರ ಕನಸಾಗಿತ್ತು. ಕೆಳವರ್ಗದ ಜನರ ಏಳಿಗೆಗಾಗಿ ಸದಾ ಕಾಲ ಶ್ರಮಿಸಿದವರು. ಹೆಸರಿಗೆ ತಕ್ಕಂತೆ ಬದುಕಿದ ದೀನ ದಯಾಳ್ ಉಪಾಧ್ಯಾಯರು, ಭಾರತೀಯ ಜನತಾ ಪಾರ್ಟಿಯನ್ನು ಹುಟ್ಟು ಹಾಕಿದವರಲ್ಲಿ ಕೂಡ ಒಬ್ಬರು. ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾಗಿದ್ದ ದೀನ ದಯಾಳ್ ಉಪಾಧ್ಯಾಯರು, ಭಾರತೀಯ ಜನ ಸಂಘದ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಕೆ.ಎನ್.ಚಕ್ರಪಾಣಿಯವರು, ಪಾರ್ಕ್‌ಗೆ ಅವರ ಹೆಸರನ್ನಿಡುವ ಮೂಲಕ ತುಂಬಾ ಒಳ್ಳೆಯ ಕೆಲಸ ಮಾಡಿದ್ದಾರೆ' ಎಂದು ಬೊಮ್ಮಾಯಿ ಅವರು ಹೇಳಿದರು.

'ಇಂದಿಗೆ ಪಂಡಿತ ದೀನ ದಯಾಳ್ ಉಪಾಧ್ಯಾಯರು ಜನ್ಮತಾಳಿ 106 ವರ್ಷ ಆಯಿತು. ಕೊಡಿಗೆಹಳ್ಳಿ ಕೆನರಾ ಬ್ಯಾಂಕ್ ಲೇಔಟ್‌ನ ವಿರುಪಾಕ್ಷಪುರದಲ್ಲಿರುವ ಪಾರ್ಕ್‌ಗೆ ದೀನ ದಯಾಳ್‌ರ ಹೆಸರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ನಾಮಕರಣ ಮಾಡಿದ್ದಾರೆ. ಆರ್.ಎಸ್.ಎಸ್ ಪ್ರಚಾರಕರಾಗಿ, ಸಂಪಾದಕರಾಗಿ, ಜನ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದಂತಹ ಮಹಾನ್ ಚೇತನ ದೀನ್ ದಯಾಳ್ ಉಪಾಧ್ಯಾಯರು. ಪ್ರಧಾನಿ ನರೇಂದ್ರ ಮೋದಿಯವರ ಇವತ್ತಿನ ಆತ್ಮನಿರ್ಭರ ಭಾರತ ಕರೆ, ದೀನ್ ದಯಾಳ್ ಉಪಾಧ್ಯಾಯರ ಕನಸಾಗಿತ್ತು' ಎಂದು ಕೆ.ಎನ್. ಚಕ್ರಪಾಣಿ ಹೇಳಿದರು.

'ಅಂತಹ ಮಹಾನ್ ಪುರುಷನ ಹೆಸರನ್ನು ಉದ್ಯಾನವನಕ್ಕೆ ನಾಮಕರಣ ಮಾಡಿರುವುದು ಸಂತಸ ತಂದಿದೆ. ಇನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಭಿವೃದ್ಧಿಯ ಹರಿಕಾರರು. ಎಂಥ ಕಷ್ಟಕರ ಸಂದರ್ಭದಲ್ಲೂ ರಾಜ್ಯದ ಆಡಳಿತವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಅವರು ಅಂತರರಾಜ್ಯ ಜಲವಿವಾದದ ವಿಚಾರಣೆಯ ವೇಳೆ ಖುದ್ದು ಹಾಜರಾಗಿ ಇಡೀ ದಿನ ನ್ಯಾಯಾಧೀಕರಣದ ಕಲಾಪವನ್ನು ಆಲಿಸಿದ ಕರ್ನಾಟಕ ರಾಜ್ಯದ ಏಕೈಕ ಪ್ರಬುದ್ಧ ರಾಜಕಾರಣಿ. 2008ರಿಂದ 2013ರ ವರೆಗೆ ಜಲಸಂಪನ್ಮೂಲ ಸಚಿವರಾಗಿದ್ದ ಸಂದರ್ಭದಲ್ಲಿ ಅಂತರರಾಜ್ಯ ಜಲ ವಿವಾದದ ವಿಚಾರಣೆಗೆ ತಂಡವನ್ನು ಪುನರ್ ರಚಿಸಿ, ರಾಜ್ಯದ ಪರ ವಾದಿಸಲು ಸಮರ್ಥ ತಂಡ ಕಟ್ಟಿದ ಜಲಸಂಪನ್ಮೂಲ ತಜ್ಞರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ' ಎಂದು ಅವರು ತಿಳಿಸಿದರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್



ಭಾರತ ಮಾತೆ, ದೀನ ದಯಾಳ್ ಉಪಾಧ್ಯಾಯ ಹಾಗೂ ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಭಾವಚಿತ್ರಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಹಿರಿಯ ಮುಖಂಡ ಕೆ.ಎನ್. ಚಕ್ರಪಾಣಿ, ವಸತಿ ಮತ್ತು ಮೂಲಭೂತ ಸೌಕರ್ಯ ಸಚಿವ ವಿ. ಸೋಮಣ್ಣ ಅವರು ಪುಷ್ಪನಮನ ಸಲ್ಲಿಸಿದರು



ಪಂಡಿತ್ ದೀನ ದಯಾಳ್ ಉಪಾಧ್ಯಾಯರಂತ ಮಹಾನ್ ವ್ಯಕ್ತಿಗಳ ಹೆಸರನ್ನು ಕೆನರಾ ಬ್ಯಾಂಕ್ ಲೇಔಟ್‌ನಲ್ಲಿರುವ ಉದ್ಯಾನವನಕ್ಕೆ ನಾಮಕರಣ ಮಾಡಿರುವುದು ಖುಷಿ ತಂದಿದೆ. ಕಳೆದ 25 ವರ್ಷಗಳಿಂದ ಕೆ.ಎನ್. ಚಕ್ರಪಾಣಿಯವರು ಚಕ್ರಪಾಣಿ ಫೌಂಡೇಷನ್ ಮೂಲಕ ಸದಾ ಸಮಾಜ ಸೇವೆ ಮಾಡುತ್ತಿದ್ದಾರೆ. ಕೋವಿಡ್ ಸಮಯದಲ್ಲಂತೂ 24/7 ಜನರ ಸೇವೆ ಮಾಡಿದ್ದಾರೆ. ಮನೆಯಲ್ಲಿ ಯಾರದ್ದೇ ಹುಟ್ಟುಹಬ್ಬವಿದ್ದರೂ ಅನಾಥಾಶ್ರಮ, ವೃದ್ಧಾಶ್ರಮಕ್ಕೆ ತೆರಳಿ ಸಿಹಿ ಹಂಚಿ ಬಟ್ಟೆಗಳನ್ನು ನೀಡುತ್ತಾರೆ. ಸರಕಾರಿ ಶಾಲೆಗಳ ಅಭಿವೃದ್ಧಿಗೆ ಸಹಕಾರ ಹಾಗೂ ಬಡಮಕ್ಕಳಿಗೆ ಶಿಕ್ಷಣಕ್ಕೆ ಸಹಾಯ ಮಾಡುತ್ತಾರೆ. ಅವರ ಪತ್ನಿಯಾಗಿರುವುದು ನನ್ನ ಪುಣ್ಯ.

ಕವಿತಾ ಚಕ್ರಪಾಣಿ

ದೀನ ದಯಾಳ್ ಉಪಾಧ್ಯಾಯರು ಸ್ವಾತಂತ್ರ್ಯ ಪೂರ್ವದಲ್ಲಿ ಬಹಳಷ್ಟು ಹೋರಾಟಗಳನ್ನು ಮಾಡಿಕೊಂಡು ಬಂದವರು. ಸಾಹಿತಿಯಾಗಿ, ಪತ್ರಕರ್ತರಾಗಿ, ಆರ್ಥಿಕ ತಜ್ಞರಾಗಿ, ಸಮಾಜ ಸುಧಾರಕರಾಗಿ ಅವರ ಕೊಡುಗೆ ದೇಶಕ್ಕೆ ಅಪಾರ. ರಾಷ್ಟ್ರದ ಬೆಳವಣಿಗೆಗೆ ಅವರ ಜೀವನವನ್ನೇ ಮುಡುಪಾಗಿಟ್ಟವರು. ಅಂತಹ ಧೀಮಂತ ವ್ಯಕ್ತಿಯ ಹೆಸರನ್ನು ನಮ್ಮ ಕೆನರಾ ಬ್ಯಾಂಕ್ ಲೇಔಟ್‌ನಲ್ಲಿರುವ ಉದ್ಯಾನವನಕ್ಕೆ ಹೆಸರಿಟ್ಟಿರುವುದು ಖುಷಿ ಪಡುವಂತಹ ವಿಷಯ. ಬಿಜೆಪಿಯ ಹಿರಿಯ ಮುಖಂಡರಾದ ಕೆ.ಎನ್. ಚಕ್ರಪಾಣಿಯವರು ತಮ್ಮ ಸ್ವಂತ ಖರ್ಚಿನಲ್ಲಿ, ತಮ್ಮ ನೇತೃತ್ವದ ಚಕ್ರಪಾಣಿ ಫೌಂಡೇಷನ್ ಮೂಲಕ ಪಾರ್ಕ್‌ಗೆ ಅವರ ಹೆಸರಿಡಲು ಕ್ರಮವಹಿಸಿದ್ದಾರೆ. ಜತೆಗೆ ಪುತ್ಥಳಿ ನಿರ್ಮಾಣಕ್ಕೆ ಭೂಮಿಪೂಜೆ ಮಾಡಿದ್ದಾರೆ. ಈ ಮೂಲಕ ಮುಂದಿನ ಪೀಳಿಗೆಗೆ ದೀನ್ ದಯಾಳ್‌ರ ಬಗ್ಗೆ ತಿಳಿದುಕೊಳ್ಳಲು ಅನುಕೂಲ ಮಾಡಿಕೊಟ್ಟಿದ್ದಾರೆ.

ಮುನೇಗೌಡ, ಕೆನರಾ ಬ್ಯಾಂಕ್ ಲೇಔಟ್ ನಿವಾಸಿ

ಕೆ.ಎನ್. ಚಕ್ರಪಾಣಿಯವರು ನನ್ನ ಆತ್ಮೀಯ ಸ್ನೇಹಿತರು. ಜನರ ಸೇವೆ ಮಾಡಲು ಅಧಿಕಾರದಲ್ಲಿರಬೇಕು ಎನ್ನುವವರಲ್ಲ. ಅವರು ಅಧಿಕಾರದಲ್ಲಿ ಇರಲಿ, ಇಲ್ಲದೇ ಇರಲಿ ಸದಾ ಕಾಲ ಜನರ ಸೇವೆಯನ್ನುಮಾಡುವ ವಿಶಿಷ್ಟ ವ್ಯಕ್ತಿ. ಈ ಪಾರ್ಕ್‌ಗೆ ದೀನ ದಯಾಳ್ ಉಪಾಧ್ಯಾಯರ ಹೆಸರನ್ನಿಡಲು ಕೇಳಿಕೊಂಡರು. ಇದೀಗ ಅನುಮತಿಯನ್ನು ಪಡೆದು ಅವರ ಹೆಸರನ್ನು ನಾಮಕರಣ ಮಾಡಿರುವುದು ಸಂತಸದ ವಿಚಾರ. ಚಕ್ರಪಾಣಿಯವರ ಜನಪರ ಕೆಲಸಗಳು ಹೀಗೆ ಮುಂದುವರೆಯಲಿ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ದೀನ ದಯಾಳ್ ಉಪಾಧ್ಯಾಯರು ನಮ್ಮ ನಾಯಕರು, ಈ ದೇಶ ಕಂಡ ಅಪರೂಪದ ಮಹಾನ್ ತಪಸ್ವಿ. ದೇಶ ಹಾಗೂ ದೇಶದ ಇತಿಹಾಸದ ಬಗ್ಗೆ ಅವರು ಕೈಗೊಂಡಂತೆ ಅನೇಕ ಪ್ರಗತಿಪರ ವಿಚಾರಗಳನ್ನು ನಾವು ಮೈಗೂಡಿಸಿಕೊಳ್ಳಬೇಕು. ಸ್ವಾತಂತ್ರ್ಯ ಬಂದು 75 ವರ್ಷ ಕಳೆದಿದೆ. ಇಂತಹ ಸಂದರ್ಭದಲ್ಲಿ ಅಂತಹ ಮಹಾನ್ ನಾಯಕನ ಹೆಸರನ್ನು ಸ್ಮರಿಸಿಕೊಂಡು, ಪಾರ್ಕ್‌ಗೆ ಹೆಸರನ್ನಿಟ್ಟಿರುವುದು ನನಗೆ ಖುಷಿ ತಂದಿದೆ. ಕೆ.ಎನ್. ಚಕ್ರಪಾಣಿಯವರು ನನ್ನ ಸ್ನೇಹಿತರು, ಜತೆಗೆ ಧೀಮಂತ ರಾಜಕಾರಣಿ. ಅವರು ಸದಾ ಕಾಲ ಜನರ ಹಾಗೂ ಜನಪರ ಕೆಲಸದ ಬಗ್ಗೆ ಚಿಂತಿಸುವ ವ್ಯಕ್ತಿ. ಅವರು ಹಮ್ಮಿಕೊಂಡಿರುವ ಈ ಉದ್ಯಾನವನದ ನಾಮಕರಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಂದು, ತಮ್ಮ ಮನೆಯ ಸದಸ್ಯರಲ್ಲೊಬ್ಬರು ಎನ್ನುವುದನ್ನು ಸಾಬೀತು ಪಡಿಸಿದ್ದಾರೆ. ಜತೆಗೆ ಸೂರ್ಯ, ಚಂದ್ರರು ಇರುವವರೆಗೂ ಪಂಡಿತ್ ದೀನ ದಯಾಳ್ ಉಪಾಧ್ಯಾಯರ ಹೆಸರು ಶಾಶ್ವತವಾಗಿ ಭಾರತದ ಭೂಪಟದಲ್ಲಿ ರಾರಾಜಿಸಲಿದೆ.

ವಿ.ಸೋಮಣ್ಣ
ವಸತಿ ಮತ್ತು ಮೂಲಭೂತ ಸೌಕರ್ಯ ಸಚಿವ

ಸೋಮವಾರ, ಸೆಪ್ಟೆಂಬರ್ 26, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 267 | ಪುಟ 18
www.prajavani.net
f/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಉದ್ಯಮಿಯಾಗುವ ಕನಸಿಗೆ ರೆಕ್ಕೆ ಜೋಡಿಸುವ ಎಂಬಿಎ(ಉದ್ಯಮಶೀಲತೆ) ಕೋರ್ಸ್, ಉದ್ಯಮ ನಡೆಸಲು ಅಗತ್ಯವಿರುವ ಜ್ಞಾನ, ಕೌಶಲ ಮತ್ತು ನೆಟ್‌ವರ್ಕಿಂಗ್ ಪರಿಕಲ್ಪನೆಗಳನ್ನು ಪರಿಚಯಿಸುತ್ತದೆ.



ಆಳ-ಅಗಲ ಬಿಜೆಪಿಯೇತರ ಸರ್ಕಾರಗಳಿಗೆ ರಾಜ್ಯಪಾಲರ ರಗಳೆ
ಚಂಡೀಗಢ ವಿಮಾನ ನಿಲ್ದಾಣಕ್ಕೆ ಭಗತ್ ಸಿಂಗ್ ಹೆಸರು: ಮೋದಿ 4
ಟಿ20 ಕ್ರಿಕೆಟ್: ಭಾರತ ತಂಡಕ್ಕೆ ರೋಚಕ ಜಯ
ರೂಪಾಯಿ ಕುಸಿತ: ತೈಲ, ಅಡುಗೆ ಎಣ್ಣೆ ತುಟ್ಟಿ ಸಂಭವ 8
ರೋಹಿತ್ ಪಡೆಗೆ ಸರಣಿ ಕಿರೀಟ 9

2024ರ ಲೋಕಸಭಾ ಚುನಾವಣೆಗೆ ಸಿದ್ಧತೆ • ವಿರೋಧ ಪಕ್ಷಗಳ ಒಗ್ಗಟ್ಟಿನ ಮಂತ್ರ

ಬಿಜೆಪಿ ವಿರೋಧಿ ರಂಗಕ್ಕೆ ಕಹಳೆ

ಫತೇಹಾಬಾದ್ (ಹರಿಯಾಣ) (ಪಿಟಿಐ): ಬಿಜೆಪಿ ವಿರೋಧಿ ರಂಗವೊಂದರ ರಚನೆಗೆ ಮೊದಲ ಹೆಜ್ಜೆ ಇರಿಸಲಾಗಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಕಾಂಗ್ರೆಸ್ ಸೇರಿದಂತೆ ಬಿಜೆಪಿಯ ವಿರುದ್ಧ ಇರುವ ಎಲ್ಲ ಪಕ್ಷಗಳ ಮೈತ್ರಿಕೂಟ ರಚಿಸಬೇಕು ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ಇತರ ಪ್ರಮುಖ ಮುಖಂಡರು ಭಾನುವಾರ ಕರೆ ಕೊಟ್ಟಿದ್ದಾರೆ. ದ್ವಿಪಕ್ಷೀಯ ಹಣಾಹಣಿ ನಡೆದರೆ ಬಿಜೆಪಿಯ ಸೋಲು ನಿಶ್ಚಿತ ಎಂದು ಈ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

‘ಬಿಜೆಪಿಯೇತರ ಪಕ್ಷಗಳು ಒಂದಾಗುವುದಾದರೆ ಕಾಂಗ್ರೆಸ್‌ನಲ್ಲಿರುವ ನಮ್ಮ ಗೆಳೆಯರನ್ನೂ ಸೇರಿಸಿಕೊಳ್ಳಬೇಕು. ಹಾಗಾದರೆ, ನಾಶ ಮಾಡುವವರಿಂದ ಈ ದೇಶವನ್ನು ರಕ್ಷಿಸಬಹುದು’ ಎಂದು ನಿತೀಶ್ ಹೇಳಿದ್ದಾರೆ. ಮಾಜಿ ಉಪ ಪ್ರಧಾನಿ ದೇವಿಲಾಲ್ ಅವರ 109ನೇ ಹುಟ್ಟುಹಬ್ಬದ ಅಂಗವಾಗಿ ಇಂಡಿಯನ್ ನ್ಯಾಷನಲ್ ಲೋಕ ದಳ (ಐಎನ್‌ಎಲ್‌ಡಿ) ಪಕ್ಷವು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

2024ರ ಲೋಕಸಭಾ ಚುನಾವಣೆಗೆ ಮೂರನೇ ರಂಗ ರಚನೆಯ ಪ್ರಶ್ನೆಯೇ ಇಲ್ಲ. ಬದಲಿಗೆ ಬಿಜೆಪಿಯನ್ನು ಸೋಲಿಸುವುದಕ್ಕಾಗಿ ಒಂದು ರಂಗ ಮಾತ್ರ ಇರಲಿದೆ ಎಂದೂ ಅವರು ಹೇಳಿದರು. ಶರದ್ ಪವಾರ್, ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚೂರಿ, ಶಿವಸೇನಾದ ಅರವಿಂದ ಸಾವಂತ್ ಅವರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ವಿರೋಧ ಪಕ್ಷಗಳ ಒಗ್ಗಟ್ಟಿನ ರಂಗ ರಚನೆಗಾಗಿ ಕಾಂಗ್ರೆಸ್ ಸೇರಿ ಎಲ್ಲ ಪಕ್ಷಗಳ ಜತೆಗೆ ಮಾತುಕತೆ ನಡೆಸುವುದಾಗಿ ಐಎನ್‌ಎಲ್‌ಡಿ ಅಧ್ಯಕ್ಷ ಒ.ಪಿ. ಚೌತಾಲಾ ಅವರೂ ಹೇಳಿದರು.

ಕಾಂಗ್ರೆಸ್ ಪಕ್ಷವನ್ನು ಸುದೀರ್ಘ ಕಾಲದಿಂದ ವಿರೋಧಿಸಿಕೊಂಡು ಬಂದಿರುವ ಇತಿಹಾಸ ಹೊಂದಿರುವ ಶಿರೋಮಣಿ ಅಕಾಲಿ ದಳದ (ಎಸ್‌ಎಡಿ) ಸುಖಬೀರ್ ಸಿಂಗ್ ಬಾದಲ್ ಅವರೂ ವೇದಿಕೆಯಲ್ಲಿ ಇದ್ದರು. ವಿರೋಧ ಪಕ್ಷಗಳು ಒಟ್ಟಾಗಬೇಕು ಎಂಬ ಹಂಬಲವನ್ನು ಅವರೂ ವ್ಯಕ್ತಪಡಿಸಿದರು. ಬಿಹಾರ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರು ಉಪಸ್ಥಿತರಿದ್ದರು.

‘ನಿಜವಾದ ಎನ್‌ಡಿಎ ಬೇರೆಲ್ಲೂ ಇಲ್ಲ, ಇಲ್ಲೇ ಇದೆ. ಎನ್‌ಡಿಎಯ ಸ್ಥಾಪಕ ಸದಸ್ಯ ಪಕ್ಷಗಳಾದ ಎಸ್‌ಎಡಿ, ಶಿವಸೇನಾ ಮತ್ತು ಜೆಡಿಯು ಇಲ್ಲಿ ಇವೆ. ನಾವು ಎನ್‌ಡಿಎಯಿಂದ ಬಿಜೆಪಿಯನ್ನು ಹೊರಕ್ಕೆ ಹಾಕಿದ್ದೇವೆ’ ಎಂದು ಬಾದಲ್ ಹೇಳಿದರು.

ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳೂ ಒಂದೇ ವೇದಿಕೆಯಡಿ ಬರಬೇಕು ಎಂದು ಯೆಚೂರಿ ಹೇಳಿದರು.



ದೇವಿಲಾಲ್ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಶರದ್ ಪವಾರ್, ಸೀತಾರಾಮ ಯೆಚೂರಿ, ಐಎನ್‌ಎಲ್‌ಡಿ ಅಧ್ಯಕ್ಷ ಒ.ಪಿ. ಚೌತಾಲಾ, ನಿತೀಶ್ ಕುಮಾರ್ ಭಾಗಿಯಾಗಿದ್ದರು –ಪಿಟಿಐ ಚಿತ್ರ

ಮಮತಾ, ಕೆಸಿಆರ್, ಅಖಿಲೇಶ್ ಗೈರು

ಪ್ರಭಾವಿಯಾಗಿರುವ ಹಲವು ಪ್ರಾದೇಶಿಕ ಪಕ್ಷಗಳ ಮುಖಂಡರು ಕಾರ್ಯಕ್ರಮದಲ್ಲಿ ಭಾಗಿ ಆಗಿಲ್ಲ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರು ಕಾರ್ಯಕ್ರಮಕ್ಕೆ ಬಂದಿಲ್ಲ. ಬಿಜೆಪಿ ವಿರೋಧಿ ಪಕ್ಷಗಳ ಕೂಟದಲ್ಲಿ ಕಾಂಗ್ರೆಸ್ ಅನ್ನು ಸೇರಿಸುವುದಕ್ಕೆ ಈ ಇಬ್ಬರೂ ಮುಖಂಡರು ಈ ಹಿಂದೆ ವಿರೋಧ ವ್ಯಕ್ತಪಡಿಸಿದ್ದರು. ಕಾಂಗ್ರೆಸ್ ಪಕ್ಷದ ಮುಖಂಡರು ಕಾರ್ಯಕ್ರಮದಲ್ಲಿ ಭಾಗಿಯಾಗಿರಲಿಲ್ಲ. ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರೂ ಕಾರ್ಯಕ್ರಮಕ್ಕೆ ಹಾಜರಾಗಿಲ್ಲ.

ಸೋನಿಯಾ ಭೇಟಿ ಮಾಡಿದ ಲಾಲು, ನಿತೀಶ್

ನವದೆಹಲಿ (ಪಿಟಿಐ): ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭಾನುವಾರ ಇಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಮುಂದಿನ ಲೋಕಸಭಾ ಚುನಾವಣೆಗೆ ಎಲ್ಲಾ ವಿರೋಧ ಪಕ್ಷಗಳನ್ನು ಬಿಜೆಪಿ ವಿರುದ್ಧ ಒಗ್ಗೂಡಿಸುವ ಯತ್ನದ ಭಾಗವಾಗಿ ಈ ಭೇಟಿ ನಡೆದಿದೆ.

‘ಬಿಜೆಪಿಯನ್ನು ಸೋಲಿಸಲು ಎಲ್ಲಾ ವಿರೋಧ ಪಕ್ಷಗಳನ್ನು ಒಗ್ಗೂಡಿಸಬೇಕು. ಕಾಂಗ್ರೆಸ್ ಹೊಸ ಅಧ್ಯಕ್ಷರ ಆಯ್ಕೆಯ ಪ್ರಕ್ರಿಯೆಯಲ್ಲಿದೆ. ಅಧ್ಯಕ್ಷರ ಚುನಾವಣೆಯ ನಂತರ ಮತ್ತೆ ಭೇಟಿ ಮಾಡೋಣ ಎಂದು ಸೋನಿಯಾ ಗಾಂಧಿ ಹೇಳಿದ್ದಾರೆ’ ಎಂದು ಲಾಲು ಹೇಳಿದ್ದಾರೆ.

ಬಿಹಾರದಲ್ಲಿ ಬಿಜೆಪಿ ಜತೆಗೆ ಮೈತ್ರಿ ಕಡಿದುಕೊಂಡು ಆರ್‌ಜೆಡಿ–ಕಾಂಗ್ರೆಸ್ ಜತೆಗೆ ಸರ್ಕಾರ ರಚಿಸಿದ ನಂತರ ನಿತೀಶ್ ಅವರು ಸೋನಿಯಾ ಅವರನ್ನು ಭೇಟಿ ಮಾಡಿದ್ದು ಇದೇ ಮೊದಲು.

ದಸರಾಕ್ಕೆ ಇಂದು ರಾಷ್ಟ್ರಪತಿ ಚಾಲನೆ

• ಎಂ.ಮಹೇಶ

ಮೈಸೂರು: ಕೋವಿಡ್ ಕಾರಣದಿಂದ ಹಿಂದಿನ ಎರಡು ವರ್ಷ ಸರಳವಾಗಿ ನಡೆದಿದ್ದ ದಸರಾ ಈ ಬಾರಿ ಅದ್ದೂರಿಯಾಗಿ ನಡೆಯಲಿದೆ. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ರಾಷ್ಟ್ರಪತಿಯಿಂದ ಚಾಲನೆ, ವಿದ್ಯುತ್ ದೀಪಾಲಂಕಾರದಲ್ಲಿ ಸಾಗಲಿರುವ ಜಂಬೂಸವಾರಿ, ಯೋಗ ದಸರಾ, ಕೈಗಾರಿಕಾ ದಸರಾ ಹಾಗೂ ವೈದ್ಯಕೀಯ ವಸ್ತುಪ್ರದರ್ಶನದ ಸೇರ್ಪಡೆ...

–ಸೋಮವಾರದಿಂದ (ಸೆ.26) ಆರಂಭವಾಗಲಿರುವ ಮೈಸೂರು ದಸರಾ ಉತ್ಸವದ ವಿಶೇಷಗಳಿವು. ಉತ್ಸವವು ಹಲವು ಪ್ರಥಮಗಳಿಗೆ ಸಾಕ್ಷಿಯಾಗಲಿದೆ.

ಉತ್ಸವದಲ್ಲಿ ನಟ ಪುನೀತ್ ರಾಜ್‌ಕುಮಾರ್ ನೆನಪು ಮೇಳೈಸಲಿದೆ. ಸಂಜೆ ವಿದ್ಯುತ್ ದೀಪಾಲಂಕಾರವುಳ್ಳ ರಸ್ತೆಯಲ್ಲಿ ಜಂಬೂಸವಾರಿ ಸಾಗಲಿರುವುದು ಈ ಬಾರಿಯ ವಿಶೇಷ.

26ರಂದು ಬೆಳಿಗ್ಗೆ 9.45ರಿಂದ 10.05ರೊಳಗೆ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಿ ಸನ್ನಿಧಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ನಾಡಹಬ್ಬವನ್ನು ಉದ್ಘಾಟಿಸಲಿದ್ದಾರೆ. ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸಲಿದ್ದಾರೆ. ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಅಂಬಾವಿಲಾಸ ಅರಮನೆ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಉದ್ಘಾಟನೆಗೊಳ್ಳಲಿವೆ. ‘ರಾಜ್ಯ ಸಂಗೀತ ವಿದ್ವಾನ್’ ಪ್ರಶಸ್ತಿಯನ್ನು ವಿದುಷಿ ಲಲಿತ್ ಜೆ.ರಾವ್ ಅವರಿಗೆ ಪ್ರದಾನ ಮಾಡಲಾಗುವುದು. ಚಲನಚಿತ್ರೋತ್ಸವಕ್ಕೆ ನಟ ಶಿವರಾಜ್ ಕುಮಾರ್ ಚಾಲನೆ ನೀಡಲಿದ್ದಾರೆ.

ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ಕುಸ್ತಿ ಪಂದ್ಯಾವಳಿ, ಅರಮನೆ ಆವರಣದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಬಿಂಬಿಸುವ ಫಲಪುಷ್ಪ ಪ್ರದರ್ಶನ, ಶಿಲ್ಪ, ಚಿತ್ರಕಲಾ ಪ್ರದರ್ಶನವೂ ತೆರೆದುಕೊಳ್ಳಲಿದೆ. ಯುವ ದಸರಾ, ದಸರಾ ದರ್ಶನ, ಕವಿಗೋಷ್ಠಿ, ಪಾರಂಪರಿಕ ದಸರಾ, ಉರ್ದು ಕವಿಗೋಷ್ಠಿ, ರೈತ ದಸರಾ, ಮಹಿಳಾ ಮತ್ತು ಮಕ್ಕಳ ದಸರಾ ಏರ್ಪಾಡಾಗಿದೆ.

ಮೈಸೂರು ರಾಜವಂಶಸ್ಥರ ಖಾಸಗಿ ಅರಮನೆಯಲ್ಲಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ‘ಖಾಸಗಿ ದರ್ಬಾರ್’ ಸೋಮವಾರವೇ ನಡೆಯಲಿದೆ.

ದಸರಾ ಉದ್ಘಾಟನೆ–ವಿಜಯದಶಮಿ ಮೆರವಣಿಗೆಯನ್ನು ವರ್ಚುವಲ್ ಆಗಿ ವೀಕ್ಷಿಸಲು ಈ ಲಿಂಕ್‌ಗಳನ್ನು ಬಳಸಬಹುದು.

ಫೇಸ್‌ಬುಕ್: https://facebook.mysoredasara.gov.in
ಯೂಟ್ಯೂಬ್: https://youtube.mysoredasara.gov.in
ವೆಬ್‌ಸೈಟ್: https://mysoredasara.gov.in

ಆದಿವಾಸಿಗಳೊಂದಿಗೆ ಫೋಟೊ ಶೂಟ್

‘ದಸರಾ ಉದ್ಘಾಟನೆ ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹುಣಸೂರು, ಪಿರಿಯಾಪಟ್ಟಣ ಹಾಗೂ ಎಚ್.ಡಿ.ಕೋಟೆ ತಾಲ್ಲೂಕಿನ ಆದಿವಾಸಿಗಳೊಂದಿಗೆ 10 ನಿಮಿಷಗಳ ಫೋಟೊ ಸೆಷನ್ ನಡೆಸಲಿದ್ದಾರೆ.

ಇಂದಿನಿಂದ ಮೂರು ದಿನ ರಾಜ್ಯದಲ್ಲಿ ರಾಷ್ಟ್ರಪತಿ ಪ್ರವಾಸ

ನವದೆಹಲಿ (ಪಿಟಿಐ): ‘ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರದಿಂದ ಬುಧವಾರದವರೆಗೆ (ಸೆಪ್ಟೆಂಬರ್ 26ರಿಂದ 28) ರಾಜ್ಯಕ್ಕೆ ಭೇಟಿ ನೀಡಲಿದ್ದು, ವಿವಿಧ ಸಮಾರಂಭಗಳಲ್ಲಿ ಭಾಗವಹಿಸಲಿದ್ದಾರೆ.

4

ಚೀನಾದ ಜಿನ್‌ಪಿಂಗ್‌ಗೆ ಗೃಹಬಂಧನ?

ನವದೆಹಲಿ: ಚೀನಾದಲ್ಲಿ ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ) ಕ್ಷಿಪ್ರ ಕ್ರಾಂತಿ ನಡೆಸಿ, ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನು ಪದಚ್ಯುತಗೊಳಿಸಿ ಗೃಹ ಬಂಧನದಲ್ಲಿರಿಸಿದೆ ಎನ್ನಲಾಗಿದೆ. ಸೇನಾ ಮುಖ್ಯಸ್ಥ ಜನರಲ್ ಲಿ ಕ್ವಿಯೋಮಿಂಗ್ ಮುಂದಿನ ಅಧ್ಯಕ್ಷರಾಗಲಿದ್ದಾರೆ ಎಂಬ ವದಂತಿ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಭ್ರಷ್ಟಾಚಾರ ಸಂಬಂಧ ಇಬ್ಬರು ಮಾಜಿ ಸಚಿವರಿಗೆ ಮರಣದಂಡನೆ ವಿಧಿಸಿದ ನಂತರ ಈ ಬೆಳವಣಿಗೆ ನಡೆದಿದೆ. ದೇಶದಲ್ಲಿ ಏಕಾಏಕಿ 9 ಸಾವಿರ ವಿಮಾನಗಳ ಹಾರಾಟ ರದ್ದು, 80 ಕಿ.ಮೀ.ಉದ್ದಕ್ಕೂ ಕಾಣಿಸಿದ ಸೇನಾ ವಾಹನಗಳ ಸಂಚಾರ ಸೇನಾ ಕ್ರಾಂತಿ ವದಂತಿಗೆ ಪುಷ್ಟಿ ನೀಡಿದೆ. ಭಾನುವಾರ ಸಹ ವಾಣಿಜ್ಯ ವಿಮಾನಗಳು ಹಾರಾಟ ನಡೆಸಿಲ್ಲವೆಂದು ಟ್ವಿಟರ್‌ನಲ್ಲಿ ಕೆಲವರು ಮಾಹಿತಿ ಹಂಚಿಕೊಂಡಿದ್ದಾರೆ. ಆದರೆ, ಚೀನಾ ಕಮ್ಯುನಿಸ್ಟ್ ಪಕ್ಷ (ಸಿಸಿಪಿ) ಅಥವಾ ಸರ್ಕಾರಿ ಮಾಧ್ಯಮಗಳು ಅಧಿಕೃತ ಸ್ಪಷ್ಟನೆ ನೀಡಿಲ್ಲ. ಈ ಮಧ್ಯೆ, ಅ. 16ರಂದು ಆರಂಭವಾಗುವ ಮಹತ್ವದ ರಾಜಕೀಯ ಸಭೆಗೆ ಪ್ರತಿನಿಧಿಗಳನ್ನು ಸಿಸಿಪಿ ಆಯ್ಕೆಮಾಡಿದೆ ಎಂದು ಬೀಜಿಂಗ್‌ನಿಂದ ಅಧಿಕೃತ ಮಾಧ್ಯಮಗಳು ತಿಳಿಸಿವೆ.

ಇನ್ನೊಂದು ಸುದ್ದಿ 8



ಬಿಂಬ–ಪ್ರತಿಬಿಂಬ ದಸರಾ ಮಹೋತ್ಸವದ ಅಂಗವಾಗಿ ದೀಪಾಲಂಕಾರಗೊಂಡಿರುವ ಮೈಸೂರಿನ ಅರಮನೆಯ ಪ್ರತಿಬಿಂಬ ಭಾನುವಾರ ಸುರಿದ ಮಳೆಯ ನೀರಿನಲ್ಲಿ ಮೂಡಿತ್ತು
ಪ್ರಜಾವಾಣಿ ಚಿತ್ರ : ಅನೂಪ್ ರಾಘ.ಟಿ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಾಮೂಹಿಕ ರಾಜೀನಾಮೆಗೆ ಮುಂದಾದ 80 ಶಾಸಕರು

ರಾಜಸ್ಥಾನ ಕಾಂಗ್ರೆಸ್‌ನಲ್ಲಿ ಬಿಕ್ಕಟ್ಟು

ಜೈಪುರ (ಪಿಟಿಐ): ರಾಜಸ್ಥಾನ ಕಾಂಗ್ರೆಸ್‌ನಲ್ಲಿನ ಬಿಕ್ಕಟ್ಟು ತಾರಕಕ್ಕೇರಿದೆ. ಭಾನುವಾರ ಸಂಜೆ ನಿಗದಿಯಾಗಿದ್ದ ಶಾಸಕಾಂಗ ಪಕ್ಷದ ಸಭೆಗೂ (ಸಿಎಲ್‌ಪಿ) ಮುನ್ನ, ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಶಾಸಕರ ಗುಂಪು ಸಾಮೂಹಿಕ ರಾಜೀನಾಮೆ ಬೆದರಿಕೆ ಹಾಕಿದೆ. ಸ್ಪೀಕರ್ ಅವರನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸಲು ಸುಮಾರು 80 ಶಾಸಕರು ಮುಂದಾಗಿದ್ದಾರೆ.

ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಗೆಹಲೋತ್ ಆಯ್ಕೆಯಾದಲ್ಲಿ, ರಾಜಸ್ಥಾನದ ಮುಖ್ಯಮಂತ್ರಿಯಾಗಿ ಸಚಿನ್ ಪೈಲಟ್ ನೇಮಕವಾಗುವ ಸಾಧ್ಯತೆಯಿದೆ ಎಂಬ ಕಾರಣಕ್ಕೆ ಗೆಹಲೋತ್ ಬಣದ ಶಾಸಕರು ಈ ನಡೆ ಅನುಸರಿಸುತ್ತಿದ್ದಾರೆ ಎಂದು ಹೇಳಲಾಗಿದೆ. ಈ ಮೂಲಕ, ಸರ್ಕಾರದ ಮೇಲೆ ಹಿಡಿತ ಸಾಧಿಸಲು ಗೆಹಲೋತ್–ಪೈಲಟ್ ಬಣಗಳು ಮತ್ತೆ ಸಂಘರ್ಷಕ್ಕೆ ಇಳಿದಿರುವುದು ಸ್ಪಷ್ಟವಾಗಿದೆ.

ಸಿಎಲ್‌ಪಿ ಸಭೆಗೆ ಕೇಂದ್ರದ ವೀಕ್ಷಕರಾಗಿ ಮಲ್ಲಿಕಾರ್ಜುನ ಖರ್ಗೆ ಮತ್ತು ಅಜಯ್ ಮಾಕನ್ ಬಂದಿದ್ದಾರೆ. ಆದರೆ, ಸಭೆಗೂ ಮುನ್ನ ಸಚಿವ ಶಾಂತಿ ಧರಿವಾಲಾ ಅವರ ನೇತೃತ್ವದಲ್ಲಿ ಗೆಹಲೋತ್ ಆಪ್ತ ಬಣದ ಶಾಸಕರ ಸಭೆ ನಡೆಯಿತು. ಗೆಹಲೋತ್ ಆಪ್ತರಲ್ಲಿ ಒಬ್ಬರನ್ನು ಅವರ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡುವಂತೆ ಪಕ್ಷದ ಮೇಲೆ ಒತ್ತಡ ಹೇರುವುದು ಈ ಸಭೆಯ ಉದ್ದೇಶವಾಗಿತ್ತು. ಪಕ್ಷೇತರರೂ ಸೇರಿ 80 ಶಾಸಕರು ಸಭೆಯಲ್ಲಿದ್ದರು ಎಂದು ಹೇಳಲಾಗಿದೆ. ಸ್ಪೀಕರ್ ಸಿ.ಪಿ. ಜೋಷಿ ಅವರನ್ನು ಭೇಟಿಯಾಗಲು ಸಭೆಯಲ್ಲಿದ್ದ ಶಾಸಕರು ನಿರ್ಧರಿಸಿದರು.

‘ನಾವು ಬಸ್ ಮೂಲಕ ಸ್ಪೀಕರ್ ನಿವಾಸಕ್ಕೆ ತೆರಳಿ ರಾಜೀನಾಮೆ ಸಲ್ಲಿಸಲಿದ್ದೇವೆ’ ಎಂದು ಸಚಿವ ಪ್ರತಾಪ್ ಸಿಂಗ್ ಖಾಚರಿಯಾವಾಸ್ ಅವರು ಹೇಳಿದರು.

2020ರಲ್ಲಿ ಎದುರಾದ ಬಿಕ್ಕಟ್ಟಿನಿಂದ ಸರ್ಕಾರವನ್ನು ಪಾರು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನಾಯಕರೊಬ್ಬರು ಮುಖ್ಯಮಂತ್ರಿಯಾಗಬೇಕೇ ಹೊರತು, ಸರ್ಕಾರವನ್ನು ಕೆಡವಲು ಮುಂದಾಗಿದ್ದವರಿಗೆ ಹುದ್ದೆ ನೀಡಬಾರದು ಎಂಬುದು ಕೆಲವು ಶಾಸಕರ ಆಗ್ರಹ. 18 ಶಾಸಕರ ಜೊತೆ ಬಂಡಾಯ ಎದ್ದಿದ್ದ ಪೈಲಟ್ ಅವರನ್ನು ಗುರಿಯಾಗಿಸಿ ಶಾಸಕರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮುಖ್ಯಾಂಶಗಳು

- ಪೈಲಟ್‌ಗೆ ಸಿ.ಎಂ ಸ್ಥಾನ ನೀಡುವುದಕ್ಕೆ ವಿರೋಧ
- ಗೆಹಲೋತ್ ನಿಷ್ಠರಿಗೆ ಸ್ಥಾನ ನೀಡಲು ಆಗ್ರಹ

3A ಪುಟ ನೋಡಿ

ವಿರೂಪಾಕ್ಷಪುರದಲ್ಲಿ ಉದ್ಯಾನಕ್ಕೆ ಪಂಡಿತ್ ದೀನದಯಾಳ್ ಉಪಾಧ್ಯಾಯರ ಹೆಸರು

‘ದೀನದಯಾಳರ ಆದರ್ಶಗಳು ಪ್ರಸ್ತುತ’

ಪ್ರಜಾವಾಣಿ ವಾರ್ತೆ



‘ಪಂಡಿತ್ ದೀನದಯಾಳ್ ಉಪಾಧ್ಯಾಯ ಉದ್ಯಾನ’ ನಾಮಕರಣ ಕಾರ್ಯಕ್ರಮದಲ್ಲಿ ಬಸವರಾಜ ಬೊಮ್ಮಾಯಿ ಮಾತನಾಡಿದರು. ಬಿಜೆಪಿ ಮುಖಂಡ ಕೆ.ಎನ್. ಚಕ್ರಪಾಣಿ, ವಸತಿ ಸಚಿವ ವಿ. ಸೋಮಣ್ಣ ಇದ್ದಾರೆ.

ಬೆಂಗಳೂರು: ‘ದೇಶದ ಏಕತೆ, ಅಖಂಡತೆಯ ಬಗ್ಗೆ ಸದಾ ಕಾಲ ಚಿಂತನೆ ಮಾಡಿದ ದೀನದಯಾಳ್ ಉಪಾಧ್ಯಾಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಏಳಿಗೆಗೆ ನಿರಂತರ ಶ್ರಮಿಸಿದರು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿರೂಪಾಕ್ಷಪುರದಲ್ಲಿರುವ ಉದ್ಯಾನವನಕ್ಕೆ ಪಂಡಿತ್ ದೀನದಯಾಳ್ ಉಪಾಧ್ಯಾಯರ ಹೆಸರನ್ನು ನಾಮಕರಣ ಮಾಡುವ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ‘ಉಪಾಧ್ಯಾಯರ ಹೆಸರಿನಲ್ಲಿ ದೀನ, ದಯಾಳು ಹಾಗೂ ಶಿಕ್ಷಕ ಮೂರು ಇವೆ. ಅವರು ಹೆಸರಿಗೆ ತಕ್ಕಂತೆ ಬದುಕಿದರು. ಅವರ ಎಲ್ಲ ಆದರ್ಶಗಳು ಪ್ರಸ್ತುತ’ ಎಂದರು.

‘ದೀನದಯಾಳ್ ಉಪಾಧ್ಯಾಯ ಅವರು ದೇಶ ಕಂಡ ಅಪರೂಪದ ದೇಶಪ್ರೇಮಿ. ವ್ಯವಸ್ಥೆಯನ್ನು ಆಳವಾಗಿ ಅಧ್ಯಯನ ಮಾಡಿದ್ದ ಅವರು, ಪರ್ಯಾಯ ವ್ಯವಸ್ಥೆಯನ್ನು ತೋರಿಸಿದ ಧೀಮಂತ ನಾಯಕ. ಸ್ವಾತಂತ್ರ್ಯ ಹೋರಾಟ ಉತ್ತುಂಗದಲ್ಲಿದ್ದಾಗ ಕೆಲವರು ಪಾಶ್ಚಿಮಾತ್ಯ ದೇಶದ ಪ್ರಭಾವದಲ್ಲಿದ್ದರೆ, ಇನ್ನೂ ಕೆಲವರು ಕಮ್ಯುನಿಸ್ಟ್ ನೆಲೆಯ ಪ್ರಭಾವದಲ್ಲಿದ್ದರು. ಈ ಎರಡರ ಮಧ್ಯೆ ನಮ್ಮ ಭಾರತೀಯರ ಬದುಕನ್ನು ಗುರುತಿಸಲಿಲ್ಲ ಎನ್ನುವ ನೋವು ಅವರಿಗಿತ್ತು. ಅಂತ್ಯೋದಯ ಪರಿಕಲ್ಪನೆ ನೀಡಿದ್ದರು. ಸಮಾಜದ ಕಟ್ಟಕಡೆಯ ವ್ಯಕ್ತಿ ಏಳಿಗೆಗೆ ಅಂತ್ಯೋದಯ ಕಾರ್ಯಕ್ರಮ ಆಗಲೇಬೇಕು ಎಂದು ಪ್ರತಿಪಾದಿಸಿದ್ದರು’ ಎಂದು ತಿಳಿಸಿದರು.

ವಿದ್ಯಾರ್ಥಿ ನಿಲಯ ನಿರ್ಮಾಣ: ‘ಸರ್ಕಾರ ಈ ವರ್ಷ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರು ಹಾಗೂ ಕಲಬುರ್ಗಿಯಲ್ಲಿ ವಿದ್ಯಾರ್ಥಿ ನಿಲಯಗಳನ್ನು ಈ ವರ್ಷ ನಿರ್ಮಾಣ ಮಾಡುತ್ತಿದೆ. ಒಂದು ಸಾವಿರ ಎಸ್ಸಿ, ಎಸ್‌.ಟಿ ವಿದ್ಯಾರ್ಥಿಗಳಿಗೆ ಇದು ಸಹಕಾರಿಯಾಗಲಿದೆ ಎಂದು ಹೇಳಿದರು.

‘ವಿದ್ಯಾರ್ಥಿಗಳಿಗೆ ಅವರ ಆದರ್ಶಗಳ ಸ್ಫೂರ್ತಿಯೂ ಸಿಗಲಿ ಎಂದು 5 ವಿದ್ಯಾರ್ಥಿನಿಲಯಗಳಿಗೆ ದೀನದಯಾಳರ ಹೆಸರನ್ನು ಇಡಲಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೆಸರಿನಲ್ಲಿ ಎಸ್‌.ಸಿ, ಎಸ್‌.ಟಿ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲಾಗುತ್ತಿದೆ’ ಎಂದು ಹೇಳಿದರು.

‘50 ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳನ್ನು ಕನಕದಾಸರ ಹೆಸರಿನಲ್ಲಿ ನಿರ್ಮಿಸುತ್ತಿದ್ದೇವೆ. ನಮ್ಮ ಸಂಸ್ಕೃತಿ, ಪರಂಪರೆಯನ್ನು ಮುಂದುವರೆಸುತ್ತಿದ್ದೇವೆ’ ಎಂದರು.

‘ಮಾನವೀಯ ಮೌಲ್ಯ ಕುಸಿತದ ಆತಂಕ’

ಬೆಂಗಳೂರು: ‘ದೀನದಯಾಳ್ ಉಪಾಧ್ಯಾಯ ಅವರನ್ನು ಒಬ್ಬ ವ್ಯಕ್ತಿಯಾಗಿ, ಶಕ್ತಿಯಾಗಿ ನಾವು ಸ್ಮರಣೆ ಮಾಡಿಕೊಳ್ಳಬೇಕು’ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಭಾನುವಾರ ಆಯೋಜಿಸಿದ್ದ ದೀನದಯಾಳ್ ಉಪಾಧ್ಯಾಯ 106ನೇ ಜಯಂತಿ ಅಂಗವಾಗಿ ನಡೆದ ಸಂಸ್ಮರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ದೀನದಯಾಳ್ ಅವರ ಬದುಕು ಜನರಿಗೆ ಬಹಳ ಹತ್ತರವಿತ್ತು. ಪ್ರೇರಣೆ ನೀಡುವ ವ್ಯಕ್ತಿತ್ವ ಅವರದ್ದು’ ಎಂದು ಹೇಳಿದರು.

‘ಇಂದು ತಂತ್ರಜ್ಞಾನವು ದೊಡ್ಡಮಟ್ಟಕ್ಕೆ ಬೆಳೆದಿದೆ. ತಂತ್ರಜ್ಞಾನ ಬಿಟ್ಟು ಬದುಕಲು ಸಾಧ್ಯವೇ ಇಲ್ಲ ಅನ್ನುವಂತೆ ಆಗಿದೆ. ತಂತ್ರಜ್ಞಾನದಿಂದ ಕುಳಿತಲ್ಲೇ ಅನೇಕ ಮಾಹಿತಿಗಳು ಲಭಿಸುತ್ತಿವೆ’ ಎಂದರು.

‘ಆಧುನಿಕ ತಂತ್ರಜ್ಞಾನವು ನಮ್ಮನ್ನು ಮಾನವೀಯ ಮೌಲ್ಯದಿಂದ ಆಚೆಗೆ ಕರೆದೊಯ್ಯುತ್ತಿದೆ ಎಂಬ ಆತಂಕವೂ ಕಾಡುತ್ತಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಜಗತ್ತಿನ ನಾಯಕತ್ವ ವಹಿಸಿರುವ ದೇಶಗಳು ಸಣ್ಣಪುಟ್ಟ ದೇಶಗಳನ್ನು ಹಾಳುಮಾಡಿದ್ದೇ ಹೆಚ್ಚು. ಲಾಭಕ್ಕಾಗಿ ಅನ್ಯ ದೇಶಗಳನ್ನು ಧ್ವಂಸ ಮಾಡುತ್ತಿವೆ. ಹಿಂದೆ ಕೆಲ ರಾಷ್ಟ್ರಗಳಲ್ಲಿ ಮೂಲಭೂತವಾದ ಈ ಮಟ್ಟಿಗೆ ಇರಲಿಲ್ಲ’ ಎಂದು ಹೇಳಿದರು. ‘ನಾನಾ ಕಾರಣಕ್ಕೆ ಜಗತ್ತಿನಲ್ಲಿ ಹಿಂಸಾತ್ಮಕ ಚಳವಳಿಗಳು ಹೆಚ್ಚಿವೆ’ ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

‘ಹಿಂದೂ ನಾವೆಲ್ಲ ಒಂದು’ ಬರೀ ಸ್ಲೋಗನ್ ಆಗಬಾರದು

ಕೋಲಾರ: ‘ಹಿಂದೂ ನಾವೆಲ್ಲ ಒಂದು ಎಂಬುದು ಬರೀ ಸ್ಲೋಗನ್ ಆಗಬಾರದು. ನಡವಳಿಕೆಯಲ್ಲೂ ತೋರಿಸಬೇಕು’ ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಛಲವಾದಿ ನಾರಾಯಣಸ್ವಾಮಿ ಪ್ರತಿಪಾದಿಸಿದರು.

ಭಾನುವಾರ ಉಳ್ಳೇರಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ಹೇಳಿ ಮಾತನಾಡಿದ ಅವರು, ‘ಉಳ್ಳೇರಹಳ್ಳಿ ಸಂತ್ರಸ್ತ ಕುಟುಂಬ ಮನೆಯಲ್ಲಿ ದೇವರ ಫೋಟೊ ತೆಗೆದು ಅಂಬೇಡ್ಕರ್ ಫೋಟೊ ಇಟ್ಟಿದ್ದಾರೆ. ಅಂಬೇಡ್ಕರ್ ಅವರನ್ನು ಪೂಜೆ ಮಾಡಿ. ಅವರೇ ನಮ್ಮ ದೇವರು’ ಎಂದು ಸಲಹೆ ಮಾಡಿದರು.



‘ಮತಾಂತರದ ವಿರುದ್ಧ ದೊಡ್ಡ ಭಾಷಣ ಮಾಡುತ್ತಿದ್ದೇವೆ. ಮತಾಂತರ ಮಾಡಬಾರದೆಂದು ಹೇಳುತ್ತಿದ್ದೇವೆ. ಆದರೆ, ಮತಾಂತರ ಆಗಿ ಎಂಬ ಒತ್ತಡ ಹಾಕುತ್ತಿರುವಂತೆ ಕೆಲವರ ಮನಸ್ಥಿತಿ ಇದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಸಿ.ಎಂ ಬೊಮ್ಮಾಯಿ ಜೊತೆಗೆ ಮೋಹನ್‌ದಾಸ್ ಪೈ ಚರ್ಚೆ

ಬೆಂಗಳೂರು: ಮಳೆಯಿಂದ ಇತ್ತೀಚೆಗೆ ನಗರದ ಕೆಲವು ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿದ್ದ ಬೆನ್ನಲ್ಲೇ ‘ಬೆಂಗಳೂರನ್ನು ಕಾಪಾಡಿ’ ಮತ್ತು ‘ಭ್ರಷ್ಟಮುಕ್ತ ಸರ್ಕಾರ ಬೇಕು’ ಎಂದು ಟ್ವೀಟ್ ಮಾಡಿದ್ದ ಉದ್ಯಮಿ ಟಿ.ವಿ.ಮೋಹನ್‌ದಾಸ್ ಪೈ ಅವರ ಜತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ತಮ್ಮ ನಿವಾಸದಲ್ಲಿ ಮಾತುಕತೆ ನಡೆಸಿದರು.

ಮೋಹನ್‌ದಾಸ್ ಪೈ ಅವರು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರಿಗೆ ಟ್ಯಾಗ್ ಮಾಡಿ ಟ್ವೀಟ್ ಮಾಡಿದ್ದು ಸಾಕಷ್ಟು ಚರ್ಚೆಗೆ ಕಾರಣವಾಗಿತ್ತು. ವಿರೋಧ ಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದವು. ಪ್ರಧಾನಿಯವರ ಮಂಗಳೂರು ಭೇಟಿ ಸಂದರ್ಭದಲ್ಲೇ ಪೈ ಅವರು ಟ್ವೀಟ್ ಮಾಡಿದ್ದರು.

ಪ್ರವಾಹದಿಂದ ಸಂಕಷ್ಟಕ್ಕೆ ತುತ್ತಾಗಿದ್ದ ಪ್ರದೇಶಗಳ ಸಮಸ್ಯೆಗಳು, ವಿಶೇಷವಾಗಿ ರಾಜಕಾಲುವೆ ಒತ್ತುವರಿ ತೆರವು ಮತ್ತು ಬ್ರಾಂಡ್ ಬೆಂಗಳೂರು ಅಭಿವೃದ್ಧಿ ಕುರಿತು ಭಾನುವಾರದ ಭೇಟಿಯಲ್ಲಿ ಚರ್ಚಿಸಿದರು ಎಂದು ಮೂಲಗಳು ಹೇಳಿವೆ.

‘ದೇಶಕ್ಕಾಗಿ ನೀವು (ಮೋದಿ) ದೆಹಲಿಯಿಂದ ನಡೆಸುತ್ತಿರುವ ಭ್ರಷ್ಟಾಚಾರ ಮುಕ್ತ ಸರ್ಕಾರವು ಇಲ್ಲಿಯೂ ಬೇಕು. ಭ್ರಷ್ಟ ಅಧಿಕಾರಿಗಳನ್ನು ವಜಾಗೊಳಿಸಬೇಕು. ಭ್ರಷ್ಟ ರಾಜಕಾರಣಿಗಳನ್ನು ಮೂಲೆಗುಂಪು ಮಾಡಬೇಕು. ತ್ವರಿತವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು. ಭವಿಷ್ಯದಲ್ಲಿ ಉತ್ತಮ ಆಡಳಿತ ದೊರೆಯಲಿ’ ಎಂದು ಟ್ವೀಟ್ ಮಾಡಿದ್ದರು.

ನಗರದಲ್ಲಿ ಇಂದು

ನವರಾತ್ರಿ ವಿಶೇಷ ಹೋಮ: ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ಪ್ಲಾಟ್‌ಫಾರಂ ರಸ್ತೆ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 9.30

ಕನ್ನಡ ಸಾಹಿತ್ಯದ ನಡೆ–ಶಾಲಾ ಕಾಲೇಜುಗಳ ಕಡೆಗೆ: ಉದ್ಘಾಟನೆ: ಕೆ.ಬಿ.ಲೋಕೇಶ್, ಅತಿಥಿಗಳು: ಸತೀಶ್ ಕುಮಾರ್ ಎಸ್. ಹೊಸಮನಿ, ಅಧ್ಯಕ್ಷತೆ: ದ್ವಾರನಕುಂಟೆ ಪಾತಣ್ಣ, ಆಯೋಜನೆ: ಸ್ವಾಭಿಮಾನಿ ಕರ್ನಾಟಕ ವೇದಿಕೆ, ಸ್ಥಳ: ಹೊಂಬೆಗೌಡ ಪದವಿ ಪೂರ್ವ ಕಾಲೇಜು, ಮರಿಯಪ್ಪನಪಾಳ್ಯ, ಬೆಳಿಗ್ಗೆ 11

ಕೆ. ರೇವಣ್ಣ ಸಂಪಾದಿಸಿದ ‘ಪಂಚರಂಗಿ ಐದು ಹೊಸ ನಾಟಕಗಳು’ ಸಂಗ್ರಹ ಕೃತಿ ಬಿಡುಗಡೆ: ಜಿ.ಎನ್. ಮೋಹನ್, ಕೃತಿಯ ಕುರಿತು: ಶಶಿಧರ ಭಾರಿಘಾಟ್, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಆಯೋಜನೆ: ಭಾಗವತರು, ಸ್ಥಳ: ನಯನ ಸಭಾಂಗಣ, ಸಂಜೆ 6.30

ಪ್ರತಿಭಾ ನಂದಕುಮಾರ್ ಅನುವಾದಿಸಿದ (ಮಣಿ ರಾವ್) ಅವರ ‘ಬೇಗ ಪ್ರೀತ್ಸು ನನ್ನ’ ದ್ವಿಭಾಷಾ ಕವನ ಸಂಕಲನದ ಚರ್ಚೆ: ಭಾಗವಹಿಸುವವರು: ಪ್ರತಿಭಾ ನಂದಕುಮಾರ್, ಮಣಿರಾವ್, ಸ್ಥಳ: ಬಿಐಸಿ, ಸಂಜೆ 6.30

ನವರಾತ್ರಿ ಉತ್ಸವ: ಹಿಂದೂಸ್ತಾನಿ ಸುಗಮ ಸಂಗೀತ: ಪ್ರಸ್ತುತಿ: ಶ್ರೀದೇವಿ ಬಿ. ಮತ್ತು ತಂಡದಿಂದ, ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ, ಸ್ಥಳ: ಕೆನರಾ ಬ್ಯಾಂಕ್ ಕಾಲೊನಿ, ನಾಗರಾಬಾವಿ ರಸ್ತೆ, ಸಂಜೆ 6.30

ನವರಾತ್ರಿ ಸಂಗೀತ ನೃತ್ಯೋತ್ಸವ: ಪ್ರಸ್ತುತಿ: ದಾತಾರ್ ಇನ್‌ಸ್ಟಿಟ್ಯೂಟ್ ಆಫ್ ಪರ್ಫಾರ್ಮಿಂಗ್ ಆರ್ಟ್ ಕಲಾವಿದರಿಂದ ಮೋಹಿನಿ ಅಟ್ಟಂ, ಭರತನಾಟ್ಯ ಪ್ರಸ್ತುತಿ: ಕಲಾಮಂಡಲಂ, ಸ್ಥಳ: ಮಹಾಯಾಗ ಕ್ಷೇತ್ರ ಗಾಯತ್ರಿ ದೇವಸ್ಥಾನ, ಗಾಯತ್ರಿ ರಂಗ ಮಂದಿರ, ಯಶವಂತಪುರ ಸರ್ಕಲ್ ಬಳಿ, ಸಂಜೆ 6.30

ವಚನಕಾರ್ತಿಯರ ಉತ್ಸವ: ಆಯೋಜನೆ: ವಚನಜ್ಯೋತಿ ಬಳಗ,



‘ದಶಹರ’ ನೃತ್ಯರೂಪಕ

ಸ್ಥಳ: ಕಲ್ಯಾಣ ಪಟ್ಟಣದ ಪದ್ಮಜ ಪ್ರಸನ್ನ ಅವರ ಮನೆ, ಜ್ಞಾನಭಾರತಿ, ಸಂಜೆ

‘ದಶಹರ’ ದಸರಾ ವೈಭವ ನೃತ್ಯರೂಪಕ: ಅತಿಥಿಗಳು: ಆನೂರು ಅನಂತ ಕೃಷ್ಣಶರ್ಮಾ, ಅಶೋಕ್. ಎನ್. ಚಲವಾದಿ, ಎಂ.ಆರ್. ವೆಂಕಟೇಶ, ಆಯೋಜನೆ: ನೃತ್ಯಲೋಕ ಸ್ಕೂಲ್ ಆಫ್ ಡ್ಯಾನ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6

ವೈದ್ಯಕೀಯ ಶುಲ್ಕ ಏರಿಕೆ: ಎಐಡಿಎಸ್‌ಒ ಖಂಡನೆ

ಬೆಂಗಳೂರು: ರಾಜ್ಯ ಸರ್ಕಾರ ಪ್ರಸ್ತುತ ಶೈಕ್ಷಣಿಕ ವರ್ಷದಿಂದ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಶುಲ್ಕವನ್ನು ಶೇ10ರಷ್ಟು ಏರಿಕೆ ಮಾಡಿರುವುದನ್ನು ಎಐಡಿಎಸ್‌ಒ ಖಂಡಿಸಿದೆ.

‘ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಸರ್ಕಾರಿ ಕೋಟಾದಡಿ ಖಾಸಗಿ ಕಾಲೇಜುಗಳಲ್ಲಿ ದಾಖಲಾಗುವ ವಿದ್ಯಾರ್ಥಿಗಳು ₹1,41,630 ಪಾವತಿಸಬೇಕಾಗಿದೆ. ಹೆಚ್ಚುವರಿಯಾಗಿ ₹12,884 ಶುಲ್ಕವನ್ನು ಪಾವತಿಸಬೇಕಾಗಿದೆ. ಈ ಹಿಂದೆ ₹1,28,746 ಪಾವತಿಸಲಾಗುತ್ತಿತ್ತು’ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಹೇಳಿದ್ದಾರೆ.

‘ಸರ್ಕಾರ ಖಾಸಗಿ ಸಂಸ್ಥೆಗಳ ಹಿತಾಸಕ್ತಿ ರಕ್ಷಣೆಯ ಪರ ನೀತಿಗಳಿಂದಾಗಿ ಗ್ರಾಮೀಣ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುವಂತೆ ಆಗಿದೆ. ಶುಲ್ಕ ಏರಿಕೆ ನಿರ್ಧಾರವನ್ನು ಹಿಂಪಡೆಯಬೇಕು’ ಎಂದು ತಿಳಿಸಿದ್ದಾರೆ.

‘ಅಖಂಡ ಭಾರತ ನವರಾತ್ರಿ ಮಹೋತ್ಸವ’

ಯಲಹಂಕ: ಜಕ್ಕೂರು-ಹೆಗಡೆನಗರ ಜೋಡಿರಸ್ತೆಯ ಎಂಸಿಇಸಿಎಚ್‌ಎಸ್ ಬಡಾವಣೆ ಸಮೀಪದಲ್ಲಿ ‘ಅಖಂಡ ಭಾರತ ನವರಾತ್ರಿ ಮಹೋತ್ಸವ’ ಶೀರ್ಷಿಕೆ ಅಡಿಯಲ್ಲಿ ಸೆ.26ರಿಂದ ಅ.5ರವರೆಗೆ ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಮುಖಂಡ ಕೆ.ಎ.ಮುನೀಂದ್ರಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಸೋಮವಾರ ಬೆಳಿಗ್ಗೆ 6ಕ್ಕೆ ನವಚಂಡಿಕಾ ಹೋಮ, ಮಧ್ಯಾಹ್ನ 2ಕ್ಕೆ ಮಾತೆಯರಿಂದ ಸಾಮೂಹಿಕ ‘ಲಲಿತ ಸಹಸ್ರನಾಮ’, ‘ಸೌಂದರ್ಯ ಲಹರಿ ಪಾರಾಯಣ’ ಹಾಗೂ ಮಂಗಳವಾರ ಮಕ್ಕಳಿಗಾಗಿ ಸಾಂಸ್ಕೃತಿಕ ನೃತ್ಯ ಸ್ಪರ್ಧೆ ಆಯೋಜಿಸಲಾಗಿದೆ ಎಂದರು.

ಬುಧವಾರ ಮಹಿಳೆಯರಿಗಾಗಿ ಸಾತ್ವಿಕ ಆಹಾರ ತಯಾರಿಸುವ ಸ್ಪರ್ಧೆ, ಮಕ್ಕಳಿಗಾಗಿ ಸಾಂಪ್ರದಾಯಿಕ ವೇಷಭೂಷಣ ಸ್ಪರ್ಧೆ ಏರ್ಪಡಿಸಲಾಗಿದೆ.

ಗುರುವಾರ ಮಕ್ಕಳಿಗಾಗಿ ಸಾಂಸ್ಕೃತಿಕ ನೃತ್ಯದ ಅಂತಿಮ ಸ್ಪರ್ಧೆ ನಡೆಯಲಿವೆ. ಶುಕ್ರವಾರ ಇಸಾನಿ ದಾವೆ ಅವರಿಂದ ‘ಸಂಗೀತ’, ಶನಿವಾರ ಅಂತ್ರಸಿಂಗ್ ಪ್ರಿಯಾಂಕ ಮತ್ತು ದೀಪಕ್ ದಿಲ್ದಾರ್ ಅವರಿಂದ ಸಾಂಸ್ಕೃತಿಕ ಕಲಾಸಂಜೆ ನಡೆಯಲಿವೆ. ವಿಜಯದಶಮಿಯಂದು ಬೆಳಿಗ್ಗೆ 10 ಗಂಟೆಗೆ ದುರ್ಗಾವಿಸರ್ಜನೆ ನಡೆಯಲಿದೆ ಎಂದು ತಿಳಿಸಿದರು.

ಸುಮಾರು ಒಂದು ಲಕ್ಷ ಜನರು ಆಗಮಿಸುವ ನಿರೀಕ್ಷೆ ಇದೆ. ಒಂದೂವರೆ ಎಕರೆ ಜಾಗದಲ್ಲಿ ಅಡುಗೆ ಮಾಡಲು ವ್ಯವಸ್ಥೆ ಮಾಡಲಾಗಿದೆ. ಇದರಲ್ಲಿ 20 ಊಟದ ಕೌಂಟರ್, 10 ಶೌಚಾಲಯಗಳನ್ನು ನಿರ್ಮಿಸಲಾಗಿದೆ.

ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ಅಭಿಪ್ರಾಯ

‘ಶೇ 75 ಜಲಮೂಲಗಳು ಕಣ್ಮರೆ’

ಪ್ರಜಾವಾಣಿ ವಾರ್ತೆ



ಡಾ.ಟಿ. ವಿ. ರಾಮಚಂದ್ರ

ಬೆಂಗಳೂರು: ‘ರಾಜಧಾನಿಯಲ್ಲಿ ನಡೆದಿರುವ ಒತ್ತುವರಿ ತೆರವುಗೊಳಿಸಿ ಜಲಮೂಲವನ್ನು ಸಂರಕ್ಷಿಸಬೇಕು’ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ಸಲಹೆ ನೀಡಿದರು.

ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭಾರಿ ಮಳೆಯಿಂದ ಉಂಟಾಗಿದ್ದ ಪ್ರವಾಹದ ಹಿನ್ನೆಲೆಯಲ್ಲಿ ‘ಬ್ರೇಕ್‌ಥ್ರೋ ಸೈನ್ಸ್ ಸೊಸೈಟಿ’ ಆಯೋಜಿಸಿದ್ದ ‘ಕರ್ನಾಟಕದ ನಗರಗಳು ನೀರಿನಲ್ಲಿ ಮುಳುಗಿದ್ದು ಏಕೆ?’ ವಿಷಯ ಕುರಿತ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

‘ಅರಣ್ಯದ ಅತಿಕ್ರಮಣ ತಡೆಯಲು ಮೊದಲ ಆದ್ಯತೆ ನೀಡಬೇಕಾಗಿದೆ. ನಗರೀಕರಣಕ್ಕೆ ಬೆಂಗಳೂರಿನಲ್ಲಿ ಶೇ 88ರಷ್ಟು ಸಸ್ಯ ಸಂಪತ್ತು ನಾಶವಾಗಿದೆ. ಶೇ 75ರಷ್ಟು ಜಲಮೂಲಗಳು ಕಣ್ಮರೆಯಾಗಿವೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಇದೇ ಪರಿಸ್ಥಿತಿ ಮುಂದುವರಿದರೆ ಭವಿಷ್ಯದಲ್ಲಿ ಸಾಕಷ್ಟು ಸಮಸ್ಯೆಗಳು ಉದ್ಭವಿಸಲಿವೆ. ಪ್ರಸ್ತುತ ಬೆಂಗಳೂರಿನಲ್ಲಿ 7 ಮಂದಿಗೆ 1 ಮರವಿದೆ. ಸರಿಯಾದ ಅನುಪಾತವೆಂದರೆ ಪ್ರತಿ ವ್ಯಕ್ತಿಗೆ 7ರಿಂದ 8 ಮರಗಳು ಇರಬೇಕು’ ಎಂದರು.

ವಿಜ್ಞಾನಿ ಡಾ.ಶ್ರೀಕಾಂತ್ ಶ್ರೀರಾಮ್, ‘ಪ್ರವಾಹದಿಂದ ಸಾಕಷ್ಟು ದಿನಗಳ ಕಾಲ ನೀರು ಒಂದೇ ಸ್ಥಳದಲ್ಲಿ ನಿಂತರೆ ಸಮುದಾಯಕ್ಕೆ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಹೆಚ್ಚು. ಡೆಂಗಿ, ಮಲೇರಿಯಾ ಸೇರಿದಂತೆ ಚರ್ಮ ಸಂಬಂಧಿ ಕಾಯಿಲೆಗಳು ಬರುತ್ತವೆ. ಬೆಂಗಳೂರಿನಲ್ಲಿ ಉಂಟಾಗಿದ್ದ ಪ್ರವಾಹದಿಂದ ಡೆಂಗಿ ಪ್ರಕರಣಗಳು ಹೆಚ್ಚಿವೆ. ಪ್ರವಾಹದ ಸಂದರ್ಭದಲ್ಲಿ ಸಾಂಕ್ರಾಮಿಕ ಕಾಯಿಲೆ ನಿಯಂತ್ರಣಕ್ಕೆ ಮೊದಲು ಆದ್ಯತೆ ನೀಡಬೇಕಿದೆ’ ಎಂದು ಸೂಚಿಸಿದರು.

‘ಪ್ರವಾಹದ ನಂತರ ಸಾಂಕ್ರಾಮಿಕ ಕಾಯಿಲೆಗಳು ಉಲ್ಬಣಿಸಿದರೆ ಅಂತರ ಕಾಯ್ದುಕೊಳ್ಳುವುದು ಮುಖ್ಯ. ಮಾಸ್ಕ್ ಧರಿಸುವುದು ಕಡ್ಡಾಯ. ಸಲಹಾ ಕೇಂದ್ರ ತೆರೆಯಬೇಕು’ ಎಂದು ಹೇಳಿದರು.

ಹವಾಮಾನ ತಜ್ಞೆ ಎ.ಸಂಜನಾ ಮಾತನಾಡಿ, ‘ರಾಜ್ಯದಲ್ಲಿ ಹವಾಮಾನ ಬದಲಾವಣೆಯಿಂದ ಸಾಕಷ್ಟು ಸಮಸ್ಯೆ ಉಂಟಾಗುತ್ತಿದೆ’ ಎಂದರು.

ಎಂಎಸ್‌ಪಿ: ಚಳವಳಿ ತೀವ್ರಕ್ಕೆ ನಿರ್ಧಾರ

ಕರ್ನಾಟಕ, ಪಂಜಾಬ್, ಹರಿಯಾಣ, ಮಧ್ಯಪ್ರದೇಶದ ರೈತ ಮುಖಂಡರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತ್ರಿಗೊಳಿಸಲು ಕಾನೂನು ರೂಪಿಸುವಂತೆ ಆಗ್ರಹಪಡಿಸಿ ರಾಷ್ಟ್ರದಲ್ಲಿ ಮತ್ತೆ ಚಳವಳಿ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ನೇತೃತ್ವದಲ್ಲಿ ಭಾನುವಾರ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯಲ್ಲಿ ಕರ್ನಾಟಕ, ಪಂಜಾಬ್, ಹರಿಯಾಣ, ಮಧ್ಯಪ್ರದೇಶ, ಕೇರಳ, ಒಡಿಶಾ, ಗುಜರಾತ್ ಸೇರಿದಂತೆ ವಿವಿಧ ರಾಜ್ಯಗಳ ರೈತ ಮುಖಂಡರು ಪಾಲ್ಗೊಂಡಿದ್ದರು.

ಸಂಯುಕ್ತ ಕಿಸಾನ್ ಮೋರ್ಚಾ ಮುಖಂಡ ಜಗಜೀತಸಿಂಗ್ ದಲ್ಲೇವಾಲ ಅವರು ಮಾತನಾಡಿ, ‘ಎಂಎಸ್‌ಪಿಗೆ ಆಗ್ರಹಿಸಿ ರಾಷ್ಟ್ರದ ವಿವಿಧ ಸ್ಥಳಗಳಲ್ಲಿ ಪ್ರತಿಭಟನೆ ನಡೆಯಲಿವೆ. ನ.26ರಂದು ಸಿಂಗು ಗಡಿಯಲ್ಲಿ ರೈತರ ಸತ್ಯಾಗ್ರಹ ಆಯೋಜಿಸಿದ್ದು, ಡಿಸೆಂಬರ್‌ನಲ್ಲಿ ದಕ್ಷಿಣ ಭಾರತದ ರಾಜ್ಯಗಳಲ್ಲೂ ಪ್ರತಿಭಟನೆ ನಡೆಯಲಿದೆ‘ ಎಂದರು.

‘ಡಾ.ಸ್ವಾಮಿನಾಥನ್ ವರದಿ ಶಿಫಾರಸಿನಂತೆ ಬೆಂಬಲ ಬೆಲೆ ನಿಗದಿ ಪಡಿಸಬೇಕು’ ಎಂದು ಆಗ್ರಹಿಸಿದರು. ‘ಎಂಎಸ್‌ಪಿ ಖಾತ್ರಿ ಕಾನೂನು ಜಾರಿಗೊಳಿಸಲು ರೈತ ಮುಖಂಡರನ್ನು ಹೊರಗಿಟ್ಟು ಕೇಂದ್ರ ಸರ್ಕಾರವು ಸಮಿತಿ ರಚಿಸಿದೆ. ರೈತ ಪರ ಇರುವುದಾಗಿ ಕೇಂದ್ರ ಸರ್ಕಾರ ಕೇವಲ ನಾಟಕವಾಡುತ್ತಿದೆ’ ಎಂದೂ ಟೀಕಿಸಿದರು.

‘ಮೂರು ಕೃಷಿ ಕಾಯ್ದೆಗಳ ರದ್ದತಿಗೆ ಒತ್ತಾಯಿಸಿ ದೆಹಲಿಯಲ್ಲಿ ನಡೆದಿದ್ದ ಹೋರಾಟದಲ್ಲಿ 750 ರೈತರು ಮೃತಪಟ್ಟಿದ್ದರು. ಹುತಾತ್ಮರಾದ ರೈತರ ಕುಟುಂಬಗಳಿಗೆ ಪರಿಹಾರ ಮತ್ತು ಸರ್ಕಾರಿ ಉದ್ಯೋಗ ಕಲ್ಪಿಸಬೇಕು. ಹೋರಾಟಗಾರರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ವಾಪಸು ಪಡೆಯಬೇಕು’ ಎಂದು ಆಗ್ರಹಿಸಿದರು.

‘ರೈತರ ಸಾಲಮನ್ನಾ ಮಾಡಬೇಕು ಮತ್ತು ಆತ್ಮಹತ್ಯೆ ತಡೆಗೆ ಕ್ರಮ ಕೈಗೊಳ್ಳಬೇಕು. ಕೃಷಿ ಉತ್ಪನ್ನಗಳ ಮೇಲೆ ವಿಧಿಸಿರುವ ಜಿಎಸ್‌ಟಿ ಅನ್ನು ರದ್ದುಗೊಳಿಸಬೇಕು’ ಎಂದು ಒತ್ತಾಯಿಸಿದರು.



ಸಭೆಯನ್ನು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ವಿವಿಧ ರಾಜ್ಯಗಳ ಮುಖಂಡರು, ಘೋಷಣೆ ಹಾಕುವ ಮೂಲಕ ಉದ್ಘಾಟಿಸಿದರು –ಪ್ರಜಾವಾಣಿ ಚಿತ್ರ

‘ವಿಧಾನಸೌಧ ಚಲೋ’ ಇಂದು

ಕಬ್ಬಿಗೆ ‘ನ್ಯಾಯಸಮ್ಮತ ಮತ್ತು ಪ್ರೋತ್ಸಾಹ ದಾಯಕ ದರ’ ನಿಗದಿಗೆ (ಎಫ್‌ಆರ್‌ಪಿ) ಆಗ್ರಹಿಸಿ ಸೆ.26ರಂದು ‘ವಿಧಾನಸೌಧ ಚಲೋ’ ಹಮ್ಮಿಕೊಳ್ಳಲಾಗಿದೆ ಎಂದು ಕುರುಬೂರು ಶಾಂತಕುಮಾರ್ ಹೇಳಿದರು.

‘ಬೆಳಿಗ್ಗೆ 11ಕ್ಕೆ ರೈಲು ನಿಲ್ದಾಣದಿಂದ ರೈತರ ಚಲೋ ಆರಂಭಗೊಳ್ಳಲಿದೆ. ಈ ಹೋರಾಟದಲ್ಲಿ ರೈತರೊಂದಿಗೆ ವಿವಿಧ ರಾಜ್ಯಗಳ ರೈತ ಮುಖಂಡರು ಪಾಲ್ಗೊಳ್ಳಲಿದ್ದಾರೆ’ ಎಂದು ತಿಳಿಸಿದರು.

ಮಧ್ಯಪ್ರದೇಶ ರೈತ ಮುಖಂಡ ಶಿವಕುಮಾರ ಕಕ್ಕಾಜಿ, ‘ವಿದೇಶದಿಂದ ಕೃಷಿ ಉತ್ಪನ್ನಗಳ ಆಮದು ಪ್ರಮಾಣವನ್ನು ಹೆಚ್ಚಿಸಲಾಗಿದೆ. ಇದರಿಂದ, ನಮ್ಮ ರೈತರು ಬೆಳೆದಿರುವ ಕೃಷಿ ಉತ್ಪನ್ನಗಳಿಗೆ ಸಮರ್ಪಕ ಬೆಲೆ ದೊರೆಯುತ್ತಿಲ್ಲ. ವಿಶ್ವ ವ್ಯಾಪಾರ ಒಪ್ಪಂದದಿಂದ ಭಾರತ ಹೊರಬರಬೇಕು’ ಎಂದು ಆಗ್ರಹಿಸಿದರು.

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಅವರು, ‘ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಕಾಯ್ದೆ ಕೈಬಿಡಬೇಕು. ಫಸಲ್ ಬಿಮಾ ಬೆಳೆ ವಿಮೆ ಯೋಜನೆಯ ಮಾನದಂಡಗಳನ್ನು ಬದಲಿಸಬೇಕು. ರಾಜ್ಯ ಸರ್ಕಾರವು ಎಪಿಎಂಸಿ ಕಾಯ್ದೆಯನ್ನು ವಾಪಸು ಪಡೆಯಬೇಕು’ ಎಂದು ಆಗ್ರಹಿಸಿದರು.

ತಮಿಳುನಾಡಿನ ರಾಮನ ಗೌಂಡರ್, ಕೇರಳದ ಕೆ.ವಿ.ಬಿಜು, ಹರಿಯಾಣ ಅಭಿಮನ್ಯು ಕೊಹಾರ, ಉತ್ತರಪ್ರದೇಶದ ಸೇವಾ ಸಿಂಗ್, ಒಡಿಶಾದ ಸಚಿನ್ ಮಹಾಪಾತ್ರ, ಮಹಾರಾಷ್ಟ್ರದ ಶಂಕರ ಧರೀಕರ್, ಗುಜರಾತಿನ ಜೆ.ಕೆ.ಪಟೇಲ್, ಹರಿಯಾಣ ಬಲದೇವಸಿಂಗ್ ಸಿರ್ಸಾ, ತೆಲಂಗಾಣ ವೆಂಕಟೇಶ್ವರ, ಕರ್ನಾಟಕ ರಾಜ್ಯ ರೈತ ಸಂಘದ ನಾರಾಯಣ ರೆಡ್ಡಿ ಇದ್ದರು.

ಸುಲಿಗೆಗೆ ಹೊಂಚು: ರೌಡಿ ಸಹಚರರ ಬಂಧನ

ಬೆಂಗಳೂರು: ಮಾರಕಾಸ್ತ್ರ ಹಿಡಿದು ಸಾರ್ವಜನಿಕರನ್ನು ಬೆದರಿಸಿ ಸುಲಿಗೆ ಮಾಡಲು ಕಾಯುತ್ತಿದ್ದ ರೌಡಿ ಮಂಜುನಾಥ್ ಅಲಿಯಾಸ್ ಕೋಳಿ ಫಯಾಜ್ ಹಾಗೂ ನಾಲ್ವರು ಸಹಚರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಹನುಮಂತನಗರ ಠಾಣೆ ವ್ಯಾಪ್ತಿಯ ಸುಂಕೇನಹಳ್ಳಿ ಬಳಿ ರಸ್ತೆಯೊಂದರಲ್ಲಿ ನಿಂತಿದ್ದ ಆರೋಪಿಗಳು, ಸುಲಿಗೆ ಮಾಡಲು ಸಜ್ಜಾಗಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಮಾರಕಾಸ್ತ್ರ ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಕೊಲೆ ಯತ್ನ, ಸುಲಿಗೆ, ಜೀವ ಬೆದರಿಕೆ, ಸಾರ್ವಜನಿಕರ ಆಸ್ತಿಗೆ ಹಾನಿ ಸೇರಿ ಹಲವು ಪ್ರಕರಣಗಳಲ್ಲಿ ರೌಡಿ ಮಂಜುನಾಥ್ ಹಾಗೂ ಸಹಚರರು ಭಾಗಿಯಾಗಿದ್ದರು. ಹನುಮಂತನಗರ ಠಾಣೆಯ ರೌಡಿ ಪಟ್ಟಿಯಲ್ಲಿ ಮಂಜುನಾಥ್ ಹೆಸರಿತ್ತು.’

‘ಅಪರಾಧ ಕೃತ್ಯ ಎಸಗುವುದನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿಗಳು ಜನರನ್ನು ಬೆದರಿಸಿ ಹಣ ಹಾಗೂ ಇತರೆ ವಸ್ತುಗಳನ್ನು ಸುಲಿಗೆ ಮಾಡುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

ಹೂಡೆ ಬೀಚ್‌ನಲ್ಲಿ ಮುಳುಗಿ ಇಬ್ಬರು ಸಾವು: ಒಬ್ಬ ನಾಪತ್ತೆ

ಪ್ರಜಾವಾಣಿ ವಾರ್ತೆ

ಉಡುಪಿ: ಹೂಡೆ ಬೀಚ್‌ನಲ್ಲಿ ಭಾನುವಾರ ಈಜಲು ಹೋಗಿ, ಅಲೆಗಳ ಸೆಳೆತಕ್ಕೆ ಸಿಲುಕಿ ತೀವ್ರ ಅಸ್ವಸ್ಥಗೊಂಡಿದ್ದ ಮಣಿಪಾಲದ ಎಂಐಟಿಯ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ. ಒಬ್ಬ ವಿದ್ಯಾರ್ಥಿ ಸಮುದ್ರದ ಅಲೆಯಲ್ಲಿ ಕೊಚ್ಚಿಹೋಗಿದ್ದು ಶೋಧ ಕಾರ್ಯ ನಡೆಯುತ್ತಿದೆ.

ಬೆಂಗಳೂರು ನಗರದ ನಿಶಾಂತ್ ಹಾಗೂ ಚಿಂತಾಮಣಿಯ ಷಣ್ಮುಖ ಮೃತರು. ವಿಶಾಖಪಟ್ಟಣದ ಶ್ರೀಕರ್ ಗುಪ್ತ ನಾಪತ್ತೆಯಾದ ವಿದ್ಯಾರ್ಥಿ.

ವಾರಾಂತ್ಯದ ರಜೆಯಲ್ಲಿ ಸ್ನೇಹಿತರೆಲ್ಲ ಹೂಡೆ ಬೀಚ್‌ಗೆ ಬಂದು ಈಜುವಾಗ ಮೂವರು ಅಲೆಗಳ ಸೆಳೆತಕ್ಕೆ ಸಿಲುಕಿದ್ದರು. ಇದನ್ನು ಗಮನಿಸಿದ ಸ್ಥಳದಲ್ಲಿದ್ದವರು ಇಬ್ಬರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದರು. ವಿದ್ಯಾರ್ಥಿಗಳು ನೀರಿಗಿಳಿದಿದ್ದ ಜಾಗ ಅಪಾಯಕಾರಿ ಸ್ಥಳವಾಗಿದ್ದು, ಅಲೆಗಳ ಅಬ್ಬರ ಹೆಚ್ಚಾಗಿದ್ದರಿಂದ ಅವಘಡ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಚಾಕುವಿನಿಂದ ಇರಿದು ಪತ್ನಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ಜೆ.ಹಳ್ಳಿ ಠಾಣೆ ವ್ಯಾಪ್ತಿಯ ಮೋದಿ ರಸ್ತೆ ನಿವಾಸಿ ಸಹೀದಾ (32) ಎಂಬುವರ ಕೊಲೆ ನಡೆದಿದ್ದು, ಈ ಸಂಬಂಧ ಪತಿ ಮುನಾವರ್ (40) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಕುಟುಂಬಸ್ಥರ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿಯನ್ನು ಬಂಧಿಸಲಾಗಿದೆ. ಕೌಟುಂಬಿಕ ಕಾರಣಕ್ಕೆ ಜಗಳವಾಗಿದ್ದು, ಕೋಪದಿಂದ ಪತ್ನಿಗೆ ಇರಿದಿರುವುದಾಗಿ ಹೇಳಿಕೆ ನೀಡಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಮುನಾವರ್ ಹಾಗೂ ಸಹೀದಾ ದಂಪತಿ ನಡುವೆ ನಿತ್ಯ ಜಗಳವಾಗುತ್ತಿತ್ತು. ಸೆ. 21ರಂದು ರಾತ್ರಿಯೂ ಗಲಾಟೆ ಆಗಿದ್ದು, ಸಿಟ್ಟಾದ ಆರೋಪಿ ಪತ್ನಿಗೆ ಚಾಕುವಿನಿಂದ ಇರಿದಿದ್ದ. ತೀವ್ರ ಗಾಯಗೊಂಡಿದ್ದ ಸಹೀದಾ ಅವರನ್ನು ಆಸ್ಪತ್ರೆಗೆ ಸೇರಿಸಿದ್ದು, ಚಿಕಿತ್ಸೆಗೆ ಸ್ಪಂದಿಸದೇ ಭಾನುವಾರ (ಸೆ. 25) ತೀರಿಕೊಂಡಿದ್ದಾರೆ’ ಎಂದೂ ಹೇಳಿದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕ್ರಿಕೆಟ್ ಬೆಟ್ಟಿಂಗ್ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ-ಆಸ್ಟ್ರೇಲಿಯಾ ತಂಡಗಳ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದಡಿ ದೀಪಾಂಜಲಿನಗರದ ನಿವಾಸಿ ರಾಘವೇಂದ್ರ (35) ಎಂಬವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಬೆಟ್ಟಿಂಗ್ ನಡೆಸುತ್ತಿದ್ದ ಈತನ ಕೃತ್ಯದ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಬಂಧಿಸಿದ್ದು, ₹ 3 ಲಕ್ಷ ನಗದು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆ: ಆರು ವರ್ಷಗಳಿಂದ ಅಭಿವೃದ್ಧಿಗೆ ಕಾದಿರುವ ಜನ

ಲೆಕ್ಕಪರಿಶೋಧನೆ ವಿಳಂಬ: ಅಭಿವೃದ್ಧಿಗೆ ತೊಡಕು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ನಿವೇಶನ ಹಂಚಿಕೆಯಾಗಿ ಆರು ವರ್ಷಗಳು ಕಳೆದಿದ್ದರೂ ನಾಡಪ್ರಭು ಕೆಂಪೇಗೌಡ ಬಡಾವಣೆಯು ಅಭಿವೃದ್ಧಿಗೆ ಕಾದಿದೆ. ಈ ನಡುವೆ ಸಮಗ್ರ ಲೆಕ್ಕಪರಿಶೋಧನೆ ವಿಳಂಬವಾಗುತ್ತಿದ್ದು, ಇದು ಕೂಡ ಅಭಿವೃದ್ಧಿಗೆ ಮತ್ತೊಂದು ತೊಡಕಾಗುವ ಆತಂಕ ನಿವೇಶನದಾರರನ್ನು ಕಾಡುತ್ತಿದೆ.

2,652 ಎಕರೆ ಪ್ರದೇಶದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ₹2,600 ಕೋಟಿ ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಬಿಡಿಎ ಯೋಜನೆ ರೂಪಿಸಿತ್ತು. ಎಲ್ ಆ್ಯಂಡ್ ಟಿ ಮತ್ತು ಎಸ್‌ಪಿಎಂಎಲ್ ಅಮೃತ್ ಕಂಪನಿಗಳು ಈ ಕಾಮಗಾರಿ ನಿರ್ವಹಿಸಿವೆ. ಆದರೆ, ಮೂಲಸೌಕರ್ಯ ಕಾಮಗಾರಿ ಪೂರ್ಣಗೊಂಡಿಲ್ಲ.

‘ಅವೈಜ್ಞಾನಿಕವಾಗಿ ಅಂದಾಜು ಸಿದ್ಧಪಡಿಸಿರುವುದರಿಂದ ಕಾಮಗಾರಿ ಪೂರ್ಣಗೊಳಿಲು ಸಾಧ್ಯವಾಗಿಲ್ಲ.


ಕೆಂಪೇಗೌಡ ಬಡಾವಣೆಯ ದೃಶ್ಯ

ಹೆಚ್ಚುವರಿ ₹650 ಕೋಟಿ ಅಗತ್ಯವಿದೆ’ ಎಂದು ಕಂಪನಿಗಳು ಬಿಡಿಎ ಮುಂದೆ ಬೇಡಿಕೆ ಇಟ್ಟಿದ್ದವು. ಪೂರ್ಣಗೊಂಡಿರುವ ಕಾಮಗಾರಿ ಬಗ್ಗೆ ಆಂತರಿಕ ಲೆಕ್ಕ ಪರಿಶೋಧನೆಯನ್ನು ಬಿಡಿಎ ನಿರ್ವಹಿಸಿತು. ಹೆಚ್ಚುವರಿ ಹಣ ಕೇಳುತ್ತಿರುವುದು ಸರಿಯಾಗಿದೆ ಎಂದು ಆಂತರಿಕ ಲೆಕ್ಕಪರಿಶೋಧನಾ ವರದಿ ಹೇಳಿತ್ತು.

2021 ಜನವರಿ 31ರಂದು ಬಿಡಿಎ ಮಂಡಳಿ ಸಭೆಯಲ್ಲಿ ವರದಿ ಮಂಡಿಸಿ ಅದನ್ನು ಸರ್ಕಾರಕ್ಕೆ ಸಲ್ಲಿಸಿತು. ಅನುಮೋದನೆ ನೀಡದ ಸರ್ಕಾರ, ಮೂರನೇ ಸಂಸ್ಥೆಯಿಂದ ಲೆಕ್ಕಪರಿಶೋಧನೆ ಮಾಡಿಸಲು ಸೂಚನೆ ನೀಡಿತು. ಅದರಂತೆ 2022ರ ಫೆಬ್ರುವರಿಯಲ್ಲಿ ‘ಬ್ಯೂರೋ ವೆರಿಟಾಸ್’ ಸಂಸ್ಥೆಗೆ ಲೆಕ್ಕಪರಿಶೋಧನೆಯ ಜವಾಬ್ದಾರಿಯನ್ನು ಬಿಡಿಎ ನೀಡಿತ್ತು.

‘ಜೂನ್ ವೇಳೆಗೆ ಬ್ಯೂರೊ ವೆರಿಟಾಸ್ ಮತ್ತು ಬಿಡಿಎ ನಡುವೆ ಹಣಕಾಸು ನಿಗದಿ ವಿಷಯದಲ್ಲಿ ಘರ್ಷಣೆ ಏರ್ಪಟ್ಟಿತು. ಆ ಸಂಸ್ಥೆಯೂ ಹೊರ ನಡೆಯಿತು. ಜೂನ್ 2ರಿಂದ ಮತ್ತೊಂದು ಸಂಸ್ಥೆ ಲೆಕ್ಕಪರೀಶೋಧನೆ ನಡೆಸುತ್ತಿದೆ. ಒಂದು ತಿಂಗಳಲ್ಲಿ ಈ ಕಾರ್ಯ ಪೂರ್ಣಗೊಳ್ಳಲಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದರು. ಆದರೆ, ನಾಲ್ಕು ತಿಂಗಳು ಕಳೆದರೂ ಲೆಕ್ಕ ಪರಿಶೋಧನೆ ಪೂರ್ಣಗೊಂಡಿಲ್ಲ’ ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ವಕ್ತಾರ ಸೂರ್ಯಕಿರಣ್ ತಿಳಿಸಿದರು.

‘ಲೆಕ್ಕಪರಿಶೋಧನೆ ವರದಿ ಬಂದ ಬಳಿಕ ಬಿಡಿಎ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅದನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಬೇಕು. ಅನುಮೋದನೆ ದೊರೆಯುವಷ್ಟರಲ್ಲಿ ಬಿಬಿಎಂಪಿ ಅಥವಾ ವಿಧಾನಸಭೆ ಚುನಾವಣೆ ಎದುರಾದರೆ ಕೆಂಪೇಗೌಡ ಬಡಾವಣೆಯ ಅಭಿವೃದ್ಧಿ ಇನ್ನಷ್ಟು ವಿಳಂಬ ಆಗಲಿದೆ’ ಎಂದು ಅವರು ಆತಂಕ ವ್ಯಕ್ತಪಡಿಸಿದರು.

‘ಸದ್ಯ ಕಾಮಗಾರಿ ಆರಂಭವಾಗಿದ್ದು, ಲೆಕ್ಕಪರಿಶೋಧನಾ ವರದಿ ಶೀಘ್ರವೇ ಬರುವ ಸಾಧ್ಯತೆ ಇದೆ. ಕೂಡಲೇ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು. ಈಗ ಆರಂಭವಾಗಿರುವ ಕಾಮಗಾರಿಗೆ ತೊಡಕಾಗುವುದಿಲ್ಲ’ ಎಂದು ಬಿಡಿಎ ಅಧಿಕಾರಿಗಳು ಹೇಳುತ್ತಾರೆ.

1300 ಎಕರೆ ಭೂಸ್ವಾಧೀನ ಬಾಕಿ

ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕೆ 4,040 ಎಕರೆ ಭೂಸ್ವಾಧೀನಕ್ಕೆ ಬಿಡಿಎ ಉದ್ದೇಶಿಸಿತ್ತು. ಈ ಪೈಕಿ 2,652 ಎಕರೆ ಸ್ವಾಧೀನವಾಗಿದೆ.

600 ಎಕರೆಗೆ ಸಂಬಂಧಿಸಿದ ವ್ಯಾಜ್ಯ ಹೈಕೋರ್ಟ್‌ನಲ್ಲಿದ್ದು, ತೀರ್ಪಿಗಾಗಿ ಬಿಡಿಎ ಕಾಯುತ್ತಿದೆ. 2,652 ಎಕರೆ ಬಡಾವಣೆಯ ಮಧ್ಯದಲ್ಲೇ ವ್ಯಾಜ್ಯದ ಭೂಮಿಯೂ ಇದೆ.

ಒಟ್ಟಾರೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದೆ ಈಗಿರುವ ಬಡಾವಣೆ ಸಂಪೂರ್ಣ ಅಭಿವೃದ್ಧಿ ಆಗುವುದಿಲ್ಲ ಎಂಬುದು ನಿವೇಶನದಾರರ ಆತಂಕ. ಇದರ ನಡುವೆ 300 ಎಕರೆಯಷ್ಟು ಜಾಗದಲ್ಲಿ ಕಂದಾಯ ಬಡಾವಣೆಗಳು ನಿರ್ಮಾಣವಾಗಿವೆ.


ಹಿರಿಯರ ಸ್ಮರಣೆ ನಗರದ ಬಳೇಪೇಟೆ ವೃತ್ತದ ಕಾಶಿ ವಿಶ್ವೇಶ್ವರ ಸ್ವಾಮಿ ದೇವಸ್ಥಾನದ ಬಳಿ ಪಿತೃಪಕ್ಷದ (ಮಹಾಲಯ ಅಮಾವಾಸ್ಯೆ) ಅಂಗವಾಗಿ ವಿವಿಧೆಡೆಯಿಂದ ಬಂದಿದ್ದ ಜನರು, ಕುಟುಂಬದ ಹಿರಿಯರನ್ನು ಸ್ಮರಿಸಿ ಇಷ್ಟದ ಖಾದ್ಯವನ್ನಿಟ್ಟು ಪೂಜೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಹುಬ್ಬಳ್ಳಿ ನಗರದಾದ್ಯಂತ ಪೊಲೀಸರಿಂದ ಬಿಗಿ ಬಂದೋಬಸ್ತ್

ರಾಷ್ಟ್ರಪತಿ ಪೌರ ಸನ್ಮಾನಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಸೋಮವಾರ ನಗರದ ಜಿಮ್ಖಾನ ಮೈದಾನದಲ್ಲಿ ನಡೆಯಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಪೌರ ಸನ್ಮಾನ ಕಾರ್ಯಕ್ರಮಕ್ಕೆ ಸಿದ್ಧತೆಗಳು ಪೂರ್ಣಗೊಂಡಿವೆ.

ವೇದಿಕೆಯ ಅಕ್ಕಪಕ್ಕ ಎರಡು, ಸಾರ್ವಜನಿಕರ ಗ್ಯಾಲರಿಯಲ್ಲಿ ನಾಲ್ಕು ಬೃಹತ್ ಎಲ್‌ಇಡಿ ಪರದೆ ಅಳವಡಿಸಲಾಗಿದೆ. ರಾಷ್ಟ್ರಪತಿ ಅವರ ವಿಶ್ರಾಂತಿಗೆ ವೇದಿಕೆ ಹಿಂಭಾಗ ಎರಡು ಪ್ರತ್ಯೇಕ ಕೊಠಡಿ ಸಿದ್ಧಪಡಿಸಲಾಗಿದೆ.

ವೇದಿಕೆ ಎದುರು ಕೆಳಭಾಗದಲ್ಲಿ ಅವಳಿನಗರದ ಹೆಗ್ಗುರುತುಗಳಾದ ಸಿದ್ಧಾರೂಢಮಠ, ಸಿದ್ಧಾರೂಢ ಸ್ವಾಮೀಜಿ ರೈಲು ನಿಲ್ದಾಣ, ಮೂರುಸಾವಿರ ಮಠ, ಮುರುಘಾಮಠ, ಕರ್ನಾಟಕ ವಿಶ್ವವಿದ್ಯಾಲಯ, ಕಿಮ್ಸ್, ರೈಲ್ವೆ ಮ್ಯೂಸಿಯಂ, ಕೃಷಿ ವಿಶ್ವವಿದ್ಯಾಲಯಗಳ ಬ್ಯಾನರ್ ಅಳವಡಿಸಲಾಗಿದೆ.

ಭದ್ರತಾ ದೃಷ್ಟಿಯಿಂದ ದೇಶಪಾಂಡೆ ನಗರದ ಸುತ್ತಲಿನ ಶಾಲೆಗಳಲ್ಲಿ ಸೆ.26 ರಂದು ನಡೆಯಬೇಕಿದ್ದ ಆಂತರಿಕ ಪರೀಕ್ಷೆಯನ್ನು ಅ. 1ಕ್ಕೆ ಮುಂದೂಡಲಾಗಿದೆ.

ಇಡೀ ದಿನ ತಪಾಸಣೆ; ಪರಿಶೀಲನೆ

ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಹಾಗೂ ಸ್ಫೋಟಕ ವಸ್ತುಗಳ ಪತ್ತೆ ದಳದ ಸಿಬ್ಬಂದಿ ಕಾರ್ಯಕ್ರಮ ನಡೆಯುವ ಸ್ಥಳವನ್ನು ಭಾನುವಾರ ಇಡೀ ದಿನ ತಪಾಸಣೆಗೆ ಒಳಪಡಿಸಿದರು.

ನಗರದಾದ್ಯಂತ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಪೆಂಡಾಲ್ ಹಾಗೂ ವೇದಿಕೆ ಸುತ್ತಮುತ್ತ 100ಕ್ಕೂ ಹೆಚ್ಚು ಸಿ.ಸಿ ಟಿ.ವಿ ಕ್ಯಾಮೆರಾ ಅಳವಡಿಸಿ, ಹದ್ದಿನ ಕಣ್ಣು ಇಡಲಾಗಿದೆ.

ರಾಜಸ್ಥಾನ ಕಾಂಗ್ರೆಸ್‌ನಲ್ಲಿ ಬಿಕ್ಕಟ್ಟು

ಒಂದನೇ ಪುಟದಿಂದ...

ಗೆಹಲೋತ್ ಅವರು ಎರಡೂ ಹುದ್ದೆಗಳನ್ನು ನಿಭಾಯಿಸಲು ಸಮರ್ಥರು ಎಂದು ಪಕ್ಷದ ಮುಖಂಡ ಗೋವಿಂದ ರಾಮ್ ಮೇಘವಾಲ್ ಹೇಳಿದ್ದಾರೆ. ಶಾಸಕರ ಆಶೋತ್ತರಗಳಿಗೆ ಅನುಗುಣವಾಗಿ ಸಿಎಲ್‌ಪಿ ನಾಯಕನನ್ನು ಆಯ್ಕೆ ಮಾಡದಿದ್ದಲ್ಲಿ, ಸರ್ಕಾರ ಮತ್ತೆ ಅಪಾಯಕ್ಕೆ ಸಿಲುಕಲಿದೆ ಎಂದು ಮುಖ್ಯಮಂತ್ರಿ ಸಲಹೆಗಾರ ಶ್ಯಾಮ್ ಲೋಧಾ ಅವರು ಅಭಿಪ್ರಾಯಪಟ್ಟಿದ್ದಾರೆ.

ಮುಂದಿನ ಸಿ.ಎಂ ಆಯ್ಕೆ ಕುರಿತಂತೆ ರಾಷ್ಟ್ರೀಯ ಅಧ್ಯಕ್ಷರು ತೆಗೆದುಕೊಳ್ಳುವ ನಿರ್ಧಾರಕ್ಕೆ ಎಲ್ಲ ಶಾಸಕರ ಸಂಪೂರ್ಣ ಬೆಂಬಲವಿದೆ ಎಂಬ ನಿರ್ಣಯವನ್ನು ಶಾಸಕಾಂಗ ಪಕ್ಷದ ಸಭೆಯಲ್ಲಿ ತೆಗೆದುಕೊಳ್ಳಲಾಗುವುದು ಎಂದು ಗೆಹಲೋತ್ ಅವರು ಸಭೆಗೂ ಮುನ್ನ ಹೇಳಿದ್ದರು.

ಸುದ್ದಿ 2 ನಿಮಿಷ

‘ಭಾರತ್ ಜೋಡೊ: ಜೆಡಿಎಸ್ ಶಾಸಕ ಶ್ರೀನಿವಾಸ್‌ಗೆ ಆಹ್ವಾನ’

ಗುಬ್ಬಿ: ‘ಭಾರತ್ ಜೋಡೊ’ ಯಾತ್ರೆಯಲ್ಲಿ ಭಾಗವಹಿಸುವಂತೆ ಜೆಡಿಎಸ್ ಶಾಸಕ ಎಸ್.ಆರ್. ಶ್ರೀನಿವಾಸ್ ಅವರಿಗೆ ಕಾಂಗ್ರೆಸ್ ವರಿಷ್ಠರು ಆಹ್ವಾನ ನೀಡಿದ್ದು, ಅವರು ಯಾತ್ರೆಯಲ್ಲಿ ಭಾಗವಹಿಸುತ್ತಾರೆ ಎಂದು ಸಂಸದ ಡಿ.ಕೆ. ಸುರೇಶ್ ತಿಳಿಸಿದರು.

ಯಾತ್ರೆ ಸಾಗುವ ತಾಲ್ಲೂಕಿನ ಕಲ್ಲೂರು, ಪುರ ಹಾಗೂ ನಿಟ್ಟೂರಿನಲ್ಲಿ ಸ್ಥಳ ಪರಿಶೀಲಿಸಿದ ಅವರು, ಬಿಜೆಪಿ ವಿರೋಧಿಸುವ ಪ್ರಗತಿಪರ ಸಂಘಟನೆಗಳು, ಚಿಂತಕರನ್ನು ಆಹ್ವಾನಿಸಲಾಗಿದೆ. ಜಿಲ್ಲೆಯಲ್ಲಿ ಅಕ್ಟೋಬರ್ 9ರಿಂದ 13ರವರೆಗೆ ಯಾತ್ರೆ ಸಂಚರಿಸಲಿದ್ದು, ಅದಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸ್ಥಳೀಯ ಮುಖಂಡರು ಹಾಗೂ ಕಾಂಗ್ರೆಸ್ ವರಿಷ್ಠರೊಡನೆ ಚರ್ಚಿಸಿದ ನಂತರ ಶಾಸಕ ಎಸ್.ಆರ್. ಶ್ರೀನಿವಾಸ್ ಕಾಂಗ್ರೆಸ್ ಸೇರ್ಪಡೆ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ಶಾಸಕ ಎಸ್.ಅರ್ ಶ್ರೀನಿವಾಸ್ ಕಾಂಗ್ರೆಸ್ ಸೇರುವ ಬಗ್ಗೆ ನಿರ್ಧಾರ ಕೈಗೊಂಡಿಲ್ಲ ಎನ್ನುತ್ತಿದ್ದರೂ, ಭಾನುವಾರ ಅವರ ಮಗ ದುಶ್ಯಂತ್ ಡಿ.ಕೆ. ಸುರೇಶ್ ಜೊತೆಯಲ್ಲಿ ಕಾಣಿಸಿಕೊಂಡಿದ್ದು ಅಚ್ಚರಿಗೆ ಕಾರಣವಾಯಿತು.

ಲಿಂಗಧೀರನಹಳ್ಳಿ ತ್ಯಾಜ್ಯ ವಿಲೇವಾರಿ ಘಟಕದಿಂದ ಬದುಕು ದುಸ್ತರ



ಕೆಂಗೇರಿ: ಲಿಂಗಧೀರನಹಳ್ಳಿ ತ್ಯಾಜ್ಯ ವಿಲೇವಾರಿ ಘಟಕ ಸ್ಥಗಿತಗೊಳಿಸುವಂತೆ ಆಗ್ರಹಿಸಿ ಸುತ್ತಮುತ್ತಲ ನಿವಾಸಿಗಳು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್‌ಗೆ ಮನವಿ ಸಲ್ಲಿಸಿದರು.

ಕಸ ವಿಲೇವಾರಿ ಘಟಕದಿಂದ ಹೊರ ಬರುತ್ತಿರುವ ವಾಸನೆಯಿಂದ ಉಸಿರಾಡಲು ಸಾಧ್ಯವಾಗುತ್ತಿಲ್ಲ. ಮಕ್ಕಳು ವಾಂತಿ, ತಲೆನೋವು, ಕೆಮ್ಮಿನಂತಹ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ಕೀಟ ಬಾಧೆಯಿಂದ ಬದುಕು ದುಸ್ತರವಾಗಿದೆ ಎಂದು ಸ್ಥಳೀಯರು ನೋವು ತೋಡಿಕೊಂಡಿದ್ದಾರೆ. ಸಚಿವರನ್ನು ಭೇಟಿ ಮಾಡಿದ ಸ್ಥಳೀಯರು ತ್ಯಾಜ್ಯ ಘಟಕದಿಂದ ಆಗುತ್ತಿರುವ ಸಂಕಷ್ಟ ತಿಳಿಸಿದರು.

ತ್ಯಾಜ್ಯ ಸಂಸ್ಕರಣಾ ಕಾಯ್ದೆ ಅನ್ವಯ ಘಟಕದ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಬಫರ್ ಜೋನ್ ಎಂದು ಪರಿಗಣಿಸಬೇಕು. ಯಾವ ಚಟುವಟಿಕೆಗೂ ಅವಕಾಶ ನೀಡಬಾರದು. ಹೀಗಿದ್ದರೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ ಮೇರೆಗೆ ತ್ಯಾಜ್ಯ ವಿಲೇವಾರಿ ಘಟಕ ಆರಂಭ ಮಾಡಲಾಗಿದೆ ಎಂದು ಬಿಬಿಎಂಪಿ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ ಎಂದರು.

ಮನವಿಗೆ ಸ್ಪಂದಿಸಿದ ಸಚಿವ, ಘಟಕ ಸ್ಥಳಾಂತರ ಸಂಬಂಧ ಈಗಾಗಲೇ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಲಾಗಿದೆ ಎಂದು ತಿಳಿಸಿದರು. ತ್ಯಾಜ್ಯ ವಿಲೇವಾರಿ ವಿಭಾಗದ ವಿಶೇಷ ಆಯುಕ್ತರಿಗೆ ಕರೆ ಮಾಡಿ ಘಟಕದ ಅಸಮರ್ಪಕ ನಿರ್ವಹಣೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಇದೇ ಸೆ.27ರಂದು ಸ್ಥಳ ಪರಿಶೀಲನೆ ನಡೆಸಿ ಸೂಕ್ತ ವರದಿ ನೀಡುವಂತೆ ಸೂಚನೆ ನೀಡಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

‘ವಿದ್ಯುತ್ ದೀಪ ಅಳವಡಿಸಿ’

ಕೃಷ್ಣರಾಜಪುರ ವಿಧಾನಸಭಾ ವ್ಯಾಪ್ತಿಯ ಟಿನ್ ಫ್ಯಾಕ್ಟರಿ ಬಸ್ ನಿಲ್ದಾಣದ ಬಳಿ ಇರುವ ಮೇಲ್ಸೇತುವೆಯಲ್ಲಿ ಅಳವಡಿಸಿರುವ ವಿದ್ಯುತ್ ದೀಪಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ರಾತ್ರಿ ವೇಳೆ ಸಾರ್ವಜನಿಕರು ಕತ್ತಲಲ್ಲಿಯೇ ಸಂಚರಿಸುವ ಪರಿಸ್ಥಿತಿ ಎದುರಾಗಿದೆ. ಜತೆಗೆ ಸೇತುವೆಯ ಮೆಟ್ಟಿಲುಗಳು ಮುರಿದು ಬಿದ್ದಿರುವುದರಿಂದ ಪ್ರಯಾಣಿಕರು ಹಲವು ಬಾರಿ ಬಿದ್ದು ಗಾಯ ಮಾಡಿಕೊಂಡಿರುವ ಉದಾಹರಣೆಗಳಿವೆ. ಈ ಭಾಗದಲ್ಲಿ ನಿತ್ಯ ಸಾವಿರಾರು ಜನರು ಪ್ರಯಾಣಿಸುತ್ತಾರೆ. ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಿ ಸೇತುವೆ ಮೆಟ್ಟಿಲುಗಳನ್ನು ದುರಸ್ತಿಗೊಳಿಸಬೇಕು.

ಕಿರಣ್ ಕುಮಾರ್ ಜೆ., ಮೇಡಹಳ್ಳಿ (ಕೆ.ಆರ್.ಪುರ)


ಹೆಬ್ಬಾಳದ ಚೋಳನಗರದ ರಾಜೀವಗಾಂಧಿ ರಸ್ತೆಯ ಸ್ಥಿತಿ.

‘ಅಗೆದಿದ್ದ ರಸ್ತೆ ದುರಸ್ತಿಗೊಳಿಸಿ’


ಹೆಬ್ಬಾಳದ ಚೋಳನಗರದ ರಾಜೀವಗಾಂಧಿ ರಸ್ತೆ ದುರಸ್ತಿ ಕಾಮಗಾರಿ ಕೈಗೊಂಡು 15 ದಿನಗಳಾಗಿವೆ. ಅಗೆದಿದ್ದ ರಸ್ತೆಯನ್ನು ಇದುವರೆಗೂ ಸರಿಪಡಿಸಿಲ್ಲ. ಇದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ. ಪ್ರತಿನಿತ್ಯ ದೂಳಿನ ಮಜ್ಜನವಾಗುತ್ತಿದೆ. ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಮತ್ತು ವೃದ್ಧರಿಗೆ ಅನಾರೋಗ್ಯದ ಸಮಸ್ಯೆ ಶುರುವಾಗಿದೆ. ರಸ್ತೆ ದುರಸ್ತಿ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಜಿ.ಎಸ್.ಮಂಜುನಾಥ್, ಚೋಳನಗರದ ನಿವಾಸಿ

ಪಾದಚಾರಿ ಮಾರ್ಗದಲ್ಲಿದ್ದ ಮರ ತೆರವುಗೊಳಿಸಿದ ಅಧಿಕಾರಿಗಳು

ವರದಿ ಪರಿಣಾಮ

ಗಾಂಧಿನಗರದ ಕೆಂಪೇಗೌಡ ಮುಖ್ಯರಸ್ತೆಯ 2ನೇ ಅಡ್ಡರಸ್ತೆಯ ಇಂಡಿಯನ್ ಬ್ಯಾಂಕ್ ಪಕ್ಕದಲ್ಲಿರುವ ಪಾದಚಾರಿ ಮಾರ್ಗದಲ್ಲಿ ಮರವೊಂದು ಉರುಳಿ ಬಿದ್ದಿತ್ತು. ಬಿಬಿಎಂಪಿ ಅಧಿಕಾರಿಗಳು ಶನಿವಾರ ಮರ ತೆರವುಗೊಳಿಸಿ ಪಾದಚಾರಿ ಮಾರ್ಗ ಸ್ವಚ್ಛಗೊಳಿಸಿದ್ದಾರೆ. ‘ಪ್ರಜಾವಾಣಿ’ಯ ಕುಂದು ಕೊರತೆ ವಿಭಾಗದಲ್ಲಿ ಸೆಪ್ಟೆಂಬರ್ 18ರಂದು ‘ಪಾದಚಾರಿ ಮಾರ್ಗದಲ್ಲಿರುವ ಮರ ತೆರವುಗೊಳಿಸಿ’ ಎನ್ನುವ ಶೀರ್ಷಿಕೆ ಅಡಿಯಲ್ಲಿ ಅಹವಾಲು ಪ್ರಕಟವಾಗಿತ್ತು.


ಕೆಂಪೇಗೌಡನಗರದ ಪಾದಚಾರಿ ಮಾರ್ಗದಲ್ಲಿದ್ದ ಮರ ತೆರವುಗೊಳಿಸಿದ ಅಧಿಕಾರಿಗಳು


ಹಂಪಿನಗರದ ಮ್ಯಾನ್‌ಹೋಲ್ ಪಕ್ಕದಲ್ಲಿರುವ ಕಲ್ಲು, ಮಣ್ಣು.

‘ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಿ’

ಹಂಪಿನಗರದ 6ನೇ ಮುಖ್ಯರಸ್ತೆ 3ನೇ ಅಡ್ಡರಸ್ತೆ ಪಕ್ಕದಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ಮ್ಯಾನ್‌ಹೋಲ್‌ನ ಮೇಲ್ಭಾಗ ಬದಲಾಯಿಸಿದ್ದು, ಕಲ್ಲು, ಮಣ್ಣು ಇತರೆ ಉಪಯೋಗಕ್ಕೆ ಬಾರದ ವಸ್ತುಗಳನ್ನು ಇಲ್ಲಿಯೇ ಬಿಟ್ಟು ಹೋಗಿದ್ದಾರೆ. ಇದರಿಂದ ರಸ್ತೆ ಕಿರಿದಾಗಿ ವಾಹನ ಸಂಚಾರಕ್ಕೆ ಮತ್ತು ಪಾದಚಾರಿಗಳ ಓಡಾಟಕ್ಕೆ ಅನನುಕೂಲವಾಗಿದೆ. ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಬೇಕು ಹಾಗೂ ಸ್ವಚ್ಛತೆ ಕಾಪಾಡಲು ಕ್ರಮಕೈಗೊಳ್ಳಬೇಕು ಎಂದು ಕೋರಿಕೆ.

ಅನಂತಕುಮಾರ.ಎಸ್., ಸ್ಥಳೀಯ ನಿವಾಸಿ



‘ರಸ್ತೆ ದುರಸ್ತಿಗೊಳಿಸಿ’

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 109ರ ಕಾರ್ಪೋರೇಷನ್ ಕಂದಾಯ ಕಚೇರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಚಿಕ್ಕಪೇಟೆ ಕಂದಾಯ ಕಚೇರಿ ಮುಂದಿರುವ ರಸ್ತೆ ಕಳೆದ ಒಂದು ವರ್ಷದಿಂದ ಡಾಂಬರೀಕರಣಗೊಂಡಿಲ್ಲ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದರಿಂದ ವಾಹನ ಸವಾರರಿಗೆ ತೊಂದರೆಯಾಗಿದೆ. ನಿತ್ಯವೂ ವಾಹನ ಚಾಲಕರಿಗೆ ಅಪಾಯವನ್ನು ಒಡ್ಡುತ್ತಿರುವ ಈ ರಸ್ತೆಯನ್ನು ಬಿಬಿಎಂಪಿ ತ್ವರಿತವಾಗಿ ದುಃರಸ್ತಿಗೊಳಿಸಬೇಕು.

ಶಿವಪ್ರಸಾದ್, ಸ್ಥಳೀಯ ನಿವಾಸಿ

ಚಿಕ್ಕಪೇಟೆಯ ಕಾರ್ಪೋರೇಷನ್ ಕಂದಾಯ ಕಚೇರಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

‘ಪಾದಚಾರಿ ಮಾರ್ಗ ಸರಿಪಡಿಸಿ’

ನಾಗಸಂದ್ರ ವೃತ್ತದಿಂದ ತ್ಯಾಗರಾಜನಗರದ ರಾಜಕುಮಾರ್ ಪುತ್ಥಳಿಯ ತನಕ ಪಾದಚಾರಿ ಮಾರ್ಗ ಸಂಪೂರ್ಣವಾಗಿ ಹದಗೆಟ್ಟಿದೆ. ಇದರಿಂದ ಪಾದಚಾರಿಗಳು ಮುಖ್ಯರಸ್ತೆಯ ಅಂಚಿನಲ್ಲಿ ಜೀವ ಭಯದಲ್ಲೇ ಓಡಾಡುವ ಪರಿಸ್ಥಿತಿ ಎದುರಾಗಿದೆ. ಪಾದಚಾರಿ ಮಾರ್ಗ ಮತ್ತು ರಸ್ತೆ ಎರಡು ಒಂದೇ ಆಗಿದೆ. ದ್ವಿಚಕ್ರ ವಾಹನ ಸವಾರರು ಪಾದಚಾರಿ ಮಾರ್ಗದಲ್ಲಿ ವಾಹನ ಚಲಾಯಿಸುವುದರಿಂದ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಹಾಸುಗಲ್ಲುಗಳು ಒಡೆದುಹೋಗಿವೆ.

ದೀಪಕ್ ಶಿರಾಲಿ, ತ್ಯಾಗರಾಜ ನಗರ.


ತ್ಯಾಗರಾಜ ನಗರದ ಪಾದಚಾರಿ ಮಾರ್ಗದ ಹಾಸುಗಲ್ಲುಗಳು ಒಡೆದಿರುವುದು


ಅಂಜನಾಪುರದ ಬಿಡಿಎ 1 ಮತ್ತು 2ನೇ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆ ಕೆಸರು ಗದ್ದೆಯಾಗಿರುವುದು

‘ಕೆಸರು ಗದ್ದೆಯಾದ ರಸ್ತೆ’

ಅಂಜನಾಪುರ ಬಿಡಿಎ 1 ಮತ್ತು 2ನೇ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹಾಳಾಗಿದೆ. ಇದೇ ರಸ್ತೆ ಮುಂದೆ ಕನಕಪುರ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುತ್ತದೆ. ಇಲ್ಲಿ ಪ್ರತಿನಿತ್ಯ ಪ್ರತಿಷ್ಠಿತ ಶಾಲಾ–ಕಾಲೇಜುಗಳ ಬಸ್‌ಗಳು ಸಂಚರಿಸುತ್ತವೆ. ಮಳೆ ಬಂದರೆ ಕೆಸರು ಗದ್ದೆಯಾಗಿ ಮಾರ್ಪಡುವ ರಸ್ತೆಯಲ್ಲಿ ಶಾಲೆಗೆ ತೆರಳುವ ಮಕ್ಕಳಿಗೆ ಸಾಕಷ್ಟು ತೊಂದರೆಯಾಗಿದೆ. ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ತರಗತಿಗಳಿಗೆ ತಲುಪಲು ಆಗುತ್ತಿಲ್ಲ. ಇಲ್ಲಿ ಸಂಚರಿಸುವ ದ್ವಿಚಕ್ರ ವಾಹನ, ಆಟೊ, ಲಘುವಾಹನಗಳ ಚಾಲಕರು ಹರಸಾಹಸ ಪಡುವಂತಾಗಿದೆ. ತ್ವರಿತವಾಗಿ ದುರಸ್ತಿಗೊಳಿಸಿ.

ಸಿದ್ರಾಮಪ್ಪ ದಿನ್ನಿ, ಸ್ಥಳೀಯ ನಿವಾಸಿ

‘ಸಿರಿನಾಡು ಮಹಾಸಭಾಗೆ ಸಹಕಾರಕ್ಕೆ ಸಿದ್ಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಪ್ರ ಸಮುದಾಯದ ಶ್ರೇಯೋಭಿವೃದ್ಧಿಗಾಗಿ ಹಲವು ವರ್ಷಗಳಿಂದ ಶ್ರಮಿಸುತ್ತಿರುವ ಸಿರಿನಾಡು ಮಹಾಸಭಾ ಕಾರ್ಯಗಳಿಗೆ ಸರ್ಕಾರದ ವತಿಯಿಂದ ಎಲ್ಲ ರೀತಿಯ ಸಹಕಾರ ನೀಡಲು ಸಿದ್ಧ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಭರವಸೆ ನೀಡಿದರು.

ಸಿರಿನಾಡು ಮಹಾಸಭಾ ನಗರದಲ್ಲಿ ಶನಿವಾರ ಆಯೋಜಿಸಿದ್ದ ಸಂಘಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಜಾಗತಿಕ ಮಟ್ಟದಲ್ಲಿ ಎಲ್ಲ ರಂಗಗಳಲ್ಲೂ ಸ್ಪರ್ಧೆ ಎದುರಿಸುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಸಿರಿನಾಡು ಬ್ರಾಹ್ಮಣ ಸಮುದಾಯವು ಪ್ರತಿಭೆಗಳನ್ನು ಗುರುತಿಸಿ ಮನ್ನಣೆ ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ’ ಎಂದು ಅವರು ಸಂತಸ ವ್ಯಕ್ತಪಡಿಸಿದರು.

‘ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಮುಂದಿನ 25 ವರ್ಷಗಳಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಇಡೀ ದೇಶ ಹೊಸ ವಿಕ್ರಮವನ್ನು ಸ್ಥಾಪಿಸಿ, ಉತ್ತುಂಗದ ಶಿಖರ ತಲುಪಲಿದೆ. ರಾಜ್ಯದಲ್ಲಿ ಹೊಸ ಶಿಕ್ಷಣ ನೀತಿ ಜಾರಿಯಾಗಿದ್ದು, ಆ ಮೂಲಕ, ಉನ್ನತ ಶಿಕ್ಷಣ ಕೇತ್ರದಲ್ಲಿ ಹಲವು ಸುಧಾರಣೆಗಳನ್ನು ಜಾರಿಗೆ ತರಲಾಗಿದೆ’ ಎಂದರು.

ಡಾ. ಧಾಳಿ ಲಕ್ಷ್ಮೀನರಸಿಂಹ ಭಟ್ಟ (ವೇದ ವಾಙ್ಮಯ), ನ್ಯಾ. ಎನ್. ಕುಮಾರ್, ಎಸ್.ಕೆ.ವಿ. ಚಲಪತಿ (ನ್ಯಾಯಾಂಗ), ಎಸ್.ಎನ್. ಗಿರೀಶ್ (ಆಡಳಿತ), ಆರ್. ವೆಂಕಟಕೃಷ್ಣ (ಲೆಕ್ಕ ಪರಿಶೋಧನೆ), ಸ್ವಾತಿ ವೆಲ್ಲಾಳ್ ರಘುನಂದನ್ (ಸಾಮಾಜಿಕ ಸೇವೆ), ಆರ್. ಸೌಮ್ಯಾ (ಶಿಕ್ಷಣ) ಅವರನ್ನು ಸನ್ಮಾನಿಸಲಾಯಿತು. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ 98 ಅಂಕಗಳನ್ನು ಗಳಿಸಿ ಉತ್ತೀರ್ಣರಾದ 40ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತಲಾ ₹ 4,000, ಪ್ರಶಸ್ತಿಪತ್ರ ನೀಡಿ ಪ್ರೋತ್ಸಾಹಿಸಲಾಯಿತು.


ಸಿರಿನಾಡು ಮಹಾಸಭಾ ಆಯೋಜಿಸಿದ್ದ ಸಮಾರಂಭದಲ್ಲಿ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸಚ್ಚಿದಾನಂದ ಮೂರ್ತಿ ‘ಸಿರಿ ಸಂಭ್ರಮ’ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಎಸ್ ಸುದರ್ಶನಮ್, ನ್ಯಾ.ಎನ್ ಕುಮಾರ್, ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ್ ಇದ್ದರು —ಪ್ರಜಾವಾಣಿ ಚಿತ್ರ

‘ಒಗ್ಗಟ್ಟು ಮರೆಯಾಗುತ್ತಿದೆ’

‘ಬ್ರಾಹ್ಮಣ ಸಮುದಾಯದ ಒಳಪಂಗಡಗಳಲ್ಲಿನ ಒಗ್ಗಟ್ಟು ಮರೆಯಾಗುತ್ತಿರುವುದರಿಂದ ನಮ್ಮ ಸಮುದಾಯದ ಧ್ವನಿ ಕ್ಷೀಣಿಸುವಂತಾಗಿದೆ. ಇತ್ತೀಚೆಗೆ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಹಗರಣದಲ್ಲಿ ನಮ್ಮ ಸಮುದಾಯದ ಅನೇಕರಿಗೆ ಅನ್ಯಾಯವಾಗಿದೆ. ಒಂದು ವೇಳೆ ಬೇರೆ ಸಮುದಾಯದವರಿಗೆ ಇಂಥ ಸಮಸ್ಯೆ ಉಂಟಾಗಿದ್ದಿದ್ದರೆ ವಿಧಾನಸಭೆ, ಲೋಕಸಭೆಯಲ್ಲಿ ಚರ್ಚೆಯಾಗುತ್ತಿತ್ತು. ಆದರೆ, ಬ್ರಾಹ್ಮಣರೆಂಬ ಕಾರಣಕ್ಕೆ ನಿರ್ಲಕ್ಷ್ಯ ತಾಳಲಾಯಿತು’ ಎಂದು ಹೈಕೋರ್ಟ್‌ನ ನಿವೃತ್ತ ನ್ಯಾ. ಎನ್. ಕುಮಾರ್ ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಚ್.ಎಸ್. ಸಚ್ಚಿದಾನಂದ ಮೂರ್ತಿ, ವಿಶ್ವ ವಿಪ್ರ ಪರಿಷತ್ ಅಧ್ಯಕ್ಷ ರಘುನಾಥ್, ಮಾನಸ ಸಮೂಹ ಆಸ್ಪತ್ರೆಗಳ ಅಧ್ಯಕ್ಷ ಡಾ. ಎಚ್.ಎಸ್. ಶಶಿಧರ್ ಕುಮಾರ್, ಸಿರಿನಾಡು ಮಹಾಸಭಾದ ಗೌರವ ಅಧ್ಯಕ್ಷ ಡಾ.ಎಚ್.ಎನ್. ಸುಬ್ರಹ್ಮಣ್ಯ, ಅಧ್ಯಕ್ಷ ಸುದರ್ಶನಮ್, ಉಪಾಧ್ಯಕ್ಷರಾದ ವೆಂಕಟನಾರಾಯಣ, ಆರ್.ಎನ್. ಸತ್ಯನಾರಾಯಣ ಇದ್ದರು.

ಪ್ರೊ.ಎಚ್.ಆರ್. ರಾಮಕೃಷ್ಣರಾವ್ ನುಡಿ ನಮನ

‘ವೈಜ್ಞಾನಿಕ ಅರಿವು ಮೂಡಿಸಿದವರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಡಿನ ಉದ್ದಗಲಕ್ಕೂ ಸಂಚರಿಸಿದ್ದ ಭೌತವಿಜ್ಞಾನದ ಪ್ರಾಧ್ಯಾಪಕ ಎಚ್.ಆರ್. ರಾಮಕೃಷ್ಣರಾವ್, ಗ್ರಾಮೀಣ ಭಾಗದ ಜನರಲ್ಲಿ ವೈಜ್ಞಾನಿಕ ಅರಿವು ಮೂಡಿಸಿದರು. ಅವರ ಅಗಲಿಕೆಯು ವಿಜ್ಞಾನ ಲೋಕಕ್ಕೆ ದೊಡ್ಡ ನಷ್ಟ’ ಎಂದು ಅವರ ಒಡನಾಡಿಗಳು ಹಾಗೂ ಆಪ್ತರು ಸ್ಮರಿಸಿಕೊಂಡರು.

ಉದಯಭಾನು ಕಲಾಸಂಘ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಬೆಂಗಳೂರು ವಿಜ್ಞಾನ ಪರಿಷತ್ತು ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಜಂಟಿಯಾಗಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ. ಎಚ್.ಆರ್. ರಾಮಕೃಷ್ಣರಾವ್ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ವಿಜ್ಞಾನ ಲೇಖಕ ಪ್ರೊ. ಟಿ.ಆರ್. ಅನಂತರಾಮು ಅವರು, ‘ರಾಮಕೃಷ್ಣರಾವ್ ಅವರ ಜತೆಗೆ ಕೆಲಸ ಮಾಡುವ ಸುಯೋಗ ದೊರೆತ್ತಿತ್ತು. ಗ್ರಹಣ ಸೇರಿ ವಿವಿಧ ವಿಷಯಗಳ ಬಗ್ಗೆ ದೃಶ್ಯಮಾಧ್ಯಮಗಳಲ್ಲಿ ಅವರ ಜತೆಗೆ ಚರ್ಚಿಸಲು ಜ್ಯೋತಿಷಿಗಳಿಗೆ ಭಯ ಆಗುತ್ತಿತ್ತು. ಗೌರವ ಪೂರ್ವಕವಾಗಿಯೇ ಸಂವಾದ ನಡೆಸಿ, ವಿವರಿಸುತ್ತಿದ್ದರು’ ಎಂದು ಸ್ಮರಿಸಿಕೊಂಡರು.

ವಿಜ್ಞಾನ ಲೇಖಕ ಎಚ್.ಆರ್. ಕೃಷ್ಣಮೂರ್ತಿ, ‘ರಾಮಕೃಷ್ಣರಾವ್ ಅವರು ಕ್ರೈಸ್ಟ್ ಕಾಲೇಜಿನಲ್ಲಿ ಕನ್ನಡ ಸಂಘ ಕಟ್ಟಿ, ಕನ್ನಡ ಪರ ಕಾರ್ಯಕ್ರಮ ನಡೆಸಿದ್ದರು. ಉತ್ತಮ ಬ್ಯಾಡ್ಮಿಂಟನ್ ಪಟು ಆಗಿದ್ದರು. ಪ್ರಾಧ್ಯಾಪಕ ವೃತ್ತಿಯಲ್ಲಿ ನಿಷ್ಠೆ ಹೊಂದಿದ್ದರು. ಕೆಲವರು ಉದ್ಯೋಗ ದೊರೆತ ಬಳಿಕ ಅಧ್ಯಯನ ನಿಲ್ಲಿಸುತ್ತಾರೆ. ಆದರೆ, ಅವರು ಕಡೆಯ ದಿನದವರೆಗೂ ಅಧ್ಯಯನ ಕೈಗೊಂಡರು. ಬೇರೆ ಕಾಲೇಜಿನ ವಿದ್ಯಾರ್ಥಿಗಳಿಗೂ ಸರಳವಾಗಿ ವಿಜ್ಞಾನ ಹೇಳಿ ಕೊಟ್ಟಿದ್ದಾರೆ’ ಎಂದು ತಿಳಿಸಿದರು.

ನಿವೃತ್ತ ಸಸ್ಯವಿಜ್ಞಾನ ಪ್ರಾಧ್ಯಾಪಕ ವೈ.ತುಳಜಪ್ಪ, ‘1974ರಲ್ಲಿ ರಾಮಕೃಷ್ಣರಾವ್ ಅವರ ಸಂಪರ್ಕ ಲಭಿಸಿತು. ಆ ಕಾಲದಲ್ಲಿ ಭಾಷಣ ಸ್ಪರ್ಧೆಗಳಿಗೆ ನಿರ್ಣಾಯಕರನ್ನು ಆಯ್ಕೆ ಮಾಡುವುದು ಸವಾಲಾಗಿತ್ತು. ಆ ವೇಳೆ ರಾಮಕೃಷ್ಣರಾವ್ ನೆರವಾಗುತ್ತಿದ್ದರು. ಪುಸ್ತಕ ಬರೆಯುವುದು, ಅನುವಾದ ಮಾಡುವುದು ಸೇರಿ ವಿವಿಧ ಕಾರ್ಯಗಳಲ್ಲಿ ಅವರು ಸಕ್ರಿಯ ಆಗಿದ್ದರು’ ಎಂದು ತಿಳಿಸಿದರು.

ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕದ ಅಧ್ಯಕ್ಷ ಎ.ಎಚ್. ರಾಮರಾವ್, ಪ್ರೊ.ಎಂ.ಆರ್. ನಾಗರಾಜು, ಟಿ.ವಿ. ರಾಜು, ವೈ.ಸಿ. ಕಮಲಾ, ನವೀನ್ ಕಲ್ಗುಂಡಿ, ಎಂ. ನರಸಿಂಹ, ಪತ್ರಕರ್ತ ರಂಗನಾಥ ಭಾರದ್ವಾಜ್ ಸೇರಿ ಹಲವರು ನುಡಿನಮನ ಸಲ್ಲಿಸಿದ್ದರು.


ಕಾರ್ಯಕ್ರಮದಲ್ಲಿ (ಎಡದಿಂದ) ಪ್ರೊ.ಎಚ್.ಆರ್. ರಾಮಕೃಷ್ಣರಾವ್ ಅವರ ಅಳಿಯ ಅನಂತಮೂರ್ತಿ, ಮಗಳು ಸುಚರಿತ, ಮೊಮ್ಮಗಳ ಪತಿ ಕಾರ್ತಿಕ್, ಮೊಮ್ಮಗಳು ಪ್ರಣತಿ ಮತ್ತು ಮಗಳು ಹರ್ಷಾ ಅಜಿತ್ ಅವರು ಪ್ರೊ.ಎಚ್.ಆರ್ ರಾಮಕೃಷ್ಣರಾವ್ ದಂಪತಿಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

'ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಜಾರ್ಜ್ ಫರ್ನಾಂಡಿಸ್' ಪುಸ್ತಕ ಬಿಡುಗಡೆ ಮಾಡಿದ ಸಿದ್ದರಾಮಯ್ಯ

‘ಇಂದು ಜಾರ್ಜ್ ಇರಬೇಕಿತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರದ ಮಾಜಿ ಸಚಿವ, ದಿವಂಗತ ಜಾರ್ಜ್ ಫರ್ನಾಂಡಿಸ್ ಅವರು ಶೂನ್ಯದಿಂದ ಬಹಳ ಎತ್ತರಕ್ಕೆ ಬೆಳೆದವರು. ಅವರಲ್ಲಿ ಸೈದ್ಧಾಂತಿಕ ಬದ್ಧತೆ ಇತ್ತು’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಬಣ್ಣಿಸಿದರು.

ಜಾರ್ಜ್ ಫರ್ನಾಂಡಿಸ್ ಅವರ ಜೀವನ ಚರಿತ್ರೆ ಕುರಿತಾದ 'ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಜಾರ್ಜ್ ಫರ್ನಾಂಡಿಸ್’ ಪುಸ್ತಕವನ್ನು ಅರಮನೆ ರಸ್ತೆಯ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಭಾನುವಾರ ಬಿಡುಗಡೆ ಮಾಡಿ ಮಾತನಾಡಿದರು.

‘ವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯವನ್ನು ದಮನಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿರುವ ಇಂದಿನ ಸಂದಿಗ್ಧ ಸಮಯದಲ್ಲಿ ಜಾರ್ಜ್ ಫರ್ನಾಂಡಿಸ್ ಅವರು ನಮ್ಮೊಂದಿಗೆ ಇರಬೇಕಿತ್ತು’ ಎಂದರು.

‘ಜಾರ್ಜ್ ಮೊದಲ ಚುನಾವಣೆಯಲ್ಲಿಯೇ ಮುಂಬೈನಲ್ಲಿ ಕಾಂಗ್ರೆಸ್‌ನ ಪ್ರಭಾವಿ ನಾಯಕ ಎಸ್.ಕೆ.ಪಾಟೀಲ ಅವರನ್ನು ಮಣಿಸಿ ‘ಜೈಯಂಟ್ ಕಿಲ್ಲರ್’ ಎಂದು ಹೆಸರಾದವರು. ತುರ್ತುಪರಿಸ್ಥಿತಿ ನಂತರ ನಡೆದ ಚುನಾವಣೆಯಲ್ಲಿ ಜೈಲಿನಿಂದಲೇ ಬಿಹಾರದ ಮುಜಫರ್ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದುಬಿಟ್ಟರು. ಆ ರಾಜ್ಯವನ್ನೇ ತಮ್ಮ ರಾಜಕೀಯದ ಅಖಾಡವನ್ನಾಗಿ ಮಾಡಿಕೊಂಡರು. ಕರ್ನಾಟಕದ ರಾಜಕಾರಣದ ಬಗ್ಗೆ ಅವರಿಗೆ ಆಸಕ್ತಿ ಇತ್ತು. ಈ ಕಾರಣದಿಂದಾಗಿಯೇ 1984ರಲ್ಲಿ ಅವರು ಬೆಂಗಳೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಆದರೆ, ಗೆಲುವು ಕೈಗೆ ಸಿಗಲಿಲ್ಲ. ನಂತರ ಕರ್ನಾಟಕದಿಂದ ದೂರವೇ ಹೋಗಿ ಬಿಟ್ಟರು. ಕೊನೆ ದಿನಗಳ ಅವರ ರಾಜಕೀಯ ನಿಲುವುಗಳ ಬಗ್ಗೆ ನನಗೆ ಭಿನ್ನಾಭಿಪ್ರಾಯವಿದ್ದರೂ ಸ್ನೇಹ ರಾಜಕೀಯವನ್ನು ಮೀರಿದ್ದ ಸಂಬಂಧವಾಗಿತ್ತು’ ಎಂದು ನೆನಪಿಸಿಕೊಂಡರು.

‘ಮೊರಾರ್ಜಿ ದೇಸಾಯಿ ಪ್ರಧಾನಿಯಾಗಿದ್ದಾಗ ಕೈಗಾರಿಕಾ ಸಚಿವರಾಗಿದ್ದ ಜಾರ್ಜ್, ಒಮ್ಮೆ ಮೈಸೂರಿಗೆ ಬಂದಿದ್ದರು. ಮೈಸೂರಿನ ತಮ್ಮ ಎಲ್ಲ ಸ್ನೇಹಿತರನ್ನು ಸೇರಿಸಿಕೊಂಡು ನಾನು ಕೋಕೊ ಕೋಲಾ ವಿರುದ್ಧ ಹೋರಾಟ ಮಾಡುತ್ತೇನೆ. ಅದಕ್ಕೆ ನಿಮ್ಮ ಬೆಂಬಲ ಬೇಕು ಮತ್ತು ಯಾವತ್ತೂ ಕೋಕೊ ಕೋಲಾ ಕುಡಿಯುವುದಿಲ್ಲ ಎಂದು ಶಪಥ ಮಾಡಬೇಕು ಎಂದು ನನಗೆ ಹೇಳಿದ್ದರು. ಅವರ ಮಾತಿಗೆ ಒಪ್ಪಿ ಕೋಕೊ ಕೋಲಾ ಕುಡಿಯುವುದನ್ನು ಬಿಟ್ಟವನು ಇಲ್ಲಿಯವರೆಗೂ ಕುಡಿದಿಲ್ಲ’ ಎಂದರು.

ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಮಾತನಾಡಿ, ‘ಜಾರ್ಜ್ ಅವರ ಕುರಿತ ಅತ್ಯುತ್ತಮ ಜೀವನ ಚರಿತ್ರೆ ಬರೆದಿದ್ದಾರೆ. ನಮ್ಮ ನೆರೆಯವರಾಗಿದ್ದ ಅವರು ನಮ್ಮ ಮನೆಯಿಂದ ಹೋಳಿಗೆ ತರಿಸಿಕೊಳ್ಳುತ್ತಿದ್ದರು’ ಎಂದು ಸ್ಮರಿಸಿದರು.


'ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಜಾರ್ಜ್ ಫರ್ನಾಂಡಿಸ್' ಪುಸ್ತಕವನ್ನು ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಎನ್. ಸಂತೋಷ್ ಹೆಗ್ಡೆ, ಎಂ.ಎನ್. ವೆಂಕಟಾಚಲಯ್ಯ, ಮೈಕಲ್ ಬಿ. ಫರ್ನಾಂಡಿಸ್, ಫಾದರ್ ಲಾರೆನ್ಸ್ ನೊರೊನ್ಹಾ, ಪುಸ್ತಕದ ಲೇಖಕ ರಾಹುಲ್ ರಾಮಗುಂಡಂ, ಎಸ್.ಕೆ. ಕಾಂತಾ, ರಾಮಚಂದ್ರ ಗುಹಾ, ಬಿ.ಎಂ. ಹನೀಫ್ ಇದ್ದಾರೆ –ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಹೆಸರು: ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಜಾರ್ಜ್ ಫರ್ನಾಂಡಿಸ್
ಲೇಖಕರು: ರಾಹುಲ್ ರಾಮಗುಂಡಂ
ಬೆಲೆ: ₹ 799
ಪುಟಗಳು: 533
ಪ್ರಕಾಶನ: ಪೆಂಗ್ವಿನ್ ಇಂಡಿಯಾ, ನವದೆಹಲಿ

‘ಜಾಗತಿಕ ತಾಪಮಾನ: ಮನುಕುಲಕ್ಕೆ ಅಪಾಯ’

ಸೂರ್ಯಮಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸುರೇಶ್ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾಗತಿಕ ತಾಪಮಾನ ಬದಲಾವಣೆ ಇದೇ ರೀತಿ ಮುಂದುವರಿದರೆ ಇನ್ನು 200 ವರ್ಷಗಳಲ್ಲೇ ಮನುಕುಲ ಕಷ್ಟಕ್ಕೆ ಸಿಲುಕುವ ಅಪಾಯ ಇದೆ’ ಎಂದು ಹರಿಯಾಣದ ರಿಷಿವುಡ್ ವಿಶ್ವವಿದ್ಯಾಲಯದ ಕುಲಪತಿ ಸುರೇಶ್ ಪ್ರಭು ಅಭಿಪ್ರಾಯಪಟ್ಟರು.

ಸೆಲ್ಕೋ ಸೋಲಾರ್‌ಲೈಟ್ ಪ್ರೈವೇಟ್ ಲಿಮಿಟೆಡ್‌ನ 2022ನೇ ಸಾಲಿನ ಅಂತರರಾಷ್ಟ್ರೀಯ ‘ಸೂರ್ಯಮಿತ್ರ’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಜಾಗತಿಕ ಹವಾಮಾನ ಬದಲಾವಣೆಗೆ ಗಡಿಗಳ ಹಂಗಿಲ್ಲ. ಕೆಲವು ನದಿಗಳು ಬರಿದಾಗುತ್ತಿದ್ದರೆ, ಪ್ರವಾಹಗಳಿಂದ ಹಲವು ದೇಶಗಳು ತತ್ತರಿಸಿ ಹೋಗಿವೆ. ಪಾಕಿಸ್ತಾನದಲ್ಲಿ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಏನೂ ಮಾಡಲಾಗದ ಸ್ಥಿತಿಯಲ್ಲಿ ಸರ್ಕಾರ ಇದೆ. ಇವೆಲ್ಲವನ್ನು ತಡೆಯಲು ಹಸಿರು ಇಂಧನ ಬಳಕೆಯೇ ಮಾರ್ಗೋಪಾಯ’ ಎಂದರು.

‘ಮನುಕುಲ ಕ್ಷೇಮಕ್ಕಾಗಿ ಇಂಧನ ಮೂಲವನ್ನು ಬದಲಿಸಬೇಕಾಗಿದೆ. ವಿಕೇಂದ್ರೀಕೃತ ಮಾದರಿಯಲ್ಲಿ ಹಸಿರು ಇಂಧನ ಬಳಸುವುದರಿಂದ ಜಾಗತಿಕ ಹವಾಮಾನ ಬದಲಾವಣೆಯಿಂದ ಆಗುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬಹುದು’ ಎಂದು ಹೇಳಿದರು.

‘ಸೂರ್ಯನನ್ನು ದೇವರೆಂದು ಕೈಮುಗಿಯುತ್ತೇವೆ. ಆ ಸೂರ್ಯನ ಶಕ್ತಿಯನ್ನು ವಿದ್ಯುಚ್ಛಕ್ತಿಯಾಗಿ ಬಳಸಿಕೊಳ್ಳುವಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಸೌರ ವಿದ್ಯುತ್ ಬಳಕೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ಉತ್ಪನ್ನಗಳಿಗೆ ಜಿಎಸ್‌ಟಿ ವಿನಾಯಿತಿ ನೀಡಬೇಕು ಎಂಬ ಮನವಿ ಸರಿಯಾಗಿದೆ. ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು’ ಎಂದರು.

ಸೆಲ್ಕೋ ಇಂಡಿಯಾದ 2020-21ನೇ ಸಾಲಿನ ಚಾಂಪಿಯನ್ ಪ್ರಶಸ್ತಿ ಹಾಸನ ತಂಡ, 2021-22ನೇ ಸಾಲಿನ ಚಾಂಪಿಯನ್ ಪ್ರಶಸ್ತಿಯನ್ನು ಚಿಕ್ಕಬಳ್ಳಾಪುರ ತಂಡ ಪಡೆದುಕೊಂಡಿತು.


2022ನೇ ಸಾಲಿನ ಅಂತರರಾಷ್ಟ್ರೀಯ ‘ಸೂರ್ಯಮಿತ್ರ’ ಪ್ರಶಸ್ತಿಯನ್ನು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಿಇಒ ಜಿ.ಎಸ್. ಕುಮಾರ್ ಮತ್ತು ಸಂಸ್ಥಾಪಕ ಅಧ್ಯಕ್ಷ ಎಂ.ಎ.ಬಾಲಸುಬ್ರಮಣಿಯನ್ ಅವರಿಗೆ ಸೆಲ್ಕೋ ಇಂಡಿಯಾದ ನಿರ್ದೇಶಕ ಹರೀಶ್ ಹಂದೆ ಮತ್ತು ಸುರೇಶ್ ಪ್ರಭು ಪ್ರದಾನ ಮಾಡಿದರು. ಸೆಲ್ಕೋ ಇಂಡಿಯಾದ ಸಿಇಒ ಮೋಹನ ಭಾಸ್ಕರ ಹೆಗಡೆ, ಇಂಧನ, ಪರಿಸರ ಮತ್ತು ನೀರಿನ ಕುರಿತ ಪರಿಷತ್ತಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಅರುಣಾಬ್ ಘೋಷ್, ಸೆಲ್ಕೋ ನಿರ್ದೇಶಕರಾದ ಪ್ರೊ. ಎಂ.ಎಸ್. ಶ್ರೀರಾಮ್, ಥಾಮಸ್ ಪುಲ್ಲೆಂಕೇವ್, ಸೆಲ್ಕೋ ಫೌಂಡೇಷನ್ ನಿರ್ದೇಶಕಿ ಹುಧಾ ಜಾಫರ್ ಇದ್ದರು –ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ನಾಯಕರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು

‘ಟೀಕಿಸುವವರಿಗೆ ಕೆಲಸಗಳೇ ಉತ್ತರ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕಾಂಗ್ರೆಸ್ ವಿರುದ್ಧ ಕಿಡಿಕಾರಿದ ಬಿಜೆಪಿ ನಾಯಕರು
- ಸರ್ಕಾರದ ಯೋಜನೆಗಳ ಬಗ್ಗೆ ಜನರಿಗೆ ಮನವರಿಕೆ
- ಅದ್ಧೂರಿ ದಸರಾ ನಡೆಸಲು ಎಲ್ಲ ವ್ಯವಸ್ಥೆ: ಸಿಎಂ

ಮೈಸೂರು: ‘ಯೋಜನೆಗಳು ಕೇವಲ ಘೋಷಣೆಯಾಗಬಾರದು, ಅನುಷ್ಠಾನವಾಗಬೇಕು. ನನ್ನ ವಿರುದ್ಧ ಟೀಕಿಸುವವರಿಗೆ ಸರ್ಕಾರ ಜಾರಿಗೊಳಿಸಿರುವ ಜನಪರ ಕಾರ್ಯಕ್ರಮಗಳೇ ಉತ್ತರವಾಗಲಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ವಿತರಿಸಿ ಮಾತನಾಡಿದರು.

‘ಜನರ ಒಳಿತಿಗೆ ಕೆಲಸ ಮಾಡುವುದು, ಅಧಿಕಾರಕ್ಕಾಗಿ ಕೆಲಸ ಮಾಡುವ ಎರಡು ವರ್ಗಗಳಿರುತ್ತವೆ. ಹಲವು ಭಾಗ್ಯಗಳನ್ನು ಘೋಷಿಸಿ, ದೌರ್ಭಾಗ್ಯ ಕರುಣಿಸಿದವರನ್ನು ಜನರು ಬೆಂಬಲಿಸಲಿಲ್ಲ. ಅಪಪ್ರಚಾರ, ಘೋಷಣೆಗಳಿಂದ ಜನರ ಮನಸ್ಸು ಗೆಲ್ಲಲು ಅಸಾಧ್ಯ. ವಾಮಮಾರ್ಗದಿಂದ ಜನಬೆಂಬಲ ಪಡೆಯಲಾಗದು’ ಎಂದು ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

‘ದುಡಿಯುವ ವರ್ಗಕ್ಕೆ ಅವಕಾಶ ನೀಡಲು ಸರ್ಕಾರ ಬದ್ಧವಾಗಿದೆ. ಸಮಗ್ರ ಅಭಿವೃದ್ಧಿಗೆ ಹತ್ತು ಹಲವು ಯೋಜನೆಗಳನ್ನು ಘೋಷಿಸಿದ್ದು, ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

‘ಪೋಸ್ಟರ್ ಅಂಟಿಸಲು ಒಬ್ಬ ಕಾರ್ಯಕರ್ತ ಇರುವುದಿಲ್ಲ’

ರಾಜ್ಯ ವ್ಯಾಪಿ ಕಾಂಗ್ರೆಸ್ ನಡೆಸುತ್ತಿರುವ ‘ಪೇಸಿಎಂ’ ಅಭಿಯಾನದ ವಿರುದ್ಧ ಕಿಡಿಕಾರಿದ ಎಸ್.ಟಿ.ಸೋಮಶೇಖರ್, ‘ಇಂತಹ ನಡವಳಿಕೆಗಳು ಶೋಭೆ ತರುವುದಿಲ್ಲ. ಮುಂದಿನ ದಿನಗಳಲ್ಲಿ ಪೋಸ್ಟರ್ ಅಂಟಿಸಲು ಕಾಂಗ್ರೆಸ್‌ನಲ್ಲಿ ಒಬ್ಬ ಕಾರ್ಯಕರ್ತನೂ ಇರುವುದಿಲ್ಲ’ ಎಂದು ಟೀಕಿಸಿದರು.

ಕಾಂಗ್ರೆಸ್ ಆಡಳಿತದಲ್ಲಿ ದೊಡ್ಡ ಪ್ರಮಾಣದಲ್ಲಿ ಲೂಟಿ ನಡೆಸಿದ್ದನ್ನು ಅವರ ಪಕ್ಷದವರೇ ಬಹಿರಂಗಗೊಳಿಸಿದ್ದಾರೆ. ಅಂತಹವರು ಈಗ ನಮ್ಮ ವಿರುದ್ಧ ಆರೋಪ ಮಾಡುತ್ತಿರುವುದು ನಾಚಿಕೆಗೇಡಿನ ವಿಚಾರ’ ಎಂದು ಕಿಡಿಕಾರಿದರು.

ಶೂನ್ಯ ಬಡ್ಡಿ ದರದಲ್ಲಿ ಸಾಲ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ‘ರಾಜ್ಯದಲ್ಲಿ 33 ಲಕ್ಷ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ₹24 ಸಾವಿರ ಕೋಟಿ ಸಾಲ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ತಿಳಿಸಿದರು.

ಸಂಸದ ಪ್ರತಾಪಸಿಂಹ ಮಾತನಾಡಿ, ‘ಸಿದ್ದರಾಮಯ್ಯ ಅವರು ಬೀಗರೂಟ, ಮುಂಜಿ, ಮದುವೆಗಾಗಿ ಮೈಸೂರಿಗೆ ಬಂದು ತೆರಳುತ್ತಿದ್ದರೇ ವಿನಾ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆಗೆ ಬರುತ್ತಿರಲಿಲ್ಲ. ಆದರೆ, ಬಸವರಾಜ ಬೊಮ್ಮಾಯಿ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನಡೆಸಲು ಇಲ್ಲಿಗೆ ಬರುತ್ತಿದ್ದಾರೆ’ ಎಂದು ತಿಳಿಸಿದರು.


ಆರೋಗ್ಯಕ್ಕಾಗಿ ನಾಗರಿಕರ ನೃತ್ಯ...
ವಿಶ್ವ ಹೃದಯ ದಿನದ ಅಂಗವಾಗಿ ಎಲೆಕ್ಟ್ರಾನಿಕ್ ಸಿಟಿಯ ಕಾವೇರಿ ಆಸ್ಪತ್ರೆ ವತಿಯಿಂದ ಸಾರ್ವಜನಿಕರಲ್ಲಿ ಆರೋಗ್ಯಪೂರ್ಣ ಜೀವನಶೈಲಿಯ ಮಹತ್ವದ ಅರಿವು ಮೂಡಿಸಲು ಆಯೋಜಿಸಿದ್ದ ವಾಕಥಾನ್ ಕಾರ್ಯಕ್ರಮದಲ್ಲಿ ನಾಗರಿಕರು ನೃತ್ಯ ಮಾಡಿದರು.

ಕಲಬುರಗಿ: 554 ಕೈದಿಗಳಿರುವಲ್ಲಿ ಒಂದು ಸಾವಿರ ಜನ

ಕೈದಿಗಳೊಂದಿಗೆ ನ್ಯಾಯಮೂರ್ತಿಗಳ ಸಂವಾದ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಆಯೋಗದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ, ನ್ಯಾಯಮೂರ್ತಿಗಳಾದ ಎಚ್.ಟಿ.ನರೇಂದ್ರ ಪ್ರಸಾದ್, ಎಂಜಿಎಸ್ ಕಮಲ್, ಸಿ.ಎಂ.ಪೂಣಚ್ಚ, ಅನಿಲ್ ಬಿ.ಕಟ್ಟಿ ಅವರು ಇಲ್ಲಿನ ಕಾರಾಗೃಹಕ್ಕೆ ಭೇಟಿ ನೀಡಿ ಕೈದಿಗಳ ಜೊತೆ ಸಂವಾದ ನಡೆಸಿದರು.

ಜೇವರ್ಗಿ ರಸ್ತೆಯಲ್ಲಿರುವ ಕೇಂದ್ರ ಕಾರಾಗೃಹದಲ್ಲಿ ಮೂಲಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದರು. ಕೈದಿಗಳಿಂದ ಅಹವಾಲು ಸ್ವೀಕರಿಸಿದರು.

ಕಾರಾಗೃಹದ ಅಧೀಕ್ಷಕ ರಂಗನಾಥ್ ಅವರು, ‘ಜೈಲಿನಲ್ಲಿ ಮೂವರು ವೈದ್ಯರಿದ್ದಾರೆ. ಮಹಿಳಾ ವೈದ್ಯೆ ವಾರಕ್ಕೊಮ್ಮೆ ಬರುತ್ತಾರೆ’ ಎಂದರು. ‘ಮಹಿಳಾ ವೈದ್ಯರು ನಿತ್ಯವೂ ಭೇಟಿ ನೀಡಬೇಕಾಗುತ್ತದೆ’ ಎಂದು ಹೇಳಿದರು.

ಕೈದಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಯಾವುದೋ ದುಡುಕಿನ ಸಂದರ್ಭದಲ್ಲಿ ತಪ್ಪು ಮಾಡಿ ಶಿಕ್ಷೆ ಅನುಭವಿಸಿದ್ದೀರಿ. ಇಲ್ಲಿಗೆ ಬಂದ ಮೇಲೆ ಸುಧಾರಣೆ ಮಾಡಿಕೊಳ್ಳಬೇಕು ವ್ಯಕ್ತಿತ್ವ ಬದಲಿಸಿಕೊಳ್ಳಬೇಕು’ ಎಂದು ತಿಳಿಸಿದರು.

‘ಕೈದಿಗಳು ಹೇಳಿದ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ವರದಿ ಕಳುಹಿಸುತ್ತೇನೆ. ಬೆಂಗಳೂರಿನ ಪರಪ್ಪನ ಅಗ್ರಹಾರವೂ ಹೀಗೇ ಇತ್ತು. ಈಗ ಸರಿಯಾಗಿದೆ. ಇಲ್ಲಿಯವರೆಗೆ 14 ಜಿಲ್ಲೆಗಳ 22 ಜೈಲುಗಳಿಗೆ ಭೇಟಿ ನೀಡಿದ್ದೇನೆ. ಕಾನೂನು ಬದ್ಧವಾಗಿ ಕೈದಿಗಳಿಗೆ ಯಾವ ಬಗೆಯ ಕಾನೂನು ನೆರವು ನೀಡಬೇಕೋ ಅದನ್ನು ನೀಡಲಾಗುವುದು’ ಎಂದರು.

ಅಡುಗೆ ಕೋಣೆಗೆ ಭೇಟಿ ನೀಡಿದ ನ್ಯಾ. ಬಿ. ವೀರಪ್ಪ ಅವರು ಸಾಂಬಾರ್ ಸೇವಿಸಿದರು. ಅಡುಗೆಯವರನ್ನು ಕರೆಸಿ ಅಡುಗೆಯಲ್ಲಿ ಹೆಚ್ಚು ಖಾರ ಹಾಕಬಾರದು. ಗುಣಮಟ್ಟದ ಆಹಾರವನ್ನು ನೀಡಬೇಕು ಎಂದು ತಾಕೀತು ಮಾಡಿದರು.


ಹೈಕೋರ್ಟ್ ನ್ಯಾಯಮೂರ್ತಿ, ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷ ಬಿ.ವೀರಪ್ಪ ಅವರು ಭಾನುವಾರ ಕಲಬುರಗಿಯ ಕೇಂದ್ರ ಕಾರಾಗೃಹದಲ್ಲಿ ಕೈದಿಗಳೊಂದಿಗೆ ಸಂವಾದ ನಡೆಸಿದರು. ನ್ಯಾಯಮೂರ್ತಿಗಳಾದ ಎಚ್.ಟಿ. ನರೇಂದ್ರ ಪ್ರಸಾದ್, ಎಂಜಿಎಸ್ ಕಮಲ್, ಸಿ.ಎಂ. ಪೂಣಚ್ಚ, ಅನಿಲ್ ಬಿ. ಕಟ್ಟಿ, ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶ ಕೆ.ಬಿ. ಪಾಟೀಲ ಇದ್ದರು –ಪ್ರಜಾವಾಣಿ ಚಿತ್ರ

ಪ್ರಭುತ್ವದ ಸ್ವಾರ್ಥಕ್ಕೆ ಕಾರ್ಮಿಕರ ಹಿತ ಬಲಿ: ವರಲಕ್ಷ್ಮಿ ಟೀಕೆ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಕೇಂದ್ರ ಹಾಗೂ ರಾಜ್ಯ ಸರ್ಕಾರ ದೇಶ ಹಾಗೂ ರಾಜ್ಯದ ಮೇಲೆ ನವ ಉದಾರೀಕರಣದ ಆರ್ಥಿಕ ನೀತಿ ಹೇರುತ್ತಿದೆ. ಕಾರ್ಮಿಕ ಹಿತಕಡೆಗಣಿಸಿವೆ. ಈ ನಡೆ ಈಗಾಗಲೇ ಸಂಕಷ್ಟದಲ್ಲಿರುವ ದೇಶ ಮತ್ತು ರಾಜ್ಯದ ಜನರನ್ನು ಮತ್ತಷ್ಟು ಸಂಕಷ್ಟಕ್ಕೀಡುಮಾಡುತ್ತಿವೆ ಎಂದು ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷೆ ಎಸ್.ವರಲಕ್ಷ್ಮಿ ಹೇಳಿದರು.

ಅವರು ನಗರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಿಐಟಿಯು ಪ್ರಥಮ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಒಕ್ಕೂಟ ಹಾಗೂ ರಾಜ್ಯ ಸರ್ಕಾರ ಜನವಿರೋಧಿ ನೀತಿ ವಾಪಸು ಪಡೆದು ಜನರ ತಲಾ ಆದಾಯ ಹೆಚ್ಚಿಸಲು ಕ್ರಮ ವಹಿಸಬೇಕು. ವಿದ್ಯುತ್ ರಂಗದ ಖಾಸಗೀಕರಣಕ್ಕಾಗಿ ವಿದ್ಯುತ್ ಮಸೂದೆ ದೇಶದ ಜನರು ತೀವ್ರ ವಿರೋಧ ನಡುವೆ ಲೋಕಸಭೆಯಲ್ಲಿ ಮಂಡಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಜಿಲ್ಲಾ ಸಮಿತಿ ಅಧ್ಯಕ್ಷ ನರಸಿಂಹಮೂರ್ತಿ, ರಾಜ್ಯ ಸಮಿತಿ ಉಪಾಧ್ಯಕ್ಷ ಕೆ.ಪ್ರಕಾಶ್, ಕಾರ್ಯದರ್ಶಿ ಪ್ರತಾಪ್ ಸಿಂಹ, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಆರ್. ಚಂದ್ರತೇಜಸ್ವಿ, ಜಿಲ್ಲಾ ಸಮಿತಿ ಎನ್. ಕೆ.ಬಸವರಾಜು ಇತರ ಮುಖಂಡರು ಭಾಗವಹಿಸಿದ್ದರು.

ದೇಶ ಒಗ್ಗೂಡಿಸಲು ‘ಭಾರತ್ ಜೋಡೊ’: ರಾಜಕುಮಾರ್

ಪೀಣ್ಯ ದಾಸರಹಳ್ಳಿ: ‘ಎಲ್ಲರೂ ಒಂದೇ ಎನ್ನುವ ಸಂದೇಶ ಸಾರಲು ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಭಾರತ್ ಜೋಡೊ ಯಾತ್ರೆ ನಡೆಯುತ್ತಿದೆ’ ಎಂದು ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ರಾಜಕುಮಾರ್ ತಿಳಿಸಿದರು.

‘ಭಾರತ್ ಜೋಡೊ’ ಯಾತ್ರೆ ಕುರಿತು ದಾಸರಹಳ್ಳಿ ಕಾಂಗ್ರೆಸ್ ಘಟಕವು ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ‘ಈ ಯಾತ್ರೆ ಐತಿಹಾಸಿಕವಾಗಿಸಲು ಎಲ್ಲರೂ ಪಾಲ್ಗೊಂಡು ಯಶಸ್ವಿಗೊಳಿಸಬೇಕು’ ಎಂದರು.

ದಾಸರಹಳ್ಳಿ ಕ್ಷೇತ್ರದ ಕಾಂಗ್ರೆಸ್ ಉಸ್ತುವಾರಿ ನಾಗಲಕ್ಷ್ಮಿ ಚೌದರಿ ಮಾತನಾಡಿ ‘ಭೇದಭಾವ ಮಾಡದೇ ಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು, ನಾಗರಿಕರು ಪಾಲ್ಗೊಂಡು ಯಶಸ್ವಿಗೊಳಿಸಲು ಸನ್ನದ್ಧರಾಗಬೇಕು’ ಎಂದರು.


ಭಾರತ್ ಜೋಡೊ ಯಾತ್ರೆ ಪೂರ್ವಭಾವಿ ಸಭೆಯಲ್ಲಿ ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ರಾಜಕುಮಾರ್ ಮಾತನಾಡಿದರು. ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ತ, ಪಾಲಿಕೆ ಮಾಜಿ ಸದಸ್ಯ ಕೆ.ನಾಗಭೂಷಣ್, ಜಗದೀಶ್, ಜಗದೀಶ್ ಜೆಡಿಎನ್, ಮಂಜುನಾಗಯ್ಯ, ರವಿ ಗೌಡ್ರು, ರಮೇಶ್ ಗೌಡ್ರು, ಜಗದೀಶ್ ಬಾಗಲಗುಂಟೆ, ಕೆ.ಸಿ. ಅಶೋಕ್ ಇದ್ದರು.

ತರಬೇತಿ ಅಧಿಕಾರಿ ಸಾವು: ತನಿಖೆಗೆ ಐಎಎಫ್ ಆದೇಶ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ತರಬೇತಿಯಲ್ಲಿದ್ದ ಅಧಿಕಾರಿಯೊಬ್ಬರ ಸಾವಿನ ಪ್ರಕರಣಕ್ಕೆ ಸಂಬಂಧ ತನಿಖೆಗೆ ವಾಯುಪಡೆ ಆದೇಶಿಸಿದೆ. ಈ ಸಂಬಂಧ ಪೊಲೀಸರು ಆರು ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದರು.

‘ಅಂಕಿತ್ ಕುಮಾರ್ ಝಾ ಅವರ ದೇಹ ವಾಯುಪಡೆಯ ಟೆಕ್ನಿಕಲ್ ಕಾಲೇಜಿನಲ್ಲಿ (ಎಎಫ್‌ಟಿಸಿ) ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಝಾ ಅವರ ಸಹೋದರ ಅಧಿಕಾರಿಗಳ ವಿರುದ್ಧ ಆರೋಪ ಹೊರಿಸಿ ದೂರು ನೀಡಿದ್ದರು.

ಮಾಧ್ಯಮ ವರದಿಗಳನ್ನು ಉಲ್ಲೇಖಿಸಿ ಐಎಎಫ್ ಹೇಳಿಕೆ ನೀಡಿದ್ದು, ತರಬೇತಿ ಅಧಿಕಾರಿ ಅಂಕಿತ್ ಕುಮಾರ್ ಝಾ ಅವರು ಕಳೆದ ವರ್ಷ ಫೆಬ್ರುವರಿ ತಿಂಗಳು ವಾಯುಪಡೆಗೆ ಸೇರ್ಪಡೆ ಆಗಿದ್ದರು. ಮಹಿಳೆಯೊಬ್ಬರು ಅನುಚಿತ ವರ್ತನೆ ಆರೋಪ ಹೊರಿಸಿ ದೂರು ನೀಡಿದ್ದು, ತನಿಖೆ ನಂತರ ಅವರ ತರಬೇತಿಯನ್ನು ರದ್ದುಪಡಿಸಲಾಗಿತ್ತು ಎಂದು ತಿಳಿಸಿದೆ.

ಈಗ ಅಧಿಕಾರಿ ಸಾವಿನ ಸತ್ಯಾಸತ್ಯತೆ ತಿಳಿಯಲು ಈಗ ತನಿಖೆಗೆ ಆದೇಶಿಸಲಾಗಿದೆ ಎಂದು ತಿಳಿಸಿದೆ.

ಚಿತ್ರಾವಳಿ





1. ಬೆಂಗಳೂರು ವಿಶ್ವವಿದ್ಯಾಲಯದ ಸಾಲ ಸಹಕಾರ ಸಂಘದ ವತಿಯಿಂದ, ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ನೌಕರರನ್ನು ಜ್ಞಾನಭಾರತಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಅಧ್ಯಕ್ಷ ಎಚ್. ಕೃಷ್ಣಪ್ಪ, ಸದಸ್ಯರಾದ ಎಸ್. ಜಯದೇವಯ್ಯ, ಸಿ.ಟಿ. ಭಾಸ್ಕರ, ಮಹಾಲಿಂಗಯ್ಯ, ಶಿವಣ್ಣ ಎಂ.ಎನ್., ಟಿ ಮುನಿಯಪ್ಪ, ಎನ್.ಪಿ. ಕಂಚಿಸ್ವಾಮಿ, ಎಸ್. ಮುರಳಿ, ಗಿರಿಧರ, ಎನ್. ರವಿಕುಮಾರ್, ವೈ.ಎಂ. ಕೋಕಿಲ, ಪಿ. ಸರಸ್ವತಿ, ಸಂಘದ ಕಾರ್ಯದರ್ಶಿ ಶ್ರೀ ಬಿ ರಾಮಲಿಂಗಯ್ಯ ಇದ್ದರು.
2. ಕರ್ನಾಟಕ ವಿಶ್ವಕರ್ಮ ಸಾಹಿತ್ಯ ಕಲಾ ಅಕಾಡೆಮಿ ಹಾಗೂ ಯಶೋಧರೆ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಈರಾಚಾರ್ ಅಕ್ಕಸಾಲಿ (ಎಡದಿಂದ ಎರಡನೆಯವರು) ಅವರ ‘ಭಾವನೆಗಳ ಬದುಕು’ ಪುಸ್ತಕವನ್ನು ಕರ್ನಾಟಕ ವಿಶ್ವಕರ್ಮ ನಿಗಮ ಮಂಡಳಿ ಅಧ್ಯಕ್ಷ ಬಾಬು ಪತ್ತಾರ್ (ಎಡದಿಂದ ಐದನೆಯವರು) ಬಿಡುಗಡೆ ಮಾಡಿದರು. (ಎಡದಿಂದ) ಸಾಹಿತಿ ಸಿ.ವಿ. ಮುರಳೀಧರ, ಈರಾಚಾರ್ ಅಕ್ಕಸಾಲಿ ಅವರ ತಾಯಿ ಯಶೋಧಮ್ಮ, ವಿಶ್ವಕರ್ಮ ಸಾಹಿತ್ಯ ಕಲಾ ಅಕಾಡೆಮಿ ಅಧ್ಯಕ್ಷೆ ಎನ್.ವಿ. ಅಂಬಾಮಣಿಮೂರ್ತಿ ಮತ್ತು ಎಚ್.ಎಸ್. ಹಂಡೆ ಇದ್ದಾರೆ.
3. ನಗರದ ಸಂಪಂಗಿರಾಮನಗರದಲ್ಲಿ ಭಾನುವಾರ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಮತದಾರರ ಪಟ್ಟಿಗೆ ಸೇರ್ಪಡೆ ಸಂಬಂಧ ಸಾರ್ವಜನಿಕರಿಗೆ ಮಾಹಿತಿ ನೀಡಿದರು

ಮಹಾಲಯ ಅಮಾವಾಸ್ಯೆ, ಸಾವಿರಾರು ಜನರಿಂದ ಮಹದೇಶ್ವರ ದರ್ಶನ

ಮಹದೇಶ್ವರ ಬೆಟ್ಟದಲ್ಲಿ ಭಕ್ತರ ದಂಡು

ಪ್ರಜಾವಾಣಿ ವಾರ್ತೆ

ಮಹದೇಶ್ವರ ಬೆಟ್ಟ: ಇಲ್ಲಿನ ಪ್ರಸಿದ್ಧ ಯಾತ್ರಾ ಸ್ಥಳ ಮಲೆಮಹದೇಶ್ವರಸ್ವಾಮಿ ದೇವಾಲಯದಲ್ಲಿ ಮಹಾಲಯ ಅಮಾವಾಸ್ಯೆ ಪ್ರಯುಕ್ತ ಭಾನುವಾರ ವಿಶೇಷ ಪೂಜೆಗಳು ನಡೆದವು.

ಜಿಲ್ಲೆ, ಹೊರ ಜಿಲ್ಲೆ, ನೆರೆಯ ತಮಿಳುನಾಡಿನಿಂದ ಬಂದಿದ್ದ ಸಾವಿರಾರು ಭಕ್ತರು ಮಹದೇಶ್ವರ ಸ್ವಾಮಿಯ ದರ್ಶನ ಮಾಡಿ ಕಾಣಿಕೆ, ಹರಕೆ ಸೇವೆ ಸಲ್ಲಿಸಿದರು.


ಬೇಡಗಂಪಣ ಸಮುದಾಯದ ವಿಧಿ ವಿಧಾನದಲ್ಲಿ ಭಾನುವಾರ ಮುಂಜಾನೆ ನಾಲ್ಕರಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಮಹಾಲಯ ಅಮಾವಾಸ್ಯೆ ಹಿನ್ನೆಲೆಯಲ್ಲಿ ಜನದಟ್ಟಣೆ ಇದ್ದು, ಭಕ್ತರು ಸರತಿಯಲ್ಲಿ ನಿಂತು ಸ್ವಾಮಿಯ ದರ್ಶನ ಮಾಡಿದರು. ₹300, ₹500 ಶುಲ್ಕದ ವಿಶೇಷ ದರ್ಶನ ವ್ಯವಸ್ಥೆಯೂ ಇತ್ತು.

ಪೊಲೀಸರು ಬಿಗಿ ಬಂದೋಬಸ್ತ್ ಇತ್ತು. ಭಕ್ತರ ಸುಗಮ ಸಂಚಾರಕ್ಕಾಗಿ ಕೆಎಸ್‌ಆರ್‌ಟಿಸಿ 350ರಿಂದ 400 ಹೆಚ್ಚುವರಿ ಬಸ್‌ಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿತ್ತು. ಮಹದೇಶ್ವರ ಬೆಟ್ಟದಿಂದ ಬೆಂಗಳೂರು, ಮೈಸೂರು, ಚಾಮರಾಜನಗರ, ಮಂಡ್ಯ ಸೇರಿದಂತೆ ವಿವಿಧ ಕಡೆಗಳಿಗೆ ನೇರ ಬಸ್ ವ್ಯವಸ್ಥೆ ಮಾಡಲಾಗಿತ್ತು.

ನವರಾತ್ರಿ ವ್ರತ ಆರಂಭ: ದಸರಾ ಜಾತ್ರೆಗೆ ಮುನ್ನುಡಿ ಬರೆಯುವ ಶರವನ್ನವರಾತ್ರಿ ವ್ರತ ಸೋಮವಾರ (ಸೆ.26) ಆರಂಭವಾಗಲಿದೆ. ಅ.4ರಂದು ಮಹಾನವಮಿ, ಆಯುಧ ಪೂಜೆ ನಡೆಯಲಿದೆ. 5ರಂದು ವಿಜಯ ದಶಮಿ, ಕುದುರೆ ವಾಹನೋತ್ಸವ ಮತ್ತು ದಶಮಿ ಪೂಜೆಗಳು ನೆರವೇರಲಿವೆ.


ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಮಹಾಲಯ ಅಮಾವಾಸ್ಯೆ ದಿನವಾದ ಭಾನುವಾರ ರಾತ್ರಿ ಕಂಡು ಬಂದ ಭಕ್ತಸ್ತೋಮ

ಅಸ್ಸಾಂ: ಸದ್ಗುರು ವಿರುದ್ಧ ಎಫ್‌ಐಆರ್


ಸದ್ಗುರು

ಗುವಾಹಟಿ: ಈಶಾ ಫೌಂಡೇಶನ್‌ನ ಸದ್ಗುರು ಜಗ್ಗಿ ವಾಸುದೇವ್ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ ಅವರು ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನದಲ್ಲಿ ಶನಿವಾರ ರಾತ್ರಿ ವಾಹನ ಚಲಾಯಿಸಿದರು ಎಂಬ ಕಾರಣಕ್ಕೆ ಅವರಿಬ್ಬರ ವಿರುದ್ಧ ಉದ್ಯಾನ ಬಳಿಯ ಎರಡು ಗ್ರಾಮಗಳ ಇಬ್ಬರು ನಿವಾಸಿಗಳು ಎಫ್‌ಐಆರ್ ದಾಖಲಿಸಿದ್ದಾರೆ.

ಶನಿವಾರ ರಾತ್ರಿ ಸದ್ಗುರು ಅವರು ಉದ್ಯಾನದ ಒಳಗೆ ಜೀಪ್ ಚಾಲನೆ ಮಾಡಿದ್ದಾರೆ, ಅವರ ಪಕ್ಕ ಹಿಮಂತ ಅವರು ಕುಳಿತಿದ್ದರು. ಇದು ವನ್ಯಜೀವಿ ಸಂರಕ್ಷಣೆ ಕಾಯ್ದೆ, 1972ರ ಉಲ್ಲಂಘನೆಯಾಗಿದೆ ಎಂದು ಎಫ್‌ಐಆರ್‌ನಲ್ಲಿ ದೂರುದಾರರು ಉಲ್ಲೇಖಿಸಿದ್ದಾರೆ.

ಅಸ್ಸಾಂ ಸರ್ಕಾರ ಆಯೋಜಿಸಿದ್ದ 'ಚಿಂತನ ಶಿಬಿರ'ದಲ್ಲಿ ಸದ್ಗುರು ಅವರು ಶನಿವಾರ ಪಾಲ್ಗೊಂಡು ಮಾತನಾಡಿದ್ದರು. ಮಣ್ಣಿನ ಬಳಕೆ ಮತ್ತು ಕೃಷಿ ಪದ್ಧತಿ ಕುರಿತು ಅಸ್ಸಾಂ ಸರ್ಕಾರದ ಜೊತೆ ಒಪ್ಪಂದವನ್ನೂ ಮಾಡಿಕೊಂಡಿದ್ದರು. ಅಸ್ಸಾಂನ ಬೊಕಾಕಾಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಪ್ರಧಾನಿ ಹೇಳಿಕೆ

ಚಂಡೀಗಢ ವಿಮಾನ ನಿಲ್ದಾಣಕ್ಕೆ ಭಗತ್ ಸಿಂಗ್ ಹೆಸರು: ಮೋದಿ

ನವದೆಹಲಿ (ಪಿಟಿಐ): ಚಂಡೀಗಢ ವಿಮಾನ ನಿಲ್ದಾಣಕ್ಕೆ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಹೆಸರನ್ನು ಇಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಘೋಷಿಸಿದ್ದಾರೆ.

'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸೆ.28ರಂದು ಭಗತ್ ಸಿಂಗ್ ಅವರ ಜನ್ಮ ದಿನಾಚರಣೆ ರೂಪದಲ್ಲಿ ಮತ್ತೊಂದು ಮುಖ್ಯ ಅಮೃತ ಮಹೋತ್ಸವ ಬರುತ್ತಿದೆ. ಅವರ ಜನ್ಮ ವಾರ್ಷಿಕೋತ್ಸವಕ್ಕೂ ಮೊದಲು, ಅವರ ನೆನಪಿಗಾಗಿ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಚಂಡೀಗಢ ವಿಮಾನ ನಿಲ್ದಾಣಕ್ಕೆ ಹುತಾತ್ಮ ಭಗತ್ ಸಿಂಗ್ ಹೆಸರಿಡಲು ನಿರ್ಧರಿಸಲಾಗಿದೆ' ಎಂದು ಮೋದಿ ಹೇಳಿದರು.

'ಹವಾಮಾನ ಬದಲಾವಣೆಯು ಸಮುದ್ರ ಪರಿಸರ ವ್ಯವಸ್ಥೆಗೆ ಅಪಾಯವನ್ನು ಒಡ್ಡಿದೆ. ಕಡಲತೀರಗಳಲ್ಲಿನ ಕಸದಿಂದಾಗಿ ತೊಂದರೆ ಸೃಷ್ಟಿಯಾಗುತ್ತಿದೆ' ಎಂದು ಮೋದಿ ಹೇಳಿದರು.

'ಈ ಸವಾಲುಗಳನ್ನು ಎದುರಿಸಲು ಗಂಭೀರ ಮತ್ತು ನಿರಂತರ ಪ್ರಯತ್ನಗಳನ್ನು ಮಾಡುವುದು ನಮ್ಮ ಜವಾಬ್ದಾರಿಯಾಗಿದೆ' ಎಂದು ಅವರು ಸಲಹೆ ನೀಡಿದರು.

ಇದೇ ಕಾರ್ಯಕ್ರಮದಲ್ಲೇ ಮೋದಿ ಅವರು ಬಿಜೆಪಿ ಸಿದ್ಧಾಂತವಾದಿ ದೀನ್ ದಯಾಳ್ ಉಪಾಧ್ಯಾಯ ಅವರಿಗೆ ಗೌರವ ಸಲ್ಲಿಸಿದರು. ಅವರು ಅಪ್ರತಿಮ ಚಿಂತಕ ಮತ್ತು ದೇಶದ ಹೆಮ್ಮೆಯ ಪುತ್ರ' ಎಂದು ಬಣ್ಣಿಸಿದರು.

130 ಕೋಟಿ ಭಾರತೀಯರು ಚೀತಾಗಳ ವಾಪಸಾತಿ ಬಗ್ಗೆ ಹೆಮ್ಮೆಪಟ್ಟಿದ್ದಾರೆ ಎಂದು ಮೋದಿ ಇದೇ ವೇಳೆ ಹೇಳಿದರು.

'ಅವುಗಳನ್ನು ನೋಡುವ ಅವಕಾಶ ಯಾವಾಗ ಲಭಿಸುತ್ತದೆ ಎಂದು ಅನೇಕರು ಪ್ರಶ್ನಿಸಿದ್ದಾರೆ. ಕಾರ್ಯಪಡೆಯು ಚೀತಾಗಳ ಕುರಿತು ನಿಗಾವಹಿಸಿ, ಇಲ್ಲಿನ ವಾತಾವರಣಕ್ಕೆ ಅವು ಹೇಗೆ ಹೊಂದಿಕೊಳ್ಳುತ್ತವೆ ಎಂಬುದರ ಅಧ್ಯಯನ ನಡೆಸಿ ವರದಿ ನೀಡುತ್ತದೆ. ಇದನ್ನು ಆಧರಿಸಿ ಕೆಲ ಕಾಲದ ನಂತರ ಕುರಿತು ನಿರ್ಣಯ ಕೈಗೊಳ್ಳಲಾಗುವುದು' ಎಂದು ಮೋದಿ ಹೇಳಿದ್ದಾರೆ.

'ಮನ್ ಕಿ ಬಾತ್' ಒಟ್ಟಾಗಿ ಕೇಳಿ, ಬಳಿಕ ಸಭೆ ನಡೆಸಿ: ನಡ್ಡಾ

ಕೊಚ್ಚಿ: ಪ್ರಧಾನಿ ನರೇಂದ್ರ ಮೋದಿ ಅವರ 'ಮನ್ ಕಿ ಬಾತ್' ಕಾರ್ಯಕ್ರಮವನ್ನು ಸಾಮೂಹಿಕವಾಗಿ ಕೇಳಿದ ಬಳಿಕ ಬೂತ್‌ಮಟ್ಟದ ಸಭೆಗಳನ್ನು ನಡೆಸುವಂತೆ ಪಕ್ಷದ ಕಾರ್ಯಕರ್ತರಿಗೆ ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಭಾನುವಾರ ನಿರ್ದೇಶನ ನೀಡಿದ್ದಾರೆ.

ಕೇರಳದಲ್ಲಿ ಎರಡು ದಿನಗಳ ಪ್ರವಾಸ ಕೈಗೊಂಡಿರುವ ನಡ್ಡಾ ಅವರು, ಪ್ರಧಾನಿಯವರ ಮಾಸಿಕ ರೇಡಿಯೊ ಕಾರ್ಯಕ್ರಮದ ನಂತರ ಇಲ್ಲಿಗೆ ಸಮೀಪದ ಅಲುವಾದಲ್ಲಿ ಪಕ್ಷದ ಸದಸ್ಯರು ಮತ್ತು ಬೆಂಬಲಿಗರೊಂದಿಗೆ ಮಾತನಾಡುವಾಗ ಈ ನಿರ್ದೇಶನ ನೀಡಿದ್ದಾರೆ.

'ಬಿಜೆಪಿಯ ಪ್ರತಿ ಜಿಲ್ಲಾಧ್ಯಕ್ಷರು, ಮಂಡಲ ಅಧ್ಯಕ್ಷರು, ತಾಲ್ಲೂಕು ಅಧ್ಯಕ್ಷರು, ಕ್ಷೇತ್ರಗಳ ಅಧ್ಯಕ್ಷರು ಬೂತ್‌ಮಟ್ಟದಲ್ಲಿ ಒಟ್ಟಾಗಿ ಕುಳಿತು ಮೋದಿ ಅವರ ಮಾಸಿಕ ಕಾರ್ಯಕ್ರಮವನ್ನು ಕೇಳಬೇಕು. ಕಾರ್ಯಕ್ರಮ ಕೇಳಿದ ಬಳಿಕ ಬಿಜೆಪಿಯ ಸಭೆಯನ್ನು ನಡೆಸಬೇಕು. 'ಮನ್ ಕಿ ಬಾತ್' ಕಾರ್ಯಕ್ರಮಕ್ಕೆ ತಿಂಗಳಿಂದ ತಿಂಗಳಿಗೆ ಕೇಳುಗರ ಸಂಖ್ಯೆ ಹೆಚ್ಚಾಗುತ್ತಿದೆ' ಎಂದು ಅವರು ಹೇಳಿದ್ದಾರೆ.

ನವರಾತ್ರಿಯ ಮಹಾಪೂಜೆ

• ಸೂರ್ಯನಾರಾಯಣ ಭಟ್ಟ

ಶರತ್ಕಾಲವು ಆರಂಭವಾಗಿದೆ. ಶರತ್ಕಾಲದಲ್ಲಿ ಎಲ್ಲರೂ ನವರಾತ್ರಿಯನ್ನು ತಪ್ಪದೇ ಆಚರಿಸಬೇಕೆಂದು ಶ್ರೀದೇವೀಭಾಗವತದಲ್ಲಿದೆ. ಸಪ್ತಶತಿಯಲ್ಲಿ ಹೇಳುವಂತೆ, ಶರತ್ಕಾಲದಲ್ಲಿಯೂ ವರ್ಷದ ಆದಿಯಲ್ಲಿಯೂ ಮಹಾಪೂಜೆಯನ್ನು ಮಾಡುವಾಗ ದೇವೀ ಮಾಹಾತ್ಮ್ಯವನ್ನು ಭಕ್ತಿಯಿಂದ ಕೇಳಿದವನಿಗೆ ಎಲ್ಲಾ ತೊಂದರೆಗಳಿಂದಲೂ ಮುಕ್ತಿ ದೊರೆಯುತ್ತದೆ, ಧನ ಧಾನ್ಯಗಳು ಉಂಟಾಗುತ್ತವೆ. ಈ ಮಾತನ್ನು ಅನುಸರಿಸಿ ಸಪ್ತಶತಿ ಪಾರಾಯಣವನ್ನು ಮಾಡಲಾಗುತ್ತದೆ.

ಸಪ್ತಶತಿಯಲ್ಲಿ ಶ್ರೀದೇವಿಯ ಹಲವಾರು ರೂಪಗಳ ವರ್ಣನೆಯಿದೆ. ಅವುಗಳನ್ನೇ ನವರಾತ್ರಿಯ ದಿನಗಳಲ್ಲಿ ಪೂಜಿಸುವುದುಂಟು. ಮೊದಲನೆಯ ದಿನ ಯೋಗನಿದ್ರೆಯನ್ನೂ, ಎರಡನೆಯ ದಿನ ದೇವಜಾತೆಯನ್ನೂ, ಮೂರನೆಯ ದಿನ ಮಹಿಷಮರ್ದಿನಿಯನ್ನೂ, ನಾಲ್ಕನೆಯ ದಿನ ಶೈಲಜೆಯನ್ನೂ, ಐದನೆಯ ದಿನ ಧೂಮ್ರಘಾತಿನಿಯನ್ನೂ, ಆರನೆಯ ದಿನ ಚಂಡಮುಂಡಘಾತಿನಿಯನ್ನೂ, ಏಳನೆಯ ದಿನ ರಕ್ತಬೀಜಘಾತಿನಿಯನ್ನೂ, ಎಂಟನೆಯ ದಿನ ನಿಶುಂಭ ಘಾತಿನಿಯನ್ನೂ, ಒಂಬತ್ತನೆಯ ದಿನ ಶುಂಭಘಾತಿನಿಯನ್ನೂ ಪೂಜಿಸುತ್ತಾರೆ. ಈ ದೇವಿಯರ ಕಥೆಗಳು ಕ್ರಮವಾಗಿಯೇ ಸಪ್ತಶತಿಯಲ್ಲಿ ಬರುತ್ತವೆ. ದುಷ್ಟರ ನಿಗ್ರಹವೇ ಈ ಕಥೆಗಳಲ್ಲಿ ಪ್ರಧಾನ ವಸ್ತುವಾಗಿದೆ.

ಶ್ರೀದೇವೀ ಮಾಹಾತ್ಮ್ಯದಲ್ಲಿಯೇ ಬ್ರಾಹ್ಮೀ ಮಾಹೇಶ್ವರೀ ಕೌಮಾರೀ ವೈಷ್ಣವೀ ವಾರಾಹೀ ಇಂದ್ರಾಣೀ ಚಾಮುಂಡಾ ಎಂಬ ಸಪ್ತ ಮಾತೃಕೆಯರ ಉಲ್ಲೇಖವೂ ಇದೆ. ಈ ಮಾತೃಕೆಯರು ಸುಪ್ರಸಿದ್ಧರಾದ ಬ್ರಹ್ಮ ಮಹೇಶ್ವರ ಕುಮಾರ ವಿಷ್ಣು ವರಾಹ ಇಂದ್ರ ಕಾಳಿ – ಈ ದೇವಾನುದೇವತೆಗಳ ಶಕ್ತಿಗಳು ಎನ್ನಲಾಗಿದೆ. ಕಾಲಿಕಾ ಕೌಶಿಕೀ ನಾರಸಿಂಹೀ ಎಂಬ ಶಕ್ತಿದೇವತೆಗಳೂ ಅಲ್ಲಿಯೇ ಉಕ್ತವಾಗಿವೆ.

ನವರಾತ್ರಿಯನ್ನು ನವದುರ್ಗೆಯರ ಪೂಜೆಯೆಂದೂ ಹೇಳುವುದುಂಟು. ಶೈಲಪುತ್ರೀ ಬ್ರಹ್ಮಚಾರಿಣೀ ಚಂಡಘಂಟಾ ಕೂಷ್ಮಾಂಡಾ ಸ್ಕಂದಮಾತಾ ಕಾತ್ಯಾಯನೀ ಕಾಲರಾತ್ರಿ ಮಹಾಗೌರೀ ಸಿದ್ಧಿದಾತ್ರೀ ಎಂಬ ನವದುರ್ಗೆಯರನ್ನು ಪೂಜಿಸುವ ಕ್ರಮವು ಅಲ್ಲಲ್ಲಿ ರೂಢಿಯಲ್ಲಿದೆ. ಇವುಗಳೆಲ್ಲವೂ ಪಾರ್ವತಿಯ ರೂಪಗಳೇ ಆಗಿವೆ.

ಪೂಜೆಯಾದ ಮೇಲೆ ಪ್ರತಿದಿನವೂ (ಎರಡು ವರ್ಷದಿಂದ ಆರಂಭಿಸಿ ಹತ್ತು ವರ್ಷದ ವರೆಗಿನ) ಕುಮಾರಿಯನ್ನು ವಸ್ತ್ರಾಲಂಕಾರ ಭೋಜನಾದಿಗಳಿಂದ ಪೂಜಿಸುವ ರೂಢಿಯಿದೆ. ಬೆಳಗಿನಲ್ಲಿ ಎದ್ದು ಹೊಸ್ತಿಲು ಸಾರಿಸಿ ಪೂಜೆಯ ಸ್ಥಳದಲ್ಲಿ ರಂಗವಲ್ಲಿಯನ್ನು ಬಿಡಿಸುತ್ತಾರೆ.



ಚಿತ್ರ ವಿಚಿತ್ರವಾದ ಹೂಗಳನ್ನು ಸಂಗ್ರಹಿಸಿ ಮಾಲೆಗಳನ್ನು ಕಟ್ಟುತ್ತಾರೆ. ನೀರಾಡಿಸಿದ ಹಾಸಿ ತಟ್ಟೆಯಲ್ಲಿ ಅರಿಸಿನ ಕುಂಕುಮ ಮುಂತಾದವುಗಳಿಂದ ಚಿತ್ರಗಳನ್ನು ಬರೆಯುತ್ತಾರೆ. ನೈವೇದ್ಯಕ್ಕಾಗಿ ಬಗೆ ಬಗೆಯ ಅನ್ನ ಭಕ್ಷ್ಯಗಳನ್ನು ತಯಾರಿಸಿ ಮುಖ್ಯವಾಗಿ ಶಾರದೆಯ ಎಡೆಯನ್ನು ಸಜ್ಜುಗೊಳಿಸುತ್ತಾರೆ. ಕೆಲವರು ಸುಶ್ರಾವ್ಯವಾಗಿ ಹಾಡುಗಳನ್ನು ಹೇಳುತ್ತಾರೆ. ಇದರಲ್ಲಿ ಲಲಿತ ಸಹಸ್ರನಾಮ, ಸೌಂದರ್ಯಲಹರಿ ಮುಂತಾದವುಗಳನ್ನು ಹೇಳುವುದುಂಟು.

ನವರಾತ್ರಿಯ ಹಿಂದಿನ ದಿನವೇ, ಮಹಾಲಯ ಅಮಾವಾಸ್ಯೆಯಂದು ಗೊಂಬೆಗಳನ್ನು ಸ್ವಚ್ಛಗೊಳಿಸಲು ತೆಗೆದಿರಿಸುತ್ತಾರೆ. ಮೊದಲ ದಿನದ ಪೂಜಾ ಪ್ರದರ್ಶನಕ್ಕಾಗಿ ಗೊಂಬೆಗಳನ್ನು ಸ್ಥಾಪಿಸುತ್ತಾರೆ. ಅವುಗಳ ಜೊತೆಗೆ ವಿಳ್ಯದ ಎಲೆಗಳಿಂದ ಮಾಡುವ ಚಿಕ್ಕ ಕಲಶವೂ ಇರುತ್ತದೆ. ಮದುವೆಯ ಸಂದರ್ಭದಲ್ಲಿ ತವರಿನಲ್ಲಿ ಕೊಟ್ಟಿರುವ ಪಟ್ಟದ ಗೊಂಬೆಯನ್ನು ಎಲ್ಲಕ್ಕಿಂತ ಮೊದಲು ಮೇಲಿರಿಸುತ್ತಾರೆ. ಅದರ ಜೊತೆಗೆ ಕಲ್ಪವೃಕ್ಷಗಳು, ದಶಾವತಾರ ರಾಮಾಯಣ-ಮಹಾಭಾರತ ಪಾತ್ರಗಳು, ತ್ರಿಮೂರ್ತಿಗಳು, ಗಣಪತಿಗಳು ಮುಂತಾದವುಗಳೊಂದಿಗೆ, ಹಸು, ಕರು, ಕುದುರೆ, ಆನೆ ಮುಂತಾದ ಪ್ರಾಣಿಗಳೊಂದಿಗೆ ಆಧುನಿಕ ಕ್ರೀಡಾ ಸಾಮಗ್ರಿಗಳೂ ಇರುತ್ತವೆ.

ಇತ್ತೀಚೆಗೆ ಗೊಂಬೆಗಳ ಸ್ಥಾಪನೆಯು ತೀರಾ ಆಕರ್ಷಕವಾಗುತ್ತಿದೆ. ಪ್ರತಿದಿನವೂ ಬೊಂಬೆಗಳನ್ನು ಸಂಜೆ ಪೂಜಿಸಿ ಆರತಿಗೈದು ಮಕ್ಕಳಿಗೆ ಬಗೆ ಬಗೆಯ ತಿನಿಸುಗಳನ್ನು ನೀಡುತ್ತಾರೆ. ಹೆಣ್ಣುಮಕ್ಕಳಿಗೆ ಬಾಗಿನ ಕೊಡುತ್ತಾರೆ.

ನವರಾತ್ರಿಯ ಕೊನೆಯ ಮೂರು ದಿನಗಳು ತುಂಬಾ ಮುಖ್ಯವಾದುವು. ಕೊನೆಯ ಮೂರು ದಿನಗಳಲ್ಲಿ ಪೂಜಿಸಿದರೂ ಶ್ರೀ ದೇವಿಯು ಸಂತುಷ್ಟಳಾಗುತ್ತಾಳೆ. ಅಷ್ಟಮಿಯ ದಿನ ಪೂಜೆ ಮಾಡಿದರೂ ಸಾಕು ಎಂದು ಶಾಸ್ತ್ರದಲ್ಲಿದೆ. ಈ ದಿನಗಳಲ್ಲಿ ಪುಸ್ತಕವನ್ನು ಜೋಡಿಸಿಟ್ಟು ಪೂಜೆ ಮಾಡಿ, ಪ್ರಾರ್ಥನೆ ಪಠಿಸಿ, ಪುಸ್ತಕ ಪಠನ ಮಾಡಿದರೆ ಶಾರದೆಯ ಅನುಗ್ರಹವುಂಟಾಗುತ್ತದೆ ಎಂದು ನಂಬಿಕೆಯಿದೆ.

ನವರಾತ್ರಿಯ ಹಗಲಿನಲ್ಲಿ ಉಪವಾಸ, ರಾತ್ರಿಯ ಪೂಜೆಯಿಂದ ನವರಾತ್ರವಾದರೆ, ವಿಜಯ ದಶಮಿಯಂದು ಮಧ್ಯಾಹ್ನದ ಪೂಜೆಯಿಂದ ಪೂರ್ತಿಯಾಗುತ್ತದೆ. ನವರಾತ್ರಿಯ ಕೊನೆಯ ಮೂರು ದಿನಗಳ ಕಾಲ ಓದುವುದಾಗಲಿ, ಬರೆಯುವುದಾಗಲಿ ಶ್ರೀದೇವಿಗೆ ಇಷ್ಟವಾಗುವುದಿಲ್ಲವಂತೆ. ಆದರೆ ವಿದ್ಯಾದಶಮಿಯಂದು ಅದನ್ನು ಮಾಡದಿದ್ದರೆ ಜಗನ್ಮಾತೆಯು ಹರಸುವುದಿಲ್ಲ. ಈ ಕಾರಣದಿಂದಲೇ ಅಂದು ಶಾರದಾ ಪೂಜೆಯನ್ನು ಶಾಲೆಗಳಲ್ಲಿಯೂ ಏರ್ಪಡಿಸುತ್ತಾರೆ.

ನವರಾತ್ರಿ ಉತ್ಸವ ನಮ್ಮ ನಾಡಹಬ್ಬವೂ ಹೌದು.

ನ್ಯಾಯ ದೊರಕಿಸಿಕೊಡುವುದಾಗಿ ಮುಖ್ಯಮಂತ್ರಿ ಧಾಮಿ ಭರವಸೆ

ಅಂಕಿತಾ ಅಂತ್ಯಕ್ರಿಯೆ: ಪ್ರತಿಭಟನೆ ವಾಪಸ್

ಡೆಹ್ರಾಡೂನ್ (ಪಿಟಿಐ): ಬಿಜೆಪಿ ನಾಯಕನ ಮಗನಿಂದ ಹತ್ಯೆಗೊಳಗಾಗಿದ್ದಾರೆ ಎನ್ನಲಾದ ಇಲ್ಲಿನ ರೆಸಾರ್ಟ್‌ವೊಂದರ ಸ್ವಾಗತಕಾರಿಣಿ ಅಂಕಿತಾ ಭಂಡಾರಿ ಅವರ ಅಂತ್ಯಕ್ರಿಯೆ ಭಾನುವಾರ ನೆರವೇರಿತು.

ನ್ಯಾಯ ದೊರಕಿಸಿಕೊಡುವುದಾಗಿ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಭರವಸೆ ನೀಡಿದ ಬಳಿಕ ಇಲ್ಲಿನ ಪ್ರಮುಖ ಹೆದ್ದಾರಿಯಲ್ಲಿ 8 ಗಂಟೆಗಳಿಂದ ನಡೆಯುತ್ತಿದ್ದ ಪ್ರತಿಭಟನೆಯನ್ನು ಪ್ರತಿಭಟನಕಾರರು ಹಿಂತೆಗೆದುಕೊಂಡರು.

ಶ್ರೀನಗರದ ಅಲಕಾನಂದ ನದಿ ತೀರದಲ್ಲಿ ಭಾನುವಾರ ಸಂಜೆ 6.30ರ ವೇಳೆಗೆ ಅಂಕಿತಾ ಅವರ ಅಂತ್ಯಕ್ರಿಯೆ ನೆರವೇರಿತು. ಗಢ್ವಾಲ್ ಕಮಿಷನರ್ ಸುಶೀಲ್‌ಕುಮಾರ್, ಪೌರಿ ಜಿಲ್ಲಾಧಿಕಾರಿ ವಿಜಯಕುಮಾರ್ ಜೋಗ್‌ದಂಡೆ ಹಾಗೂ ಕುಟುಂಬಸ್ಥರ ಸಮ್ಮುಖದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಅಂಕಿತಾ ಶವ ಶನಿವಾರ ಬೆಳಿಗ್ಗೆ ಋಷಿಕೇಶದ ಸಮೀಪವಿರುವ ಚೀಲಾ ಕಾಲುವೆ ಬಳಿ ಸಿಕ್ಕಿತ್ತು. ಆಕೆ ಕಾಣೆಯಾದ ಬಗ್ಗೆ ದೂರು ನೀಡಿ ಆರು ದಿನಗಳ ನಂತರ ದೇಹ ಪತ್ತೆಯಾಗಿತ್ತು.

ಶನಿವಾರ ಮರಣೋತ್ತರ ಪರೀಕ್ಷೆಯ ಬಳಿಕ ಋಷಿಕೇಶದ 'ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್' ಬಿಡುಗಡೆ ಮಾಡಿದ ಪ್ರಾಥಮಿಕ ವರದಿಯಲ್ಲಿ ಅಂಕಿತಾ ಭಂಡಾರಿಯವರ ದೇಹದಲ್ಲಿ ಸಾವಿಗೂ ಮುಂಚೆ ಆದ ಗಾಯಗಳು ಕಂಡುಬಂದಿವೆ. ಆಕೆ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ಹೇಳಲಾಗಿದೆ.

ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ವರದಿ ಪೂರ್ಣವಾಗಿಲ್ಲವೆಂದು ಅಂಕಿತಾ ಪೋಷಕರು ಈ ಹಿಂದೆ ಅಂತ್ಯಸಂಸ್ಕಾರಕ್ಕೆ ನಿರಾಕರಿಸಿದ್ದರು.

'ಎಸ್ಐಟಿ ತನ್ನ ಕೆಲಸವನ್ನು ಮಾಡುತ್ತಿದೆ ಮತ್ತು ಕೊಲೆಗಾರರಿಗೆ ತಕ್ಕ ಶಿಕ್ಷೆಯಾಗುತ್ತದೆ' ಎಂದು ಮುಖ್ಯಮಂತ್ರಿ ಧಾಮಿ ಅವರು ಸಂದೇಶ ಕಳಿಸಿದ ಬಳಿಕ ಪೋಷಕರು ಅಂತಿಮ ಸಂಸ್ಕಾರ ನೆರವೇರಿಸಿದ್ದಾರೆ.

ಅಂಕಿತಾ ಕೆಲಸ ಮಾಡುತ್ತಿದ್ದ ರೆಸಾರ್ಟ್ ಅನ್ನು ಕೆಡವುತ್ತಿರುವ ಕ್ರಮದ ವಿರುದ್ಧವೂ ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದು ಸಾಕ್ಷ್ಯ ನಾಶಪಡಿಸುವ ಪ್ರಯತ್ನವಾಗಿರಬಹುದು ಎಂದು ಅಜಯ್ ಹೇಳಿದ್ದಾರೆ. ಆದರೆ, ಇದನ್ನು ಪೊಲೀಸರು ನಿರಾಕರಿಸಿದ್ದಾರೆ.

ಸಂತ್ರಸ್ತೆ ತಂದೆಗೆ ಭರವಸೆ: 'ಅಂಕಿತಾ ಹಂತಕರನ್ನು ಗಲ್ಲಿಗೇರಿಸಲು ಪೊಲೀಸರು ಸಾಕಷ್ಟು ಪುರಾವೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಿದ್ದಾರೆ' ಎಂದು ಉತ್ತರಾಖಂಡದ ಡಿಜಿಪಿ ಅಶೋಕ್ ಕುಮಾರ್ ಅವರು ಸಂತ್ರಸ್ತೆ ತಂದೆಗೆ ಭರವಸೆ ನೀಡಿದ್ದಾರೆ. 'ಆರೋಪಿಗಳು ತಪ್ಪಿತಸ್ಥರು ಎಂದು ಸಾಬೀತುಪಡಿಸಲು ನಮ್ಮ ಬಳಿ ಸಾಕಷ್ಟು ಪುರಾವೆಗಳಿವೆ' ಎಂದು ಹೆಚ್ಚುವರಿ ಎಸ್ಪಿ ಕೋಟ್‌ದ್ವಾರ್ ಶೇಖರ್‌ಚಂದ್ರ ಸುಯಲ್ ಅವರು ತಿಳಿಸಿದ್ದಾರೆ.


ಅಂಕಿತಾ ಭಂಡಾರಿ ಕೊಲೆ ಖಂಡಿಸಿ ಸ್ಥಳೀಯರು ಋಷಿಕೇಶ–ಬದರಿನಾಥ ಹೆದ್ದಾರಿ ಬಂದ್ ಮಾಡಿ ಭಾನುವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಒಡಿಶಾ: ಗೋವಿಂದಪುರ ಈಗ 'ಪಕ್ಷಿಗಳ ಹಳ್ಳಿ'

ಸಂಬಲ್‌ಪುರ: ಹಿರಾಕುಡ್ ಜಲಾಶಯ ಪ್ರದೇಶಕ್ಕೆ ಸಂತಾನೋತ್ಪತ್ತಿ ಮತ್ತು ವಲಸೆಯ ಅವಧಿಯಲ್ಲಿ ಬರುವ ಪಕ್ಷಿಗಳನ್ನು ರಕ್ಷಿಸಲು ಗೋವಿಂದಪುರ ಗ್ರಾಮದ ನಿವಾಸಿಗಳು ನಿರತರಾಗಿರುವುದರಿಂದ ಒಡಿಶಾದ ಈ ಗ್ರಾಮವು ಈಗ 'ಪಕ್ಷಿಗಳ ಗ್ರಾಮ' ಎಂದು ಘೋಷಿಸಲ್ಪಟ್ಟಿದೆ.

ಬರ್ಗಢ್ ಜಿಲ್ಲೆಯ ಹಿರಾಕುಡ್ ಸರೋವರದ ಬಳಿ ಇರುವ ಲಖನ್‌ಪುರ್ ವನ್ಯಜೀವಿ ವ್ಯಾಪ್ತಿಯ ಗ್ರಾಮಸ್ಥರು ಅತಿಥಿ ಹಕ್ಕಿಗಳಿಗಾಗಿ ತಮ್ಮ ಸುತ್ತಲಿನ ಪ್ರದೇಶವನ್ನು ಮಾಲಿನ್ಯಮುಕ್ತವಾಗಿರಿಸುವ ಭರವಸೆ ನೀಡಿದ್ದಾರೆ. ಹಿರಾಕುಡ್ ವನ್ಯಜೀವಿ ವಿಭಾಗದ ಮಾರ್ಗದರ್ಶನದಲ್ಲಿ ಗ್ರಾಮಸ್ಥರು ಈ ಕ್ರಮ ಕೈಗೊಂಡಿದ್ದಾರೆ.

ಇಂದು ಸಿಯುಇಟಿ–ಪಿಜಿ ಫಲಿತಾಂಶ

ನವದೆಹಲಿ (ಪಿಟಿಐ): ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕಿರುವ ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆಯ (ಸಿಯುಇಟಿ–ಪಿಜಿ) ಫಲಿತಾಂಶ ಸೆಪ್ಟೆಂಬರ್ 26 ರಂದು ಸಂಜೆ 4 ಗಂಟೆಗೆ ಪ್ರಕಟಗೊಳ್ಳಲಿದೆ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಜಗದೀಶ್ ಕುಮಾರ್ ಹೇಳಿದ್ದಾರೆ.

'ಅಟಾರ್ನಿ ಜನರಲ್: ಕೇಂದ್ರದ ಬೇಡಿಕೆ ತಿರಸ್ಕರಿಸಿದ್ದೆ'


ಮುಕುಲ್ ರೋಹಟಗಿ

ನವದೆಹಲಿ (ಪಿಟಿಐ): 'ದೇಶದ ಮುಂದಿನ ಅಟಾರ್ನಿ ಜನರಲ್ ಆಗಿ ನೇಮಿಸುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ ನನ್ನ ಎದುರು ಇಟ್ಟಿತ್ತು. ಅದನ್ನು ತಿರಸ್ಕರಿಸಿದ್ದೆ' ಎಂದು ಹಿರಿಯ ವಕೀಲ ಮುಕುಲ್ ರೋಹಟಗಿ ಭಾನುವಾರ ಹೇಳಿದ್ದಾರೆ.

'ನನ್ನ ಈ ನಿರ್ಧಾರದ ಹಿಂದೆ ಯಾವುದೇ ನಿರ್ದಿಷ್ಟ ಕಾರಣ ಇಲ್ಲ' ಎಂದು ಅವರು ತಿಳಿಸಿದ್ದಾರೆ.

ಸದ್ಯ ದೇಶದ ಅಟಾರ್ನಿ ಜನರಲ್ ಆಗಿರುವ ಕೆ.ಕೆ.ವೇಣುಗೋಪಾಲ್ (91) ಅವರ ಅಧಿಕಾರಾವಧಿಯು ಇದೇ 30ರಂದು ಮುಕ್ತಾಯವಾಗಲಿದೆ. ಹೀಗಾಗಿ ಕೇಂದ್ರವು ಈ ಹುದ್ದೆಗೆ ರೋಹಟಗಿ ಅವರನ್ನು ನೇಮಿಸಲು ತೀರ್ಮಾನಿಸಿತ್ತು. ರೋಹಟಗಿ ಅವರು 2014ರ ಜೂನ್‌ನಿಂದ 2017ರ ಜೂನ್‌ವರೆಗೂ ಅಟಾರ್ನಿ ಜನರಲ್ ಆಗಿ ಕಾರ್ಯ ನಿರ್ವಹಿಸಿದ್ದರು.

ಇಂದಿನಿಂದ ಮೂರು ದಿನ ರಾಜ್ಯದಲ್ಲಿ ರಾಷ್ಟ್ರಪತಿ ಪ್ರವಾಸ


ದ್ರೌಪದಿ ಮುರ್ಮು

ನವದೆಹಲಿ (ಪಿಟಿಐ): 'ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರದಿಂದ ಬುಧವಾರದವರೆಗೆ (ಸೆಪ್ಟೆಂಬರ್ 26ರಿಂದ 28) ರಾಜ್ಯಕ್ಕೆ ಭೇಟಿ ನೀಡಲಿದ್ದು, ವಿವಿಧ ಸಮಾರಂಭಗಳಲ್ಲಿ ಭಾಗವಹಿಸಲಿದ್ದಾರೆ.

ಈ ಬಗ್ಗೆ ಭಾನುವಾರ ಅಧಿಕೃತ ಪ್ರಕಟಣೆಯನ್ನು ಹೊರಡಿಸಿರುವ ರಾಷ್ಟ್ರಪತಿ ಭವನ, 'ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ ನಂತರ, ಮುರ್ಮು ಅವರು ಭೇಟಿ ನೀಡುತ್ತಿರುವ ಮೊದಲ ರಾಜ್ಯ ಕರ್ನಾಟಕವಾಗಿದೆ' ಎಂದು ಹೇಳಿದೆ.

'ಸೋಮವಾರ ಮುರ್ಮು ಅವರು ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ದಸರಾ ಹಬ್ಬಕ್ಕೆ ಚಾಲನೆ ನೀಡಲಿದ್ದಾರೆ. ನಂತರ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಆಯೋಜಿಸಿರುವ 'ಪೌರ ಸನ್ಮಾನ' ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಈ ಕಾರ್ಯಕ್ರಮಗಳ ಬಳಿಕ ಧಾರವಾಡದಲ್ಲಿರುವ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಹೊಸ ಕ್ಯಾಂಪಸ್ ಅನ್ನು ಉದ್ಘಾಟಿಸಲಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

'ಮಂಗಳವಾರದಂದು ಬೆಂಗಳೂರಿನಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ ಇಂಟಗ್ರೇಟೆಡ್ ಕ್ರಯೋಜೆನಿಕ್ ಎಂಜಿನ್ಸ್ ಮ್ಯಾನುಫ್ಯಾಕ್ಚರಿಂಗ್ ಫೆಸಿಲಿಟಿಯನ್ನು ಉದ್ಘಾಟಿಸಲಿದ್ದಾರೆ. ನಂತರ ವಿಡಿಯೊ ಕಾನ್ಫರೆನ್ಸ್ ಮೂಲಕ ವೈರಾಲಜಿಯ ವಲಯ ಸಂಸ್ಥೆಯ (ದಕ್ಷಿಣ ವಲಯ) ಶಿಲಾನ್ಯಾಸ ನೆರವೇರಿಸಲಿದ್ದಾರೆ' ಎಂದು ಮಾಹಿತಿ ನೀಡಿದೆ.

'ಬಳಿಕ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಉದ್ಘಾಟನಾ ಸಮಾರಂಭದಲ್ಲಿ ಭಾಗಿಯಾಗುವರು. ಕರ್ನಾಟಕ ಸರ್ಕಾರವು ತಮ್ಮ ಗೌರವಾರ್ಥವಾಗಿ ನಡೆಸಲಿರುವ ಪೌರ ಸನ್ಮಾನ ಕಾರ್ಯಕ್ರಮದಲ್ಲೂ ಮುರ್ಮು ಅವರು ಪಾಲ್ಗೊಳ್ಳುವರು. ಬುಧವಾರ ದೆಹಲಿಗೆ ವಾಪಸ್ಸಾಗುವರು' ಎಂದು ಪ್ರಕಟಣೆ ಹೇಳಿದೆ.

ತಿರುಮಲ: ವಿಐಪಿ ದರ್ಶನ ಸಮಯದಲ್ಲಿ ಬದಲಾವಣೆ

ವಸತಿ ಹಂಚಿಕೆ ತಿರುಪತಿಗೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಸಾಮಾನ್ಯ ಯಾತ್ರಿಗಳಿಗೆ ವೆಂಕಟೇಶ್ವರ ದೇವರ ದರ್ಶನ ಸುಲಭವಾಗಿ ಸಿಗುವಂತಾಗಬೇಕು ಎಂಬ ಉದ್ದೇಶದಿಂದ ತಿರುಪತಿ ತಿರುಮಲ ದೇವಸ್ಥಾನ ವಿಶ್ವಸ್ಥ ಮಂಡಳಿ (ಟಿಟಿಡಿ), ದರ್ಶನಕ್ಕೆ ಸಂಬಂಧಿಸಿದ ವ್ಯವಸ್ಥೆ ಹಾಗೂ ಸಮಯದಲ್ಲಿ ಹಲವು ಬದಲಾವಣೆಗಳನ್ನು ಮಾಡಿದೆ.

ಯಾತ್ರಿಗಳಿಗೆ ವಸತಿ ಸೌಲಭ್ಯವನ್ನು ಹಂಚಿಕೆ ಮಾಡುವ ವ್ಯವಸ್ಥೆಯನ್ನು ತಿರುಮಲದಿಂದ ತಿರುಪತಿಗೆ ಸ್ಥಳಾಂತರಿಸಲು ಟಿಟಿಡಿ ನಿರ್ಧರಿಸಿದೆ. ತಿರುಮಲದಲ್ಲಿ ಶನಿವಾರ ನಡೆದ ಮಂಡಳಿಯ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ.

ಗಣ್ಯರಿಗಾಗಿ ಜಾರಿಯಲ್ಲಿದ್ದ ದರ್ಶನದ ಸಮಯವನ್ನು ಬೆಳಿಗ್ಗೆ 5.30ರ ಬದಲಾಗಿ 10ಕ್ಕೆ ಆರಂಭಿಸಲು ಸಹ ಮಂಡಳಿ ನಿರ್ಧರಿಸಿದೆ. ದೇವಸ್ಥಾನದಲ್ಲಿನ ನಿತ್ಯದ ಧಾರ್ಮಿಕ ವಿಧಿ–ವಿಧಾನಗಳ ಕಾರಣಗಳಿಂದಾಗಿ ಗಣ್ಯ ವ್ಯಕ್ತಿಗಳು ಬೆಳಿಗ್ಗೆ 8 ಇಲ್ಲವೇ 9 ಗಂಟೆ ವರೆಗೆ ದೇವರ ದರ್ಶನ ಪಡೆಯುತ್ತಿದ್ದರು. ಈ ಕಾರಣಗಳಿಂದಾಗಿಯೂ ಸಾಮಾನ್ಯ ಯಾತ್ರಿಗಳಿಗೆ ಸಮಸ್ಯೆಯಾಗುತ್ತಿತ್ತು. ಗಣ್ಯರು ದೇವರ ದರ್ಶನ ಮುಗಿಸಿ ಬರುವವರಗೆ ಸಾಮಾನ್ಯ ಯಾತ್ರಿಗಳು ಗಂಟೆಗಟ್ಟಲೆ ಕಂಪಾರ್ಟ್‌ಮೆಂಟ್‌ಗಳಲ್ಲಿ ಮತ್ತು ಸರದಿಯಲ್ಲಿ ಕಾಯಬೇಕಾಗುತ್ತಿತ್ತು.

'ಈ ಬದಲಾವಣೆಗಳನ್ನು ಅಕ್ಟೋಬರ್‌ನಿಂದ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುತ್ತದೆ' ಎಂದು ಟಿಟಿಡಿ ಚೇರಮನ್ ವೈ.ವಿ.ಸುಬ್ಬಾರೆಡ್ಡಿ ಹೇಳಿದ್ದಾರೆ.

ವಸತಿ ವ್ಯವಸ್ಥೆ: 'ಮಂಡಳಿಯು 7,500 ಕೋಣೆಗಳನ್ನು ಹೊಂದಿದ್ದು, ನಿಯಮಿತ ಸಂಖ್ಯೆಯ ಯಾತ್ರಿಗಳಿಗೆ ವಸತಿ ಸೌಲಭ್ಯ ಕಲ್ಪಿಸಲು ಇಷ್ಟು ಸಂಖ್ಯೆಯ ಕೋಣೆಗಳು ಸಾಕಾಗುತ್ತವೆ' ಎಂದು ಟಿಟಿಡಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಅನೇಕ ಸಂದರ್ಭಗಳಲ್ಲಿ, ಯಾತ್ರಿಗಳು ತಿರುಮಲಕ್ಕೆ ಬಂದಾದ ಮೇಲೆ, ಕೋಣೆಗಳು ಖಾಲಿಯಾಗಿ, ತಮಗೆ ಹಂಚಿಕೆಯಾಗುವವರೆಗೆ ಕಾಯಬೇಕಾಗುತ್ತಿತ್ತು. ಈ ತೊಂದರೆಯನ್ನು ತಪ್ಪಿಸುವ ಸಲುವಾಗಿ ವಸತಿ ಸೌಲಭ್ಯ ಹಂಚಿಕೆ ಮಾಡುವ ಕೇಂದ್ರೀಯ ವ್ಯವಸ್ಥೆಯ ಕಚೇರಿಯನ್ನು ತಿರುಪತಿಗೆ ಸ್ಥಳಾಂತರಿಸಲು ನಿರ್ಧರಿಸಲಾಗಿದೆ' ಎಂದು ಅವರು ಹೇಳಿದರು.

'ತಿರುಮಲದಲ್ಲಿ ವಸತಿ ಸೌಲಭ್ಯ ಸಿಗುವುದು ತಡವಾಗುತ್ತಿದ್ದಲ್ಲಿ, ತಿರುಪತಿಯಲ್ಲಿ ಪರ್ಯಾಯ ವಸತಿ ವ್ಯವಸ್ಥೆ ಮಾಡಿಕೊಳ್ಳಲು ಯಾತ್ರಿಗಳಿಗೆ ಅನುಕೂಲವಾಗುವುದು'

'ಶ್ವೇತಪತ್ರ ಶೀಘ್ರ': 'ಮಂಡಳಿಯು ಹೊಂದಿರುವ ಸ್ವತ್ತುಗಳ ವಿವರಗಳನ್ನು ಒಳಗೊಂಡ ಶ್ವೇತಪತ್ರವನ್ನು ಟಿಟಿಡಿಯ ವೆಬ್‌ಸೈಟ್‌ನಲ್ಲಿ ಶೀಘ್ರವೇ ಪ್ರಕಟಿಸಲಾಗುವುದು' ಎಂದು ಸುಬ್ಬಾರೆಡ್ಡಿ ತಿಳಿಸಿದ್ದಾರೆ.

'7,123 ಎಕರೆಯಲ್ಲಿ ಅಂದಾಜು ₹ 85,705 ಕೋಟಿ ಮೌಲ್ಯದ 960 ಸ್ವತ್ತುಗಳನ್ನು ಟಿಟಿಡಿ ಹೊಂದಿದೆ' ಎಂದೂ ಅವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ನಿತ್ಯ 10 ಲಕ್ಷ ಆಯುಷ್ಮಾನ್ ಭಾರತ ಕಾರ್ಡ್ ನೀಡಿಕೆ'

ನವದೆಹಲಿ (ಪಿಟಿಐ): 'ಆಯುಷ್ಮಾನ್ ಭಾರತ– ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಅಡಿಯಲ್ಲಿ ಪ್ರತಿ ದಿನ 10 ಲಕ್ಷ ಆಯುಷ್ಮಾನ್ ಭಾರತ ಕಾರ್ಡುಗಳನ್ನು ನೀಡಬೇಕು ಎಂಬ ಗುರಿಯನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದೆ' ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಹೇಳಿದರು.

ನಾಲ್ಕು ವರ್ಷ ಪೂರೈಸಿದ ಆಯುಷ್ಮಾನ್ ಭಾರತ–ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಹಾಗೂ ಒಂದು ವರ್ಷ ಪೂರೈಸಿದ ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್ ಯೋಜನೆಗಳ ಸಂಬಂಧ ನಡೆದ 'ಆರೋಗ್ಯ ಮಂಥನ್ 2022' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

5,000ಕ್ಕೂ ಹೆಚ್ಚು ಉಗ್ರರ ಬಂಧನ: ಒಬ್ಬ ಮಾತ್ರ ದೋಷಿ

ಗುವಾಹಟಿ (ಪಿಟಿಐ): ಕಳೆದ 12 ವರ್ಷಗಳಲ್ಲಿ ಅಸ್ಸಾಂನ ವಿವಿಧ ಭಾಗಗಳಲ್ಲಿ ಒಟ್ಟು 5,202 ಭಯೋತ್ಪಾದಕರನ್ನು ಬಂಧಿಸಲಾಗಿದೆ. ಆದರೆ ಈ ಪೈಕಿ ಒಬ್ಬನನ್ನು ಮಾತ್ರ ದೋಷಿ ಎಂದು ತೀರ್ಮಾನಿಸಲಾಗಿದೆ ಎಂದು ಅಧಿಕೃತ ದಾಖಲೆಗಳು ತಿಳಿಸಿವೆ. ಬಂಧಿತರ ಪೈಕಿ ಕೇವಲ ಅರ್ಧದಷ್ಟು ಅಂದರೆ 2,606 ಮಂದಿ ವಿರುದ್ಧ ಮಾತ್ರ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ. ಬಹುತೇಕ ಪ್ರಕರಣಗಳು ವಿಚಾರಣಾ ಹಂತದಲ್ಲಿವೆ ಎಂದು ತಿಳಿಸಿದೆ.

ವಿವಿಧ ಹಂತಗಳಲ್ಲಿ ತನಿಖಾಧಿಕಾರಿಗಳು ಮತ್ತು ಕಾನೂನು ವ್ಯವಸ್ಥೆಯಲ್ಲಿರುವ ದೋಷವೇ ಈ ವಿಳಂಬಕ್ಕೆ ಕಾರಣ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

₹15 ಕೋಟಿ ವಂಚನೆ: ಬಂಧನ

ನವದೆಹಲಿ (ಪಿಟಿಐ): 'ವಿವಿಧ ರಾಜ್ಯಗಳಿಗೆ ಕೋವಿಡ್ ಲಸಿಕೆ ಸಾಗಣೆ ಮಾಡುವ ಸಂಬಂಧ ಸರ್ಕಾರದಿಂದ ಕಾರ್ಯಾದೇಶ ಕೊಡಿಸುವುದಾಗಿ ನಂಬಿಸಿ ₹15 ಕೋಟಿ ಹಣ ಪಡೆದು ವಂಚಿಸಿದ್ದ ಐವರನ್ನು ಆರ್ಥಿಕ ಅಪರಾಧ ವಿಭಾಗದ ಅಧಿಕಾರಿಗಳು ಬಂಧಿಸಿದ್ದಾರೆ. ಆರೋಪಿಗಳ ಪೈಕಿ ಇಬ್ಬರು ಕೇಂದ್ರ ಆರೋಗ್ಯ ಸಚಿವಾಲಯದ ಸಿಬ್ಬಂದಿಯಾಗಿದ್ದಾರೆ' ಎಂದು ದೆಹಲಿ ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಅಧಿವೇಶನಕ್ಕೆ ರಾಜ್ಯಪಾಲರ ಒಪ್ಪಿಗೆ, ಬಿಕ್ಕಟ್ಟು ಶಮನ

ಚಂಡೀಗಢ: ವಿಧಾನಸಭೆ ಅಧಿವೇಶನ ನಡೆಸುವ ಕುರಿತು ಇಲ್ಲಿನ ಆಡಳಿತಾರೂಢ ಎಎಪಿ ಸರ್ಕಾರ ಹಾಗೂ ರಾಜಭವನದ ನಡುವಿನ ವಾಗ್ವಾದದ ಬಳಿಕ, ಪಂಜಾಬ್ ರಾಜ್ಯಪಾಲ ಬನ್ವಾರಿಲಾಲ್ ಅವರು ಸೆ. 27ರಂದು ಅಧಿವೇಶನ ಕರೆಯಲು ಒಪ್ಪಿಗೆ ನೀಡಿದ್ದಾರೆ. ಅಧಿವೇಶನದಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ಎಎಪಿ ಸರ್ಕಾರವು ಮಾಹಿತಿ ನೀಡಿದ ಒಂದು ದಿನದ ನಂತರ ಅಧಿವೇಶನಕ್ಕೆ ಅನುಮೋದನೆ ದೊರೆತಿದೆ.

ಕಾಂಗ್ರೆಸ್ ಅಧ್ಯಕ್ಷ ಗಾದಿ: ಸ್ವಾತಂತ್ರ್ಯ ನಂತರ 4ನೇ ಬಾರಿ ಚುನಾವಣೆ

ನವದೆಹಲಿ (ಪಿಟಿಐ): ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎಐಸಿಸಿ) ಅಧ್ಯಕ್ಷ ಗಾದಿಗೆ ಸ್ವಾತಂತ್ರ್ಯ ನಂತರದಲ್ಲಿ ನಾಲ್ಕನೇ ಬಾರಿ ಚುನಾವಣೆ ನಿಗದಿಯಾಗಿದೆ.

ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ವಾದ್ರಾ ಅವರು ಅಧ್ಯಕ್ಷ ಸ್ಥಾನದಿಂದ ದೂರ ಉಳಿಯಲು ನಿರ್ಧರಿಸಿದ್ದಾರೆ. ಹೀಗಾಗಿ 24 ವರ್ಷಗಳ ನಂತರ ಗಾಂಧಿ ಕುಟುಂಬದವರನ್ನು ಬಿಟ್ಟು ಬೇರೊಬ್ಬರಿಗೆ ಈ ಹುದ್ದೆಯನ್ನು ಅಲಂಕರಿಸುವ ಅವಕಾಶ ಒಲಿದಿದೆ.

ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ಈಗಾಗಲೇ ಘೋಷಿಸಿದ್ದಾರೆ. ಅವರಿಗೆ ತಿರುವನಂತಪುರ ಕ್ಷೇತ್ರದ ಸಂಸದ ಶಶಿ ತರೂರ್ ಅವರಿಂದ ಸ್ಪರ್ಧೆ ಎದುರಾಗುವ ನಿರೀಕ್ಷೆ ಇದೆ.

1950ರಲ್ಲಿ ಮೊದಲ ಬಾರಿಗೆ ಅಧ್ಯಕ್ಷ ಸ್ಥಾನಕ್ಕಾಗಿ ಚುನಾವಣೆ ನಡೆದಿತ್ತು. ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಬೆಂಬಲಿತ ಅಭ್ಯರ್ಥಿ ಆಚಾರ್ಯ ಕೃಪಲಾನಿ ಹಾಗೂ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ನಂಬಿಕಸ್ಥರಾಗಿದ್ದ ಪುರುಷೋತ್ತಮ್ ದಾಸ್ ಟಂಡನ್ ಕಣಕ್ಕಿಳಿದಿದ್ದರು.

ಆಗ ಟಂಡನ್ 1,306 ಮತಗಳನ್ನು ಪಡೆದು ಗೆದ್ದಿದ್ದರು. ಅದಾಗಿ 47 ವರ್ಷಗಳ ನಂತರ (1997) ಎರಡನೇ ಬಾರಿ ಚುನಾವಣೆ ನಿಗದಿಯಾಗಿತ್ತು. ಆಗ ಸೀತಾರಾಂ ಕೇಸರಿ, ಶರದ್ ಪವಾರ್ ಮತ್ತು ರಾಜೇಶ್ ಪೈಲಟ್ ಕಣದಲ್ಲಿದ್ದರು. ಕೇಸರಿ ಅವರು 6,224 ಮತಗಳನ್ನು ಪಡೆದು ವಿಜಯಿಯಾಗಿದ್ದರು.

2000ರಲ್ಲಿ ಸೋನಿಯಾ ಗಾಂಧಿ ಹಾಗೂ ಜಿತೇಂದ್ರ ಪ್ರಸಾದ ಕಣಕ್ಕಿಳಿದಿದ್ದರು. ಆಗ ಸೋನಿಯಾ 7,400ಕ್ಕೂ ಅಧಿಕ ಮತಗಳನ್ನು ಪಡೆದರೆ, ಪ್ರಸಾದ ಅವರಿಗೆ 94 ಮತಗಳಷ್ಟೇ ಲಭಿಸಿದ್ದವು.

ಎಸ್‌ಡಿಪಿಐ ಕಾರ್ಯಕರ್ತರ ಸೆರೆ

ಕೊಯಮತ್ತೂರು (ತಮಿಳುನಾಡು): ಬಿಜೆಪಿ ಮತ್ತು ಹಿಂದೂ ಮುಖಂಡರ ಮನೆಗಳಿಗೆ ಪೆಟ್ರೋಲ್ ಬಾಂಬ್ ಎಸೆದ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಎಸ್‌ಡಿಪಿಐ ಕಾರ್ಯಕರ್ತರನ್ನು ಇಲ್ಲಿನ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಸಿಸಿಟಿವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿ ಆರೋಪಿಗಳನ್ನು ಬಂಧಿಸಲಾಗಿದೆ.

ಗೋವಾದ ದಿನಗೂಲಿ ನೌಕರ ಬಿಪಿನ್‌ನಿಂದ ತಯಾರಿ

ಅಂಗವಿಕಲ ಮಗಳಿಗಾಗಿ ರೊಬೋಟ್ ಅಭಿವೃದ್ಧಿ

ಪಣಜಿ (ಪಿಟಿಐ): ಗೋವಾದ ದಿನಗೂಲಿ ನೌಕರ ಬಿಪಿನ್ ಕದಮ್ ಎಂಬುವವರು ಅಂಗವಿಕಲ ಮಗಳಿಗೆ ಆಹಾರ ಕೊಡುವುದಕ್ಕಾಗಿ ರೊಬೋಟ್ ಅಭಿವೃದ್ಧಿಪಡಿಸಿದ್ದಾರೆ.

ಬಿಪಿನ್ ಅವರ ಪತ್ನಿ ಅಸ್ವಸ್ಥಗೊಂಡಿದ್ದು, ಮಗಳಿಗೆ ಆಹಾರ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದ ಬೇಸರಗೊಂಡ ಅವರು ರೊಬೋಟ್ ಸಿದ್ಧಪಡಿಸಿದ್ದಾರೆ.

ದಕ್ಷಿಣ ಗೋವಾದ ಪೊಂಡಾ ತಾಲ್ಲೂಕಿನ ಬೆತೋರಾ ಗ್ರಾಮದ ಬಿಪಿನ್ ಅವರಿಗೆ ತಂತ್ರಜ್ಞಾನದ ಬಗ್ಗೆ ಹೆಚ್ಚಿನ ಜ್ಞಾನ ಇರಲಿಲ್ಲ, ರೋಬೊಟ್ ತಯಾರಿಗೆ ಅವರು ಯಾರ ಸಹಾಯವನ್ನೂ ಪಡೆದಿರಲಿಲ್ಲ ಎನ್ನಲಾಗಿದೆ.

ಹೇಗೆ ಕೆಲಸ ಮಾಡುತ್ತದೆ 'ಮಾ ರೊಬೋಟ್'?: ಅಂದಹಾಗೆ, ರೋಬೊಟ್ ಗೆ 'ಮಾ ರೋಬೊಟ್' ಎಂದು ಹೆಸರಿಡಲಾಗಿದೆ. ಬಿಪಿನ್ ಅವರ ಮಗಳಿಗೆ ಕೈಗಳನ್ನು ಆಚೀಚೆ ಮಾಡಬಲ್ಲ ಮತ್ತು ಎತ್ತುವ ಶಕ್ತಿ ಇಲ್ಲ. ಹೀಗಾಗಿ ಆಕೆಗೆ ಏನು ಬೇಕೋ ಆಯಾ ಆಹಾರವನ್ನು ತಟ್ಟೆಯಲ್ಲಿಟ್ಟು ಬಾಯಿಗೆ ಕೊಡುವ ಕೆಲಸವನ್ನು ಈ ರೊಬೋಟ್ ಮಾಡುತ್ತದೆ. ರೋಬೊಟ್ 'ವಾಯ್ಸ್ ಕಮಾಂಡ್' ತಂತ್ರಜ್ಞಾನ ಹೊಂದಿದೆ. ಆಕೆ ಏನು ಬೇಕು ಎಂಬುದನ್ನು ಹೇಳಿದ ಕೂಡಲೇ ರೋಬೊಟ್ ಅದನ್ನು ಕೊಡುವ ಕೆಲಸ ಮಾಡುತ್ತದೆ.

'14 ವರ್ಷದ ಮಗಳ ಕೈಗಳಿಗೆ ಶಕ್ತಿ ಇಲ್ಲ. ಆಕೆ ಊಟ ಮಾಡಬೇಕಿದ್ದರೆ ಸಂಪೂರ್ಣವಾಗಿ ಅಮ್ಮನನ್ನೇ ಅವಲಂಬಿಸಿದ್ದಳು. ಎರಡು ವರ್ಷಗಳ ಹಿಂದೆ ಪತ್ನಿಯೂ ಅನಾರೋಗ್ಯದಿಂದ ಹಾಸಿಗೆ ಹಿಡಿದಳು. ಮಗಳಿಗೆ ಊಟ ಕೊಡಲಾಗದೆ ಬೇಸರದಿಂದ ಅಳುತ್ತಿದ್ದಳು. ನಾನು ಕೂಲಿ ಕೆಲಸ ಮುಗಿಸಿ ಬಂದು ಮಗಳಿಗೆ ಊಟ ಕೊಡಬೇಕಾಗುತ್ತಿತ್ತು' ಎಂದು ಬಿಪಿನ್ ಹೇಳಿದ್ದಾರೆ.

ವರ್ಷದ ಹಿಂದೆ ರೊಬೋಟ್ ಬಗ್ಗೆ ಯೋಚನೆ ಬಂತು. ಆದರೆ, ಮಗಳಿಗೆ ಊಟ ಕೊಡಬಲ್ಲಂತಹ ರೋಬೊಟ್ ಎಲ್ಲೂ ಸಿಗಲಿಲ್ಲ. ಹೀಗಾಗಿ ಅಂಥ ರೊಬೋಟ್ ಅನ್ನು ನಾನೇ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲು ಮುಂದಾದೆ ಎಂದಿದ್ದಾರೆ ಬಿಪಿನ್.

'ರೊಬೋಟ್ ಮಾಡುವ ಬಗ್ಗೆ ಸತತ ಅಧ್ಯಯನ ನಡೆಸಿದೆ. ದಿನದ 12 ಗಂಟೆ ಕೆಲಸ ಮಾಡುತ್ತಿದ್ದೆ. ಒಂದು ತಿಂಗಳ ಕಾಲ ಸತತ ಅನ್ವೇಷಣೆ ನಡೆಸಿ ಈ ರೊಬೋಟ್‌ನ ವಿನ್ಯಾಸ ಸಿದ್ಧಪಡಿಸಿದೆ. ಇದೀಗ ಕೆಲಸ ಮುಗಿಸಿ ಮನೆಗೆ ಮರಳುವಾಗ ಮಗಳು ಊಟ ಮಾಡಿರುತ್ತಾಳೆ. ಖುಷಿಯಾಗಿದೆ' ಎಂದು ಬಿಪಿನ್ ಹೇಳಿದ್ದಾರೆ.

'ಗೋವಾ ರಾಜ್ಯ ಆವಿಷ್ಕಾರ ಮಂಡಳಿ' ಬಿಪಿನ್ ಕಾಡಮ್ ಅವರ ಸಾಧನೆಯನ್ನು ಶ್ಲಾಘಿಸಿದ್ದು, ರೊಬೋಟ್‌ಗೆ ಸಂಬಂಧಿಸಿ ಇನ್ನಷ್ಟು ಆವಿಷ್ಕಾರ ಮಾಡುವುದಕ್ಕಾಗಿ ಹಣಕಾಸು ನೆರವು ಒದಗಿಸುವ ಭರವಸೆ ನೀಡಿದೆ.



ವ್ಯಾಪಾರ ಕೌಶಲ ಕಲಿಸುವ

ಎಂಬಿಎ ಉದ್ಯಮಶೀಲತೆ

ಡಾ. ಗಿರೀಶ ಯರಲಕಟ್ಟಿ ಮಠ

ಉದ್ಯಮ ನಡೆಸಲು ಅನುಭವದ ಜೊತೆಗೆ, ವ್ಯಾಪಾರದ ಕೌಶಲ, ತಂತ್ರಗಾರಿಕೆ, ಹಣಕಾಸು ನಿರ್ವಹಣೆ, ಮಾರುಕಟ್ಟೆಯ ಆಳ-ಅಗಲ... ಹೀಗೆ ಹಲವು ಜ್ಞಾನ ಅಗತ್ಯ. ಅಂತ ಎಲ್ಲ ಕೌಶಲ-ಜ್ಞಾನವನ್ನು ನೀಡುತ್ತದೆ ಮಾಸ್ಟರ್ಸ್ ಆಫ್ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ (MBA in Entrepreneurship) ಪ್ರೋಗ್ರಾಂ.

ಈ ಎಂಬಿಎ(ಉದ್ಯಮಶೀಲತೆ) ಕೋರ್ಸ್ ವಿದ್ಯಾರ್ಥಿಗಳಿಗೆ ಯಶಸ್ವಿ ಉದ್ಯಮಿಯಾಗಲು ಅಗತ್ಯವಿರುವ ಜ್ಞಾನ, ಕೌಶಲ ಮತ್ತು ನೆಟ್‌ವರ್ಕಿಂಗ್ (ಸಂಪರ್ಕ) ಜೊತೆಗೆ, ವ್ಯಾಪಾರದ ಪರಿಕಲ್ಪನೆಗಳನ್ನು ಪರಿಚಯಿಸುತ್ತದೆ. ಹಾಗೆಯೇ ಉದ್ದಿಮೆ ನಡೆಸಲು ಉತ್ತೇಜಿಸುತ್ತಾ, ಅದಕ್ಕೆ ಅಗತ್ಯವಾದ ಶಕ್ತಿ-ಸಾಮರ್ಥ್ಯ ವೃದ್ಧಿಗೆ ಬೇಕಾದ ಜ್ಞಾನವನ್ನು ನೀಡುತ್ತದೆ. ಮಾತ್ರವಲ್ಲ, ಪ್ರತಿಷ್ಠಿತ ಕಂಪನಿಗಳಲ್ಲಿ ಉತ್ತಮ ಮ್ಯಾನೇಜ್‌ಮೆಂಟ್ ಹುದ್ದೆ ಪಡೆದುಕೊಳ್ಳಲು ನೆರವಾಗುತ್ತದೆ.

ಪಠ್ಯಕ್ರಮ

ಎಂಬಿಎ – ಉದ್ಯಮಶೀಲತಾ ಕೋರ್ಸ್‌ನಲ್ಲಿ ಮ್ಯಾನೇಜ್‌ಮೆಂಟ್, ಆರ್ಗನೈಸೇಷನ್ ಬಿಹೇವಿಯರ್, ಮಾನವಸಂಪನ್ಮೂಲ ನಿರ್ವಹಣೆ, ಪ್ರೊಡಕ್ಷನ್ ಆ್ಯಂಡ್ ಆಪರೇಷನ್ ಮ್ಯಾನೇಜ್‌ಮೆಂಟ್, ಎಸ್ಸೆನ್ಶಿಯಲ್ಸ್ ಆಫ್ ಎಂಟರ್‌ಪ್ರನರ್‌ಷಿಪ್, , ಬಿಸಿನೆಸ್ ಕಮ್ಯೂನಿಕೇಷನ್, ಸಂಖ್ಯಾಶಾಸ್ತ್ರ, ಮ್ಯಾನೇಜ್‌ಮೆಂಟ್ ಇನ್‌ಫರ್ಮೇಷನ್ ಸಿಸ್ಟಂ(ಎಂಐಎಸ್), ಮಾರುಕಟ್ಟೆ ನಿರ್ವಹಣೆ, ಲೀಗಲ್ ಆಸ್ಪೆಕ್ಟ್ಸ್ ಆಫ್ ಬಿಸಿನೆಸ್, ಇಂಟರ್‌ನ್ಯಾಷನಲ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ವೆಂಚರ್ ಕ್ರಿಯೇಷನ್, ಸ್ಟ್ರಾಟೆಜಿಕ್ ಮ್ಯಾನೇಜ್‌ಮೆಂಟ್ ಆ್ಯಂಡ್ ಬಿಸಿನೆಸ್ ಪಾಲಿಸಿ ಪಠ್ಯಕ್ರಮಗಳಿವೆ.

ಕೋರ್ಸ್ ಕಲಿಕೆಗೆ ಎಂಥ ಕೌಶಲ ಬೇಕು?

- ಯಾವುದೇ ಕೆಲಸವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಜ್ಞಾನ ಹೊಂದಿರಬೇಕು.
- ವ್ಯಾಪಾರದ ತಂತ್ರಗಾರಿಕೆ ಅರ್ಥ ಮಾಡಿಕೊಳ್ಳುವುದು ಮತ್ತು ಮಾರುಕಟ್ಟೆಯಲ್ಲಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಗುಣವಿರಬೇಕು.
- ಭವಿಷ್ಯದಲ್ಲಿ ತಮ್ಮ ವ್ಯಾಪಾರಕ್ಕೆ ಒದಗಿಬರಬಹುದಾದ ಅಪಾಯ ಎದುರಿಸುವ ಶಕ್ತಿ ಸಾಮರ್ಥ್ಯ ಹೊಂದಿರಬೇಕು.
- ನವ ನವೀನ ಆವಿಷ್ಕಾರಗಳನ್ನು ಮಾರುಕಟ್ಟೆಗೆ ಪರಿಚಯಿಸುವ ಉತ್ಸಾಹವಿರಬೇಕು.
- ಸ್ವಯಂ ಶಿಸ್ತು ಹಾಗೂ ಸಮಗ್ರತೆ ದೃಷ್ಟಿಕೋನ ಅಗತ್ಯ
- ಸಕಾಲದಲ್ಲಿ ಅಗತ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವಿರಬೇಕು.
- ಮಾರುಕಟ್ಟೆ ವಿಶ್ಲೇಷಣಾ ಕೌಶಲವಿರಬೇಕು.

ಕೋರ್ಸ್ ಪರಿಕಲ್ಪನೆ

ಎಂಬಿಎ(ಉದ್ಯಮಶೀಲತಾ) ಕೋರ್ಸ್‌ನಲ್ಲಿ ಎರಡು ವರ್ಷಗಳ (ನಾಲ್ಕು ಸೆಮಿಸ್ಟರ್) ಅವಧಿಯಲ್ಲಿ ಸಾಫ್ಟ್ ಸ್ಕಿಲ್ ಅಂದರೆ, ತಂಡದ ಅಭಿವೃದ್ಧಿ(ಟೀಂ ಡೆವೆಲಪ್‌ಮೆಂಟ್), ಸಂಪರ್ಕ (ನೆಟ್‌ವರ್ಕಿಂಗ್), ಸೃಜನಶೀಲತೆ, ನಾಯಕತ್ವ ಕೌಶಲ, ಉತ್ತಮ ನಿರ್ಧಾರ ತೆಗೆದುಕೊಳ್ಳುವ ಕೌಶಲಗಳು, ಅಂತರ್‌ವ್ಯಕ್ತಿ ಸಂವಹನ ಕೌಶಲಗಳು, ಸಮಾಲೋಚನಾ ಕೌಶಲಗಳು ಸೇರಿದಂತೆ ಉದ್ಯಮಕ್ಕೆ ಅಗತ್ಯವಾದ ಎಲ್ಲಾ ಕೌಶಲಗಳು ಸೇರುತ್ತವೆ. ಇವುಗಳ ಜೊತೆಗೆ, ಯಶಸ್ವಿ ಹಣಕಾಸು ನಿರ್ವಹಣೆ, ನವ ನವೀನ ವಿಧಾನಗಳೊಂದಿಗೆ ಆದಾಯಗಳಿಸುವುದು, ಮಾರುಕಟ್ಟೆ ಸಂಶೋಧನೆ ಮತ್ತು ಸಾಮಾಜಿಕವಾಗಿ ಪ್ರಭಾವ ಬೀರುವ ವಿಷಯಗಳನ್ನು ವಿದ್ಯಾರ್ಥಿಗಳು ಕ್ರಮ ಬದ್ಧವಾಗಿ ಕಲಿಯುತ್ತಾರೆ.

> ಉದ್ಯಮಿಯಾಗುವ ಕನಸಿಗೆ ರೆಕ್ಕೆ ಜೋಡಿಸುವ ಎಂಬಿಎ(ಉದ್ಯಮಶೀಲತೆ) ಕೋರ್ಸ್, ಉದ್ಯಮ ನಡೆಸಲು ಅಗತ್ಯವಿರುವ ಜ್ಞಾನ, ಕೌಶಲ ಮತ್ತು ನೆಟ್‌ವರ್ಕಿಂಗ್ (ಸಂಪರ್ಕ) ಹಾಗೂ ವ್ಯಾಪಾರದ ಪರಿಕಲ್ಪನೆಗಳನ್ನು ಪರಿಚಯಿಸುತ್ತದೆ.

ಈ ಮೇಲೆ ಉಲ್ಲೇಖಿಸಿದ ಎಲ್ಲ ಕೌಶಲಗಳು, ಕೋರ್ಸ್ ಮುಗಿಸಿ ಹೊರ ಬಂದು ನವೋದ್ಯಮಿಗಳಾಗುವವರಿಗೆ ಸ್ಟಾರ್ಟ್ ಅಪ್‌ಗಳನ್ನು ಆರಂಭಿಸಲು ನೆರವಾಗುತ್ತವೆ. ಮಾತ್ರವಲ್ಲ, ಒಬ್ಬ ಯಶಸ್ವಿ ಉದ್ಯಮಿಯಾಗಲು ದಾರಿ ತೋರುತ್ತವೆ.

ವಿದ್ಯಾರ್ಹತೆ

- ಶೇ 45 ಅಂಕಗಳೊಂದಿಗೆ ಯಾವುದೇ ಪದವಿ ಪೂರ್ಣಗೊಳಿಸಿದ ಅಭ್ಯರ್ಥಿಗಳು ಈ ಕೋರ್ಸ್‌ಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.
- ಎಂಬಿಎ ಪ್ರವೇಶಕ್ಕಾಗಿ ನಡೆಸುವ ಜಿಮ್ಯಾಟ್(GMAT), ಎಕ್ಸ್‌ಎಟಿ(XAT) ಮತ್ತು ಮ್ಯಾಟ್(MAT) ಪ್ರವೇಶ ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನೂ ಪರಿಗಣಿಸಲಾಗುತ್ತದೆ. ಆದರೆ, ಎರಡು ವರ್ಷಗಳಿಗಿಂತ ಹಿಂದೆ ಪ್ರವೇಶ ಪರೀಕ್ಷೆ ಪಾಸು ಮಾಡಿದ ಅಂಕಗಳನ್ನು ಪರಿಗಣಿಸುವುದಿಲ್ಲ.

ಎಲ್ಲೆಲ್ಲಿ ಕೋರ್ಸ್‌ಗಳಿವೆ ?

ಭಾರತದಲ್ಲಿ ಎಂಬಿಎ(ಎಂಟರ್‌ಪ್ರನರ್‌ಶಿಪ್) ಕೋರ್ಸ್ ನೀಡುವ ಶಿಕ್ಷಣ ಸಂಸ್ಥೆಗಳು ಹೀಗಿವೆ; ದೇಶದ ಎಲ್ಲ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್(ಐಐಎಂ) ಸಂಸ್ಥೆಗಳಲ್ಲಿ ಈ ಕೋರ್ಸ್ ಕಲಿಸಲಾಗುತ್ತದೆ.

ಅಲ್ಲದೇ ಬೆಂಗಳೂರಿನ ಅಲಯನ್ಸ್ ಅಸೆಂಟ್ಸ್ ಕಾಲೇಜು, ಪುಣೆಯ ಎಂಐಟಿ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಹಾಗೂ ಸಿಂಬಿಯಾಸಿಸ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ರಾಜಸ್ಥಾನದ ಜೈಪುರದ ಸುರೇಶ್ ಜ್ಞಾನ್ ನಿಹಾರ್ ಯೂನಿವರ್ಸಿಟಿ, ಮುಂಬೈನ ಡಿ.ವೈ.ಪಾಟೀಲ್ ಯೂನಿವರ್ಸಿಟಿಯ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್, ಫ್ಲೇಮ್ ವಿಶ್ವವಿದ್ಯಾಲಯ, ಡೆಹ್ರಾಡೂನ್‌ನ ಸ್ಕೂಲ್ ಆಫ್ ಬಿಸಿನೆಸ್ ಯೂನಿವರ್ಸಿಟಿ ಆಫ್ ಪೆಟ್ರೋಲಿಯಂ ಆ್ಯಂಡ್ ಎನರ್ಜಿ ಸ್ಟಡೀಸ್, ನೋಯ್ಡಾದ ಅಮಿತಿ ಬಿಸಿನೆಸ್ ಸ್ಕೂಲ್ ಹಾಗೂ ಜೆ.ಎಸ್.ಎಸ್. ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಷನ್ ಸಂಸ್ಥೆಗಳಲ್ಲಿ ಈ ಮ್ಯಾನೇಜ್‌ಮೆಂಟ್ ಕೋರ್ಸ್ ಇದೆ.


ಉದ್ಯೋಗ ಸಾಧ್ಯತೆಯ ಕ್ಷೇತ್ರಗಳು

ಈ ಕೋರ್ಸ್ ಅನ್ನು ಯಶಸ್ವಿಯಾಗಿ ಪೂರೈಸಿದವರಿಗೆ ಜಾಹೀರಾತು, ಆಟೊಮೊಬೈಲ್, ಕೃಷಿಕ್ಷೇತ್ರ, ಮೂಲಸೌಕರ್ಯ ಅಭಿವೃದ್ಧಿ ಕ್ಷೇತ್ರ, ಬ್ಯಾಂಕಿಂಗ್, ಮಾಹಿತಿ ತಂತ್ರಜ್ಞಾನ(ಐಟಿ), ಸ್ಮಾರ್ಟ್ ಆ್ಯಂಡ್ ಮೀಡಿಯಂ ಎಂಟರ್‌ಪ್ರೈಸಿಂಗ್ ಮ್ಯಾನೇಜ್‌ಮೆಂಟ್, ಗಣಿಗಾರಿಕೆ ಕ್ಷೇತ್ರ, ವಿಮಾ ಕ್ಷೇತ್ರಗಳು ಸೇರಿದಂತೆ, ಇನ್ನೂ ಹಲವು ಕ್ಷೇತ್ರಗಳಲ್ಲಿ ಉದ್ಯಮುಶೀಲತಾ ವಿಷಯದಲ್ಲಿ ಮ್ಯಾನೇಜ್‌ಮೆಂಟ್ ಕೋರ್ಸ್ ಕಲಿತವರಿಗೆ ಉದ್ಯೋಗಾವಕಾಶಗಳಿವೆ.

(ಲೇಖಕರು: ಸಹಾಯಕ ಪ್ರಾಧ್ಯಾಪಕರು, ಎಂ.ಬಿ.ಎ ವಿಭಾಗ, ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯ, ತುಮಕೂರು)

ಶ್ರವಣದೋಷವಿದ್ದವರಿಗೆ ಯಾವ ಕೆಲಸ ಸಿಗಬಹುದು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಮೊದಲ ಪಿಯುಸಿ (ಕಾಮರ್ಸ್) ಓದುತ್ತಿದ್ದೇನೆ. ನನಗೆ ಶ್ರವಣ ದೋಷವಿದೆ. ನಮಗೆ ಯಾವ ಉದ್ಯೋಗಗಳು ಸಿಗಬಹುದು?

ಹೆಸರು, ಊರು ತಿಳಿಸಿಲ್ಲ.

ನಿಮಗೆ ಯಾವ ಮಟ್ಟದ ಶ್ರವಣ ದೋಷಯಿದೆಯೆಂದು ನೀವು ತಿಳಿಸಿಲ್ಲ. ಆದರೂ ನಿರಾಸೆಯಿಂದ ನಿಮ್ಮ ಭವಿಷ್ಯದ ಕನಸುಗಳ ಬಗ್ಗೆ ರಾಜಿಯಾಗದಿರಿ. ಗಂಭೀರವಾದ ಶ್ರವಣ ದೋಷವಿದ್ದರೂ ಸಹ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಆಯೋಜಿಸುವ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಐಎಎಸ್ ಹುದ್ದೆ ಪಡೆದು ವೃತ್ತಿ ಜೀವನ ದಲ್ಲಿ ಯಶಸ್ವಿಯಾಗಿರುವ ಉದಾಹರಣೆಗಳಿವೆ. ಐಎಎಸ್ ಸೇರಿದಂತೆ ಸರ್ಕಾರದ ಅನೇಕ ಹುದ್ದೆಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಾತಿಯೂ ಇದೆ. ಇದಲ್ಲದೆ, ಖಾಸಗಿ ಕ್ಷೇತ್ರದ ಉತ್ಪಾದನೆ, ರೀಟೇಲ್, ಆರೋಗ್ಯ, ಮನರಂಜನೆ, ಶಿಕ್ಷಣ, ಹಣಕಾಸು ಕ್ಷೇತ್ರಗಳಲ್ಲಿಯೂ ಉದ್ಯೋಗಾವಕಾಶಗಳಿವೆ. ಆದ್ದರಿಂದ, ನಿಮ್ಮ ಆಸಕ್ತಿ ಕ್ಷೇತ್ರವನ್ನು ಗುರುತಿಸಿ, ಅಗತ್ಯವಾದ ಜ್ಞಾನ ಮತ್ತು ಕೌಶಲಗಳನ್ನು ಗಳಿಸಿ ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು.

2. ನಾನು ರಸಾಯನ ವಿಜ್ಞಾನದಲ್ಲಿ ಎಂ.ಎಸ್ಸಿ ಮಾಡಬೇಕು.ಇದೇ ವಿಷಯದಲ್ಲಿ ವಿಜ್ಞಾನಿಯಾಗಬೇಕೆಂಬ ಆಸೆ ಇದೆ. ಆದರೆ, ರಸಾಯನ ವಿಜ್ಞಾನದಲ್ಲಿ ಯಾವ ವಿಷಯ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಗೊಂದಲ ಇದೆ. ಮಾರ್ಗದರ್ಶನ ಮಾಡಿ.

ವರ್ಷಾ, ಕೊಪ್ಪಳ.

ರಸಾಯನ ವಿಷಯದಲ್ಲಿ ವಿಜ್ಞಾನಿಯಾಗಬೇಕಾದರೆ, ಎಂ.ಎಸ್ಸಿ ನಂತರ ಪಿಎಚ್‌ಡಿ ಮಾಡುವುದು ಒಳ್ಳೆಯದು. ನಿಮ್ಮ ಆಸಕ್ತಿ, ಒಲವಿನಂತೆ ವೃತ್ತಿಯೋಜನೆ ಮಾಡಿ ಎಂ.ಎಸ್ಸಿ ಮಾಡಿದರೆ ಸಾಕೇ ಅಥವಾ ಪಿಎಚ್‌ಡಿ ಮಾಡಬೇಕೇ ಎಂದು ನಿರ್ಧರಿಸಿ. ರಸಾಯನ ಶಾಸ್ತ್ರದ ಪ್ರಮುಖ ಶಾಖೆಗಳೆಂದರೆ ಆರ್ಗ್ಯಾನಿಕ್, ಇನ್‌ಆರ್ಗ್ಯಾನಿಕ್, ಅನಲಿಟಿಕಲ್, ಮೆಡಿಸಿನಲ್,

ಮಾಲಿಕ್ಯುಲರ್ ಮತ್ತು ಬಯೋ ಕೆಮಿಸ್ಟ್ರಿ. ಯಾವ ವಿಷಯದಲ್ಲಿ ವಿಜ್ಞಾನಿಯಾಗಬೇಕೆಂದು ಈಗಲೇ ನಿರ್ಧರಿಸಿದರೆ ಎಂ.ಎಸ್ಸಿ ನಂತರ ಪಿಎಚ್‌ಡಿ ಮಾಡಲು ಅನುಕೂಲ. ಪಿಎಚ್‌ಡಿ ಸಂಶೋಧನೆ ಕುರಿತು ಸಾಕಷ್ಟು ಸಂಪನ್ಮೂಲಗಳು ಇದ್ದರೂ ವಿಷಯ ನಿರ್ಧರಿಸುವುದು ಸುಲಭವಲ್ಲ. ವಿಷಯದ ಪ್ರಸ್ತುತತೆ, ವಿಷಯದ ಕುರಿತು ಸ್ವಾಭಾವಿಕವಾದ ಒಲವು ಮತ್ತು ಪ್ರೇರಣೆಯ ಜೊತೆಗೆ ಮಾರ್ಗ ದರ್ಶಕರ ಸಕಾರಾತ್ಮಕ ಅಭಿಪ್ರಾಯ ಮತ್ತು ಬೆಂಬಲವಿರಬೇಕು. ಎಂ.ಎಸ್ಸಿ ನಂತರ ಸರ್ಕಾರಿ ಮತ್ತು ಖಾಸಗಿ ವಲಯದ ರಾಸಾಯನಿಕ ಪದಾರ್ಥಗಳು, ಫಾರ್ಮಾ, ರಸಗೊಬ್ಬರ, ಡಿಸ್ಟಿಲರೀಸ್, ಜವಳಿ ಮತ್ತು ವರ್ಣದ್ರವ್ಯ, ಆಹಾರ ಮತ್ತು ಪಾನೀಯ ಸಂಸ್ಕರಣೆ, ಸಂಶೋಧನೆ, ಪ್ರಯೋಗಾಲಯಗಳು, ವಿದ್ಯಾಸಂಸ್ಥೆಗಳು ಸೇರಿದಂತೆ ಅನೇಕ ವಲಯ ಗಳಲ್ಲಿ ಉದ್ಯೋಗಾವಕಾಶಗಳಿವೆ. ಹೆಚ್ಚಿನ ಮಾಹಿತಿಗೆ ಈ ವಿಡಿಯೊ ನೋಡಿ: https://www.youtube.com/c/EducationalExpertManagementCareerConsultant

ಇನ್ನಷ್ಟು ಪ್ರಶ್ನೋತ್ತರಗಳಿಗೆ www.prajavani.net/education-career ಜಾಲ ತಾಣ ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

‘ಭಯಪಟ್ಟರೆ ಸಾಧನೆ ಮಾಡಲಾಗದು’



ಬೆಳಗಾವಿ ತಾಲ್ಲೂಕಿನ ಉಚಗಾವಿ ಗ್ರಾಮದ ರುಚಾ ಪಾವಶೆ ಈ ಬಾರಿಯ ನೀಟ್ (ನ್ಯಾಷನಲ್ ಎಲಿಜಿಬಿಲಿಟಿ ಕಮ್ ಎಂಟ್ರೆನ್ಸ್ ಟೆಸ್ಟ್)ನಲ್ಲಿ 715 ಅಂಕಗಳನ್ನು ಪಡೆದು ದೇಶಕ್ಕೆ ನಾಲ್ಕನೇ ರ್‍ಯಾಂಕ್ ಬಂದಿದ್ದಾರೆ.

ವೈದ್ಯ ದಂಪತಿ ಮೋಹನ್ ಮತ್ತು ಸ್ಮಿತಾ ಅವರ ಪುತ್ರಿ ರುಚಾ, ಉಚಗಾವಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ್ದಾರೆ. ಬೆಳಗಾವಿಯ ಸೇಂಟ್ ಝೇವಿಯರ್ಸ್ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಕೆಎಲ್‌ಇ ಸಂಸ್ಥೆಯ ರಾಜಾ ಲಖಮಗೌಡ ಪದವಿಪೂರ್ವ ವಿಜ್ಞಾನ ಕಾಲೇಜಿನಲ್ಲಿ ಪಿಯು ಪೂರೈಸಿದ್ದಾರೆ. ನೀಟ್-ಸಾಧನೆಯ ಸಂಭ್ರಮದಲ್ಲಿರುವ ಇವರು, ಆ ಪರೀಕ್ಷೆಗೆ ನಡೆಸಿದ ತಯಾರಿ ಹಾಗೂ ಮುಂದಿನ ಅಧ್ಯಯನದ ಕುರಿತು ‘ಪ್ರಜಾವಾಣಿ‘ಯೊಂದಿಗೆ ಮಾತನಾಡಿದ್ದಾರೆ. ಅವರೊಂದಿಗಿನ ಮಾತುಕತೆಯ ಸಂಕ್ಷಿಪ್ತ ರೂಪ ಇಲ್ಲಿದೆ.

ಸಂತೋಷ ಈ. ಚಿನಗುಡಿ

‘ನೀಟ್’ ಸಾಧಕಿ

- **ನೀಟ್‌ನಲ್ಲಿ 715 ಅಂಕ ಪಡೆದಿದ್ದೀರಿ. ಅಭಿನಂದನೆಗಳು. ನಿಮ್ಮ ನಿರೀಕ್ಷೆ ಎಷ್ಟಿತ್ತು?**

ಈ ಬಾರಿ ಉತ್ತಮ ರ್‍ಯಾಂಕ್ ತೆಗೆದುಕೊಳ್ಳುತ್ತೇನೆ ಎಂಬ ವಿಶ್ವಾಸವಿತ್ತು. ಆದರೆ, ಮೊದಲ ರ್‍ಯಾಂಕ್ ಪಡೆದವರಿಗೆ ಸರಿ ಸಮನಾಗಿ ನಿಲ್ಲುತ್ತೇನೆ ಎಂದು ಊಹಿಸಿರಲಿಲ್ಲ. ಫಲಿತಾಂಶ ನೋಡಿದ ಖುಷಿಯ ಜತೆಗೆ ಅಚ್ಚರಿಯೂ ಆಯಿತು.

- **ಸಮಾನ ಅಂಕ ಗಳಿಸಿದರೂ ನಿಮಗೆ ನಾಲ್ಕನೇ ರ್‍ಯಾಂಕ್ ಬಂದಿದ್ದು ಏಕೆ?**

ಈ ಪರೀಕ್ಷೆಯಲ್ಲಿ 720 ಅಂಕಗಳಿಗೆ ನಾಲ್ವರು 715 ಅಂಕ ಪಡೆದಿದ್ದೇವೆ. ಆದರೆ, ದ್ವಿತೀಯ ಪಿಯು ಪರೀಕ್ಷೆಯ ಜೀವವಿಜ್ಞಾನ ವಿಷಯದಲ್ಲಿ ನನಗೆ ಅಂಕ ತುಸು ಕಡಿಮೆ ಇದ್ದ ಕಾರಣ ‘ಟೈ ಬ್ರೇಕರ್’ನಲ್ಲಿ ನಾಲ್ಕನೇ ರ್‍ಯಾಂಕ್ ಸಿಕ್ಕಿದೆ.

- **ಎರಡನೇ ಬಾರಿಗೆ ನೀಟ್ ಬರೆಯಲು ಕಾರಣ?**

ಕಳೆದ ವರ್ಷದ ನನಗೆ 500ನೇ ರ್‍ಯಾಂಕ್ ಬಂದಿದ್ದು, ತೃಪ್ತಿ ನೀಡಲಿಲ್ಲ. ದೆಹಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (ಏಮ್ಸ್)ನಲ್ಲಿ ಪ್ರವೇಶ ಪಡೆಯಬೇಕು ಎಂಬುದು ನನ್ನ ಕನಸು. ಒಂದು ವರ್ಷ ಹೆಚ್ಚು ಸಮಯ ತೆಗೆದುಕೊಂಡರೂ ಚಿಂತೆಯಿಲ್ಲ ಎಂದು ನಿರ್ಧರಿಸಿ, ಎರಡನೇ ಅವಧಿಯಲ್ಲಿ ನಾನು ನನ್ನ ಗುರಿ ಸಾಧಿಸಿದೆ.

- **ಮೊದಲ ಅವಕಾಶದಲ್ಲಿ ಕಡಿಮೆ ಅಂಕ ಗಳಿಸಲು ಕಾರಣ?**

ಪಿಯುಸಿ ಮುಗಿದ ಬಳಿಕ ಸಿಇಟಿ, ನೀಟ್ ತಯಾರಿ ಮಾಡಿಕೊಳ್ಳುವುದು ಬಹಳ ಮಂದಿಯ ರೂಢಿ. ಇದು ತಪ್ಪು. ಪ್ರಥಮ ವರ್ಷಕ್ಕೆ ಕಾಲಿಟ್ಟ ದಿನದಿಂದಲೇ ಸ್ಪರ್ಧಾತ್ಮಕ ಓದು ಕೂಡ ರೂಢಿಸಿಕೊಳ್ಳಬೇಕು.

ಮುಂದೆ ಏನಾಗಬೇಕು ಎಂಬುದರಲ್ಲಿ ‘ಬಹು ಆಯ್ಕೆ’ ಇಟ್ಟುಕೊಳ್ಳಬಾರದು. ಅದರಿಂದ ಯಾವುದನ್ನೂ ಪೂರ್ಣವಾಗಿ ಸಾಧಿಸಲು ಆಗುವುದಿಲ್ಲ. ಮೊದಲ ಪ್ರಯತ್ನದಲ್ಲಿ ನನಗೆ ಕಡಿಮೆ ಅಂಕ ಬರಲು ಇದೇ ಕಾರಣ. ಎರಡನೇ ಯತ್ನದಲ್ಲಿ ಆ ತಪ್ಪು ಮಾಡಲಿಲ್ಲ.

- **ಕೋಚಿಂಗ್ ಅನಿವಾರ್ಯವೇ?**

ಎಲ್ಲರಿಗೂ ಕೋಚಿಂಗ್ ಕಡ್ಡಾಯ ಎಂದೇನಿಲ್ಲ. ನಾನು ‘ಟರ್ನಿಂಗ್ ಪಾಯಿಂಟ್ ಸೂಪರ್-30’ ಎಂಬ ಸಂಸ್ಥೆಯಿಂದ ಆನ್‌ಲೈನ್ ಕೋಚಿಂಗ್ ಪಡೆದಿದ್ದೆ. ಇದರಿಂದ ವಿಷಯದ ಮೇಲೆ ಹಿಡಿತಸಿಗುತ್ತದೆ. ಹಾಗಾಗಿ, ಕೋಚಿಂಗ್ ಪಡೆದೆ.

- **ಯಾವ ಪುಸ್ತಕಗಳು ಹೆಚ್ಚು ಸೂಕ್ತ?**

ಎನ್‌ಸಿಇಆರ್‌ಟಿ ಪುಸ್ತಕಗಳನ್ನೇ ನಾನು ಅವಲಂಬಿಸಿದ್ದೆ. ಮೇಲಾಗಿ, ಹಳೆಯ ಪ್ರಶ್ನೆಪತ್ರಿಕೆಗಳನ್ನು ನಿರಂತರವಾಗಿ ಬಿಡಿಸಿದ್ದೇನೆ. ಇನ್ನೊಬ್ಬರ ಕಡೆಯಿಂದ ಅವುಗಳ ಮೌಲ್ಯಮಾಪನ ಮಾಡಿಸಿದ್ದೇನೆ. ಈ ಪ್ರಕ್ರಿಯೆಯಿಂದಿ ನಾವು ಎಲ್ಲಿ ಎಡವಬಹುದು ಎಂಬುದು ಮುಂಚಿತವಾಗಿ ತಿಳಿಯುತ್ತದೆ. ನಮ್ಮನ್ನು ನಾವೇ ಕಠಿಣ ಪರೀಕ್ಷೆಗೆ ಒಡ್ಡದ ಹೊರತು ಯಶಸ್ಸು ಸಾಧ್ಯವಿಲ್ಲ.

- **ನೀಟ್ ಎಂದರೆ ಭಯ, ಅದನ್ನು ರದ್ದು ಮಾಡಿ ಎಂಬ ಕೂಗು ಬಹಳ ದಿನಗಳಿಂದಲೂ ಇದೆಯಲ್ಲ?**

ಚಿಕ್ಕವರಿದ್ದಾಗ ಶಾಲೆ ಎಂದರೇನೇ ಭಯ. ನಂತರ ಇಂಗ್ಲಿಷ್- ಗಣಿತ ಅರಗಿಸಿಕೊಳ್ಳಲಾಗದೇ ಭಯ. ಎಸ್ಸೆಸ್ಸೆಲ್ಸಿ ಪರೀಕ್ಷೆ ಎಂದರಂತೂ ರಾಕ್ಷಸನನ್ನೇ ಕಂಡಷ್ಟು ಭಯ ಇರುತ್ತಿತ್ತು. ಎಷ್ಟೋ ವಿದ್ಯಾರ್ಥಿಗಳು ಚೆನ್ನಾಗಿ ಓದಿದ್ದರೂ ಭಯದಿಂದಾಗಿಯೇ ಹಿಂದುಳಿದ ಉದಾಹರಣೆಗಳಿವೆ. ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಯಪಟ್ಟವರು ಸಾಧನೆ ತೋರಲು ಸಾಧ್ಯವಿಲ್ಲ. ಈ ಪರೀಕ್ಷೆಯೇ ನನ್ನ ಬದುಕಿನ ಕೊನೆಯ ಅವಕಾಶ ಎಂದು ಯಾರೂ ಭಾವಿಸಬಾರದು. ಅದರಾಚೆಗೂ ಬದುಕು ಇದೆ, ಅವಕಾಶಗಳ ಸಾಗರವಿದೆ ಎಂದುಕೊಂಡರೆ ಭಯ ನಿವಾರಣೆಯಾಗುತ್ತದೆ.

- **ಮುಂದಿನ ಗುರಿ ಏನು?**

ಎಂಬಿಬಿಎಸ್ ಮಾಡುತ್ತೇನೆ. ನನ್ನ ಮುತ್ತಜ್ಜ, ಅಜ್ಜ ವೈದ್ಯರಾಗಿದ್ದರು. ಈಗ ಅಪ್ಪ, ಅಮ್ಮ, ಅಣ್ಣ ಹೀಗೆ ನಾಲ್ಕು ತಲೆಮಾರುಗಳಿಂದಲೂ ನಮ್ಮ ಕುಟುಂಬದಲ್ಲಿ ವೈದ್ಯರೇ ಆಗಿದ್ದಾರೆ. ಆ ಸರಣಿ ಮುಂದುವರಿಸುತ್ತೇನೆ.

‘ನವೋದಯ’ ಪ್ರವೇಶ ಪರೀಕ್ಷೆ

ಪ್ರಶ್ನೋತ್ತರ ಮಾದರಿ

ವೆಂಕಟಸುಬ್ಬರಾವ್. ವಿ.

ಹಿಂದಿನ ಸಂಚಿಕೆಯಲ್ಲಿ ಜವಾಹರ ನವೋದಯ ವಿದ್ಯಾಲಯಗಳ ಬಗ್ಗೆ ಕಿರು ಪರಿಚಯ, ವೈಶಿಷ್ಟ್ಯಗಳು ಹಾಗೂ ನವೋದಯ ವಿದ್ಯಾಲಯಗಳಿಗೆ ಪ್ರವೇಶ ಹೇಗೆ ಎನ್ನುವ ಬಗ್ಗೆ ಸಂಕ್ಷಿಪ್ತ ವಾಗಿ ಮಾಹಿತಿ ನೀಡಲಾಗಿತ್ತು. ಈ ಸಂಚಿಕೆಯಲ್ಲಿ ನವೋದಯ ವಿದ್ಯಾಲಯಗಳ ಪ್ರವೇಶ ಪರೀಕ್ಷೆಗಳು, ಪ್ರಶ್ನೆಪತ್ರಿಕೆಗಳ ವಿಷಯವಾಗಿ ತಿಳಿಯುವ ಪ್ರಯತ್ನ ಮಾಡೋಣ.

ಭಾಗ –2

ಪ್ರತಿವರ್ಷ ಪ್ರತಿ ನವೋದಯ ವಿದ್ಯಾಲಯಕ್ಕೆ 6ನೆಯ ತರಗತಿಗೆ 80 ಮಕ್ಕಳನ್ನು ತೆಗೆದುಕೊಳ್ಳಲಾಗುತ್ತದೆ. ಈ ಮಕ್ಕಳು ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆಗಳಿಸಿರಬೇಕು. ಇವರಲ್ಲಿ ಕನಿಷ್ಟ ಶೇ 75 ರಷ್ಟು ಸ್ಥಾನವನ್ನು ಗ್ರಾಮೀಣ ಭಾಗದ ಅರ್ಹ ಮಕ್ಕಳ ಪ್ರವೇಶಕ್ಕೆ ಆದ್ಯತೆ ನೀಡಲಾಗುತ್ತದೆ.

9ನೆಯ ತರಗತಿಗೆ ನೇರವಾಗಿ ಪ್ರವೇಶ ಬಯಸುವ ಮಕ್ಕಳಿಗೂ ಪ್ರವೇಶ ಪರೀಕ್ಷೆ ಇರುತ್ತದೆ. ಉಳಿದ ಸೀಟುಗಳನ್ನು 11ನೆಯ ತರಗತಿಯ ಮಕ್ಕಳಿಗೆ ನೀಡಲಾಗುತ್ತದೆ. 10ನೆಯ ತರಗತಿಯ ಅಂಕಗಳ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುತ್ತದೆ ಎನ್ನುತ್ತಾರೆ ನವೋದಯ ವಿದ್ಯಾಲಯದ ನಿವೃತ್ತ ಉಪ-ಪ್ರಾಚಾರ್ಯ ಕೆ.ಎಂ. ಚಿದಾನಂದ.

ಕರ್ನಾಟಕದಲ್ಲಿ 31 ನವೋದಯ ವಿದ್ಯಾಲಯಗಳಿವೆ. ಒಂದು ಗಮನದಲ್ಲಿಡಬೇಕಾದ ಅಂಶವೆಂದರೆ, ಆಯಾಯ ಜಿಲ್ಲೆಗಳಲ್ಲಿ ಓದುತ್ತಿರುವ ಮಕ್ಕಳು ಆಯಾಯಾ ಜಿಲ್ಲೆಗಳ ಜವಾಹರ ನವೋದಯ ವಿದ್ಯಾಲಯಗಳಿಗೆ ಮಾತ್ರ ಸೇರಬಹುದು.

ಈಗ ಮೊದಲಿಗೆ ನಾವು 6ನೆಯ ತರಗತಿಯ ಪ್ರವೇಶ ಪರೀಕ್ಷೆಯ ಬಗ್ಗೆ ತಿಳಿಯೋಣ.

6ನೆಯ ತರಗತಿಯ ಪ್ರವೇಶ ಪರೀಕ್ಷೆಯಲ್ಲಿ 3 ವಿಷಯಗಳು

ಭಾಗ	ವಿಷಯ	ಪ್ರಶ್ನೆಗಳು	ಅಂಕಗಳು
1	ಮಾನಸಿಕ ಸಾಮರ್ಥ್ಯ ಪರೀಕ್ಷೆ ಚಿತ್ರಾತ್ಮಕ ತಾರ್ಕಿಕ ಪ್ರಶ್ನೆಗಳು (Non-Verbal Reasoning)	40	50
2	ಅಂಕಗಣಿತ	20	25
3	ಭಾಷೆ	20	25
	ಒಟ್ಟು	80	100

ಪರೀಕ್ಷೆಯ ಅವಧಿ 2 ಗಂಟೆಗಳು. ಎಲ್ಲ ಪ್ರಶ್ನೆಗಳೂ ವಸ್ತುನಿಷ್ಠ ಮಾದರಿ ಪ್ರಶ್ನೆಗಳೇ (Objective Type) ಆಗಿರುತ್ತವೆ. ಎಲ್ಲಾ ವಿಭಾಗದ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಲು ಪ್ರಯತ್ನಿಸಿ. ಏಕೆಂದರೆ ಪ್ರತಿಯೊಂದು ವಿಭಾಗದಲ್ಲಿಯೂ ಪ್ರತ್ಯೇಕವಾಗಿ ಅರ್ಹರಾಗಿರಬೇಕಾಗುತ್ತದೆ. ಋಣಾತ್ಮಕ ಅಂಕಗಳು(ನೆಗೆಟಿವ್ ಕರೆಕ್ಷನ್) ಇರುವುದಿಲ್ಲ.

ಪ್ರತಿ ಪ್ರಶ್ನೆಗೂ ನಾಲ್ಕು ಸಂಭವನೀಯ ಉತ್ತರಗಳಿರುತ್ತವೆ. ಅವುಗಳಲ್ಲಿ ಒಂದು ಉತ್ತರ ಮಾತ್ರ ಸರಿಯಾಗಿರುತ್ತದೆ. ಸರಿಯಾದ ಉತ್ತರವನ್ನು ಗುರುತಿಸಿ, ಪ್ರಶ್ನಪತ್ರಿಕೆಯ ಜೊತೆಯಲ್ಲಿ ಕೊಟ್ಟಿರುವ ಒ.ಎಂ.ಆರ್ ಹಾಳೆಯಲ್ಲಿ ಉತ್ತರಿಸಬೇಕಿರುತ್ತದೆ (ಒ.ಎಂ.ಆರ್ ಹಾಳೆಗಳಲ್ಲಿ ಹೇಗೆ ಉತ್ತರಿಸಬೇಕು ಎನ್ನುವ ಬಗ್ಗೆ ಮುಂದಿನ ಸಂಚಿಕೆಗಳಲ್ಲಿ ತಿಳಿಯೋಣ).

ಈಗ ನಾವು 6ನೆಯ ತರಗತಿಯ ಪ್ರವೇಶ ಪರೀಕ್ಷೆಯ ಮೊದಲನೆಯ ವಿಭಾಗವಾದ ‘ಮಾನಸಿಕ ಸಾಮರ್ಥ್ಯ ಪರೀಕ್ಷೆಯ’ ಪ್ರಶ್ನೆಗಳ ಕೆಲವು ಉದಾಹರಣೆಗಳು ಹಾಗೂ ಅವುಗಳಿಗೆ ಉತ್ತರಿಸುವ ಕೆಲವು ಸುಲಭ ವಿಧಾನಗಳ ಬಗ್ಗೆ ತಿಳಿಯೋಣ.


ಈ ವಿಭಾಗದ ಪ್ರತಿ ಪ್ರಶ್ನೆಯೂ ‘ಚಿತ್ರಾತ್ಮಕ ತಾರ್ಕಿಕ’ (Non-Verbal Reasoning) ಪ್ರಶ್ನೆಯೇ ಆಗಿರುತ್ತದೆ. ಈ ವಿಭಾಗದಲ್ಲಿ ಸಾಮಾನ್ಯವಾಗಿ 10 ಭಾಗಗಳಿರುತ್ತವೆ. ಪ್ರತಿ ಭಾಗದಲ್ಲಿಯೂ 4 ಪ್ರಶ್ನೆಗಳಿರುತ್ತವೆ. ಎಲ್ಲವೂ ವಸ್ತುನಿಷ್ಠ ಮಾದರಿ ಪ್ರಶ್ನೆಗಳು. ಪ್ರತಿ ಪ್ರಶ್ನೆಗೂ 4 ಸಂಭವನೀಯ ಆಯ್ಕೆಗಳಿರುತ್ತವೆ. ಸರಿಯಾದ ಉತ್ತರವನ್ನು ಕಂಡುಹಿಡಿದು ಉತ್ತರಿಸಬೇಕು.

ಈ ವಿಭಾಗದ ಕೆಲವು ಉದಾಹರಣೆಗಳನ್ನು ನೋಡೋಣ.


ಭಾಗ - 1

ಇಲ್ಲಿ A,B,C,D ಅಕ್ಷರಗಳುಳ್ಳ ನಾಲ್ಕು ಆಕೃತಿಗಳನ್ನು ಕೊಡಲಾಗಿರುತ್ತದೆ. ಇವುಗಳಲ್ಲಿ ಮೂರು ಆಕೃತಿಗಳು ಒಂದನ್ನೊಂದು ಹೋಲುತ್ತವೆ ಮತ್ತು ಯಾವುದೋ ಒಂದು ಆಕೃತಿಯು ಭಿನ್ನವಾಗಿರುತ್ತದೆ. ಹೀಗೆ ಭಿನ್ನವಾಗಿರುವ ಆಕೃತಿಯನ್ನು ಕಂಡುಹಿಡಿದು ಆ ಆಯ್ಕೆಯನ್ನು ಒ.ಎಂ.ಆರ್. ಹಾಳೆಯಲ್ಲಿ ಉತ್ತರಿಸಬೇಕು.

ಈ ಉದಾಹರಣೆಗಳನ್ನು ನೋಡಿ.



ಈ ಚಿತ್ರಗಳನ್ನು ಗಮನಿಸಿ. ಇಲ್ಲಿ A,B ಮತ್ತು C ಚಿತ್ರಗಳಲ್ಲಿ ಎರಡು ವೃತ್ತಗಳು ಏಕ ಕೇಂದ್ರೀಯ ವೃತ್ತಗಳಾಗಿವೆ ಮತ್ತು ಬಾಣವು ವೃತ್ತದ ಹೊರಗೆ ಬರುತ್ತಿದೆ. ಚಿತ್ರ D ಯಲ್ಲಿ ವೃತ್ತಗಳು ಏಕ ಕೇಂದ್ರೀಯವಾಗಿಲ್ಲ ಮತ್ತು ಬಾಣವು ವೃತ್ತಕ್ಕೆ ಒಳಮುಖವಾಗಿದೆ. ಆದ್ದರಿಂದ ಇಲ್ಲಿ ಚಿತ್ರ D ಯು ಮಿಕ್ಕ ಮೂರು ಚಿತ್ರಗಳಿಗಿಂತ ಭಿನ್ನವಾಗಿದೆ. ಆದ್ದರಿಂದ ಸರಿ ಉತ್ತರ D ಆಗಿದೆ ಅಲ್ಲವೇ?




ಹಾಗೆಯೇ, ಈ ಮೇಲಿನ ಪ್ರಶ್ನೆಗೆ ಸರಿ ಉತ್ತರ ಏನು? ಕಂಡುಹಿಡಿಯಿರಿ.




ಭಾಗ - 2

ಇಲ್ಲಿ, ಒಂದು ಆಕೃತಿಯನ್ನು ಎಡ ಬದಿಗೆ ಕೊಡಲಾಗಿರುತ್ತದೆ. A,B,C,D ಎಂಬ ನಾಲ್ಕು ಆಕೃತಿಗಳನ್ನು ಬಲ ಭಾಗದಲ್ಲಿ ಕೊಡಲಾಗಿರುತ್ತದೆ. ಬಲ ಬದಿಗೆ ಕೊಟ್ಟ ಆಕೃತಿಗಳಲ್ಲಿ ಯಾವ ಒಂದು ಆಕೃತಿಯು ಎಡಬದಿಯ ಆಕೃತಿಗೆ ಪೂರ್ಣವಾಗಿ ಹೊಂದುವುದೋ, ಆ ಆಕೃತಿಯನ್ನು ಗುರುತಿಸಿ ಉತ್ತರಿಸಬೇಕು.

ಈ ಉದಾಹರಣೆಗಳನ್ನು ನೋಡಿ.



ಉತ್ತರ C ಯು ಸರಿ ಉತ್ತರ ಅಲ್ಲವೇ?



ಈ ಮೇಲಿನ ಪ್ರಶ್ನೆಗೆ ಉತ್ತರವನ್ನು ನೀವೇ ಕಂಡುಹಿಡಿಯಬಹುದಲ್ಲವೇ?

ಈ ಪ್ರಶ್ನೆಗಳೇ ಎಷ್ಟು ಆಸಕ್ತಿಕರವಾಗಿವೆ ಮತ್ತು ಬಹಳ ಸುಲಭವಾಗಿವೆ ಅಲ್ಲವೇ? ಹೀಗೆ ಪರೀಕ್ಷೆಯಲ್ಲೂ ಮಕ್ಕಳಿಗೆ ಅರ್ಥವಾಗುವಂತೆ ಪ್ರಶ್ನೆಗಳು ಆಸಕ್ತಿಕರವಾಗಿ, ಸರಳವಾಗಿ, ನೇರವಾಗಿ ಇರುತ್ತವೆ !

ಮುಂದಿನ ಸಂಚಿಕೆಯಲ್ಲಿ ಉಳಿದ ರೀತಿಯ ಪ್ರಶ್ನೆಗಳ ಬಗ್ಗೆ ತಿಳಿಯೋಣ.

ಹೆಚ್ಚಿನ ವಿವರಗಳಿಗಾಗಿ ಈ ಕೆಳಗಿನ ಜಾಲತಾಣವನ್ನು ನೋಡಿ. https://navodaya.gov.in/nvs/en/Home1

(ಲೇಖಕರು: ನಿರ್ದೇಶಕರು,ಸ್ಮಾರ್ಟ್ ಸೆರೆಬ್ರಮ್ ಪ್ರೈವೇಟ್ ಲಿಮಿಟೆಡ್)

ವಿದ್ಯಾರ್ಥಿ ವೇತನ ಕೈಪಿಡಿ

ಎಚ್‌ಡಿಎಫ್‌ಸಿ ಬ್ಯಾಂಕ್ ಪರಿವರ್ತನ್ಸ್ ಇಸಿಎಸ್ ಸ್ಕಾಲರ್‌ಷಿಪ್2022-23

ವಿವರ: ಎಚ್‌ಡಿಎಫ್‌ಸಿ ಬ್ಯಾಂಕ್ 1ನೇ ತರಗತಿಯಿಂದ ಸ್ನಾತಕೋತ್ತರ ಹಂತದವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಈ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು ಸಮಾಜದ ಹಿಂದುಳಿದ ವರ್ಗಗಳಿಗೆ ಸೇರಿದ ಆರ್ಥಿಕ ನೆರವಿನ ಅಗತ್ಯವಿರುವ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ರೂಪಿಸಲಾಗಿದೆ.

ಅರ್ಹತೆ: ಭಾರತೀಯ ಪ್ರಜೆಗಳಿಗೆ ಮಾತ್ರ ಮುಕ್ತವಾಗಿದೆ. 1 ರಿಂದ 12 ನೇ ತರಗತಿ, ಡಿಪ್ಲೊಮಾ, ಪದವಿಪೂರ್ವ ಅಥವಾ ಸ್ನಾತಕೋತ್ತರ (ವೃತ್ತಿಪರ ಮತ್ತು ವೃತ್ತಿಪರವಲ್ಲದ ಕೋರ್ಸ್‌ಗಳನ್ನು ಒಳಗೊಂಡಂತೆ) ಹಂತದ ನಡುವಿನ ಯಾವುದೇ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ತಮ್ಮ ಹಿಂದಿನ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ 55 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು ಮತ್ತು ಅವರ ಕುಟುಂಬದ ವಾರ್ಷಿಕ ಆದಾಯವು ₹ 2.5 ಲಕ್ಷಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.

ಆರ್ಥಿಕ ಸಹಾಯ: ₹75,000ದ ವರೆಗೆ

ಅರ್ಜಿ ಸಲ್ಲಿಸಲು ಕೊನೆಯ ದಿನ: 15-10-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ :www.b4s.in/praja/HEC12



ಎಂಐಸಿಟಿ ಸ್ಕಾಲರ್‌ಷಿಪ್ ಪ್ರೋಗ್ರಾಂ 2022-23

ವಿವರ: ಬೆಂಗಳೂರು, ಮುಂಬೈ, ನವಿ ಮುಂಬೈ, ಥಾಣೆಯಲ್ಲಿ ವಾಸಿಸುತ್ತಿರುವ ಹಾಗೂ ಓದುತ್ತಿರುವ 10ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಮರ್ಕ್ ಇಂಡಿಯಾ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಿದೆ. ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಈ ಸ್ಕಾಲರ್‌ಷಿಪ್ ರೂಪಿಸಲಾಗಿದೆ.


ಅರ್ಹತೆ: 2022ರಲ್ಲಿ ಕನಿಷ್ಠ ಶೇ 80 ಅಂಕಗಳೊಂದಿಗೆ 10 ನೇ ತರಗತಿ (ಎಸ್ಸೆಸ್ಸೆಲ್ಸಿ /ಎಸ್‌ಎಸ್‌ಸಿ) ಯಶಸ್ವಿಯಾಗಿ ಉತ್ತೀರ್ಣರಾದ ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನ ಪಡೆಯಲು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಪ್ರಸ್ತುತ ಮುಂಬೈ, ನವಿ ಮುಂಬೈ, ಥಾಣೆ ಮತ್ತು ಬೆಂಗಳೂರಿನಲ್ಲಿ ವಾಸಿಸುತ್ತಿರಬೇಕು ಮತ್ತು ಓದುತ್ತಿರಬೇಕು. ಅರ್ಜಿದಾರರ ಕುಟುಂಬದ ಆದಾಯವು ತಿಂಗಳಿಗೆ ₹ 20,000ಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.

ಆರ್ಥಿಕ ಸಹಾಯ: ಪದವಿಯವರೆಗೆ ವರ್ಷಕ್ಕೆ₹ 35,000

ಅರ್ಜಿ ಸಲ್ಲಿಸಲು ಕೊನೆಯ ದಿನ: 15-10-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ :www.b4s.in/praja/MERCK7



ಸುಭಾಷಿತ

ಮತ್ತೊಬ್ಬರ ವಿಚಾರವನ್ನು ಕೇಳುವ ಸಹನೆಯನ್ನು ಬೆಳೆಸಿಕೊಳ್ಳದಿದ್ದರೆ ನಾವು ವಿಚಾರವಂತರಾಗುವುದು ಸಾಧ್ಯವಿಲ್ಲ. –ಹಾ.ಮಾ.ನಾಯಕ

‘ವೇಗದ ರಾಣಿ’ ಜೂಲನ್ ಮಹಿಳಾ ಕ್ರಿಕೆಟ್ ಕಣ್ಮಣಿ

ಭಾರತದಲ್ಲಿ ಮಹಿಳೆಯರ ಕ್ರಿಕೆಟ್ ಎಂದರೆ ಜನರು ಮೂಗು ಮುರಿಯುತ್ತಿದ್ದ ಕಾಲಘಟ್ಟದಲ್ಲಿ ಕಣಕ್ಕಿಳಿದವರು ಜೂಲನ್ ಗೋಸ್ವಾಮಿ. ಭರ್ತಿ ಎರಡು ದಶಕಗಳ ಕಾಲ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ‘ವೇಗದ ರಾಣಿ’ಯಾಗಿ ಮೆರೆದರು. ಮಹಿಳಾ ಕ್ರಿಕೆಟ್‌ನ ಮಧ್ಯಮವೇಗದ ಬೌಲಿಂಗ್‌ನಲ್ಲಿ ಸುವರ್ಣ ಅಧ್ಯಾಯವೊಂದಕ್ಕೆ ಕಾರಣರಾಗಿ ಈಗ ನಿವೃತ್ತರಾಗಿದ್ದಾರೆ. ಪಶ್ಚಿಮ ಬಂಗಾಳದ ಚಕ್ದಾ ಎಂಬ ಪುಟ್ಟ ಊರಿನ ಪ್ರತಿಭೆ ಜೂಲನ್. ತಮ್ಮ ಮನೆಯ ಎದುರಿನ ಅಂಗಣದಲ್ಲಿ ಹುಡುಗರೊಂದಿಗೆ ಕ್ರಿಕೆಟ್ ಆಡಲು ಆರಂಭಿಸಿದವರು. ಅಂದು ವ್ಯಂಗ್ಯವಾಡಿದವರ ಮುಂದೆಯೇ ದಂತಕಥೆಯಾಗಿ ಬೆಳೆದರು. ‘ಕ್ರಿಕೆಟ್ ಕಾಶಿ’ ಲಾರ್ಡ್ಸ್ ಅಂಗಳದಲ್ಲಿ ಅವರು ತಮ್ಮ ವೃತ್ತಿಜೀವನದ ಕೊನೆಯ ಅಂತರರಾಷ್ಟ್ರೀಯ ಏಕದಿನ ಪಂದ್ಯವನ್ನು ಆಡಿದರು. ಬಲಾಢ್ಯ ಇಂಗ್ಲೆಂಡ್ ತಂಡವನ್ನು ಅದರ ನೆಲದಲ್ಲಿಯೇ ಸರಣಿ ಕ್ಲೀನ್‌ಸ್ವೀಪ್ ಮಾಡಿದ ಹರ್ಮನ್‌ಪ್ರೀತ್ ಕೌರ್ ಬಳಗವು ಜೂಲನ್‌ಗೆ ಅರ್ಹ ರೀತಿಯಲ್ಲಿ ‘ವಿದಾಯದ ಉಡುಗೊರೆ’ ನೀಡಿತು. 2002ರಲ್ಲಿ ಚೆನ್ನೈನಲ್ಲಿ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಪದಾರ್ಪಣೆ ಮಾಡಿದ ಜೂಲನ್ ಅದೇ ತಂಡದ ಎದುರು ಕೊನೆಯ ಪಂದ್ಯವನ್ನೂ ಆಡಿದ್ದು ವಿಶೇಷ. ಕ್ರಿಕೆಟ್ ಲೋಕದ ಬಹಳಷ್ಟು ದಿಗ್ಗಜರಿಗೂ ಒಲಿಯದ ಅಪರೂಪದ ಸನ್ಮಾನದೊಂದಿಗೆ ಜೂಲನ್ ನಿರ್ಗಮಿಸಿದರು. 1997ರಲ್ಲಿ ಕೋಲ್ಕತ್ತದ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ನಡುವಣ ಮಹಿಳಾ ವಿಶ್ವಕಪ್ ಪಂದ್ಯದಲ್ಲಿ ಬೌಂಡರಿ ಗೆರೆಯಾಚೆ ಚೆಂಡು ಸಂಗ್ರಹಿಸಿ ಕೊಡುವ ಬಾಲಕಿಯಾಗಿದ್ದ ಜೂಲನ್ ಹಲವಾರು ಬಾಲಕಿಯರು ಮಧ್ಯಮವೇಗದ ಬೌಲರ್‌ಗಳಾಗಲು ಸ್ಫೂರ್ತಿಯಾಗಿ ಬೆಳೆದರು.



ಮಹಿಳಾ ಕ್ರಿಕೆಟ್‌ಗೆ ಇನ್ನಷ್ಟು ಬಲ ತುಂಬುವ ಹೊಣೆ ಯುವಪೀಳಿಗೆಯ ಮೇಲೆ ಇದೆ

ಕನ್ನಡತಿ ಶಾಂತಾ ರಂಗಸ್ವಾಮಿ ಅವರ ನೇತೃತ್ವದಲ್ಲಿ ಭಾರತ ಮಹಿಳಾ ತಂಡವು ಹಾಕಿದ ಬುನಾದಿಯ ಮೇಲೆ ಭವ್ಯಸೌಧ ಕಟ್ಟಿದವರಲ್ಲಿ ಜೂಲನ್ ಹಾಗೂ ಮಿಥಾಲಿ ರಾಜ್ ಪ್ರಮುಖರು. ಬ್ಯಾಟಿಂಗ್‌ನಲ್ಲಿ ಮಿಥಾಲಿ ರನ್ ಹೊಳೆ ಹರಿಸಿದರು. ಬೌಲಿಂಗ್‌ನಲ್ಲಿ ಜೂಲನ್ ವಿಕೆಟ್‌ಗಳ ರಾಶಿ ಹಾಕಿದರು. ಅದಕ್ಕಾಗಿಯೇ ಮೂರು ಮಾದರಿಗಳಲ್ಲಿಯೂ ಸೇರಿ ಜೂಲನ್ 355 ವಿಕೆಟ್‌ಗಳನ್ನು ಗಳಿಸಿದ್ದಾರೆ. ಈ ಪೈಕಿ 204 ಏಕದಿನ ಪಂದ್ಯಗಳಲ್ಲಿ 255 ವಿಕೆಟ್ ಪಡೆದಿರುವ ಅಗ್ರಮಾನ್ಯ ಬೌಲರ್ ಆಗಿದ್ದಾರೆ. ಮಧ್ಯಮವೇಗದ ಬೌಲರ್ ಆಗಿ ಇಷ್ಟು ದೀರ್ಘ ಕಾಲ ಆಡುವುದು ಸಾಮಾನ್ಯ ಸಂಗತಿ ಅಲ್ಲ. ಏಕೆಂದರೆ, ವೇಗದ ಬೌಲರ್‌ಗಳು ಗಾಯಗಳಿಗೆ ತುತ್ತಾಗುವುದು ಸರ್ವೇಸಾಮಾನ್ಯ. ಅಂತಹ ಗಾಯಗಳು ಜೂಲನ್ ಅವರನ್ನೂ ಕಾಡಿವೆ. ಫಿಸಿಯೊ, ಟ್ರೇನರ್ ಹಾಗೂ ಉನ್ನತಮಟ್ಟದ ತರಬೇತಿ ಸೌಲಭ್ಯಗಳಿಲ್ಲದಿದ್ದರೂ ಅವರು ಅಳುಕಲಿಲ್ಲ. ಇನ್ನೇನು ವೃತ್ತಿಜೀವನವೇ ಅಂತ್ಯವಾಯಿತು ಎಂಬ ಸಂದರ್ಭಗಳಿಂದ ಫೀನಿಕ್ಸ್ ಹಕ್ಕಿಯಂತೆ ಎದ್ದು ಬಂದ ಹಲವು ಉದಾಹರಣೆಗಳು ಅವರ ಜೀವನದಲ್ಲಿವೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಜೂಲನ್ ಪ್ರಯೋಗಿಸಿದ ಒಟ್ಟು 13,622 ಎಸೆತಗಳು ಅವರ ಭುಜಬಲ ಹಾಗೂ ಆತ್ಮಬಲಕ್ಕೆ ಸಾಕ್ಷಿಯಾಗಿವೆ. ಮಹಿಳಾ ಕ್ರಿಕೆಟ್‌ನಲ್ಲಿ ಬಲಾಢ್ಯವಾಗಿರುವ ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್ ಹಾಗೂ ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳಿಗೆ ಸದಾ ಸಿಂಹಸ್ವಪ್ನವಾಗಿದ್ದವರು. ಕೊನೆಯ ಪಂದ್ಯದಲ್ಲಿಯೂ ಅವರ ಸಾಧನೆ (10–3–30–2) ಗಮನ ಸೆಳೆಯುವಂತಹುದು. ಇದು ಅವರ ಸಿದ್ಧತೆ ಹಾಗೂ ಬದ್ಧತೆಯನ್ನು ಬಿಂಬಿಸುತ್ತದೆ. ಅವರ ಈ ಗುಣ ಹೊಸತಲೆಮಾರಿನ ಕ್ರಿಕೆಟಿಗರಿಗೆ ಆದರ್ಶವಾಗ ಬೇಕು. ಮಹಿಳಾ ಕ್ರಿಕೆಟ್ ಇವತ್ತು ಈ ಮಟ್ಟದ ಬೆಳವಣಿಗೆ ಕಾಣಲು ಜೂಲನ್, ಮಿಥಾಲಿ, ಶಾಂತಾ ರಂಗಸ್ವಾಮಿ, ಡಯಾನಾ ಎಡುಲ್ಜಿ, ಕಲ್ಪನಾ, ಅಂಜುಮ್ ಚೋಪ್ರಾ, ಮಮತಾ ಮಾಬೆನ್ ಅವರಂತಹ ಆಟಗಾರ್ತಿಯರ ಶ್ರಮವೇ ಕಾರಣ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕೂಡ ಮಹಿಳಾ ಐಪಿಎಲ್ ಸೇರಿದಂತೆ ದೇಶಿ ಟೂರ್ನಿಗಳನ್ನು ಹೆಚ್ಚಿಸುವತ್ತ ಹೆಜ್ಜೆ ಇಟ್ಟಿದೆ. ಮಹಿಳಾ ಕ್ರಿಕೆಟ್‌ಗೆ ಇನ್ನಷ್ಟು ಬಲ ತುಂಬುವ ಹೊಣೆ ಯುವಪೀಳಿಗೆಯ ಮೇಲೆ ಇದೆ. ತಾವು ಆಡಿದ್ದ ತಂಡವು ಎರಡು ಬಾರಿ ವಿಶ್ವಕಪ್ ಟೂರ್ನಿಗಳ ಫೈನಲ್ ಪ್ರವೇಶಿಸಿತ್ತು. ಆದರೆ ಕಪ್ ಜಯಿಸಲಿಲ್ಲವೆಂಬ ಕೊರಗು ಇದೆ ಎಂದು ಜೂಲನ್ ಹೇಳಿದ್ದಾರೆ. ಇತ್ತೀಚೆಗಷ್ಟೇ ನಿವೃತ್ತರಾದ ಮಿಥಾಲಿ ಕೂಡ ಇದೇ ಮಾತು ಹೇಳಿದ್ದರು. ಈ ಉತ್ಕೃಷ್ಟ ಪ್ರತಿಭೆಗಳ ಕನಸನ್ನು ಸಾಕಾರಗೊಳಿಸುವ ಹೊಣೆ ಭಾರತ ತಂಡದ ಯುವಪೀಳಿಗೆಯ ಮುಂದಿದೆ.

ದಿನದ ಟ್ವೀಟ್

ಧೈರ್ಯದಿಂದ ಬೆಳೆಸಿ



ಹೆಣ್ಣುಮಕ್ಕಳು ವರದಾನವಿದ್ದಂತೆ. ನಮ್ಮ ಬದುಕಿಗೆ ಪ್ರೀತಿ, ನಗು ಹಾಗೂ ಸಂತೋಷವನ್ನು ತಂದುಕೊಡುವ ನಮ್ಮ ಹೆಣ್ಣುಮಕ್ಕಳನ್ನು ನಾವು ಗೌರವಿಸುತ್ತೇವೆ ಮತ್ತು ಅವರಿಗಾಗಿ ಸಂಭ್ರಮಿಸುತ್ತೇವೆ. ಜಗತ್ತಿಗೆ ಬಲಿಷ್ಠ ಮಹಿಳೆಯರ ಅಗತ್ಯವಿದೆ. ನಿಮ್ಮ ಹೆಣ್ಣುಮಕ್ಕಳನ್ನು ಧೈರ್ಯದಿಂದ ಬೆಳೆಸಿ, ಭಯದಿಂದಲ್ಲ! #InternationalDaughtersDay

ಪಿ.ಸಿ.ಮೋಹನ್, ಬಿಜೆಪಿ ಸಂಸದ

ಕಿಡಿನುಡಿ



ಪೇಸಿಎಂ ಪೋಸ್ಟರ್ ಚಾತುರ್ಯದಿಂದ ಕೂಡಿದೆ. ಆದರೆ ಅದು ವಿಶ್ವಾಸಾರ್ಹ ಅಲ್ಲ. ಜೆಸಿಬಿ ಪಕ್ಷಗಳ ನೇತೃತ್ವದ ಯಾವುದೇ ಸರ್ಕಾರಕ್ಕೆ ಮಸಿ ಬಳಿಯಲು ಬೇಕಾದಷ್ಟು ಭ್ರಷ್ಟಾಚಾರ ಆ ಪಕ್ಷಗಳಲ್ಲಿಯೇ ಇದೆ. ಭ್ರಷ್ಟಾಚಾರ ವಿರೋಧಿ ಆಂದೋಲನದ ಉದ್ದೇಶವು ಪೇಸಿಎಂ ಬದಲಾಗಿ ಕಲೆಕ್ಷನ್ಸ್ ಐಎನ್‌ಸಿ ತರುವುದೇ ಆಗಿದ್ದರೆ ಅದಕ್ಕೆ ಹೆಚ್ಚಿನ ಅರ್ಥ ಇರುವುದಿಲ್ಲ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಶುಕ್ರವಾರ, 26-9-1997

- **ಜೆಎಂಎಂ ಲಂಚ ಪ್ರಕರಣ: ವಿಶೇಷ ಕೋರ್ಟಿನಲ್ಲಿ ನ. 4ರಿಂದ ವಿಚಾರಣೆ**

ನವದೆಹಲಿ, ಸೆ. 25 (ಯುಎನ್‌ಐ, ಪಿಟಿಐ)– ಜೆಎಂಎಂ ಲಂಚ ಪ್ರಕರಣದಲ್ಲಿ ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾವ್ ಹಾಗೂ ಇತರ 19 ಮಂದಿಯ ವಿರುದ್ಧ ನಿಯೋಜಿತ ಸಿಬಿಐ ನ್ಯಾಯಾಲಯ ಇಂದು ದೋಷಾರೋಪ ನಿಗದಿಪಡಿಸಿತು.

ಪ್ರಧಾನಿಯಾಗಿದ್ದವರು ಭ್ರಷ್ಟಾಚಾರದ ಆರೋಪಕ್ಕೆ ಗುರಿಯಾಗಿ, ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸುತ್ತಿರುವುದು ಇದೇ ಮೊದಲು. ಅವರು ವಿಚಾರಣೆ ಎದುರಿಸುತ್ತಿರುವ ಎರಡನೇ ಕ್ರಿಮಿನಲ್ ಪ್ರಕರಣ ಇದಾಗಿದ್ದು, ಲಕ್ಕೂಭಾಯಿ ಪಾಠಕ್ ವಂಚನೆ ಪ್ರಕರಣದಲ್ಲೂ ನರಸಿಂಹರಾವ್ ವಿಚಾರಣೆ ಎದುರಿಸುತ್ತಿದ್ದಾರೆ.

- **ಸರ್ಕಾರಿ ಗೌರವದೊಂದಿಗೆ ಇಂದು ವೆಂಕಟರಾಮಯ್ಯ ಅಂತ್ಯಕ್ರಿಯೆ**

ಬೆಂಗಳೂರು, ಸೆ. 25– ನಿನ್ನೆ ಮಧ್ಯರಾತ್ರಿ ನಿಧನರಾದ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಅವರ ಅಂತಿಮ ಸಂಸ್ಕಾರವು ನಾಳೆ ರಾಜ್ಯ ಸರ್ಕಾರಿ ಗೌರವದೊಂದಿಗೆ ಅವರ ಹುಟ್ಟೂರಾದ ತಣ್ಣೂರಿನಲ್ಲಿ ನಡೆಯಲಿದೆ.

ವೆಂಕಟರಾಮಯ್ಯ ಅವರ ಮನೆಗೆ ತೆರಳಿ ಅವರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವಿರಿಸಿ ಅಂತಿಮ ಗೌರವ ಸಲ್ಲಿಸಿದ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಈ ವಿಷಯ ತಿಳಿಸಿದರು. ದಿವಂಗತರ ಗೌರವಾರ್ಥ ರಾಜ್ಯ ಸರ್ಕಾರ ಇಂದು ಶೋಕಾಚರಣೆ ಘೋಷಿಸಿತ್ತು.

50 ವರ್ಷಗಳ ಹಿಂದೆ

ಮಂಗಳವಾರ, 26-9-1972

- **ಭದ್ರಾವತಿ ಕಾರ್ಖಾನೆ ಲಾಕ್‌ಔಟ್ ತೆರವು**

ಬೆಂಗಳೂರು, ಸೆ. 25 – ಇಂದು ಕಾರ್ಮಿಕ ಸಚಿವ ಶ್ರೀ ಅಜೀಜ್ ಸೇಠ್ ಅವರ ನೇತೃತ್ವದಲ್ಲಿ ನಡೆದ ತ್ರಿಪಕ್ಷ ಸಮ್ಮೇಳನದಲ್ಲಿ ಆದ ಒಪ್ಪಂದ ರೀತ್ಯಾ, ಭದ್ರಾವತಿ ಕಬ್ಬಿಣ ಹಾಗೂ ಉಕ್ಕು ಕಾರ್ಖಾನೆಯ ಆಡಳಿತ ತತ್‌ಕ್ಷಣದಿಂದ ಲಾಕ್‌ಔಟ್ ತೆಗೆಯಲು ಒಪ್ಪಿದೆ. ಬುಧವಾರದಿಂದ ಕೆಲಸಗಾರರು ಕೆಲಸಕ್ಕೆ ಹಿಂದಿರುಗಲಿದ್ದಾರೆ.

ತ್ರಿಪಕ್ಷ ಸಮ್ಮೇಳನದಲ್ಲಿ ಕಾರ್ಖಾನೆಯ ಎರಡು ಕಾರ್ಮಿಕ ಸಂಘಗಳ ಪ್ರತಿನಿಧಿಗಳೂ ಹಾಜರಿದ್ದು, ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. 19ರಂದು ಕಾರ್ಖಾನೆಯ ಲಾಕ್‌ಔಟನ್ನು ಘೋಷಿಸಲಾಗಿದ್ದು, ಪ್ರತಿದಿನ 12 ಲಕ್ಷ ರೂಪಾಯಿಗಳಷ್ಟು ನಷ್ಟವಾಗುತ್ತಿತ್ತು.

- **ಪ್ರಭಾವ ಬೀರಲು ಇಥಿಯೋಪಿಯಾಕ್ಕೆ ರಾಷ್ಟ್ರಪತಿ ಗಿರಿ ಕರೆ**

ಅಡೀಸ್ ಅಬಾಬ, ಸೆ. 25– ಉಗಾಂಡದಲ್ಲಿನ ಏಷ್ಯನ್ ಸಂಜಾತರ ಸಮಸ್ಯೆ ಪರಿಹರಿಸಲು ಪ್ರಭಾವ ಬೀರುವಂತೆ ರಾಷ್ಟ್ರಪತಿ ವಿ.ವಿ. ಗಿರಿಯವರು ಇಂದು ಇಲ್ಲಿ ಇಥಿಯೋಪಿಯಾ ಚಕ್ರವರ್ತಿ ಹೈಲಿ ಸಲಾಸಿಯವರಿಗೆ ಮನವಿ ಮಾಡಿದರು.

ರಾಷ್ಟ್ರಪತಿ ಗಿರಿಯವರು ಚಕ್ರವರ್ತಿ ಹೈಲಿ ಸಲಾಸಿಯವರ ಜೊತೆ ಇಂದು ಮಾತುಕತೆ ನಡೆಸಿದಾಗ ಈ ಮನವಿ ಮಾಡಿದರೆಂದು ವರದಿಯಾಗಿದೆ. ಪ್ರತೀ ರಾಷ್ಟ್ರಕ್ಕೂ ವಿದೇಶಿಯರ ಬಗ್ಗೆ ತನ್ನದೇ ಆದ ರೀತಿಯಲ್ಲಿ ವರ್ತಿಸುವ ಹಕ್ಕಿದೆ ಎಂದು ಚಕ್ರವರ್ತಿಯವರಿಗೆ ತಿಳಿಸಿದ ಗಿರಿಯವರು, ಉಗಾಂಡದಲ್ಲಿನ ಏಷ್ಯನ್ನರ ಬಗ್ಗೆ ಮಾನವೀಯ ವರ್ತನೆ ಅಗತ್ಯ. ಏಷ್ಯನ್ನರು ಘನತೆ, ಗೌರವಗಳಿಂದ ಉಗಾಂಡ ತ್ಯಜಿಸಲು ಅವಕಾಶ ಮಾಡಿಕೊಡಬೇಕೆಂದು ಹೇಳಿದರೆಂದು ತಿಳಿದುಬಂದಿದೆ.

ಉಗಾಂಡದಿಂದ ಉಚ್ಚಾಟಿಸಲ್ಪಟ್ಟ ಭಾರತೀಯರನ್ನು ಕರೆಸಿಕೊಳ್ಳಲು ಭಾರತ ಸಂಪೂರ್ಣ ವ್ಯವಸ್ಥೆ ಮಾಡಿದೆಯೆಂದು ಗಿರಿಯವರು ತಿಳಿಸಿದರೆಂದು ವರದಿಯಾಗಿದೆ.

ನಾಯಕತ್ವ ಆಧಾರಿತ ಚುನಾವಣಾ ಸ್ಪರ್ಧೆ ಎದುರಿಸಲು ಕಾಂಗ್ರೆಸ್ ಇನ್ನೂ ಸನ್ನದ್ಧವಾಗಿಲ್ಲ

ಹೊಸ ನಾಯಕತ್ವದಿಂದ ಬಯಸುವುದೇನು?



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಹೆಸರಿನಲ್ಲಿ ‘ಗಾಂಧಿ’ ಇಲ್ಲದವರೊಬ್ಬರು ಕಾಂಗ್ರೆಸ್ಸಿನ ಅಧ್ಯಕ್ಷರಾಗುವ ಸಂಭವ ಇದೆ ಎಂಬುದು ಈಗ ಸ್ಪಷ್ಟವಾಗಿದೆ. ಅಧ್ಯಕ್ಷ ಆಗಲು ತಾವು ಸಿದ್ಧವಿಲ್ಲ ಎಂದು ರಾಹುಲ್ ಗಾಂಧಿ ಸ್ಪಷ್ಟಪಡಿಸಿದ್ದಾರೆ. ಹೀಗಾಗಿ, ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ಯಾರ ನಡುವೆ ಎಂಬುದು ಹೆಚ್ಚು ಸ್ಪಷ್ಟವಾಗುತ್ತಿದೆ. ಪಕ್ಷದ ಅಧಿಕೃತ ನಾಯಕತ್ವವು ಕೈಬದಲಾಗಲಿದೆ. ಆದರೆ, ಗಾಂಧಿ ಕುಟುಂಬದ ಪ್ರಭಾವವು ಹೊಸ ಅಧ್ಯಕ್ಷರ ಮೇಲೆ ಎಷ್ಟಿರಲಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತದೆ.

ಈ ನಡುವೆ, ರಾಹುಲ್ ಗಾಂಧಿ ಅವರು ‘ಭಾರತ್ ಜೋಡೊ’ ಭಾಗವಾಗಿ ದೇಶದ ದಕ್ಷಿಣದ ತುದಿಯಿಂದ ಉತ್ತರದ ತುದಿವರೆಗೆ ಯಾತ್ರೆ ನಡೆಸುತ್ತಿದ್ದಾರೆ. ಯಾತ್ರೆ ನಡೆಯುತ್ತಿರುವ ಹೊತ್ತಿನಲ್ಲಿ ಗೋವಾದ ಕಾಂಗ್ರೆಸ್ ಶಾಸಕಾಂಗ ಪಕ್ಷವು ನಿರ್ನಾಮವಾಗುವ ಹಂತ ಸಮೀಪಿಸಿತ್ತು. ಯಾತ್ರೆ ಆರಂಭಕ್ಕೂ ಮೊದಲು, ಗುಲಾಂ ನಬಿ ಆಜಾದ್ ನೇತೃತ್ವದಲ್ಲಿ ಪಕ್ಷದ ಪ್ರಮುಖ ನಾಯಕರು ಪಕ್ಷ ತೊರೆದರು. ಪಕ್ಷದ ಒಳಗಿನ ಈ ಬದಲಾವಣೆಗಳು ಹೊಸವೇನೂ ಅಲ್ಲ. 2014ರಲ್ಲಿ ಪಕ್ಷವು ರಾಷ್ಟ್ರ ಮಟ್ಟದಲ್ಲಿ ಅಧಿಕಾರ ಕಳೆದುಕೊಂಡಾಗಿನಿಂದ ಕಾಲಕಾಲಕ್ಕೆ ಇಂಥವು ನಡೆಯುತ್ತಿವೆ. ಒಂದೆಡೆ ಪಕ್ಷವು ತಾನು ಎಂಟು ವರ್ಷಗಳ ಹಿಂದೆ ಅನುಭವಿಸಿದ ಚುನಾವಣಾ ಸೋಲಿನಿಂದ ಚೇತರಿಕೆ ಕಂಡುಕೊಳ್ಳಲು ಹೆಣಗುತ್ತಿದೆ. ಇನ್ನೊಂದೆಡೆ, ಆಡಳಿತ ಪಕ್ಷವಾಗಿ ಬಿಜೆಪಿ ಪ್ರವರ್ಧಮಾನಕ್ಕೆ ಬಂದಿದ್ದು ಹಾಗೂ ಅದು ಸತತ ಎರಡು ಬಾರಿ ಲೋಕಸಭೆಯಲ್ಲಿ ಬಹುಮತ ಪಡೆದಿದ್ದು ದೇಶದ ರಾಜಕೀಯ ಸಂಕಥನವನ್ನು ಮತ್ತು ರಾಜಕೀಯ ಸ್ಪರ್ಧಾಕಣವನ್ನು ದೇಶದಾದ್ಯಂತ ಬದಲಾಯಿಸಿದೆ. ಕಾಂಗ್ರೆಸ್ಸಿನ ಹೊಸ ಅಧ್ಯಕ್ಷರು ಈ ಸವಾಲನ್ನು ಎದುರಿಸಬೇಕಾಗುತ್ತದೆ.

ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷವು ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಪಕ್ಷಗಳ ಪೈಕಿ ಪ್ರಮುಖ ಸ್ಥಾನವನ್ನು ಉಳಿಸಿಕೊಳ್ಳುವ ಸವಾಲನ್ನು ಎದುರಿಸುತ್ತಿದೆ. ರಾಜ್ಯಗಳ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷವು ತನ್ನದೇ ಪ್ರಧಾನ ಎದುರಾಳಿ ಪಕ್ಷಗಳಿಂದಾಗಿ ಅಂಚಿಗೆ ಜರುಗುತ್ತಿದೆ. ಅಪರೂಪಕ್ಕೆ ಒಮ್ಮೆ ಎಂಬಂತೆ ಕಾಂಗ್ರೆಸ್ ಪಕ್ಷವು ಚುನಾವಣಾ ಗೆಲುವು ಕಾಣುತ್ತಿದೆ. ದೇಶದ ಎರಡು ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಪಕ್ಷವು ಸರ್ಕಾರವನ್ನು ಮುನ್ನಡೆಸುತ್ತಿದೆ. ಮೂರು ರಾಜ್ಯಗಳಲ್ಲಿ ಪಕ್ಷವು ಸರ್ಕಾರದಲ್ಲಿ ಸಣ್ಣ ಪಾಲುದಾರ ಆಗಿದೆ. ಹದಿನೈದಕ್ಕೂ ಹೆಚ್ಚಿನ ರಾಜ್ಯಗಳಲ್ಲಿ ಬಿಜೆಪಿ ಅಥವಾ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ (ಎನ್‌ಡಿಎ) ಪಾಲುದಾರ ಪಕ್ಷಗಳು ಸರ್ಕಾರ ನಡೆಸುತ್ತಿವೆ. ಎಂಟು ರಾಜ್ಯಗಳಲ್ಲಿ ಎನ್‌ಡಿಎ ಹೊರತುಪಡಿಸಿದ, ಕಾಂಗ್ರೆಸ್ ಜೊತೆಗೂ ಮೈತ್ರಿ ಇಲ್ಲದ ಪಕ್ಷಗಳು ಸರ್ಕಾರ ನಡೆಸುತ್ತಿವೆ. ಕಾಂಗ್ರೆಸ್ ಪಕ್ಷವು ವಿರೋಧ ಪಕ್ಷಕ್ಕೆ ಇರುವ ಸ್ಥಾನವನ್ನು ಎನ್‌ಡಿಎ ಮೈತ್ರಿಕೂಟದ ಆಚೆಗಿನ ಪಕ್ಷಗಳಿಗೆ ಬಿಟ್ಟುಕೊಡುತ್ತಿರುವುದರ ಸ್ಪಷ್ಟ ನಿದರ್ಶನ ಇದು.

ಕಾಂಗ್ರೆಸ್ ಪಕ್ಷದಲ್ಲಿನ ಬಿಕ್ಕಟ್ಟು ಸ್ಪಷ್ಟವಾಗಿ ಮೂರು ಕಡೆಗಳಲ್ಲಿ ಕಾಣಿಸಿಕೊಂಡಿದೆ. ಮೊದಲನೆಯದಾಗಿ, ಕಾಂಗ್ರೆಸ್ ಪಕ್ಷವು ನಾಯಕತ್ವದ ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಪಕ್ಷದ ರಾಷ್ಟ್ರೀಯ ನಾಯಕತ್ವಕ್ಕೆ ಪಕ್ಷವನ್ನು ಒಂದಾಗಿ ಹಿಡಿದಿರಿಸಿಕೊಳ್ಳಲು ಅಥವಾ ಚುನಾವಣೆಗಳಲ್ಲಿ ಗೆಲುವು ತಂದುಕೊಡುವ ರೀತಿಯಲ್ಲಿ ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಲು ಆಗುತ್ತಿಲ್ಲ. 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷವು ಸೋಲು ಕಂಡ ನಂತರದಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಹುಲ್ ಗಾಂಧಿ ರಾಜೀನಾಮೆ ಸಲ್ಲಿಸಿದರು. ಅದಾದ ನಂತರದಲ್ಲಿ, ಪಕ್ಷದಲ್ಲಿ ಅನಿಶ್ಚಿತತೆಯ ಕಾರ್ಮೋಡ ಆವರಿಸಿದೆ. ಸೋನಿಯಾ ಗಾಂಧಿ ಅವರು ಪಕ್ಷದ ‘ಹಂಗಾಮಿ’ ಅಧ್ಯಕ್ಷರಾಗಿರುವುದರ ಹಿಂದೆ ‘ಶಾಶ್ವತ’ದ ಅಂಶವೊಂದು ಇರುವಂತೆ ಕಾಣುತ್ತಿತ್ತು. ರಾಹುಲ್ ಅವರು ರಾಜೀನಾಮೆ ನೀಡಿದ ನಂತರದಲ್ಲಿ ಪಕ್ಷವು ಸೋನಿಯಾ ಅವರತ್ತ ಮುಖ ಮಾಡಬೇಕಾಗಿ ಬಂದದ್ದು, ದೃಢ ನಾಯಕತ್ವವನ್ನು ನೀಡಲು ಪಕ್ಷಕ್ಕೆ ಆಗುತ್ತಿಲ್ಲ ಎಂಬುದರ ಸೂಚನೆ. ಗಾಂಧಿ ಕುಟುಂಬದ ಆಚೆಗೆ ನಾಯಕತ್ವವನ್ನು ಕಂಡುಕೊಳ್ಳುವಲ್ಲಿ ಇದ್ದ ಹಿಂಜರಿಕೆಯನ್ನು ಪಕ್ಷವು ಈಗ ಕೊಡವಿಕೊಳ್ಳುತ್ತಿರುವಂತೆ ಕಾಣುತ್ತಿದೆ. ಇದರಿಂದಾಗಿ ಪರಿಸ್ಥಿತಿ ಒಂದಿಷ್ಟು ಬದಲಾಗಬಹುದು ಎಂಬ ನಿರೀಕ್ಷೆ ಇದೆ. ಕಾಂಗ್ರೆಸ್ಸಿಗೆ ಎದುರಾಳಿ ಈಗಿನ ಆಡಳಿತ ಪಕ್ಷ. ಆ ಪಕ್ಷದ ಬಲವರ್ಧನೆಗೂ ಅಲ್ಲಿನ ನಾಯಕತ್ವಕ್ಕೂ ಸಂಬಂಧ ಇದೆ. ಹೀಗಾಗಿ, ಕಾಂಗ್ರೆಸ್ಸಿನಲ್ಲಿ ನಾಯಕತ್ವ ಬದಲಾವಣೆಯು ಮಹತ್ವ ಪಡೆದುಕೊಳ್ಳುತ್ತದೆ.

ಕಾಂಗ್ರೆಸ್ಸಿನ ರಾಷ್ಟ್ರೀಯ ನಾಯಕತ್ವವು ಪಕ್ಷಕ್ಕೆ ಸ್ಪಷ್ಟ ದಿಕ್ಕು ತೋರಿಸಿಲ್ಲವಾದ ಕಾರಣ, ಪಕ್ಷದ ರಾಜ್ಯ ಘಟಕಗಳಲ್ಲಿಯೂ ನಾಯಕತ್ವ ಬೆಳೆದಿಲ್ಲ, ಸಶಕ್ತವಾಗಿಲ್ಲ. ರಾಜ್ಯಗಳ ಮಟ್ಟದಲ್ಲಿ ಕಾಂಗ್ರೆಸ್ ಎದುರಿಸುತ್ತಿರುವ ಬಿಕ್ಕಟ್ಟಿಗೆ ಹೆಚ್ಚಿನ ಕೊಡುಗೆ ನೀಡಿರುವುದು ಗುಂಪುಗಾರಿಕೆ ಮತ್ತು ಪರಸ್ಪರ ಸ್ಪರ್ಧೆಗೆ ಇಳಿದಿರುವ ನಾಯಕರ ನಡುವೆ ಅಧಿಕಾರಕ್ಕಾಗಿ ಇರುವ ಕಿತ್ತಾಟ. ಗಟ್ಟಿಯಾದ ನಿರ್ಧಾರವನ್ನು ತೆಗೆದುಕೊಳ್ಳಲು ರಾಷ್ಟ್ರೀಯ ನಾಯಕತ್ವಕ್ಕೆ ಆಗದಿರುವುದು ಹಾಗೂ ರಾಜ್ಯ ಮಟ್ಟದ ನಾಯಕರು ಪಕ್ಷದ ಚೌಕಟ್ಟಿಗೆ ಒಳಪಡುವಂತೆ ಮಾಡಲು ಅದಕ್ಕೆ ಸಾಧ್ಯವಾಗದಿರುವುದು ಹಲವು ರಾಜ್ಯಗಳಲ್ಲಿ ಕಣ್ಣಿಗೆ ಕಾಣುವಂತಿದೆ.

ನಾಯಕತ್ವವು ನಿರ್ಧಾರಗಳನ್ನು ಕೈಗೊಳ್ಳದೆ ಇರುವುದರ ಜೊತೆಯಲ್ಲಿ, ಹೈಕಮಾಂಡ್‌ಗೆ ಹತ್ತಿರ ಅನ್ನಿಸಿಕೊಂಡಿರುವ ಸಲಹೆಗಾರರ ತಂಡವೂ ಒಂದು ಸಮಸ್ಯೆಯಾಗಿದೆ. ಸಲಹೆಗಾರರಲ್ಲಿ ಬಹುತೇಕರು ವರ್ಷಗಳಿಂದ ನೇರ ಚುನಾವಣೆಯಲ್ಲಿ ಗೆದ್ದವರಲ್ಲ. ತಳಮಟ್ಟದಲ್ಲಿ ಏನಾಗುತ್ತಿದೆ ಎನ್ನುವುದನ್ನು ನೇರವಾಗಿ ಕಾಣುವವರಲ್ಲ. ಹೀಗಾಗಿ, ನಾಯಕತ್ವಕ್ಕೆ ಸಿಗುವ ಮಾಹಿತಿಯು ಸಾಮಾನ್ಯವಾಗಿ ವಾಸ್ತವಕ್ಕೆ ಹತ್ತಿರವಾಗಿರುವುದಿಲ್ಲ, ಸಲಹೆಗಾರರ ಅಜೆಂಡಾಗಳಿಗೆ, ಹಿತಾಸಕ್ತಿಗಳಿಗೆ, ಆಕಾಂಕ್ಷೆಗಳಿಗೆ ಅನುಗುಣವಾಗಿ ಮಾಹಿತಿ ಇರುತ್ತದೆ. ಪಕ್ಷಕ್ಕೆ ಹೊಸದಾಗಿ ಅಧ್ಯಕ್ಷ ಆಗುವವರು ಈ ಪ್ರವೃತ್ತಿಗೆ ಕಡಿವಾಣ ಹಾಕುವರೇ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕು.



ಎರಡನೆಯ ಸಂಗತಿ ಎಂದರೆ, ಅಧಿಕಾರಕ್ಕೆ ಬರಬೇಕು ಎಂಬ ಹಸಿವನ್ನು ಕಾಂಗ್ರೆಸ್ ಪಕ್ಷವು ಕಳೆದುಕೊಂಡಂತಿದೆ. ವರ್ಷದ ಯಾವುದೇ ಸಂದರ್ಭದಲ್ಲಿ, ದಿನದ ಯಾವುದೇ ಹೊತ್ತಿನಲ್ಲಿ ರಾಜಕೀಯ ಸ್ಪರ್ಧೆಗೆ ಸನ್ನದ್ಧವಾಗಿ ಇರುವ ಬಿಜೆಪಿಯಂತಹ ಎದುರಾಳಿ ಇರುವಾಗಲೂ ಕಾಂಗ್ರೆಸ್ ಪಕ್ಷವು ಯಾವಾಗಲೋ ಒಮ್ಮೆ ಪ್ರತಿಕ್ರಿಯೆ ನೀಡುತ್ತಿರುತ್ತದೆ. ಅದಕ್ಕಿಂತ ಮುಖ್ಯವೆಂದರೆ, ಕಾಂಗ್ರೆಸ್ ಪಕ್ಷವು ತಾನೇ ಒಂದು ಅಜೆಂಡಾವನ್ನು ಸಾರ್ವಜನಿಕರ ಮುಂದೆ ಇರಿಸುವ ಬದಲು ಬಿಜೆಪಿ ರೂಪಿಸುವ ಅಜೆಂಡಾಕ್ಕೆ ತಾನು ಪ್ರತಿಕ್ರಿಯೆ ಮಾತ್ರ ನೀಡುತ್ತಿರುತ್ತದೆ. ಕಾಂಗ್ರೆಸ್ ಪಕ್ಷವು ತನ್ನ ಎದುರಾಳಿ ಪಕ್ಷಗಳ ಖೆಡ್ಡಾಕ್ಕೆ ಜಾರಿಬಿದ್ದಿದೆ, ಚುನಾವಣಾ ಕಣದಲ್ಲಿ ಪರ್ಯಾಯ ನೀತಿಗಳ ಬಗ್ಗೆ ಚರ್ಚೆ ಆಗುವ ಬದಲು ನಾಯಕತ್ವದ ಬಗ್ಗೆ ಮಾತ್ರ ಚರ್ಚೆ ಆಗುತ್ತಿದೆ. ಅಭಿವೃದ್ಧಿ ಹಾಗೂ ಜನರ ಕಲ್ಯಾಣವನ್ನು ಕೇಂದ್ರೀಕರಿಸಿಕೊಂಡ ಪರ್ಯಾಯ ರಾಜಕೀಯ ಕಾರ್ಯಕ್ರಮಗಳನ್ನು ಜನರ ಮುಂದೆ ಇರಿಸಲು ಕಾಂಗ್ರೆಸ್ಸಿಗೆ ಸಾಧ್ಯವಾಗದಿರುವುದರ ಪರಿಣಾಮವಾಗಿ, ಚುನಾವಣಾ ಸ್ಪರ್ಧೆಯು ನಾಯಕತ್ವವನ್ನು ಕೇಂದ್ರೀಕರಿಸಿಕೊಂಡು ಆಗುತ್ತಿದೆ. ಆದರೆ, ಹಿಂದೆಯೇ ಹೇಳಿರುವಂತೆ ನಾಯಕತ್ವ ಆಧಾರಿತ ಚುನಾವಣಾ ಸ್ಪರ್ಧೆಯನ್ನು ಎದುರಿಸಲು ಕಾಂಗ್ರೆಸ್ ಪಕ್ಷವು ಸನ್ನದ್ಧವಾಗಿಯೇ ಇಲ್ಲ. ಕಾಂಗ್ರೆಸ್ಸಿಗೆ ಹೊಸ ಅಧ್ಯಕ್ಷ ಬಂದ ನಂತರದಲ್ಲಿಯೂ, ಅವರನ್ನು ಪರ್ಯಾಯ ನಾಯಕ ಎಂಬಂತೆ ಬಿಂಬಿಸುವ ಸಾಧ್ಯತೆ ಕಡಿಮೆ.

ಮೂರನೆಯದಾಗಿ, ರಾಜಕೀಯ ಹಾಗೂ ಚುನಾವಣೆ ಸ್ಪರ್ಧೆಗಳು ಹೊಸ ಸಂಕಥನಗಳ ಸುತ್ತ ನಡೆಯುವಂತೆ ಬಿಜೆಪಿ ನೋಡಿಕೊಂಡಿದೆ. ರಾಷ್ಟ್ರೀಯತೆ, ದೇಶಭಕ್ತಿ, ರಾಷ್ಟ್ರ ನಾಯಕತ್ವ, ಹಿಂದೆ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ನಾಯಕರನ್ನು ಈ ಸಂಕಥನ ಒಳಗೊಳ್ಳುತ್ತದೆ. ಆದರೆ, ಕಾಂಗ್ರೆಸ್ ಪಕ್ಷವು ಇವಕ್ಕೆಲ್ಲ ತನ್ನ ಪ್ರತಿಕ್ರಿಯೆಗಳು ದೃಢವಾಗಿರುವಂತೆ ನೋಡಿಕೊಳ್ಳುತ್ತಿಲ್ಲ. ಸವಕಲು ತಂತ್ರಗಾರಿಕೆಯನ್ನು, ಹಳೆಯ ಶೈಲಿಯನ್ನು ಕಾಂಗ್ರೆಸ್ ನೆಚ್ಚಿಕೊಳ್ಳುತ್ತಿದೆ. ಚುನಾವಣಾ ಕಣದ ರೂಪುರೇಷೆಗಳನ್ನು ಬಿಜೆಪಿಯು ಬದಲಾಯಿಸುವತ್ತ ಮುಂದಡಿ ಇರಿಸಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ.

ಈ ಎಲ್ಲ ಕಾರಣಗಳಿಂದಾಗಿ ಕಾಂಗ್ರೆಸ್ಸಿನ ಹೊಸ ಅಧ್ಯಕ್ಷರು ಎದುರಿಸಬೇಕಿರುವ ಸವಾಲುಗಳು ಹಲವು. ಪಕ್ಷಕ್ಕೊಂದು ನಾಯಕತ್ವ ಇದೆ, ಆ ನಾಯಕತ್ವಕ್ಕೆ ಶಕ್ತಿ ಇದೆ ಎಂಬುದನ್ನು ಮತ್ತೆ ಹೇಳುವುದು, ರಾಜಕೀಯ ಹಾಗೂ ಚುನಾವಣಾ ತಂತ್ರಗಾರಿಕೆಯನ್ನು ಪುನಃ ಅನ್ವೇಷಿಸುವುದು, 21ನೆಯ ಶತಮಾನದ ಅಗತ್ಯಗಳಿಗೆ ಸ್ಪಂದಿಸುವ ಪಕ್ಷ ತಾನು ಎಂಬ ಚಿತ್ರಣ ರೂಪಿಸುವುದು ಅಗತ್ಯವಾಗಿ ಬೇಕಾಗಿದೆ.

ಚುರುಮುರಿ



ಹೊಸ ವರ್ಣಮಾಲೆ

• ಸುಮಂಗಲಾ

‘ದೇಶದೊಳಗೆ ‘ಅ’, ದೇಶದ ಹೊರಗೂ ‘ಎ’, ಹೊಸಾ ವರ್ಣಮಾಲೆಯಿದು, ಇರುವುದೆರಡೇ ಅಕ್ಷರ...’

ಬೆಕ್ಕಣ್ಣ ಭಾರೀ ರಾಗವಾಗಿ ಪದ್ಯ ಕಟ್ಟಿ ಹಾಡುತ್ತಿತ್ತು.

‘ಏನಲೇ... ಅ ಮತ್ತು ಎ, ಎರಡೇ ಅಕ್ಷರ ಅಂದ್ರ ಉಳಿದ ಅಕ್ಷರಗಳು ಬ್ಯಾಡೇನು?’ ಇದ್ಯಾವ ಹೊಸ ವರ್ಣಮಾಲೆ ಎಂದು ಅಚ್ಚರಿಗೊಂಡೆ.

‘ನೀ ಸುದ್ದಿ ಓದಂಗಿಲ್ಲೇನು... ಅದಾನಿಮಾಮನ ಒಟ್ಟು ಆಸ್ತಿ ಅಂಬಾನಿನೂ ಹಿಂದೆ ಹಾಕಿ ಆಕಾಶಕ್ಕೆ ಏರ್ಯೆತಿ. ಅವರಣ್ಣ ವಿನೋದ್ ಅದಾನಿ ವಿಶ್ವದಾಗೆ ಅತ್ಯಂತ ಶ್ರೀಮಂತ ಎನ್‌ಆರ್‌ಐ. ದೇಶದೊಳಗೆ ಅ, ದೇಶದ ಹೊರಗೆ ಎ...’ ತಾನೇ ಆ ಅಷ್ಟೈಶ್ವರ್ಯದ ಒಡೆಯನೋ ಎಂಬಂತೆ ಸಂಭ್ರಮದಿಂದ ವದರಿತು.

‘ಮಂಗ್ಯಾನಂಥವ್ನೆ... ಹಾಲಿನವನಿಗೆ ರೊಕ್ಕ ಕೊಡಾಕ ಗೂಗಲ್ ಪೇ ಮಾಡಿದರ ಹೋಗವಲ್ದು, ನೆಟ್‌ವರ್ಕ್ ಸರಿಯಿಲ್ಲೇನೋ ಅಂತ ನಾ ತಲಿ ಕೆಡಿಸ್ಕಂಡಿದ್ರ ನೀ ಹಾಡಾಕ್ ಹತ್ತಿ’ ಎಂದು ಬೈದ್ಯೆ.

‘ಆ ಗೂಗಲ್ಪೇ, ಫೋನ್ಪೇ ಅದ್ನೆಲ್ಲ ಬಿಟ್‌ಹಾಕು, ಪೇಸಿಎಂ ಆ್ಯಪ್ ಹಾಕ್ಕೋ... ಪೇಮೆಂಟ್ ಭಾರೀ ಫಾಸ್ಟ್ ಆಗತೈತೆ ಅಂತಾರ ಮಂದಿ’ ಎನ್ನುವುದೇ.

‘ಅದ್ ಪೇಸಿಎಂ ಆ್ಯಪ್ ಅಲ್ಲಲೇ... ಕೈಪಕ್ಷದವ್ರ ಡರ್ಟಿ ಪಾಲಿಟಿಕ್ಸ್ ಅಂತ ಬೊಮ್ಮಾಯಿ ಅಂಕಲ್ ಹೇಳ್ಯಾರ. ಜೋರಾಗಿ ವದರಬ್ಯಾಡ. ನಿನ್ ಜೋಡಿ ಆಮ್ಯಾಗೆ ನನ್ನೂ ಜೈಲಿಗೆ ಹಾಕತಾರ’ ನಾನು ಬೆದರಿ ಬೆಕ್ಕಣ್ಣನ ಬಾಯಿ ಮುಚ್ಚಿದೆ.

‘ಹಂಗಾರೆ ಅದ್ ಖರೇಖರೆ ಆ್ಯಪ್ ಅಲ್ಲೇನು? ವಿರೋಧ ಪಕ್ಷದವ್ರ ಚಿತಾವಣೆ ಏನು?’

‘ಆ್ಯಪ್ ಖರೇ ಅಲ್ಲ, ಆದ್ರೆ ಪರ್ಸೆಂಟೇಜ್ ಇರೂದಂತೂ ಖರೇ. ಕಾರ್ಮಿಕರಿಗೆ ಅವರ ಸೌಲಭ್ಯ ಸಿಗಬೇಕಂದ್ರೂ ಮಧ್ಯವರ್ತಿಗಳಿಗೆ ಇಪ್ಪತ್ತೈದು-ಮೂವತ್ತು ಪರ್ಸೆಂಟು ಕೊಡಬೇಕಂತ’.

‘ಅದ್ರಾಗೆ ತಪ್ಪೇನೈತಿ? ದೇಶ ಪ್ರಗತಿ ಯಾದಂಗೆ, ಎಲ್ಲಾನೂ ಆಕಾಶಕ್ಕೆ ಜಿಗಿತೈತಿ. ಮೊದ್ಲು ಹತ್ತು-ಹದಿನೈದು ಪರ್ಸೆಂಟ್ ಇದ್ದಿದ್ದು ಮೂವತ್ತು- ನಲ್ವತ್ತಕ್ಕೇರ್ಯೆತಿ. ಆದ್ರ ಕೆಲಸ ಫಾಸ್ಟ್ ಅನ್ನೂ ಖಾತ್ರಿಯಂತೂ ಇರತೈತಿ’ ಬೆಕ್ಕಣ್ಣ ಉಲ್ಟಾ ವಾದಿಸಿ, ನನ್ನ ಬಾಯಿ ಮುಚ್ಚಿಸಿತು!

ಸಂಗತ

ಆಲಮಟ್ಟಿ ಅಣೆ: ಮುಳುಗದಿರಲಿ ಬದುಕು

ಮುಳುಗಡೆ ಭೀತಿಯಿಂದ ಅತಂತ್ರ ಸ್ಥಿತಿ ಅನುಭವಿಸುತ್ತಿರುವ ಗ್ರಾಮಸ್ಥರ ಸಂಕಟ ನಿವಾರಣೆಗೆ ಸರ್ಕಾರ ಇಚ್ಛಾಶಕ್ತಿ ತೋರಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಜಲಾಶಯದ ಎತ್ತರವನ್ನು ಈಗಿರುವ 519.60 ಮೀಟರ್‌ನಿಂದ 524.256 ಮೀಟರ್‌ಗೆ ಹೆಚ್ಚಿಸುವ ಮೂರನೇ ಹಂತದ ನಿರ್ಮಾಣ ಕಾರ್ಯ ಬಹಳ ದಿನಗಳಿಂದ ಉಳಿದುಕೊಂಡಿದೆ. ಜಲಾಶಯದಲ್ಲಿ 130 ಟಿಎಂಸಿ ಅಡಿ ನೀರನ್ನು ಹೆಚ್ಚಿಗೆ ಸಂಗ್ರಹಿಸಿ, ಹೊಸದಾಗಿ 5.3 ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಒಳಪಡಿಸುವುದು ಈ ಯೋಜನೆಯ ಉದ್ದೇಶ.

ಜಲಾಶಯದ ಎತ್ತರ ಹೆಚ್ಚಿಸುವ ಈ ಯೋಜನೆಯಲ್ಲಿ 20 ಹಳ್ಳಿಗಳು ಹಾಗೂ 35 ಸಾವಿರ ಹೆಕ್ಟೇರ್ ಕೃಷಿಭೂಮಿ ಹಿನ್ನೀರಿನಲ್ಲಿ ಮುಳುಗಡೆಯಾಗಲಿವೆ. ಇಂತಹ ಗ್ರಾಮಗಳ ಹೆಸರು ಹಾಗೂ ಕೃಷಿ ಭೂಮಿಯ ಸರ್ವೆ ನಂಬರ್ ಗುರುತಿಸಿ ಸರ್ಕಾರವು 2012ರಲ್ಲಿ ಗೆಜೆಟ್ ನೋಟಿಫಿಕೇಷನ್ ಪ್ರಕಟಿಸಿದೆ. ಎಲ್ಲರಿಗೂ ನೋಟಿಸ್ ನೀಡಲಾಗಿದೆ. ಆದರೆ ಇದರ ಮುಂದಿನ ಕಥೆ ಮಾತ್ರ ತುಂಬ ನೋವಿನಿಂದ ಕೂಡಿದೆ.


ಮುಳುಗಡೆಯಾಗಲಿರುವ ಗ್ರಾಮಗಳ ಜನ ಈ 10 ವರ್ಷಗಳಿಂದ ಅನುಭವಿಸುತ್ತಿರುವ ಅತಂತ್ರ ಸ್ಥಿತಿಯ ಸಂಕಟ ಅಷ್ಟಿಷ್ಟಲ್ಲ. ಬಾಗಲಕೋಟೆ ಜಿಲ್ಲೆಯ ಗದ್ದನಕೇರಿ, ಕಾತರಕಿ, ಆಲಗುಂಡಿ, ಬುದ್ನಿ, ಹಿರೇಸಂಶಿ, ಗೋವಿಂದಕೊಪ್ಪ, ಉದಗಟ್ಟಿ, ಬಂಟನೂರು, ಬಾವಲತ್ತಿ, ಕುಂದರಗಿ, ಕೊಪ್ಪ, ಅಂಕಲಗಿ, ಚಿಕ್ಕೂರ, ಮಾಚಕನೂರ, ಹಿರೇಪಡಸಲಗಿ, ಸನಾಳ, ಕುಂಬಾರಹಳ್ಳ ಹಾಗೂ ವಿಜಯಪುರ ಜಿಲ್ಲೆಯ ಚಿಕ್ಕಗಲಗಲಿ, ಶಿರಬೂರ, ವಂದಾಲ ಇವು ಮುಳುಗಡೆಯಾಗಲಿರುವ ಗ್ರಾಮಗಳು.

ಇನ್ನೇನು ಮುಳುಗಿಯೇ ಹೋಗುತ್ತವೆ ಎನ್ನುವ ಕಾರಣಕ್ಕೆ ಗ್ರಾಮಗಳ ಅಭಿವೃದ್ಧಿ ಕಾರ್ಯಗಳು ಪೂರ್ಣ ಸ್ಥಗಿತಗೊಂಡಿವೆ. ಮನೆಗಳಿಗೆ ಸುಣ್ಣ-ಬಣ್ಣ ಹಚ್ಚುವುದು, ರಿಪೇರಿ ಮಾಡುವುದು ನಿಂತುಬಿಟ್ಟಿವೆ. ಹೊಲಗಳಲ್ಲಿ ಕೃಷಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಮನೆಯ ಮುಂದೆ ಹೂ ಗಿಡ ನೆಡುವುದು, ಮುಂಜಾನೆ ರಂಗೋಲಿ ಹಾಕುವುದಕ್ಕೂ ಮಹಿಳೆಯರು ಮನಸ್ಸು ಮಾಡುತ್ತಿಲ್ಲ. ಹಾಲು, ಮೊಸರಿಗಾಗಿ ಎಮ್ಮೆ-ಆಕಳು ಸಾಕುತ್ತಿದ್ದರು. ಅದೂ ಈಗ ಮಾಯವಾಗಿದೆ. ಅತ್ಯಂತ ಬೇಸರದ ಸಂಗತಿಯೆಂದರೆ, ಮಕ್ಕಳ ಮದುವೆಗೂ ಅಡೆತಡೆಯಾಗಿದೆ. ಜಮೀನು, ಆಸ್ತಿ ಮಾರಾಟ ಸ್ಥಗಿತಗೊಂಡಿದೆ. ಮುಳುಗಡೆ ನೆಪ ಹೇಳಿ ಬ್ಯಾಂಕ್‌ಗಳು ಸಾಲ ಕೊಡುತ್ತಿಲ್ಲ. ಈ ಗ್ರಾಮಗಳಲ್ಲಿ ಒಂದು ಸುತ್ತು ನಡೆದು ಬಂದರೆ, ಜನರ ಜಡತ್ವ, ಹತಾಶೆ, ಸಿಟ್ಟು ಧುತ್ತನೆ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಗ್ರಾಮದ ಹಿರಿಯರು ‘ನಮ್ಮ ಬದುಕೇ ಮುಳುಗಿಹೋಗಿದೆ’ ಎಂದು ಕಣ್ಣೀರು ಹಾಕುತ್ತಿದ್ದಾರೆ.

‘ನಾವೆಲ್ಲ ಒಮ್ಮೆಗೇ ಮುದುಕರಾಗಿಬಿಟ್ಟಿದ್ದೇವೆ ಅಂಕಲ್, ಉತ್ಸಾಹವೇ ಇಲ್ಲ. ನಮ್ಮ ಊರು, ಸುತ್ತ-ಮುತ್ತಲಿನ ಹಳ್ಳಿಗಳು ಮುಳುಗಡೆಯಾಗಲಿವೆ. ಹೀಗಾಗಿ ನಮ್ಮ ಬದುಕು ಡಲ್ ಆಗಿಬಿಟ್ಟಿದೆ’ ಎಂದು ವಿವರಿಸಿದ ಇಬ್ಬರು ಪರಿಚಿತ ಯುವಕರ ನಿಟ್ಟುಸಿರು ನೋಡಿ ಸಂಕಟವಾಯಿತು.

ಮುಳುಗಡೆಯಾಗಲಿರುವ ಗ್ರಾಮಗಳ ಜನರ ಸ್ಥಳಾಂತರ, ಸಮರ್ಪಕ ಪುನರ್ವಸತಿ, ಮುಳುಗಡೆಯಾಗಲಿರುವ ಕೃಷಿ ಭೂಮಿಗೆ ಸೂಕ್ತ ಪರಿಹಾರ ಕೊಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಎತ್ತರ ಹೆಚ್ಚಿಸುವ ಯೋಜನೆಯ ವೆಚ್ಚ 2012ರಲ್ಲಿ ₹ 17 ಸಾವಿರ ಕೋಟಿ ಇತ್ತು. ಈಗ ಅದು ₹ 75 ಸಾವಿರ ಕೋಟಿ ದಾಟಬಹುದು ಎಂದು ಅಂದಾಜಿಸಲಾಗಿದೆ.

ಸರ್ಕಾರವು 34 ಸಾವಿರ ಎಕರೆ ಭೂ ಸ್ವಾಧೀನಕ್ಕೆ ರೈತರಿಗೆ ನೋಟಿಸ್ ಜಾರಿ ಮಾಡಿದೆ. ಆದರೆ ಭೂಮಿಯ ಬೆಲೆ ನಿಗದಿ ಬಗ್ಗೆ ವಿವಾದ ಎದ್ದಿದೆ. ಬೇಗ ಪುನರ್ವಸತಿ ಕಲ್ಪಿಸಬೇಕು, ಭೂಮಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಹೋರಾಟ, ಧರಣಿ, ರಸ್ತೆತಡೆ ನಡೆಸುತ್ತಿದ್ದಾರೆ. ಆದರೆ ಮನವಿ ಸ್ವೀಕರಿಸುವುದಕ್ಕಷ್ಟೇ ಸರ್ಕಾರದ ಕೆಲಸ ಸೀಮಿತವಾಗಿದೆ.



ವಿಜ್ಞಾನ-ತಂತ್ರಜ್ಞಾನದ ಪ್ರಗತಿಯಿಂದಾಗಿ ಇಂದು ಬಹಳಷ್ಟು ಆವಿಷ್ಕಾರಗಳು ನಡೆದಿವೆ. ಜಲಾಶಯಗಳ ಎತ್ತರ ಹೆಚ್ಚಿಸುವುದಕ್ಕೆ ನಾರ್ವೆ ದೇಶದಲ್ಲಿ ತಡೆಗೋಡೆ ನಿರ್ಮಿಸುವ ಅತ್ಯಂತ ಸರಳ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದೆ. ರಷ್ಯಾ ಹಾಗೂ ಇನ್ನು ಕೆಲವು ದೇಶಗಳಲ್ಲಿ ಇದನ್ನು ಅನುಷ್ಠಾನಕ್ಕೆ ತರಲಾಗಿದೆ. ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಾರ್ವೆ ತಂತ್ರಜ್ಞಾನದ ತಡೆಗೋಡೆ ನಿರ್ಮಿಸುವ ಸಲಹೆಯನ್ನು ತಜ್ಞರು ಸರ್ಕಾರಕ್ಕೆ ನೀಡಿದ್ದರು. ಹೆಚ್ಚಿಗೆ ಹಣ ಖರ್ಚು ಮಾಡಬೇಕಾಗಿಲ್ಲ, ಮುಖ್ಯವಾಗಿ ಗ್ರಾಮಗಳ ಹಾಗೂ ಕೃಷಿ ಭೂಮಿಯ ಮುಳುಗಡೆ ಸಮಸ್ಯೆ ತಪ್ಪಿಸಬಹುದು ಎಂದು ಹೇಳಿದ್ದರು. ಇದೊಂದು ವಿನೂತನ ಚಿಂತನೆಯಾಗಿದೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಹಿಪ್ಪರಗಿ ಬ್ಯಾರೇಜ್‌ಗೆ 500 ಮೀಟರ್ ಉದ್ದದ ತಡೆಗೋಡೆ ನಿರ್ಮಿಸಲು ಸರ್ಕಾರ ಈಚೆಗೆ ಅನುಮೋದನೆ ನೀಡಿದೆ. ಇದನ್ನು ಮಾದರಿಯಾಗಿಟ್ಟುಕೊಂಡು ಆಲಮಟ್ಟಿಗೆ ತಡೆಗೋಡೆ ನಿರ್ಮಿಸುವ ತಂತ್ರಜ್ಞಾನದ ಬಗ್ಗೆ ನಿರ್ಧರಿಸಬಹುದು.

ಕೃಷ್ಣಾ ನದಿಗೆ ಅವಿಭಜಿತ ಆಂಧ್ರಪ್ರದೇಶದಲ್ಲಿ ನಾಗಾರ್ಜುನ ಸಾಗರ ಹಾಗೂ ಕರ್ನಾಟಕದಲ್ಲಿ ಆಲಮಟ್ಟಿ ಜಲಾಶಯ ಕಟ್ಟಲು ಏಕಕಾಲಕ್ಕೆ ಚಾಲನೆ ನೀಡಲಾಯಿತು. ನಾಗಾರ್ಜುನ ಸಾಗರ ನಿರ್ಮಾಣ ಕಾರ್ಯ 1967ರಲ್ಲಿಯೇ ಪೂರ್ಣಗೊಂಡಿದೆ. ಇಷ್ಟು ದೀರ್ಘಕಾಲದ ನಂತರವೂ ಆಲಮಟ್ಟಿ ಕೆಲಸ ಇನ್ನೂ ಬಾಕಿ ಉಳಿದಿದೆ.

ಸರ್ಕಾರ ಸ್ಪಷ್ಟ ನಿಲುವು ಹಾಗೂ ಅದಮ್ಯ ಇಚ್ಛಾಶಕ್ತಿಯಿಂದ ಕೆಲಸ ಮಾಡಿ, ಆಲಮಟ್ಟಿ ಮೂರನೇ ಹಂತದ ಕಾಮಗಾರಿಯನ್ನು ಬೇಗ ಪೂರ್ಣಗೊಳಿಸಬೇಕು ಹಾಗೂ ಮುಳುಗಡೆಯ ಅತಂತ್ರಸ್ಥಿತಿ ಅನುಭವಿಸುತ್ತಿರುವ ಗ್ರಾಮಸ್ಥರಿಗೆ ನೆಮ್ಮದಿಯ ಬದುಕು ಕಲ್ಪಿಸಬೇಕು.

ವಾಚಕರ ವಾಣಿ

ವೈಯಕ್ತಿಕ ನಿಂದನೆ ಸರಿಯೇ?

‘ಪೇಸಿಎಂ ಎಂಬುದು ಒಂದು ಅಭಿಯಾನ ಮತ್ತು ಅದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕ್ರೀಡಾ ಸ್ಫೂರ್ತಿಯಿಂದ ತೆಗೆದುಕೊಳ್ಳಬೇಕಾಗಿತ್ತು’ ಎಂದು ಕಾಂಗ್ರೆಸ್ ಮುಖಂಡರು ಹೇಳಿದ್ದಾರೆ. ಕಾಂಗ್ರೆಸ್‌ನವರು ಅದನ್ನು ಎಷ್ಟೇ ಸಮರ್ಥಿಸಿಕೊಂಡರೂ ಅದರಲ್ಲಿ ಮುಖ್ಯಮಂತ್ರಿಯವರ ಫೋಟೊ ಹಾಕಿದ್ದು ಎಷ್ಟು ಸರಿ? ಇದು ಒಂದು ರೀತಿಯ ವೈಯಕ್ತಿಕ ನಿಂದನೆ ಅಲ್ಲವೇ?

ಬರಲಿರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಗೆಲ್ಲುವ ಅವಕಾಶ ಇದೆ. ಆದರೆ ಅವರು ಆ ಅವಕಾಶವನ್ನು ಕಳೆದುಕೊಳ್ಳುವ ರೀತಿ ವರ್ತಿಸುತ್ತಿದ್ದಾರೆ. ಅವರ ಅಭಿಯಾನದ ಉದ್ದೇಶವೇನೇ ಇರಲಿ, ಜನರ ಮುಂದೆ ಸಣ್ಣತನ ತೋರಿಸುವುದು ಸರಿಯಲ್ಲ.

ಪ್ರಸನ್ನ ಗಣಪತಿ ಎ.ಎಚ್., ಬೆಂಗಳೂರು

ನೇರ ಪ್ರಸಾರದಿಂದ ಪಾರದರ್ಶಕತೆ

ಸಾಂವಿಧಾನಿಕ ನ್ಯಾಯಪೀಠಗಳು ನಡೆಸುವ ವಿಚಾರಣೆಯನ್ನು ನೇರ ಪ್ರಸಾರ ಮಾಡುವಂತೆ ಸುಪ್ರೀಂ ಕೋರ್ಟ್‌ನ ಮೂವರು ನ್ಯಾಯಮೂರ್ತಿಗಳು ಇದ್ದ ಪೀಠವು 2018ರಲ್ಲಿಯೇ ಆದೇಶ ಹೊರಡಿಸಿದ್ದರೂ ಈವರೆಗೂ ಪೂರ್ಣ ಪ್ರಮಾಣದಲ್ಲಿ ಅದು ಅನುಷ್ಠಾನಕ್ಕೆ ಬರದಿರುವುದು ವಿಷಾದನೀಯ. ನ್ಯಾಯಾಲಯಗಳ ಕಲಾಪಗಳನ್ನು ನೇರ ಪ್ರಸಾರ ಮಾಡುವುದರಿಂದ ಸಾಮಾನ್ಯ ನಾಗರಿಕನಿಗೆ ನ್ಯಾಯಾಲಯದ ಒಳಗೆ ಏನು ನಡೆಯುತ್ತದೆ ಎಂಬುದು ತಿಳಿಯುತ್ತದೆ. ಇದರಿಂದ ನ್ಯಾಯಾಂಗದ ಪ್ರಕ್ರಿಯೆಗಳು ಹೆಚ್ಚು ಪಾರದರ್ಶಕವಾಗುತ್ತವೆ. ಈ ಮೂಲಕ ಪ್ರತೀ ಮನೆಗೂ ನ್ಯಾಯಾಲಯವು ತಲುಪಿದಂತಾಗಿ ಜನಸಾಮಾನ್ಯರಲ್ಲಿ ಕಾನೂನಿನ ಬಗ್ಗೆ ಅರಿವು ಮೂಡುತ್ತದೆ.

ಕಾನೂನು ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು ವಿಶಾಲವಾಗುತ್ತಿರುವ ಈ ಹೊತ್ತಿನಲ್ಲಿ, ಡಿಜಿಟಲ್ ಮಾಧ್ಯಮಗಳನ್ನು ಸಮರ್ಪಕವಾಗಿ ಬಳಸಿಕೊಂಡು ದೇಶದ ಜನಸಾಮಾನ್ಯರಿಗೆ ಕಾನೂನಿನ ಅರಿವನ್ನು ಮೂಡಿಸುವ ಕಾರ್ಯಕ್ಕೆ ವೇಗ ನೀಡಬೇಕಿದೆ. ನ್ಯಾಯದಾನ ಆಗುತ್ತಿರುವ ಬಗ್ಗೆ ಜನರಿಗೆ ಖಾತರಿಯಾದಾಗ ಅವರಿಗೆ ನ್ಯಾಯಾಲಯದ ಮೇಲೆ ವಿಶ್ವಾಸ ಹೆಚ್ಚಾಗುತ್ತದೆ.

ನಿರಂಜನ್ ಮೂರ್ತಿ ಆರ್.ಕೆ., ಶಿವಮೊಗ್ಗ

ಜ್ವಲಂತ ಸಮಸ್ಯೆ ಚರ್ಚೆಯಾಗಲಿ

ಅಖಿಲ ಭಾರತ ಎಂಬತ್ತಾರನೇ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಸಿದ್ಧತೆಗಳು ಇದೀಗ ಆರಂಭವಾಗಿವೆ. ಎಂಬತ್ತೈದನೇ ಸಮ್ಮೇಳನ ಜರುಗಿದ ನಂತರ ನಮ್ಮ ನಾಡು ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ. ಬಹಳ ಮುಖ್ಯವಾಗಿ ರಾಜಧಾನಿ ಬೆಂಗಳೂರು ನಗರವೇ ಮಳೆಯ ಅವಾಂತರಕ್ಕೆ ಸಿಲುಕಿ ಜನಸಾಮಾನ್ಯರ ಜೀವನ ತುಂಬ ತೊಂದರೆಗೊಳಗಾಯಿತು. ನಾಡಿನಾದ್ಯಂತ ರೈತರು ಕಷ್ಟನಷ್ಟ ಅನುಭವಿಸುವಂತಾಯಿತು. ಕನ್ನಡ ನಾಡಿನ ಬಹು ದೊಡ್ಡ ಮೌಲ್ಯವಾದ ಧಾರ್ಮಿಕ ಸಹಿಷ್ಣುತೆಗೆ ಸಂಕಷ್ಟವೂ ಎದುರಾಯಿತು.

ಹೀಗೆ ನಮ್ಮ ನಾಡಿನ ಅನೇಕ ಜ್ವಲಂತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ವಿಚಾರ ಸಂಕಿರಣಗಳನ್ನು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಏರ್ಪಡಿಸಬೇಕು. ಈ ರೀತಿಯ ಸಮಸ್ಯೆಗಳನ್ನು ಪರಿಹರಿಸುವ ದಿಸೆಯಲ್ಲಿ ನಮ್ಮ ಲೇಖಕರು ಸಹ ಸಂಶೋಧನಾತ್ಮಕ ಪುಸ್ತಕಗಳನ್ನು ಬರೆದು ಪ್ರಕಟಿಸಬೇಕು. ಲಕ್ಷಾಂತರ ಕನ್ನಡಿಗರು ಒಂದು ಕಡೆ ಸೇರುವ, ಪರಸ್ಪರ ಸ್ನೇಹ, ವಿಶ್ವಾಸ ಗಳಿಸುವ ನಮ್ಮ ಸಾಹಿತ್ಯ ಸಮ್ಮೇಳನಗಳು ನಾಡಿನ ಜ್ವಲಂತ ಸಮಸ್ಯೆಗಳನ್ನು ಸಹ ಚರ್ಚಿಸಿ ಅರಿವು ಪಡೆಯುವಂತಾಗಬೇಕು. ಅದೇ ನಿಜಕ್ಕೂ ಸಾಹಿತ್ಯ ಸಮ್ಮೇಳನದ ಸಾರ್ಥಕ್ಯವಾಗಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಪಿಎಚ್‌.ಡಿ ನಿಯಮಾವಳಿ: ಸಲ್ಲದ ನಿಯಮ

ಪಿಎಚ್‌.ಡಿಗೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾಲಯವು ಇತ್ತೀಚೆಗೆ ಹೊರಡಿಸಿರುವ ಹೊಸ ನಿಯಮಾವಳಿಯು ಅನೇಕ ಮಹತ್ವದ ಮಾರ್ಪಾಡುಗಳನ್ನು ಒಳಗೊಂಡಿರುವುದು ಸ್ವಾಗತಾರ್ಹ. ಆದರೆ ಈ ನಿಯಮಾವಳಿಯಲ್ಲಿ, ಐಎಸ್‌ಎಸ್‌ಎನ್ (ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್ ಸೀರಿಯಲ್ ನಂಬರ್) ಇರುವ ಜರ್ನಲ್‌ನಲ್ಲಿ ಎರಡು ಸಂಶೋಧನಾ ಲೇಖನಗಳು ಮತ್ತು ಒಂದು ಲೇಖನವು ವಿಚಾರ ಸಂಕಿರಣದ ನಡಾವಳಿಯಲ್ಲಿ ಪ್ರಕಟವಾಗಿದ್ದರೆ ಮಾತ್ರ ಪಿಎಚ್‌.ಡಿ ಪದವಿ ಅಂಗೀಕಾರಕ್ಕೆ ಪರಿಗಣಿಸಲಾಗುವುದು ಎಂದು ಹೇಳಿರುವುದು ಸರಿಯಲ್ಲ. ಇದು ಯುಜಿಸಿಯ ನಿಯಮಕ್ಕೆ ವಿರುದ್ಧವಾಗಿರುವುದಲ್ಲದೆ ಗುಣಮಟ್ಟದ ಸಂಶೋಧನೆಗಳ ಪ್ರಕಟಣೆಗೆ ಕೂಡ ಕೊಡಲಿಪೆಟ್ಟು ನೀಡಲಿದೆ.

ಐಎಸ್‌ಎಸ್‌ಎನ್, ಸಂಶೋಧನಾ ಲೇಖನಗಳ ಗುಣಮಟ್ಟವನ್ನು ನಿರ್ಧರಿಸುವ ಮಾನದಂಡವಲ್ಲ. ಅದು ಕೇವಲ ಜರ್ನಲ್‌ಗಳ ಪ್ರಕಾಶನದ (ದೇಶ, ಪ್ರಕಾಶಕರು...) ಮಾಹಿತಿಯನ್ನು ಗುರುತಿಸಲು ಮತ್ತು ಒಂದು ದೇಶದಲ್ಲಿ ಪ್ರಕಟವಾಗುವ ಜರ್ನಲ್‌ಗಳ ಮಾಹಿತಿಯನ್ನು ಶೇಖರಿಸಲು, ತಿಳಿಯಲು ಬಳಸುವ ವಿಶಿಷ್ಟ ಗುರುತಿನ ಸಂಖ್ಯೆ ಮಾತ್ರ. ಐಎಸ್‌ಎಸ್‌ಎನ್ ಹೊಂದಿರುವ ಜರ್ನಲ್‌ಗಳಲ್ಲಿ ಪ್ರಕಟವಾದ ಲೇಖನಗಳನ್ನು ಮಾತ್ರ ವಿಶ್ವವಿದ್ಯಾಲಯ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬಡ್ತಿ ಹಾಗೂ ನೇಮಕಾತಿಗಳಿಗೆ ಪರಿಗಣಿಸಲಾಗುವುದು ಎಂದು 2010ರಲ್ಲಿ ಯುಜಿಸಿ ನಿಯಮ ರೂಪಿಸಿದ ನಂತರ ದೇಶದಲ್ಲಿ ಐಎಸ್‌ಎಸ್‌ಎನ್ ಹೊಂದಿದ ಬಹಳಷ್ಟು ನಕಲಿ ಜರ್ನಲ್‌ಗಳು ಪ್ರಕಟಣೆಯನ್ನು ಪ್ರಾರಂಭಿಸಿದ್ದವು. ಈ ಕಾರಣದಿಂದ ಭಾರತವು ಪ್ರಪಂಚದ ನಕಲಿ ಜರ್ನಲ್‌ಗಳನ್ನು ಪ್ರಕಟಿಸುವ ಪ್ರಮುಖ ಕೇಂದ್ರವಾಗಿ ಬದಲಾಗಿ, ಜಗತ್ತಿನ ಸಂಶೋಧನಾ ವಲಯದಲ್ಲಿ ಮುಜುಗರಕ್ಕೆ ಒಳಗಾಗಬೇಕಾಯಿತು. ಈ ನಕಲಿ ಜರ್ನಲ್‌ಗಳ ಹಾವಳಿಯನ್ನು ಮನಗಂಡ ಯುಜಿಸಿ 2019ರಲ್ಲಿ ಯುಜಿಸಿ ಕೇರ್ ಲಿಸ್ಟ್ ಎನ್ನುವ ಜರ್ನಲ್‌ಗಳ ಪಟ್ಟಿಯನ್ನು ರೂಪಿಸಿದೆ. ಇದು ನಕಲಿ ಸಂಶೋಧನಾ ಜರ್ನಲ್‌ಗಳ ಪ್ರಕಟಣೆಯನ್ನು ಸ್ವಲ್ಪ ಮಟ್ಟಿಗಾದರೂ ನಿಲ್ಲಿಸಿದೆ. ಈಗ ವಿಶ್ವವಿದ್ಯಾಲಯಗಳ ನೇಮಕಾತಿ ಮತ್ತು ಪದೋನ್ನತಿಗೆ ಯುಜಿಸಿ ಕೇರ್ ಲಿಸ್ಟ್‌ನಲ್ಲಿ ಪ್ರಕಟವಾಗುವ ಸಂಶೋಧನಾ ಲೇಖನಗಳನ್ನು ಮಾತ್ರ ಪರಿಗಣಿಸಲಾಗುತ್ತಿದೆ. ಆದರೆ ಮೈಸೂರು ವಿಶ್ವವಿದ್ಯಾಲಯ ಏಕೆ ಯುಜಿಸಿ ಕೇರ್ ಲಿಸ್ಟ್ ಜರ್ನಲ್‌ಗಳಲ್ಲಿ ಸಂಶೋಧನಾ ಲೇಖನ ಪ್ರಕಟಿಸುವುದನ್ನು ಕಡ್ಡಾಯ ಮಾಡದೆ ಕೇವಲ ಐಎಸ್‌ಎಸ್‌ಎನ್ ಹೊಂದಿರುವ ಜರ್ನಲ್‌ಗಳಲ್ಲಿ ಪ್ರಕಟಣೆಯನ್ನು ಕಡ್ಡಾಯ ಮಾಡಿದೆ? ಇದು ಹೇಗೆ ಗುಣಮಟ್ಟದ ಸಂಶೋಧನೆಗಳಿಗೆ ಉತ್ತೇಜನ ನೀಡುವುದು?

ವಸಂತ ರಾಜು ಎನ್., ತಲಕಾಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಿಜೆಪಿಯೇತರ ಸರ್ಕಾರಗಳಿಗೆ ರಾಜ್ಯಪಾಲರ ರಗಳೆ

ರಾಜ್ಯಪಾಲರು ಕೇಂದ್ರದ ಕೈಗೊಂಬೆ ಎಂಬ ಆರೋಪ ಹಿಂದಿನಿಂದಲೂ ಇದೆ. ರಾಜ್ಯ ಸರ್ಕಾರದ ವಿರುದ್ಧ ಕೇಂದ್ರಕ್ಕೆ ವರದಿಗಳನ್ನು ಕಳುಹಿಸುವಂತಹ ಕೆಲಸಗಳನ್ನು ರಾಜ್ಯಪಾಲರು ಮಾಡಿದ್ದಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ, ಬಿಜೆಪಿಯೇತರ ಪಕ್ಷಗಳ ಸರ್ಕಾರ ಇರುವ ರಾಜ್ಯಗಳ ರಾಜ್ಯಪಾಲರ ವರ್ತನೆಯ ಕುರಿತು ತೀವ್ರ ಟೀಕೆಗಳು ವ್ಯಕ್ತವಾಗಿವೆ. ದೆಹಲಿ, ಪಶ್ಚಿಮ ಬಂಗಾಳ, ಜಾರ್ಖಂಡ್, ಕೇರಳ, ತೆಲಂಗಾಣ... ಹೀಗೆ ಬಿಜೆಪಿಯೇತರ ಪಕ್ಷಗಳ ಸರ್ಕಾರ ಇರುವ ರಾಜ್ಯಗಳಲ್ಲಿ ರಾಜ್ಯಪಾಲರು ಸರ್ಕಾರದ ಜತೆಗೆ ನೇರವಾಗಿ ಸಂಘರ್ಷಕ್ಕೆ ಇಳಿದ ಹಲವು ಉದಾಹರಣೆಗಳು ಇವೆ. ರಾಜ್ಯಪಾಲರು ಬಿಜೆಪಿ ಏಜೆಂಟ್ ಎಂದು ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಆರೋಪಿಸಿದ್ದಾರೆ. ವಿಶ್ವಾಸಮತ ಯಾಚನೆಗಾಗಿ ಅಧಿವೇಶನ ಕರೆಯಲು ಪಂಜಾಬ್ ರಾಜ್ಯಪಾಲರು ಅನುಮತಿ ನಿರಾಕರಿಸಿದ್ದನ್ನು ಖಂಡಿಸಿ ಎಎಪಿ ಇತ್ತೀಚೆಗೆ ಭಾರಿ ಪ್ರತಿಭಟನೆಯನ್ನೂ ನಡೆಸಿತ್ತು

ಮೂವರು ಎಲ್‌.ಜಿ.ಗಳ ಜತೆ ಕೇಜ್ರಿವಾಲ್ ಜಟಾಪಟಿ

ದೆಹಲಿಯ ಲೆಫ್ಟಿನೆಂಟ್ ಗವರ್ನರ್ (ಎಲ್.ಜಿ) ಮತ್ತು ದೆಹಲಿ ಸರ್ಕಾರದ ನಡುವಣ ಕಿತ್ತಾಟವು ಅರವಿಂದ ಕೇಜ್ರಿವಾಲ್ ಮುಖ್ಯಮಂತ್ರಿಯಾದ ಬಳಿಕ ಅತ್ಯಂತ ಕೀಳು ಮಟ್ಟಕ್ಕೆ ಕುಸಿಯಿತು. 2013ರ ಡಿಸೆಂಬರ್‌ನಲ್ಲಿ ಕೇಜ್ರಿವಾಲ್ ಮೊದಲ ಬಾರಿಗೆ ಮುಖ್ಯಮಂತ್ರಿಯಾದ ಬಳಿಕ ಮೂವರು ಎಲ್.ಜಿಗಳ ಜತೆಗೆ ಕೆಲಸ ಮಾಡಿದ್ದಾರೆ.


2013ರ ಡಿಸೆಂಬರ್‌ನಲ್ಲಿ ಅಧಿಕಾರಕ್ಕೆ ಬಂದ ಕೇಜ್ರಿವಾಲ್ ನೇತೃತ್ವದ ಸರ್ಕಾರವು 2014ರ ಫೆಬ್ರುವರಿಯಲ್ಲಿ ಜನ ಲೋಕಪಾಲ ಮಸೂದೆಯನ್ನು ಅಂಗೀಕರಿಸಿ ಆಗಿನ ಎಲ್.ಜಿ ನಜೀಬ್ ಜಂಗ್ ಅವರಿಗೆ ಕಳುಹಿಸಿಕೊಟ್ಟಿತ್ತು. ಆದರೆ, ಇದನ್ನು ಜಾರಿಗೆ ತರಬೇಕಾದರೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕು ಎಂದು ಅವರು ಕಾನೂನು ಸಚಿವಾಲಯಕ್ಕೆ ಕಳುಹಿಸಿಕೊಟ್ಟರು. ಇದು ಎಲ್.ಜಿ ಜತೆಗೆ ಕೇಜ್ರಿವಾಲ್ ಅವರ ಮೊದಲ ಭಿನ್ನಮತ. ಭಾರಿ ಬಹುಮತದೊಂದಿಗೆ ಕೇಜ್ರಿವಾಲ್ ಅವರು 2015ರ ಫೆಬ್ರುವರಿಯಲ್ಲಿ ಎರಡನೇ ಅವಧಿಗೆ ಅಧಿಕಾರಕ್ಕೆ ಬಂದರು. ಪೊಲೀಸ್, ಸಾರ್ವಜನಿಕ ಸುವ್ಯವಸ್ಥೆ ಮತ್ತು ಜಮೀನಿಗೆ ಸಂಬಂಧಿಸಿದ ಎಲ್ಲ ಕಡತಗಳು ತಮ್ಮ ಮೂಲಕವೇ ಮುಂದಕ್ಕೆ ಹೋಗಬೇಕು ಎಂದು ಕೇಜ್ರಿವಾಲ್ ಆದೇಶಿಸಿದರು. ಎಲ್ಲ ಕಡತಗಳನ್ನು ಎಲ್.ಜಿ ಅವರಿಗೆ ಕೊಡುವ ಅಗತ್ಯ ಇಲ್ಲ ಎಂದರು. ಕೇಜ್ರಿವಾಲ್ ಅವರು ಮಾಡಿದ ಅಧಿಕಾರಿಗಳ ನೇಮಕವನ್ನು ಜಂಗ್ ಅವರು ರದ್ದು ಮಾಡಿದರು. ಅಧಿಕಾರಿಗಳ ನೇಮಕ ತಮ್ಮ ಅಧಿಕಾರ ಎಂದರು.


ಅರವಿಂದ ಕೇಜ್ರಿವಾಲ್

ಭ್ರಷ್ಟಾಚಾರ ತಡೆ ಘಟಕಕ್ಕೆ ಬಿಹಾರದ ಐವರು ಪೊಲೀಸ್ ಅಧಿಕಾರಿಗಳನ್ನು ಕೇಜ್ರಿವಾಲ್ ನಿಯೋಜಿಸಿದ್ದನ್ನು ಜಂಗ್ ಅವರು ರದ್ದು ಮಾಡಿದ್ದರು. ಎಸಿಬಿ ತಮ್ಮ ಅಧೀನದಲ್ಲಿ ಕೆಲಸ ಮಾಡುವ ಘಟಕ ಎಂದರು. ನೀರಿನ ಟ್ಯಾಂಕರ್ ಹಗರಣದಲ್ಲಿ ಕೇಜ್ರಿವಾಲ್ ಮೇಲೆ ಎಫ್‌ಐಆರ್‌ಗೆ ಜಂಗ್ ಅನುಮತಿ ಕೊಟ್ಟರು. ಜಂಗ್ ಅವರು ಹಿಟ್ಲರ್ ಎಂದು ಕೇಜ್ರಿವಾಲ್ ಜರೆದಿದ್ದರು. ಹೀಗೆ 2016ರ ಡಿಸೆಂಬರ್‌ನಲ್ಲಿ ಜಂಗ್ ರಾಜೀನಾಮೆ ನೀಡುವವತನಕ ಈ ರೀತಿಯ ಕಿತ್ತಾಟ ನಿರಂತರವಾಗಿ ನಡೆಯಿತು.

2016ರಿಂದ 2022ರವರೆಗೆ ಅನಿಲ್ ಬೈಜಾಲ್ ಅವರು ಎಲ್.ಜಿಯಾಗಿದ್ದರು. ಬೈಜಾಲ್ ಅವಧಿಯಲ್ಲಿ ಸರ್ಕಾರ ಮತ್ತು ಎಲ್.ಜಿ ಅವರ ಆಡಳಿತಾತ್ಮಕ ವ್ಯಾಪ್ತಿಯ ಕುರಿತು ತೀವ್ರ ಭಿನ್ನಾಭಿಪ್ರಾಯ ಉಂಟಾಯಿತು. ಕೇಜ್ರಿವಾಲ್ ಮತ್ತು ಅವರ ಸಚಿವ ಸಂಪುಟದ ಸದಸ್ಯರು 2018ರಲ್ಲಿ ಎಲ್.ಜಿ ಮನೆಯ ಹೊರಗೆ ಧರಣಿಯನ್ನೂ ನಡೆಸಿದರು. ವಿಷಯ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು. ದೆಹಲಿ ಸರ್ಕಾರದ ನೆರವು ಮತ್ತು ಸಲಹೆಗೆ ಅನುಸಾರವಾಗಿ ಎಲ್.ಜಿ ಕೆಲಸ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದ ಬಳಿಕ ಸ್ವಲ್ಪ ಕಾಲ ಹೆಚ್ಚಿನ ಕಿತ್ತಾಟ ಇರಲಿಲ್ಲ.

2022ರ ಮೇ 23ರಂದು ವಿನಯ ಕುಮಾರ್ ಸಕ್ಸೇನಾ ಅವರು ಎಲ್.ಜಿ ಆಗಿ ನೇಮಕಗೊಂಡರು. ಅಧಿಕಾರಿಗಳ ಜತೆಗೆ ಅವರು ನಿಯಮಿತವಾಗಿ ನಡೆಸುತ್ತಿರುವ ಸಭೆಯು ಆಡಳಿತದಲ್ಲಿ ಹಸ್ತಕ್ಷೇಪ ಎಂದು ಸರ್ಕಾರ ದೂರಿದೆ. ಕೋವಿಡ್ ಸಂದರ್ಭದಲ್ಲಿ ಏಳು ತಾತ್ಕಾಲಿಕ ಆಸ್ಪತ್ರೆ ನಿರ್ಮಾಣದಲ್ಲಿ ಅವ್ಯವಹಾರವಾಗಿದೆ ಎಂಬ ಆರೋಪದ ತನಿಖೆಗೆ ಭ್ರಷ್ಟಾಚಾರ ತಡೆ ಘಟಕಕ್ಕೆ ಸಕ್ಸೇನಾ ಅನುಮತಿ ಕೊಟ್ಟಿದ್ದಾರೆ. ಹೊಸ ಅಬಕಾರಿ ನೀತಿ ಜಾರಿಯಲ್ಲಿ ಅಕ್ರಮವಾಗಿದೆ, ಸಿಬಿಐ ತನಿಖೆ ನಡೆಸಬೇಕು ಎಂದು ಇದೇ ಜುಲೈನಲ್ಲಿ ಕೇಂದ್ರಕ್ಕೆ ಹೇಳಿದರು. ತನಿಖೆ ಆರಂಭವೂ ಆಗಿದೆ. ಇದು ಬಿಜೆಪಿ ಮತ್ತು ಎಎಪಿ ನಡುವೆ ಭಾರಿ ವಾಕ್ಸಮರಕ್ಕೆ ಕಾರಣವಾಗಿದೆ.



ತೆಲಂಗಾಣ: ಕಿತ್ತಾಟಕ್ಕೆ ಮುನ್ನುಡಿ

ತೆಲಂಗಾಣದಲ್ಲಿಯೂ ಇತ್ತೀಚಿನ ದಿನಗಳಲ್ಲಿ ರಾಜ್ಯಪಾಲರು ಮತ್ತು ಸರ್ಕಾರದ ನಡುವೆ ಕಿತ್ತಾಟ ಆರಂಭವಾಗಿದೆ. ಮಹಿಳೆ ಎಂಬ ಕಾರಣಕ್ಕೆ ತಮ್ಮನ್ನು ಸರ್ಕಾರವು ಕೆಟ್ಟದಾಗಿ ನಡೆಸಿಕೊಂಡಿದೆ, ರಾಜ್ಯಪಾಲ ಹುದ್ದೆಗೂ ಗೌರವ ಕೊಡುತ್ತಿಲ್ಲ ಎಂದು ರಾಜ್ಯಪಾಲರಾದ ತಮಿಳ್‌ಸೈ ಸೌಂದರರಾಜನ್ ಆರೋಪಿಸಿದ್ದಾರೆ. ಸರ್ಕಾರದ ವಿರುದ್ಧ ಹಲವು ಗಂಭೀರ ಆರೋಪಗಳನ್ನೂ ಅವರು ಮಾಡಿದ್ದಾರೆ. ಸರ್ಕಾರಿ ಆಸ್ಪತ್ರೆಗಳು ಅತ್ಯಂತ ಕೆಟ್ಟ ಸ್ಥಿತಿಯಲ್ಲಿವೆ, ಸರ್ಕಾರಿ ಆಸ್ಪತ್ರೆಯ ನಿರ್ದೇಶಕರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಾರೆ ಎಂದೂ ಆಪಾದಿಸಿದ್ದಾರೆ.

ತಮಿಳ್‌ಸೈ ಅವರು ರಾಜ್ಯಪಾಲರಂತೆ ವರ್ತಿಸುವ ಬದಲು ರಾಜಕೀಯ ಪಕ್ಷವೊಂದರ ಪ್ರತಿನಿಧಿಯಂತೆ ವರ್ತಿಸುತ್ತಿದ್ದಾರೆ ಎಂದು ಆಡಳಿತಾರೂಢ ಟಿಆರ್‌ಎಸ್ ಹೇಳಿದೆ. ರಾಜ್ಯಪಾಲರಾಗಿ ಗುರುತಿಸಿಕೊಳ್ಳಬೇಕೋ ರಾಜಕೀಯ ಪಕ್ಷದ ಪ್ರತಿನಿಧಿಯಾಗಿ ಗುರುತಿಸಿಕೊಳ್ಳಬೇಕೋ ಎಂಬುದನ್ನು ಅವರೇ ನಿರ್ಧರಿಸಬೇಕು ಎಂದು ಬುಡಕಟ್ಟು ವ್ಯವಹಾರಗಳ ಸಚಿವೆ ಸತ್ಯವತಿ ರಾಥೋಡ್ ಹೇಳಿದ್ದಾರೆ. 'ರಾಜ್ಯಪಾಲರು ಲಕ್ಷ್ಮಣರೇಖೆ ಮೀರಿದ್ದಾರೆ' ಎಂದು ಸಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಕೆ. ನಾರಾಯಣ ಹೇಳಿದ್ದಾರೆ.

ಮಮತಾ–ಧನಕರ್ ನಿರಂತರ ಸಂಘರ್ಷ


ಜಗದೀಪ್ ಧನಕರ್

ಉಪರಾಷ್ಟ್ರಪತಿಯಾಗಿ ಇತ್ತೀಚೆಗೆ ಆಯ್ಕೆಯಾಗಿರುವ ಜಗದೀಪ್ ಧನಕರ್ ಅವರು, ಇದಕ್ಕೂ ಮುನ್ನ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದರು. ಆದರೆ, ಅವರು ಅಧಿಕಾರದಲ್ಲಿದ್ದ ಅಷ್ಟೂ ದಿನಗಳ ಕಾಲ, ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಜೊತೆ ಸಂಘರ್ಷಕ್ಕಿಳಿದಿದ್ದರು. ಟ್ವೀಟ್ ಮಾಡಿ, ಸಲಹೆಗಳನ್ನು ನೀಡುತ್ತಿದ್ದ ಅವರು, ಸರ್ಕಾರದ ನಡೆಯನ್ನು ಆಗಾಗ್ಗೆ ಪ್ರಶ್ನಿಸುತ್ತಿದ್ದರು. ಇದು ಮಮತಾ ಬ್ಯಾನರ್ಜಿ ಅವರನ್ನು ಕೆರಳಿಸುತ್ತಿತ್ತು. ಇದೇ ಜನವರಿಯಲ್ಲಿ, ಟ್ವಿಟರ್‌ನಲ್ಲಿ ಜಗದೀಪ್ ಅವರನ್ನು ಮಮತಾ ಬ್ಲಾಕ್ ಮಾಡಿದ್ದರು. ಧನಕರ್ ಅವರು ಟ್ವೀಟ್ ಮಾಡುವಾಗ ತಮ್ಮ ಹೆಸರನ್ನು ಟ್ಯಾಗ್ ಮಾಡದಂತೆ ತಡೆಯಲು ಅವರು ಈ ಕ್ರಮಕ್ಕೆ ಮುಂದಾಗಿದ್ದರು. ರಾಜ್ಯಪಾಲರ ಟ್ವೀಟ್‌ಗಳು ಕಿರಿಕಿರಿ ಉಂಟು ಮಾಡುತ್ತಿವೆ ಎಂದು ಮಮತಾ ಬಹಿರಂಗವಾಗಿ ಹೇಳಿದ್ದರು. ರಾಜಭವನವು ತಮ್ಮ ದೂರವಾಣಿಗಳನ್ನು ಕದ್ದಾಲಿಸುತ್ತಿದೆ ಎಂಬುದು ಜಗದೀಪ್ ಅವರ ಬಗ್ಗೆ ಮಮತಾ ಅವರ ಗಂಭೀರ ಆರೋಪ. ರಾಜ್ಯಪಾಲರು ಸಾಂವಿಧಾನಿಕ ಅಧಿಕಾರಗಳನ್ನು ಮೀರಿ ನಡೆದುಕೊಳ್ಳುತ್ತಿದ್ದಾರೆ ಎಂದು ಟೀಕಿಸಿದ್ದರು. ಆದರೆ, ಸಂವಿಧಾನದ 167ನೇ ವಿಧಿಯ ಪ್ರಕಾರ, ರಾಜ್ಯಪಾಲರ ಜೊತೆ ರಾಜ್ಯದ ಮುಖ್ಯಮಂತ್ರಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಮಮತಾ ಅವರಿಗೆ ಧನಕರ್ ನೆನಪಿಸಿದ್ದರು. ರಾಜ್ಯಪಾಲರ ನಡೆಯ ಬಗ್ಗೆ ಸಂಸತ್ತಿನ ಅಧಿವೇಶನದಲ್ಲಿ ಚರ್ಚಿಸಲು ಟಿಎಂಸಿ ಸಂಸದರು ಮುಂದಾಗಿದ್ದರು. ಆದರೆ ಸಭಾಪತಿ ಚರ್ಚೆಗೆ ಅವಕಾಶ ನೀಡಿರಲಿಲ್ಲ. ಪಶ್ಚಿಮ ಬಂಗಾಳ ವಿಧಾನಸಭೆ ಅಧಿವೇಶವನ್ನು ಮುಕ್ತಾಯಗೊಳಿಸುವುದಾಗಿ ರಾಜ್ಯಪಾಲರು ಇತ್ತೀಚೆಗೆ ಮಾಡಿದ್ದ ಟ್ವೀಟ್ ಸಹ ಉಭಯ ನಾಯಕರ ಮಧ್ಯೆ ಭಿನ್ನಮತಕ್ಕೆ ಕಾರಣವಾಗಿತ್ತು. ಸರ್ಕಾರದ ಗಮನಕ್ಕೆ ತಾರದೇ ಅಧಿವೇಶನ ಮುಕ್ತಾಯಗೊಳಿಸುವುದನ್ನು ಟಿಎಂಸಿ ಪ್ರಶ್ನಿಸಿತ್ತು. ಆದರೆ, ಈ ಆರೋಪವನ್ನು ಧನಕರ್ ಅಲ್ಲಗಳೆದಿದ್ದರು. ರಾಜ್ಯಪಾಲರ ಅಧಿಕಾರ ದುರುಪಯೋಗ ವಿಚಾರದ ಕುರಿತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಜೊತೆ ಮಮತಾ ಇತ್ತೀಚೆಗೆ ಚರ್ಚೆ ನಡೆಸಿದ್ದರು.

ಮಹಾರಾಷ್ಟ್ರ: ಹಲವು ನಿರ್ಧಾರಗಳಿಗೆ ತಿರಸ್ಕಾರ

ರಾಜ್ಯಪಾಲ ಮತ್ತು ಸರ್ಕಾರದ ನಡುವಣ ತಿಕ್ಕಾಟಕ್ಕೆ ಮಹಾರಾಷ್ಟ್ರವೂ ಹೊರತಾಗಿರಲಿಲ್ಲ. ಶಿವಸೇನಾ ನೇತೃತ್ವದ ಎಂವಿಎ ಸರ್ಕಾರವಿದ್ದಾಗ ಅಂದಿನ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತು ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಮಧ್ಯೆ ಜಟಾಪಟಿ ಇತ್ತು. ಎಂವಿಎ ಸರ್ಕಾರ ಅಸ್ತಿತ್ವಕ್ಕೆ ಬಂದಂದಿನಿಂದಲೇ ಈ ತಿಕ್ಕಾಟ ಶುರುವಾಗಿತ್ತು. ಸಂಪುಟ ಸದಸ್ಯರ ಪ್ರಮಾಣವಚನ ಸ್ವೀಕಾರಕ್ಕೆ ರಾಜ್ಯಪಾಲ ಕೋಶಿಯಾರಿ ಅವಕಾಶವನ್ನೇ ನೀಡಿರಲಿಲ್ಲ. ಹಲವು ತಿಂಗಳ ನಂತರ ಸಚಿವರು ಅಧಿಕಾರ ಸ್ವೀಕರಿಸಬೇಕಾದ ಮತ್ತು ಆ ಮೂಲಕ ಉದ್ಧವ್ ಅವರನ್ನು ಇಕ್ಕಟ್ಟಿಗೆ ಸಿಲುಕಿಸುವ ಸನ್ನಿವೇಶವನ್ನು ಕೋಶಿಯಾರಿ ಸೃಷ್ಟಿಸಿದ್ದರು.



ಮುಖ್ಯಮಂತ್ರಿ ಏಕನಾಥ ಶಿಂಧೆ ಮತ್ತು ರಾಜ್ಯಪಾಲ ಭಗತ್‌ಸಿಂಗ್ ಕೋಶಿಯಾರಿ

ಕೋವಿಡ್ ಸಂದರ್ಭದಲ್ಲಿ ರಾಜ್ಯ ಸರ್ಕಾರ ತೆಗೆದುಕೊಂಡ ಹಲವು ನಿರ್ಧಾರಗಳನ್ನು ರಾಜ್ಯಪಾಲರು ತಿರಸ್ಕರಿಸಿದ್ದರು. ಕೋವಿಡ್ ಪರಿಸ್ಥಿತಿಯನ್ನು ಚೆನ್ನಾಗಿ ನಿರ್ವಹಿಸಿದ್ದ ರಾಜ್ಯ ಸರ್ಕಾರದ ವರ್ಚಸ್ಸಿಗೆ ಮಸಿ ಬಳಿಯಲೆಂದೇ ಕೋಶಿಯಾರಿ ಹೀಗೆ ಮಾಡುತ್ತಿದ್ದಾರೆ ಎಂದು ಆಡಳಿತಾರೂಢ ಮೈತ್ರಿಕೂಟದ ನಾಯಕರು ಬಹಿರಂಗವಾಗಿಯೇ ಆರೋಪಿಸಿದ್ದರು. ವಿಧಾನಸಭೆಯಲ್ಲಿ ಅಂಗೀಕಾರವಾದ ಮಸೂದೆ, ನಿರ್ಣಯಗಳಿಗೆ ಅನುಮೋದನೆ ನೀಡಲು ತೀರಾ ವಿಳಂಬ ಮಾಡುತ್ತಾರೆ ಮತ್ತು ವಿರೋಧ ಪಕ್ಷ ಬಿಜೆಪಿಯ ಪರವಾಗಿ ಪಕ್ಷಪಾತ ನಡೆಸುತ್ತಾರೆ ಎಂದು ಶಿವಸೇನಾ ಗಂಭೀರ ಆರೋಪ ಮಾಡಿತ್ತು. ಇದನ್ನು ಪುಷ್ಟೀಕರಿಸುವಂತೆ, ವಿಶೇಷ ಅಧಿವೇಶನ ಕರೆಯಿರಿ ಎಂದು ಕೋರಿ ಬಿಜೆಪಿ ಸಲ್ಲಿಸಿದ್ದ ಮನವಿಯನ್ನು ಕೋಶಿಯಾರಿ ಕೆಲವೇ ಗಂಟೆಗಳಲ್ಲಿ ಕಾರ್ಯರೂಪಕ್ಕೆ ತರಲು ಮುಂದಾಗಿದ್ದರು. ಈಗಿನ ಸರ್ಕಾರದ ಜೊತೆ ಸೌಹಾರ್ದ ಸಂಬಂಧ ಹೊಂದಿದ್ದಾರೆ.

ತಮಿಳುನಾಡು: ಮುಸುಕಿನ ಗುದ್ದಾಟ

ತಮಿಳುನಾಡಿನ ರಾಜ್ಯಪಾಲ ಆರ್.ಎನ್.ರವಿ ಮತ್ತು ಡಿಎಂಕೆ ಸರ್ಕಾರದ ಮಧ್ಯೆ ಮುಸುಕಿನ ಗುದ್ದಾಟ ನಡೆದಿದೆ.

ಬೇರೆ ರಾಜ್ಯಗಳಲ್ಲಿ ಇದ್ದಂತೆ ತಮಿಳುನಾಡಿನಲ್ಲಿ ರಾಜ್ಯಪಾಲರು ಮತ್ತು ಡಿಎಂಕೆ ಸರ್ಕಾರದ ನಡುವಣ ತಿಕ್ಕಾಟ ಹಾದಿ–ಬೀದಿಯ ರಂಪಾಟದಂತೆ ಆಗಿಲ್ಲ. ಬದಲಿಗೆ ರಾಜ್ಯಪಾಲರು ತಮ್ಮ ಅಧಿಕಾರದ ಮಿತಿಯಲ್ಲಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆ. ಇನ್ನೊಂದೆಡೆ ರಾಜ್ಯ ಸರ್ಕಾರವೂ ತನಗೆ ಲಭ್ಯವಿರುವ ಸೀಮಿತ ಅವಕಾಶವನ್ನು ಬಳಸಿಕೊಂಡು ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸಲು ಯತ್ನಿಸುತ್ತಿದೆ.


ಆರ್.ಎನ್.ರವಿ

ತಮಿಳುನಾಡು ವಿಧಾನಮಂಡಲವು ಅನುಮೋದಿಸಿ ಕಳುಹಿಸಿದ 19 ಪ್ರಮುಖ ಮಸೂದೆಗಳಿಗೆ ರಾಜ್ಯಪಾಲರು ಅಂಕಿತವನ್ನೇ ಹಾಕಿಲ್ಲ. ಇದರಿಂದ ಸರ್ಕಾರದ ಪ್ರಮುಖ ಯೋಜನೆಗಳು, ಕಾರ್ಯಕ್ರಮಗಳು ಮತ್ತು ನೀತಿಗಳು ನನೆಗುದಿಗೆ ಬಿದ್ದಿವೆ. ಆಡಳಿತಯಂತ್ರಕ್ಕೆ ಅಡಚಣೆಯಾಗಿದೆ ಎಂದು ಆಡಳಿತಾರೂಢ ಡಿಎಂಕೆಯ ಹಲವು ನಾಯಕರು ಆರೋಪಿಸಿದ್ದಾರೆ. ಇದಕ್ಕೆ ಸ್ಪಷ್ಟ ನಿದರ್ಶನವೆಂದರೆ ತಮಿಳುನಾಡಿನ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆಯಿಂದ ವಿನಾಯಿತಿ ನೀಡುವ ಮಸೂದೆ. ಈ ಮಸೂದೆಯನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗಿತ್ತು. ಆದರೆ, ಯಾವುದೇ ಕಾರಣ ನೀಡದೆ ರಾಜ್ಯಪಾಲರು ಅದನ್ನು ವಾಪಸ್ ಕಳುಹಿಸಿದ್ದರು. ಕೆಲವೇ ದಿನಗಳಲ್ಲಿ ಸರ್ಕಾರವು ಯಥಾರೂಪದಲ್ಲೇ ಹೊಸ ಮಸೂದೆಯನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಿತು. ಅದನ್ನು ರಾಜ್ಯಪಾಲರು ರಾಷ್ಟ್ರಪತಿಗೆ ಕಳುಹಿಸಬೇಕಿತ್ತು. ಆದರೆ, ಹತ್ತಾರು ತಿಂಗಳು ಕಳೆದರೂ ಆ ಮಸೂದೆ ತಮಿಳುನಾಡು ರಾಜಭವನದಲ್ಲೇ ಉಳಿದಿದೆ.

ಮಸೂದೆಯನ್ನು ರಾಷ್ಟ್ರಪತಿಗೆ ಕಳುಹಿಸುವಂತೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಮನವಿ ಸಲ್ಲಿಸಿದ್ದರು. ಅದರಿಂದಲೂ ಏನೂ ಉಪಯೋಗವಾಗಿಲ್ಲ. ಕೇಂದ್ರ ಸರ್ಕಾರದ ನೀಟ್ ನೀತಿಯನ್ನು ವಿರೋಧಿಸುವ ತಮಿಳುನಾಡು ಸರ್ಕಾರದ ನಿಲುವನ್ನು, ರಾಜ್ಯಪಾಲರು ತಮ್ಮ ಈ ಕ್ರಮದ ಮೂಲಕ ದುರ್ಬಲಗೊಳಿಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ.

ಈ ತಿಕ್ಕಾಟವು ಇಷ್ಟಕ್ಕೇ ಸೀಮಿತವಾಗಿಲ್ಲ. ರಾಜ್ಯದ ವಿಶ್ವವಿದ್ಯಾಲಯಗಳಿಗೆ ಉಪಕುಲಪತಿಗಳನ್ನು ನೇಮಕ ಮಾಡುವ ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸಲು ಸಂವಿಧಾನದ ಚೌಕಟ್ಟಿನಲ್ಲೇ ಡಿಎಂಕೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಕೇಂದ್ರ ಸರ್ಕಾರವು ರಾಜ್ಯಪಾಲರನ್ನು ಬಳಸಿಕೊಂಡು, ತಮ್ಮ ಪರವಾಗಿ ಇರುವವರನ್ನು ವಿಶ್ವವಿದ್ಯಾಲಯಗಳಿಗೆ ನೇಮಕ ಮಾಡುತ್ತಿದೆ ಎಂದು ಡಿಎಂಕೆ ಆರೋಪಿಸಿತ್ತು. ಇದನ್ನು ತಡೆಯುವ ಉದ್ದೇಶದಿಂದ, ರಾಜ್ಯದ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಕ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡುವ ನಿರ್ಣಯವನ್ನು ಡಿಎಂಕೆ ಸರ್ಕಾರ ಕೈಗೊಂಡಿದೆ. ಇದೂ ರಾಜ್ಯಪಾಲ–ಸರ್ಕಾರದ ನಡುವಣ ತಿಕ್ಕಾಟವನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ದಿದೆ.

ಕೇರಳ ರಾಜ್ಯಪಾಲರ ವಿಳಂಬ ನಡೆ: ಸರ್ಕಾರಕ್ಕೆ ಇಕ್ಕಟ್ಟು


ಆರಿಫ್ ಮೊಹಮ್ಮದ್ ಖಾನ್

ಕೇರಳ ರಾಜ್ಯಪಾಲರಾಗಿರುವ ಆರಿಫ್ ಮೊಹಮ್ಮದ್ ಖಾನ್ ಹಾಗೂ ರಾಜ್ಯದ ಆಡಳಿತಾರೂಢ ಎಡರಂಗದ ಸರ್ಕಾರವೂ ಸಂಘರ್ಷದಿಂದ ಹೊರತಾಗಿಲ್ಲ. ವಿಧಾನಸಭೆ ಅನುಮೋದನೆ ನೀಡಿ ಕಳುಹಿಸಿದ ಮಸೂದೆಗಳು ಹಾಗೂ ಸುಗ್ರೀವಾಜ್ಞೆಗಳಿಗೆ ಸಹಿ ಹಾಕಲು ರಾಜ್ಯಪಾಲರು ವಿಳಂಬ ಮಾಡುತ್ತಿದ್ದಾರೆ ಎಂಬುದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರದ ಪ್ರಮುಖ ಆಕ್ಷೇಪ.

ಕೇರಳ ಸರ್ಕಾರ ಹೊರಡಿಸಿದ್ದ ಪ್ರಮುಖ ಸುಗ್ರೀವಾಜ್ಞೆಗಳಿಗೆ ರಾಜ್ಯಪಾಲರು ನಿಗದಿತ ಸಮಯದೊಳಗೆ ಸಹಿ ಹಾಕದ್ದರಿಂದ ಅವುಗಳ ಅವಧಿ ಮುಕ್ತಾಯವಾಗಿದೆ ಎಂದು ಆರೋಪಿಸಲಾಗಿದೆ. ರಾಜ್ಯದ ವಿಶ್ವವಿದ್ಯಾಲಯಗಳಿಗೆ ಕುಲಪತಿ ನೇಮಕಾತಿಯಲ್ಲಿ ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸುವ ಮಹತ್ವದ ಸುಗ್ರೀವಾಜ್ಞೆಯೂ ಇದರಲ್ಲಿ ಸೇರಿತ್ತು. ಸುಗ್ರೀವಾಜ್ಞೆಯ ಕಡತಗಳ ಅಧ್ಯಯನಕ್ಕೆ ಸಮಯ ಬೇಕಾಗುತ್ತದೆ ಎಂಬುದು ರಾಜ್ಯಪಾಲರ ಸ್ಪಷ್ಟನೆ.

ವಿಶ್ವವಿದ್ಯಾಲಯಗಳ ಕುಲಾಧಿಪತಿಯಾಗಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯಪಾಲರು, ಅಧಿಕಾರ ಮೊಟಕು ಮಾಡಲು ಮುಂದಾಗಿರುವ ರಾಜ್ಯ ಸರ್ಕಾರಕ್ಕೆ ತಿರುಗೇಟು ನೀಡಿದ್ದರು. ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದ್ದ ಬೆನ್ನಲ್ಲೇ, ಕೇರಳ ವಿಶ್ವವಿದ್ಯಾಲಯ ಕುಲಪತಿ ನೇಮಕಕ್ಕೆ ಶೋಧನಾ ಸಮಿತಿ ರಚಿಸಿದ್ದರು. ರಾಜ್ಯಪಾಲರ ಕಾರ್ಯ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರವು ಹಸ್ತಕ್ಷೇಪ ಮಾಡುತ್ತಿದೆ ಎಂದು ಅವರು ಟೀಕಿಸಿದ್ದರು. ರಾಜ್ಯಪಾಲರ ಆಪ್ತ ಕಾರ್ಯದರ್ಶಿಯನ್ನಾಗಿ ಬಿಜೆಪಿ ಮುಖಂಡರೊಬ್ಬರನ್ನು ನೇಮಕ ಮಾಡಿಕೊಂಡಿದ್ದೂ ಸಹ ಆರಿಫ್ ಖಾನ್ ಮತ್ತು ಪಿಣರಾಯಿ ನಡುವೆ ಸಂಘರ್ಷ ಸೃಷ್ಟಿಸಿತ್ತು.

ರಾಜ್ಯಪಾಲರ ನೇಮಕಾತಿ ಹಾಗೂ ತೆಗೆದುಹಾಕುವ ವಿಚಾರದಲ್ಲಿ ರಾಜ್ಯ ಸರ್ಕಾರಗಳ ಜೊತೆ ಸಮಾಲೋಚನೆ ನಡೆಸಬೇಕು ಎಂಬುದು ಎಡಪಕ್ಷಗಳ ಬೇಡಿಕೆ. ರಾಜ್ಯಪಾಲರ ಹುದ್ದೆಯ ಅಗತ್ಯವನ್ನೂ ಎಡಪಕ್ಷಗಳು ಈ ಹಿಂದೆ ಪ್ರಶ್ನೆ ಮಾಡಿದ್ದವು. ರಾಜ್ಯಪಾಲರ ನೇಮಕಾತಿಯಲ್ಲಿ ಸುಧಾರಣೆ ತರಬೇಕು ಎಂಬ ಆಗ್ರಹವನ್ನೂ ಮಂಡಿಸಿದ್ದವು.

ಆಧಾರ: ಪಿಟಿಐ, ರಾಯಿಟರ್ಸ್



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 234

ಪಾರ್ವತಿಯ ಅಗ್ನಿಪ್ರವೇಶ

ಸಪ್ತರ್ಷಿಗಳು ಪಾರ್ವತಿಯ ತಪೋನಿಷ್ಠೆಯನ್ನು ಪರೀಕ್ಷಿಸಿ ತೆರಳಿದಮೇಲೆ, ಪಾರ್ವತಿಯ ತಪಸ್ಸನ್ನು ತಾನೇ ಪರೀಕ್ಷೆಮಾಡಲು ಶಂಕರ ನಿರ್ಧರಿಸಿದ. ವೃದ್ಧಬ್ರಹ್ಮಚಾರಿಯ ವೇಷವನ್ನು ಧರಿಸಿ ತಪೋವನಕ್ಕೆ ತೆರಳಿದ. ತಪೋವೇದಿಕೆಯಲ್ಲಿ ಕುಳಿತಿದ್ದ ಪಾರ್ವತಿ ಅತ್ಯಂತ ನಯನಮನೋಹರವಾಗಿ ಕಾಣಿಸುತ್ತಿದ್ದಳು. ದೀರ್ಘಕಾಲದ ತಪಸ್ಸಿನಿಂದ ಆಕೆಯ ಶರೀರ ಕೃಶವಾಗಿದ್ದರೂ, ಬಿದಿಗೆಯ ಚಂದ್ರನಂತೆ ಅವಳ ಶರೀರವು ಹೊಳೆಯುತ್ತಿತ್ತು. ನಾರುಮಡಿ ಉಟ್ಟಿದ್ದರೂ ಪಾರ್ವತಿ ಸೌಂದರ್ಯವತಿಯಾಗಿ ಶೋಭಿಸುತ್ತಿದ್ದಳು. ವೃದ್ಧ ವೇಷಧಾರಿ ಶಿವ ಅವಳ ಬಳಿಗೆ ಹೋದ. ಆತನ ಶರೀರ ಮಹಾತೇಜಸ್ಸಿನಿಂದ ಹೊಳೆಯುತ್ತಿದ್ದುದನ್ನು ಪಾರ್ವತಿ ಗಮನಿಸಿದಳು. ಈತ ಸಾಮಾನ್ಯ ವೃದ್ಧನಲ್ಲ ಎಂಬುದನ್ನು ಊಹಿಸಿದಳು. ಆತನನ್ನು ಆದರಪೂರ್ವಕವಾಗಿ ಬರಮಾಡಿಕೊಂಡು ಪೂಜಿಸಿದಳು.


ಪೂಜೋಪಚಾರಗಳಿಂದ ವೃದ್ಧನನ್ನು ಸತ್ಕರಿಸಿದ ಮೇಲೆ, 'ಹಿರಿಯರೇ, ನೀವು ಸಾಮಾನ್ಯರಲ್ಲ. ನಿಮ್ಮ ಬ್ರಹ್ಮಚರ್ಯದಿಂದ ಈ ವನವು ಪ್ರಕಾಶಿಸುತ್ತಿದೆ. ವೇದಾಧ್ಯಯನಸಂಪನ್ನನಾಗಿರುವ ನೀವು ಯಾರು? ಎಲ್ಲಿಂದ ಬಂದಿರಿ?' ಎಂದು ಕೇಳಿದಳು.

'ನಾನು ಬ್ರಹ್ಮಸ್ವರೂಪಿ. ಈ ಜಗತ್ತನ್ನು ಚೆನ್ನಾಗಿ ತಿಳಿದವನು. ಪರರಿಗೆ ಉಪಕಾರ ಮಾಡುವುದೇ ನನ್ನ ಧ್ಯೇಯ. ಎಲೈ ತಪಸ್ವಿನಿ, ನಿನ್ನ ಹೆಸರೇನು? ಯಾರ ಮಗಳು? ಈ ನಿರ್ಜನವಾದ ಅರಣ್ಯದಲ್ಲಿ ಮಹಾಮುನಿಗಳೂ ಮಾಡದಂತಹ ಘೋರ ತಪಸ್ಸನ್ನೇಕೆ ಮಾಡುತ್ತಿರುವೆ? ನಿನ್ನ ನೋಡಿದರೆ ತರುಣಿಯಾಗಿ ಕಾಣುವೆ. ಇಷ್ಟರಲ್ಲಾಗಲೇ ನಿನಗೆ ಮದುವೆಯೂ ಆಗಿರಬೇಕು. ಹೀಗಿದ್ದೂ ಪತಿಯನ್ನು ಬಿಟ್ಟು ಈ ವನದಲ್ಲಿ ಘೋರವಾಗಿ ತಪಸ್ಸನ್ನೇಕೆ ಆಚರಿಸುತ್ತಿರುವೆ? ನೀನು ತಪಸ್ವಿಯ ಮಡದಿಯೇ? ಆ ತಪಸ್ವಿಯು ನಿನ್ನನ್ನು ಸಲಹದೇ ತಪಸ್ಸಿಗಾಗಿ ಬೇರೆಡೆಗೆ ಹೋಗಿರುವನೇ? ನೀನು ಯಾವ ಕುಲದಲ್ಲಿ ಜನಿಸಿರುವೆ? ನಿನ್ನ ತಂದೆ ಯಾರು? ಎಲೈ ಭದ್ರೇ, ನಿನ್ನ ಅವಸ್ಥೆ ಏಕೆ ಹೀಗಾಗಿದೆ? ನಿನ್ನನ್ನು ನೋಡಿದರೆ ಮಹಾಭಾಗ್ಯವತಿಯಾಗಿ ಕಾಣುವೆ. ಸೌಭಾಗ್ಯವತಿಯಾದ ನೀನು ತಪಸ್ಸು ಮಾಡುತ್ತಿರುವುದರಲ್ಲಿ ಅರ್ಥವಿಲ್ಲ. ತ್ರಿಲೋಕಸುಂದರಿಯಂತೆ ರಾರಾಜಿಸುತ್ತಿರುವ ನೀನು ವೇದಮಾತೆಯೇ? ಲಕ್ಷ್ಮೀದೇವಿಯೇ? ಇಲ್ಲವೇ ಸರಸ್ವತೀದೇವಿಯೇ? ಈ ತ್ರಿದೇವಿ ಸುಂದರಿಯರ ಮಧ್ಯದಲ್ಲೂ ನಕ್ಷತ್ರದಂತೆ ಹೊಳೆಯುತ್ತಿರುವ ನೀನಾರು? ಮುದುಕನಾದ ನನಗೆ ಊಹಿಸಲೂ ಆಗುತ್ತಿಲ್ಲ. ನೀನೇ ವಿವರವಾಗಿ ಹೇಳು' ಎಂದ.

'ಹಿರಿಯರೇ, ನಾನು ವೇದಮಾತೆಯೂ ಅಲ್ಲ. ಲಕ್ಷ್ಮೀ-ಸರಸ್ವತಿಯೂ ಅಲ್ಲ. ಹಿಮವಂತನ ಪುತ್ರಿ ಪಾರ್ವತೀ. ಹಿಂದಿನ ಜನ್ಮದಲ್ಲಿ ನಾನು ದಕ್ಷಪುತ್ರಿಯಾಗಿ ಜನಿಸಿದ್ದೆ. ಸತೀದೇವಿಯಾಗಿ ನಾಮಾಂಕಿತಳಾಗಿದ್ದ ನಾನು ಶಿವನನ್ನು ಪತಿಯಾಗಿ ಪಡೆದಿದ್ದೆ. ಮಹಾತ್ಮನಾದ ನನ್ನ ಪತಿಯನ್ನು ನನ್ನ ತಂದೆಯೇ ನಿಂದಿಸಿದ್ದರಿಂದ ನೊಂದು, ಯೋಗದಿಂದ ಶರೀರವನ್ನು ತ್ಯಜಿಸಿದ್ದೆ. ಈ ಜನ್ಮದಲ್ಲಿ ಮತ್ತೆ ಶಿವನ ಸೇವೆ ಮಾಡುವ ಸೌಭಾಗ್ಯ ಲಭಿಸಿತ್ತು. ಅಷ್ಟರಲ್ಲಿಯೇ ಶಿವ ತಪೋಭಂಗ ಮಾಡಿದನೆಂದು ಮನ್ಮಥನನ್ನು ಭಸ್ಮಮಾಡಿ ನನ್ನನ್ನು ಬಿಟ್ಟು ಹೋದ.

'ಶಂಕರ ಹೋದ ನಂತರ ನನಗೆ ತುಂಬಾ ದುಃಖವಾಯಿತು. ತಂದೆ ಮನೆಯಿಂದ ಹೊರ ಬಂದು ಗಂಗಾದಡದಲ್ಲಿ ತಪಸ್ಸು ಮಾಡುತ್ತಿರುವೆ. ಬಹಳ ಕಾಲದಿಂದ ಕಠೋರ ತಪಸ್ಸು ಮಾಡಿದರೂ ಶಿವ ನನಗೆ ಪ್ರಸನ್ನನಾಗಲಿಲ್ಲ. ಆದಕಾರಣ ಅಗ್ನಿಪ್ರವೇಶ ಮಾಡಬೇಕೆಂದಿದ್ದೇನೆ, ನೀವಿನ್ನು ಹೊರಡಿ' ಎಂದ ಪಾರ್ವತಿ ಅಗ್ನಿಪ್ರವೇಶ ಮಾಡಿದಳು. ಪಾರ್ವತಿಯನ್ನು ತಡೆಯುವ ವೃದ್ಧವೇಷಧಾರಿ ಶಿವನ ಪ್ರಯತ್ನ ವಿಫಲವಾಯಿತು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಸೆಪ್ಟೆಂಬರ್ 26, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಪ್ರತಿಪದ್ ಗಂ. 27-09 ನಕ್ಷತ್ರ: ಉತ್ತರಫಲ್ಗುನಿ ಗಂ. 05-55 ಯೋಗ: ಶುಕ್ಲ ಗಂ. 08-05, ಕರಣ: ಕಿಂಸ್ತುಘ್ನ ಗಂ. 15-20, ಕನ್ಯಾ ಮಾಸದ 09 ನೇ ದಿನ.
ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-23 ಸೂರ್ಯಾಸ್ತ : 06-20
ಮುಸ್ಲಿಂ ದಿನಾಂಕ : 29 ಸಫರ್,
ದಿನ ವಿಶೇಷ : ಶಾರದಾ ಶರನ್ನವರಾತ್ರಾರಂಭ, ಮಹಾರಾಜ ಅಗ್ರಸೇನರ ಜಯಂತಿ
ಅದೃಷ್ಟ ಸಂಖ್ಯೆ : 3, 8

ಮೇಷ: ವಿಜ್ಞಾನಿಗಳಿಗೆ ನಿರೀಕ್ಷಿತ ಯಶಸ್ಸು ದೊರೆತು ಸಂತಸವಾಗುವುದು. ರಂಗಕರ್ಮಿಗಳಿಗೆ ಹೆಚ್ಚಿನ ಜನಸಂಪರ್ಕವಾಗಲಿದೆ. ಆರೋಗ್ಯದ ಕಡೆ ಹೆಚ್ಚಿನ ಗಮನವಿರಲಿ, ಆಹಾರದಲ್ಲಿ ವಾಯು ಪದಾರ್ಥದ ಬಳಕೆ ಕಡಿಮೆಮಾಡಿ.

ವೃಷಭ: ಉನ್ನತಾಧಿಕಾರಿಯ ದಿಢೀರ್ ವರ್ಗಾವಣೆಯಿಂದಾಗಿ ನಿಮ್ಮ ಸ್ಥಾನಕ್ಕೆ ಜವಾಬ್ದಾರಿ ಹೆಚ್ಚಾಗುವುದು. ವಕೀಲರಿಗೆ ತಯಾರಿಯ ಕೊರತೆಯಿಂದಾಗಿ ಸಮಸ್ಯೆಗಳನ್ನು ಸೃಷ್ಟಿಸಿಕೊಂಡಂತಾಗಲಿದೆ. ಅನಗತ್ಯದ ಅಲೆದಾಟಗಳು ತಪ್ಪಲಿದೆ.

ಮಿಥುನ: ಅನಿರೀಕ್ಷಿತ ಸಂಗತಿಗಳು ಜರುಗಿ ಕೆಲಸಗಳು ಪೂರ್ಣಗೊಳ್ಳುವುದು ವಿಳಂಬವಾಗಬಹುದು. ವೈದ್ಯರಿಗೆ ವೃತ್ತಿಯಲ್ಲಿ ಸವಾಲೆನಿಸುವ ವಿಷಯಗಳಲ್ಲಿ ಯಶಸ್ಸು ಸಿಗಲಿದೆ. ರಾಜಕೀಯ ಸನ್ನಿವೇಶಗಳು ನಿಮಗನುಕೂಲವಾಗಿವೆ.

ಕರ್ಕಾಟಕ: ವ್ಯವಹಾರದಲ್ಲಿ ಸ್ವಲ್ಪ ಜಾಣತನವನ್ನು ಪ್ರದರ್ಶಿಸಿ. ಯಂತ್ರೋಪಕರಣಗಳ ಬಳಸುವಿಕೆಯ ಅರಿವಿಲ್ಲದೆ ಬಳಸಬೇಡಿ. ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಗುಣದಿಂದಾಗಿ ಸ್ನೇಹ-ಸಂಬಂಧದಲ್ಲಿ ಬಿರುಕು ಮೂಡಲಿದೆ.

ಸಿಂಹ: ವಸ್ತ್ರ ವಿನ್ಯಾಸದ ಕೆಲಸಗಳಿಂದ ಹೇರಳವಾಗಿ ಸಂಪಾದನೆಯಾಗುತ್ತದೆ. ಸಾಲ ಮರುಪಾವತಿಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೆ ಜ್ಞಾನಸಂಪಾದನೆಗೆ ಅಡೆತಡೆಗಳು ಉಂಟಾಗಬಹುದು.

ಕನ್ಯಾ: ವಿಭಿನ್ನ ರೀತಿಯ ಕೆಲಸವೊಂದನ್ನು ನಿಮ್ಮ ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ, ಒಪ್ಪಿಕೊಳ್ಳಿ ಅದು ನಿಮಗೆ ಸಾಕಷ್ಟು ಆದಾಯ ಮತ್ತು ಹೆಸರನ್ನು ತರಲಿದೆ. ಸಾರಿಗೆ ಸಂಸ್ಥೆ ಉದ್ಯೋಗಿಗಳಿಗೆ ಹೆಚ್ಚಿನ ಅನುಕೂಲ ಉಂಟಾಗಲಿದೆ.

ತುಲಾ: ಕಚೇರಿಯಲ್ಲಿ ಸಹದ್ಯೋಗಿಗಳ ಸಹಕಾರ ಪಡೆಯುವುದು ಅಗತ್ಯವಾಗುವುದು. ದೈವಾನುಗ್ರಹದಿಂದ ಕೆಲಸ ಕಾರ್ಯಗಳು ನೆರವೇರುವುದು. ಶ್ರೀ ದಕ್ಷಿಣಾಮೂರ್ತಿಯನ್ನು ಪೂಜಿಸುವುದರಿಂದ ನಿರಾತಂಕ ಮೂಡಲಿದೆ.

ವೃಶ್ಚಿಕ: ನಿಮ್ಮ ಬಗೆಗಿನ ವದಂತಿಗಳು ತಾನಾಗಿಯೆ ಮುಚ್ಚಿ ಹೋಗುವುದು. ಬಹು ದಿನಗಳಿಂದ ನಿರೀಕ್ಷಿಸುತ್ತಿದ್ದ ಕಂಕಣ ಬಲ ಅವಿವಾಹಿತರಿಗೆ ಒದಗಿ ಬರಲಿದೆ. ಚರ್ಮದ ವಸ್ತುಗಳ ಉದ್ಯಮದವರಿಗೆ ಲಾಭವಾಗುವುದು.

ಧನು: ಸಿಬ್ಬಂದಿ ವರ್ಗದವರನ್ನು ವಿಶ್ವಾಸಕ್ಕೆ ತೆಗೆದುಕೊಂಡಲ್ಲಿ ನೀವಂದುಕೊಂಡ ಹಾಗೆಯೇ ಕೆಲಸಗಳು ನಡೆಯಲಿವೆ. ಸ್ವತ್ತಿನ ವಿಷಯವಾಗಿ ಕಾನೂನು ಸಲಹೆ ಪಡೆದುಕೊಳ್ಳುವ ಬಗ್ಗೆ ಗಮನಹರಿಸಿ. ವರಮಾನ ಹೆಚ್ಚಲಿದೆ.

ಮಕರ: ವೃತ್ತಿಯಲ್ಲಿ ತಪ್ಪುಗಳು ಪುನರಾವರ್ತನೆ ಆಗದಂತೆ ಎಚ್ಚರವಹಿಸುವಿರಿ. ಸಣ್ಣಪುಟ್ಟ ತೊಡಕುಗಳು ಕಾಣಿಸಿಕೊಂಡರೂ ಕೆಲಸಗಳು ಅಬಾಧಿತವಾಗಿ ಸಾಗುವುದು. ಮನೆಯ ನಿರ್ಮಾಣ ಕೆಲಸಗಳು ಪೂರ್ಣಗೊಂಡು ನೆಮ್ಮದಿ.

ಕುಂಭ: ಮಿಶ್ರ ಭಾವನೆಗಳಿಂದ ಕೂಡಿದ ದಿನ. ಇತರರಿಗೆ ಸಹಾಯ ಮಾಡುವಲ್ಲಿ ಒಂದು ಬಗೆಯ ಆನಂದವನ್ನು ಅನುಭವಿಸುವಿರಿ. ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹೆಣಗ ಬೇಕಾಗಬಹುದು. ಹಳದಿ ಬಣ್ಣ ಅದೃಷ್ಟ ತರುವುದು.

ಮೀನ: ವೃತ್ತಿಯಲ್ಲಿ ಸಾಕಷ್ಟು ಪೈಪೋಟಿಯನ್ನು ನೀವು ಎದುರಿಸಬೇಕಾಗಬಹುದು. ಸ್ವಲ್ಪ ಗೌಪ್ಯತೆಯಿಂದ ಪ್ರಯತ್ನ ಪಟ್ಟಲ್ಲಿ ಎಲ್ಲಾ ಕೆಲಸಗಳಲ್ಲೂ ನೀವು ಜಯಗಳಿಸುವಿರಿ. ಮೇಲಧಿಕಾರಿಗಳಿಂದ ಸಹಕಾರ ದೊರೆಯಲಿದೆ.

ಬೆರಗಿನ ಬೆಳಕು



ಗುರುರಾಜ ಕರಜಗಿ

ಯೋಗಿಯ ಎದೆ

ಚೆಲುವುನಗುವುಗಳ ಕಂಡವನ ಕಣ್ಣರಳುವುದು |
ಅಳುವುನೋವುಗಳ ಕಂಡೊದ್ದೆಯಾಗುವುದು ||
ಇಳೆಯ ದನಿಗವನೆದೆಯೊಳೊಪ್ಪು
ಮರು ದನಿಯಹುದು |
ಶಿಲೆಯಲ್ಲ ಯೋಗಿಯೆದೆ – ಮಂಕುತಿಮ್ಮ || 722 ||

ಪದ-ಅರ್ಥ: ಕಂಡವನ = ಕಂಡು + ಅವನ, ಕಣ್ಣರಳುವುದು = ಕಣ್ಣು + ಅರಳುವುದು, ಕಂಡೊದ್ದೆಯಾಗುವುದು = ಕಂಡು + ಒದ್ದೆಯಾಗುವುದು, ಇಳೆಯ = ಜಗತ್ತಿನ, ದನಿಗವನೆದೆಯೊಳೊಪ್ಪು = ದನಿಗೆ + ಅವನ + ಎದೆಯೊಳು + ಒಪ್ಪು, ಯೋಗಿಯೆದೆ = ಯೋಗಿಯ + ಎದೆ.

ವಾಚ್ಯಾರ್ಥ: ಯೋಗಿಯಾದವನ ಎದೆ ಕಲ್ಲಲ್ಲ. ಜಗತ್ತಿನ ಚೆಲುವು ನಗುವುಗಳು ಅವನಲ್ಲಿ ಸಂತೋಷವನ್ನು ತರುತ್ತವೆ. ಅಳುವು, ನೋವುಗಳು ಅವನ ಕಣ್ಣುಗಳನ್ನು ಒದ್ದೆಯಾಗಿಸುತ್ತವೆ. ಪ್ರಪಂಚದ ಧ್ವನಿಗೆ ಅವನ ಹೃದಯದಲ್ಲಿ ಮರುದನಿ ಇದೆ.

ವಿವರಣೆ: ಸ್ವಾಮಿ ವಿವೇಕಾನಂದ! ಹೆಸರೇ ಅದ್ಭುತ ಪರಿಣಾಮವನ್ನುಂಟು ಮಾಡುತ್ತದೆ. ಭಾರತದಲ್ಲೆಲ್ಲ ಬಿಡಿ ಸನ್ಯಾಸಿಯಾಗಿ ಸಂಚರಿಸಿ, ದೇಶದ ನಾಡಿಯ ಮೇಲೆ ಬೆರಳಿಟ್ಟು ಅದರ ಹಿರಿಮೆ, ಕೊರತೆಗಳನ್ನು ಕಂಡಿದ್ದ ವಿವೇಕಾನಂದರು ಕನ್ಯಾಕುಮಾರಿಗೆ ಬಂದರು. ಸಮುದ್ರದ ಮಧ್ಯದಲ್ಲಿ ಸೆಟೆದು ನಿಂತಿದ್ದ ಬಂಡೆಯನ್ನೇರಿ ಕುಳಿತು ಧ್ಯಾನಮಗ್ನರಾದರು. ಅವರು ಯಾವ ದೇವರನ್ನು ಧ್ಯಾನಿಸಿದರು? ಯಾವ ಲಾಭಕ್ಕಾಗಿ ಧ್ಯಾನ? ಮನದಲ್ಲಿ ಮುಕ್ತಿಯ ವಿಚಾರವಿಲ್ಲ.

ದೇಶದ ದೀನ ದುಃಖಿತರ ಸೊರಗಿಹೋದ ಮುಖಗಳೇ ಕಣ್ಣಮುಂದೆ ಕುಣಿದವು. ದೇವಾಲಯಗಳು ಒಂದೆಡೆಯಾದರೆ, ಪಕ್ಕದಲ್ಲೇ ಕೊಳೆತು ನಾರುವ ಕಸದ ರಾಶಿಗಳು! ವೇದ ಮಂತ್ರಗಳ ಧ್ವನಿಗಳೊಂದಿಗೇ ದಲಿತರ, ದೀನರ ನರಳುವ, ಗೋಳಾಡುವ ಧ್ವನಿ. ಒಂದು ಕಾಲದಲ್ಲಿ ಸಂಪದ್ಭರಿತವಾಗಿದ್ದ ನನ್ನ ದೇಶ ಏಕೆ ಈ ಮಟ್ಟಕ್ಕೆ ಇಳಿಯಿತು? ನೂರಾರು ಋಷಿಮುನಿಗಳು ತಪಸ್ಸು ಮಾಡಿದ ಈ ನೆಲದಲ್ಲಿ ಏಕೆ ಅಧರ್ಮದ ತಾಂಡವ? ಈ ಬಡತನ, ಈ ದೈನ್ಯವನ್ನು ನಿವಾರಿಸುವುದು ಹೇಗೆ? ಜಗತ್ತಿಗೆ ವಿಶ್ವಗುರುವಾಗಿದ್ದ ಭಾರತ ಈ ಜಾತಿ ಮತಗಳ ತಾರತಮ್ಯವನ್ನು ಸಹಿಸಿದ್ದು ಹೇಗೆ? ಇವೇ ವಿವೇಕಾನಂದರ ಧ್ಯಾನದ ವಸ್ತುಗಳಾಗಿದ್ದವು. ದೇಶದ ಸ್ಥಿತಿಯನ್ನು ನೆನೆದು ಅವರ ಕಣ್ಣುಗಳಿಂದ ನೀರು ದಳದಳನೆ ಸುರಿದವು. ಮತ್ತೊಮ್ಮೆ, ಎಲ್ಲಿಯೋ ಭೂಕಂಪವಾಗಿ ಸಾವಿರಾರು ಜನ ಸತ್ತರೆಂದು ಸುದ್ದಿ ಕೇಳಿದಾಗ ಬಿಕ್ಕಿ ಬಿಕ್ಕಿ ಅತ್ತರು. ನೀವು ಸನ್ಯಾಸಿಗಳು, ಹೀಗೆ ದು:ಖ ಪಡುವುದು ಸರಿಯಲ್ಲ ಎಂದು ಮತ್ತೊಬ್ಬರು ಹೇಳಿದಾಗ, "ಸನ್ಯಾಸಿ ಒಂದು ಕಲ್ಲೇ? ಅವನು ಪ್ರಪಂಚದ ಆಗುಹೋಗುಗಳಿಗೆ ಸ್ಪಂದಿಸದಿದ್ದರೆ ಅವನೆಂತಹ ಸನ್ಯಾಸಿ?" ಎಂದು ಕೇಳಿದರು.


ಇದೇ ಕಗ್ಗದ ಮತಿತಾರ್ಥ. ಯೋಗಿಯೊಂದು ಕಲ್ಲಲ್ಲ. ಅವನೂ ಸಂತೋಷವನ್ನು ಕಂಡು ಅರಳುತ್ತಾನೆ. ಜನರ ನೋವು, ದುಃಖ ಕಂಡು ಅಳುತ್ತಾನೆ. ಪ್ರಪಂಚದ ಪ್ರತಿಯೊಂದು ಧ್ವನಿಗೂ ಅವನ ಹೃದಯದಲ್ಲಿ ಮರುದನಿ ಇದೆ. ಆದರೆ ಆತ ಪಡುವ ಸಂತಸ, ದುಃಖಗಳು ಅವನಿಗಾಗಿಯಲ್ಲ, ಪರರಿಗಾಗಿ. ಅವನಿಗೆ ಲೋಕದ ಅಂಟಿಲ್ಲ. ಆದರೆ ಆತ ಲೋಕವನ್ನು ಬಿಟ್ಟಿಲ್ಲ. ಇದೇ ಸನ್ಯಾಸ ಸಫಲವಾದ ಲಕ್ಷಣ.

ಪದಬಂಧ 5091

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಳಜಗಳವಿದು (5)
3.ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)
5.ನೀರಿನಲ್ಲಿಯೇ ಮುಳುಗಿ ಸಾಯುವಿಕೆ (5)
7.ಹತ್ತು ನೂರು ಇಲ್ಲಿದೆ (3)
8.ಮಣೆಯೊಳಗೆ ಕಾಣುತ್ತಿರುವ ಹುಚ್ಚು! (5)
10.ಕೊನೆಗೆ ಬೆಲೆಯಿಟ್ಟಾಗಲೇ ಈ ಸಲುಗೆ! (3)
11.ದಾರ ಹಿಡಿದುಕೊಂಡಿರುವ ಬಾಧ್ಯಸ್ಥ (5)
14.ಕಮ್ಮಾರನ ಒಲೆ (3)
15.ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)

ಮೇಲಿಂದ ಕೆಳಕ್ಕೆ
1.ಮೊಟ್ಟೆಯಿಂದ ಹುಟ್ಟಿದುದು (3)
2.ದೇವಾಲಯದ ಗೋಪುರದ ತುದಿ (3)
4.ಹೆಂಡತಿಯನ್ನು ಕಳೆದುಕೊಂಡವನು (3)
6.ಮಾತಿನಲ್ಲಿರುವ ಹನುಮಂತ ! (3)
7.ನೆಲವನ್ನು ಗೋಮಯದಿಂದ ಸಾರಿಸುವುದು (3)
8.ಕನ್ನಡಿಗ ಹಿಡಿದಿರುವ ಲೆನ್ಸ್! (3)
9.ಮರದ ಹತ್ತಿರವಿರುವ ಮೊಸಳೆ (3)
10.ಸರಕ್ಕನೆ ಹೋಗಿ ತಂದಿರುವ ಸಾಮಾನು (3)
12.ನೆಲ ಅಥವಾಬೆಟ್ಟದಲ್ಲಿ ಕೊರೆದು ಮಾಡಿದ ದಾರಿ (3)
13.ಉಲ್ಟಾ ನಿಂತು ವೀಕ್ಷಿಸಿರುವ ಪಟ್ಟಣ! (3)



5090ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಲ್ಕೆ 3.ರಾಗ
5.ನಿಷ್ಪಕ್ಷಪಾತ 6.ಸಲ್ಲಾಪ
7.ಗುಳಂಬ 8.ರಾಷ್ಟ್ರೀಕರಣ
9.ಪರಿಧಿ 10.ಕಟಾಕ್ಷ
13.ದಂತಮಂಜನ
14.ಕಲ್ಕಿ 15.ಮೌನ

ಮೇಲಿಂದ ಕೆಳಕ್ಕೆ:
1.ಉಪವಾಸ 2.ಅಕ್ಷತೆ
4.ಗಲ್ಲುಗಂಬ 5.ನಿರಪರಾಧಿ
7.ಗುಣಕಥನ 9.ಪರಿಪಾಕ
11.ಕ್ಷಮಾದಾನ 12.ಧೀಮಂತ

ಸುಡೊಕು 5477

7				5			9	
	2		1		9	6		5
		5		3			1	
					4	1		9
9		1	5	8			4	
4				1		3		7
			3		7			1
	6					7	3	
				2			6	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5476 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಬಾಂಗ್ಲಾ ದೋಣಿ ದುರಂತ: 24 ಸಾವು

ಢಾಕಾ (ರಾಯಿಟರ್ಸ್): ಬಾಂಗ್ಲಾ ದೇಶದ ಬೋಡೇಶ್ವರಿ ದೇವಸ್ಥಾನಕ್ಕೆ ಹೊರಟಿದ್ದ ಹಿಂದೂ ಭಕ್ತಾದಿಗಳಿದ್ದ ದೋಣಿ ಕೊರೋಟ ನದಿಯಲ್ಲಿ ಭಾನುವಾರ ಮುಳುಗಿದ್ದು, 24 ಮಂದಿ ಮೃತಪಟ್ಟಿದ್ದಾರೆ. 12ಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ. ದೋಣಿಯಲ್ಲಿ 70ಕ್ಕೂ ಹೆಚ್ಚು ಜನರಿದ್ದರು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ರೂಪಾಯಿ ಕುಸಿತ: ತೈಲ, ಅಡುಗೆ ಎಣ್ಣೆ ತುಟ್ಟಿ ಸಂಭವ



ನವದೆಹಲಿ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಇದುವರೆಗಿನ ಕನಿಷ್ಠ ಮಟ್ಟವಾಗಿರುವ ₹ 81.09ಕ್ಕೆ ಇಳಿಕೆಯಾಗಿರುವ ಕಾರಣ ಆಮದು ಮಾಡಿಕೊಳ್ಳುವ ಕಚ್ಚಾ ತೈಲ ಮತ್ತು ಇತರ ಸರಕುಗಳ ಬೆಲೆಯು ಇನ್ನಷ್ಟು ತುಟ್ಟಿಯಾಗಲಿದೆ. ಇದರ ಪರಿಣಾಮವಾಗಿ ಹಣದುಬ್ಬರ ಮಟ್ಟವು ಮತ್ತಷ್ಟು ಜಾಸ್ತಿ ಆಗುವ ಸಂಭವ ಇದೆ.

ವ್ಯಾಪಾರ ಕೊರತೆ ಅಂತರ ಇನ್ನಷ್ಟು ಹೆಚ್ಚಾದಾಗ, ಸಾಂಸ್ಥಿಕ ಹೂಡಿಕೆದಾರರು ಭಾರತದ ಮಾರುಕಟ್ಟೆಗಳಿಂದ ಬಂಡವಾಳವನ್ನು ಹಂತಹಂತವಾಗಿ ಹಿಂದಕ್ಕೆ ಪಡೆದುಕೊಂಡಾಗ ರೂಪಾಯಿ ಮೌಲ್ಯವು ಇನ್ನಷ್ಟು ಇಳಿಕೆಯಾಗುವ ಸಾಧ್ಯತೆ ಕೂಡ ಇದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ಈ ವಾರ ಸಭೆ ಸೇರಲಿದ್ದು, ಹಣದುಬ್ಬರದ ಏರಿಕೆಗೆ ಕಡಿವಾಣ ಹಾಕುವ ಉದ್ದೇಶದಿಂದ ರೆಪೊ ದರವನ್ನು ಶೇಕಡ 0.50ರಷ್ಟು ಹೆಚ್ಚಿಸುವ ನಿರೀಕ್ಷೆ ಇದೆ.

'ರೂಪಾಯಿ ಮೌಲ್ಯ ಕುಸಿಯುತ್ತಿರುವ ಕಾರಣ, ಕೆಲವು ಸರಕುಗಳ ಬೆಲೆ ಇಳಿಕೆಯಿಂದ ಸಿಗಬಹುದಾದ ಪ್ರಯೋಜನವು ಇಲ್ಲವಾಗಲಿದೆ' ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

'ಆಮದು ಮಾಡಿಕೊಳ್ಳುವ ಅಡುಗೆ ಎಣ್ಣೆಯ ಬೆಲೆಯು ಹೆಚ್ಚಾಗಲಿದೆ. ಇದು ಗ್ರಾಹಕರಿಗೆ ವರ್ಗಾವಣೆ ಆಗುತ್ತದೆ. ದೇಶವು ಪ್ರತಿ ವರ್ಷ ಅಂದಾಜು 1.3 ಕೋಟಿ ಟನ್ ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ' ಎಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಕಾರ್ಯನಿರ್ವಾಹಕ ನಿರ್ದೇಶಕ ಬಿ.ವಿ. ಮೆಹ್ತಾ ಹೇಳಿದ್ದಾರೆ.

ಈಗಿನ ಸಂದರ್ಭದಲ್ಲಿ ಯಾವುದೇ ದೇಶದ ಕೇಂದ್ರೀಯ ಬ್ಯಾಂಕ್ ಕರೆನ್ಸಿ ಮೌಲ್ಯ ಕುಸಿತವನ್ನು ತಡೆಯಲು ಆಗದು. ಆರ್‌ಬಿಐ ಕೂಡ ಸೀಮಿತ ಅವಧಿಯವರೆಗೆ ರೂಪಾಯಿ ಮೌಲ್ಯ ಕುಸಿತಕ್ಕೆ ಅವಕಾಶ ಕೊಡಬಹುದು. ಉಕ್ರೇನ್–ರಷ್ಯಾ ಯುದ್ಧ ಶುರುವಾದ ನಂತರದಲ್ಲಿ ರೂಪಾಯಿ ಮೌಲ್ಯ ಕುಸಿತ ತಡೆಯುವ ಉದ್ದೇಶಕ್ಕೆ ಆರ್‌ಬಿಐ ತನ್ನ ವಿದೇಶಿ ಕರೆನ್ಸಿ ಸಂಗ್ರಹವನ್ನು ಬಳಸಿಕೊಂಡಿದೆ ಎಂದು ಎಸ್‌ಬಿಐ ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

ತಗ್ಗಿದ ಎಫ್‌ಪಿಐ ಒಳಹರಿವು

ನವದೆಹಲಿ (ಪಿಟಿಐ): ದೇಶದ ಷೇರು-ಪೇಟೆಗಳಲ್ಲಿ ವಿದೇಶಿ ಬಂಡವಾಳ (ಎಫ್‌ಪಿಐ) ಒಳಹರಿವಿನ ವೇಗವು ಸೆಪ್ಟೆಂಬರ್‌ನಲ್ಲಿ ತಗ್ಗಿದೆ.

ಸೆಪ್ಟೆಂಬರ್ 1ರಿಂದ 23ರವರೆಗಿನ ಅವಧಿಯಲ್ಲಿ ₹ 8,638 ಕೋಟಿ ಮೌಲ್ಯದ ಷೇರುಗಳನ್ನು ವಿದೇಶಿ ಬಂಡವಾಳ ಹೂಡಿಕೆದಾರರು ಖರೀದಿಸಿದ್ದಾರೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ತೀವ್ರ ಕುಸಿತ ಕಂಡಿರುವುದರಿಂದ ಹೂಡಿಕೆ ಕಡಿಮೆ ಮಾಡಿದ್ದಾರೆ.

ಅಮೆರಿಕದಲ್ಲಿ ಡಾಲರ್ ಮೌಲ್ಯ ವೃದ್ಧಿ ಆಗುತ್ತಿರುವುದು ಮತ್ತು ಬಾಂಡ್ ಗಳಿಕೆ ಹೆಚ್ಚಾಗುತ್ತಿರುವುದೇ ವಿದೇಶಿ ಹೂಡಿಕೆದಾರರು ಭಾರತದ ಬಂಡವಾಳ ಮಾರುಕಟ್ಟೆಗಳಲ್ಲಿ ಷೇರುಗಳನ್ನು ಮಾರಾಟ ಮಾಡಲು ಕಾರಣ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ವಿದೇಶಿ ಹೂಡಿಕೆದಾರರು ಆಗಸ್ಟ್‌ನಲ್ಲಿ ₹ 51,200 ಕೋಟಿಯಷ್ಟು ದಾಖಲೆಯ ಹೂಡಿಕೆ ಮಾಡಿದ್ದರು.

ಕುಸಿದ ಮಾರುಕಟ್ಟೆ: ಆಪ್ತಮಿತ್ರ ಎಸ್‌ಐಪಿ



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಕೋವಿಡ್ ಶುರುವಾರ ನಂತರದ ಸರಿಸುಮಾರು ಎರಡು ವರ್ಷ ಷೇರುಪೇಟೆಯಲ್ಲಿ ಗೂಳಿ ಓಟವಿತ್ತು. ಪರಿಣಾಮವಾಗಿ, ಹೂಡಿಕೆದಾರರು ಹೆಚ್ಚಿನ ಲಾಭ ದೊರೆತು ಉತ್ಸಾಹದಲ್ಲಿದ್ದರು. ಆದರೆ ಕಳೆದ ಆರು ತಿಂಗಳಿಂದ ಮಾರುಕಟ್ಟೆಯಲ್ಲಿ ಸೂಚ್ಯಂಕಗಳ ಏರಿಳಿತದ ಆಟ ಶುರುವಾಗಿದೆ. ಈ ಸಂದರ್ಭದಲ್ಲಿ, ಸಣ್ಣ ಹೂಡಿಕೆದಾರರ ಪೈಕಿ ಬಹಳಷ್ಟು ಮಂದಿ ಆತಂಕಕ್ಕೆ ಒಳಗಾಗಿ, ತಮ್ಮ ಮ್ಯೂಚುವಲ್ ಫಂಡ್ ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆ) ಮುಂದುವರಿಸಬೇಕೇ ಎನ್ನುವ ಗೊಂದಲದಲ್ಲಿದ್ದಾರೆ.

ಕೆಲವರು ಒಂದು ಹೆಜ್ಜೆ ಮುಂದಕ್ಕೆ ಹೋಗಿ ಮಾರುಕಟ್ಟೆ ಚೇತರಿಕೆ ಆಗುವವರೆಗೂ ಎಸ್‌ಐಪಿ ಮುಂದುವರಿಸುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಆದರೆ, ಷೇರುಪೇಟೆ ಕುಸಿದಾಗ ಎಸ್‌ಐಪಿ ನಿಲ್ಲಿಸಬೇಕೆ? ಬನ್ನಿ ಪರಿಶೀಲಿಸೋಣ.

ಏರಿಳಿತ ಸಹಜ: 1992ರಲ್ಲಿ ಹರ್ಷದ್ ಮೆಹ್ತಾ ಹಗರಣದ ಕಾರಣದಿಂದಾಗಿ ಷೇರು ಮಾರುಕಟ್ಟೆ ಭಾರೀ ಕುಸಿತ ಕಂಡಿತ್ತು. 1999ರ 'ಡಾಟ್ ಕಾಂ ಬಬಲ್'ನಿಂದಾಗಿ ಷೇರುಪೇಟೆ ಸೂಚ್ಯಂಕಗಳು ಕೆಳಮುಖವಾಗಿದ್ದವು. 2008ರ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲೂ ಷೇರುಪೇಟೆ ಗಣನೀಯ ಇಳಿಕೆ ಕಂಡಿತ್ತು. 2020ರಲ್ಲಿ ಕೊರೊನಾ ಕಾರಣಕ್ಕೆ ಸೂಚ್ಯಂಕಗಳು ಕುಸಿದಿದ್ದವು. ಷೇರುಪೇಟೆಯಲ್ಲಿ ಏರಿಳಿತ ಸಹಜ. 1991ರಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 5,000 ಅಂಶಗಳಿಗಿಂತ ಕೆಳಗಿತ್ತು. ಇವತ್ತು ಸೆನ್ಸೆಕ್ಸ್ 58,000 ಅಂಶಗಳ ಆಸುಪಾಸಿನಲ್ಲಿದೆ. ಕುಸಿತಗಳೆಲ್ಲ ತಾತ್ಕಾಲಿಕ. ದೀರ್ಘಾವಧಿಯಲ್ಲಿ ಷೇರು ಮಾರುಕಟ್ಟೆಯು ಹೂಡಿಕೆದಾರರಿಗೆ ಭರ್ಜರಿ ಲಾಭ ತಂದುಕೊಟ್ಟಿರುವುದು ಮೇಲಿನ ಉದಾಹರಣೆಗಳಿಂದ ಮನದಟ್ಟಾಗುತ್ತದೆ.

'ಎಸ್‌ಐಪಿ' ಎನ್ನುವುದು ಹೂಡಿಕೆ ಉತ್ಪನ್ನವಲ್ಲ: ಅದು ಹೂಡಿಕೆ ವಿಧಾನ. ಪೂರ್ವನಿಗದಿತ ದಿನದಂದು, ಪೂರ್ವ ನಿಗದಿತ ಮೊತ್ತವನ್ನು ಸ್ವಯಂಚಾಲಿತವಾಗಿ ಹೂಡಿಕೆ ಉತ್ಪನ್ನವೊಂದಕ್ಕೆ ವರ್ಗಾಯಿಸುವ ವಿಧಾನ 'ಎಸ್‌ಐಪಿ' (ವ್ಯವಸ್ಥಿತ ಹೂಡಿಕೆ ಯೋಜನೆ). ಮ್ಯೂಚುವಲ್ ಫಂಡ್ ಹೂಡಿಕೆಗಳಲ್ಲಿ ಎಸ್‌ಐಪಿ ವಿಧಾನ ಹೆಚ್ಚು ಚಾಲ್ತಿಯಲ್ಲಿದೆ.

ಉದಾಹರಣೆಗೆ, ಮ್ಯೂಚುವಲ್ ಫಂಡ್ ಒಂದರಲ್ಲಿ ಪ್ರತಿ ತಿಂಗಳ 10ನೇ ತಾರೀಕಿನಂದು ನೀವು ₹ 1000 ಹೂಡಿಕೆ ಮಾಡಲು ನಿರ್ಧರಿಸಿದ್ದರೆ ಮಾರುಕಟ್ಟೆ ಏರಿಳಿತಗಳಿಗೆ ತಲೆಕೆಡಿಸಿಕೊಳ್ಳದೆ ಪ್ರತಿ ತಿಂಗಳು ಆ ಹೂಡಿಕೆಯನ್ನು ಮುಂದುವರಿಸಿಕೊಂಡು ಹೋಗುವುದನ್ನು ಎಸ್‌ಐಪಿ ಎನ್ನಬಹುದು.

ಮಾರುಕಟ್ಟೆ ಕುಸಿದಾಗ?: ಮಾರುಕಟ್ಟೆ ಕುಸಿದಾಗ ಮ್ಯೂಚುವಲ್ ಫಂಡ್ 'ಎನ್‌ಎವಿ' (ನಿವ್ವಳ ಆಸ್ತಿ ಮೌಲ್ಯ- Net Asset Value) ತಗ್ಗುತ್ತದೆ. ಈ ಸ್ಥಿತಿಯಲ್ಲಿ ನೀವು ಎಸ್‌ಐಪಿ ಮೂಲಕ ಹೆಚ್ಚು ಮ್ಯೂಚುವಲ್ ಫಂಡ್ ಯುನಿಟ್ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ನಿಮ್ಮ ಬಳಿ ಹೆಚ್ಚು ಯುನಿಟ್ ಗಳಿದ್ದರೆ ಮುಂದೆ ಮಾರುಕಟ್ಟೆ ಪುಟಿದೆದ್ದಾಗ ನಿಮಗೆ ಹೆಚ್ಚು ಲಾಭ ಸಿಗುತ್ತದೆ. ಹಾಗಾಗಿ ಷೇರುಪೇಟೆ ಕುಸಿದಾಗ ಇನ್ನಷ್ಟು ಹೂಡಿಕೆ ಮಾಡಲು ಪ್ರಯತ್ನಿಸಬೇಕೇ ಹೊರತು ಎಸ್‌ಐಪಿ ಸ್ಥಗಿತಗೊಳಿಸಬಾರದು. ಎಸ್‌ಐಪಿಯಲ್ಲಿ ಪ್ರತಿ ತಿಂಗಳು ತೊಡಗಿಸುವ ಹಣ ಆಯಾ ತಿಂಗಳಲ್ಲಿ ಕಟ್ಟಿದ ತಾರೀಕಿಗೆ ಅನುಗುಣವಾಗಿ ವಾರ್ಷಿಕ ಸರಾಸರಿ ಲೆಕ್ಕಕ್ಕೆ ಒಳಪಡುವುದರಿಂದ ಲಾಭವಾಗುವ ಸಾಧ್ಯತೆಯೇ ಹೆಚ್ಚಿರುತ್ತದೆ. ಎಸ್‌ಐಪಿ ನಿಲ್ಲಿಸಬಾರದು ಎನ್ನುವುದಕ್ಕೆ ಇದು ಕೂಡ ಒಂದು ಪ್ರಮುಖ ಕಾರಣ.

ನಿಲ್ಲಿಸಿದರೆ ನಷ್ಟ: ಮ್ಯೂಚುವಲ್ ಫಂಡ್‌ಗಳ ಮೇಲೆ ಷೇರು ಮಾರುಕಟ್ಟೆಯ ಏರಿಳಿತ ಮತ್ತು ಅರ್ಥ ವ್ಯವಸ್ಥೆಯ ಸ್ಥಿತಿ ಪ್ರಭಾವ ಬೀರುತ್ತವೆ. ಮಾರುಕಟ್ಟೆ ಕುಸಿದಾಗ ಮ್ಯೂಚುವಲ್ ಫಂಡ್ ಹೂಡಿಕೆದಾರರು ತಾತ್ಕಾಲಿಕ ನಷ್ಟ ಅನುಭವಿಸುವಂತಾಗುತ್ತದೆ. 'ಎನ್‌ಎವಿ' ತಗ್ಗುತ್ತ ಹೋದಂತೆ ಹೂಡಿಕೆದಾರರು ಚಿಂತೆಗೀಡಾಗುತ್ತಾರೆ. ಆದರೆ ಮಾರುಕಟ್ಟೆ ಕುಸಿದ ತಕ್ಷಣ ಮ್ಯೂಚುವಲ್ ಫಂಡ್ ಹೂಡಿಕೆಯಿಂದ ಹೊರಬರಲು ಪ್ರಯತ್ನಿಸಿದರೆ ನಷ್ಟದ ಪ್ರಮಾಣ ಮತ್ತಷ್ಟು ಜಾಸ್ತಿಯಾಗುತ್ತದೆ. ಉದಾಹರಣೆ: ನೀವು ತಿಂಗಳಿಗೆ ₹ 4 ಸಾವಿರದಂತೆ 12 ತಿಂಗಳಲ್ಲಿ ಎಸ್‌ಐಪಿ ಮೂಲಕ ಮ್ಯೂಚುವಲ್ ಫಂಡ್‌ನಲ್ಲಿ ಒಟ್ಟು ₹ 48 ಸಾವಿರ ಹೂಡಿಕೆ ಮಾಡಿದ್ದೀರಿ ಎಂದಿಟ್ಟುಕೊಳ್ಳೋಣ. ಮೇಲಿಂದ ಮೇಲೆ ಷೇರು ಮಾರುಕಟ್ಟೆ ಕುಸಿದ ತಕ್ಷಣ ನಿಮ್ಮ ಹೂಡಿಕೆ ₹40 ಸಾವಿರಕ್ಕೆ ಬರುತ್ತದೆ ಎಂದು ಭಾವಿಸೋಣ. ಹೀಗಾದಾಗ ನೀವು ಮ್ಯೂಚುವಲ್ ಫಂಡ್ ಹೂಡಿಕೆ ಹಿಂಪಡೆದರೆ ನಿಮಗೆ ಒಂದೇ ಬಾರಿ ₹ 8 ಸಾವಿರ ನಷ್ಟವಾಗುತ್ತದೆ. ಹೂಡಿಕೆ ಹಿಂತೆಗೆಯುವ ಬದಲು ಎಸ್‌ಐಪಿ ಹೂಡಿಕೆ ಮುಂದುವರಿಸಿ, ಮಾರುಕಟ್ಟೆ ಉತ್ತಮ ಸ್ಥಿತಿಯಲ್ಲಿದ್ದಾಗ ಹೂಡಿಕೆಯಿಂದ ಹೊರಬಂದರೆ ಹೆಚ್ಚು ಲಾಭ ಸಿಗುತ್ತದೆ. ಬಹುತೇಕರು ಈ ಮುಂದಾಲೋಚನೆ ಮಾಡದೆ ಷೇರು ಮಾರುಕಟ್ಟೆ ಹೂಡಿಕೆಯಿಂದ ದಿಢೀರ್ ಹೊರಬಂದು ನಷ್ಟ ಅನುಭವಿಸುತ್ತಾರೆ.

ನೆನಪಿಡಿ: ಮಾರುಕಟ್ಟೆ ಕುಸಿಯುವಾಗ ಎಸ್‌ಐಪಿಯಿಂದ ಹೊರಬಂದರೆ ಸಂಪತ್ತು ಬೆಳೆಸುವ ಒಳ್ಳೆಯ ಅವಕಾಶ ಕಳೆದುಕೊಂಡಂತೆ. ಮಾರುಕಟ್ಟೆ ಏರಿಳಿತ ಈಕ್ವಿಟಿ ಮ್ಯೂಚುವಲ್ ಫಂಡ್ ಹೂಡಿಕೆಯ ಭಾಗ ಎನ್ನುವುದು ಗೊತ್ತಿರಲಿ. ಮಾರುಕಟ್ಟೆ ಕುಸಿದ ತಕ್ಷಣ ನಿಮ್ಮ ಮ್ಯೂಚುವಲ್ ಫಂಡ್ ಹೂಡಿಕೆ ಸಂಪೂರ್ಣ ನಷ್ಟವಾಗುವುದಿಲ್ಲ. ದೀರ್ಘಾವಧಿಯಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಶೇ 12ರಿಂದ ಶೇ 16ರವರೆಗೆ ಲಾಭ ಕೊಟ್ಟಿವೆ. ಹಾಗಾಗಿ ಚಿಂತೆ ಮಾಡದೆ, ಬೀಳುವ ಮಾರುಕಟ್ಟೆಯಲ್ಲೂ ಎಸ್‌ಐಪಿ ಎಂಬ ಮಿತ್ರನನ್ನು ನೆಚ್ಚಿಕೊಳ್ಳಿ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಫೆಡರಲ್ ಬಡ್ಡಿ ದರ ಹೆಚ್ಚಳ; ಕುಸಿದ ಷೇರುಪೇಟೆ



ಸೆಪ್ಟೆಂಬರ್ 23ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಕುಸಿತ ಕಂಡಿವೆ. 58,098 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 1.26ರಷ್ಟು ಕುಸಿದಿದೆ. 17,327 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.16ರಷ್ಟು ತಗ್ಗಿದೆ. ರೂಪಾಯಿ ಮೌಲ್ಯ ಕುಸಿತ, ಅಮೆರಿಕದ ಫೆಡರಲ್ ಬ್ಯಾಂಕ್‌ನಿಂದ ಬಡ್ಡಿ ದರ ಹೆಚ್ಚಳ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ, ರಷ್ಯಾ ಉಕ್ರೇನ್ ಬಿಕ್ಕಟ್ಟು ಸೇರಿ ಅನೇಕ ಅಂಶಗಳು ಸೂಚ್ಯಂಕಗಳ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಪವರ್ ಇಂಡೆಕ್ಸ್ ಶೇ 5ರಷ್ಟು ಕುಸಿದಿದೆ. ರಿಯಲ್ ಎಸ್ಟೇಟ್ ಶೇ 4ರಷ್ಟು, ಕ್ಯಾಪಿಟಲ್ ಗೂಡ್ಸ್ ಶೇ 3ರಷ್ಟು ತಗ್ಗಿವೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1.3ರಷ್ಟು, ಮಿಡ್ ಕ್ಯಾಪ್ ಶೇ 1ರಷ್ಟು ಇಳಿಕೆ ದಾಖಲಿಸಿವೆ. ಆದರೆ ಎಫ್‌ಎಂಸಿಜಿ ಸೂಚ್ಯಂಕ ಶೇ 3.6ರಷ್ಟು, ಬಿಎಸ್‌ಇ ಹೆಲ್ತ್ ಕೇರ್ ಮತ್ತು ಆಟೊ ಸೂಚ್ಯಂಕಗಳು ಶೇ 1ರಷ್ಟು ಜಿಗಿದಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 4,361.77 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,137.96 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಇಳಿಕೆ–ಏರಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 1.25ರಷ್ಟು ಕುಸಿದಿದೆ. ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ, ಶ್ರೀ ಸಿಮೆಂಟ್ಸ್, ಗೇಲ್ ಇಂಡಿಯಾ, ಇಂಡಸ್ ಟವರ್ಸ್, ಅದಾನಿ ಟ್ರಾನ್ಸ್‌ಮಿಷನ್, ಇನ್ಫೊ ಎಡ್ಜ್ ಇಂಡಿಯಾ, ಅಲ್ಟ್ರಾ ಟೆಕ್ ಸಿಮೆಂಟ್, ಸ್ಟಾರ್ ಹೆಲ್ತ್ ಆ್ಯಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ, ಎನ್‌ಟಿಪಿಸಿ ಮತ್ತು ಟಾಟಾ ಪವರ್ ಕಂಪನಿ ಕುಸಿತ ಕಂಡಿವೆ.

ಅದಾನಿ ವಿಲ್ಮರ್, ಮ್ಯಾರಿಕೋ, ಸನ್ ಫಾರ್ಮಾ, ಹಿಂದೂಸ್ತಾನ್ ಯುನಿ ಲಿವರ್, ಐಟಿಸಿ, ಅಂಬುಜಾ ಸಿಮೆಂಟ್ಸ್ ಮತ್ತು ಬ್ರಿಟಾನಿಯಾ ಇಂಡಸ್ಟ್ರೀಸ್ ಶೇ 4ರಿಂದ ಶೇ 12ರವರೆಗೆ ಗಳಿಸಿಕೊಂಡಿವೆ.

ಮುನ್ನೋಟ: ಸೆಪ್ಟೆಂಬರ್ 30ರಂದು ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ ನಿರ್ಣಯ ಹೊರಬೀಳಲಿದ್ದು ರೆಪೊ ದರದಲ್ಲಿ 30 ಮೂಲಾಂಶದಷ್ಟು ಹೆಚ್ಚಳ ಮಾಡುವ ನಿರೀಕ್ಷೆಯಿದೆ. ಆರ್‌ಬಿಐ ನೀತಿಗೆ ಷೇರುಪೇಟೆ ಹೇಗೆ ಪ್ರತಿಕ್ರಿಯಿಸಲಿದೆ ಎನ್ನುವುದನ್ನು ಕಾದುನೋಡಬೇಕಿದೆ. ಅಮೆರಿಕದ ಜಿಡಿಪಿ ದತ್ತಾಂಶದ ಮೇಲೂ ಹೂಡಿಕೆದಾರರು ದೃಷ್ಟಿ ಹರಿಸಿದ್ದಾರೆ. ಇವಲ್ಲದೆ, ಜಾಗತಿಕ ಮತ್ತು ದೇಶಿ ವಿದ್ಯಮಾನ ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ವಸೂಲಾಗದ ಸಾಲದ ಪ್ರಮಾಣ ಹೆಚ್ಚಳ: ಬ್ಯಾಂಕ್‌ಗಳಿಂದ ಎಚ್ಚರಿಕೆಯ ನಡೆ

ಶೈಕ್ಷಣಿಕ ಸಾಲ: ಬ್ಯಾಂಕ್‌ಗಳ ಹಿಂದೇಟು



ನವದೆಹಲಿ (ಪಿಟಿಐ): ಬ್ಯಾಂಕ್‌ಗಳು ನೀಡಿರುವ ಶೈಕ್ಷಣಿಕ ಸಾಲದ ಪೈಕಿ, ವಸೂಲಾಗದೇ ಇರುವ (ಎನ್‌ಪಿಎ) ಸಾಲದ ಪ್ರಮಾಣವು ಶೇಕಡ 8ರಷ್ಟು ಆಗಿದ್ದು, ಹೊಸ ಸಾಲ ನೀಡುವಾಗ ಬ್ಯಾಂಕ್‌ಗಳು ಎಚ್ಚರಿಕೆ ವಹಿಸುತ್ತಿವೆ.

ಇದು ಸಾಲ ಮಂಜೂರಾತಿಯಲ್ಲಿ ವಿಳಂಬಕ್ಕೆ ಕಾರಣವಾಗಬಹುದು ಎಂದು ಬ್ಯಾಂಕ್ ಅಧಿಕಾರಿಯೊಬ್ಬರು ಹೇಳಿದ್ದಾರೆ. ಬ್ಯಾಂಕ್‌ಗಳು ಹೆಚ್ಚು ಎಚ್ಚರಿಕೆ ವಹಿಸುತ್ತಿರುವುದರಿಂದ ನಿಜವಾಗಿಯೂ ಸಾಲದ ಅಗತ್ಯ ಇರುವವರಿಗೆ ಸಮಸ್ಯೆ ಆಗಲಿದೆ ಎಂದೂ ಅವರು ತಿಳಿಸಿದ್ದಾರೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ನೀಡಿರುವ ಶೈಕ್ಷಣಿಕ ಸಾಲದ ಎನ್‌ಪಿಎ ಪ್ರಮಾಣ ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದ ಅಂತ್ಯದ ವೇಳೆಗೆ ಶೇ 7.82ರಷ್ಟು ಆಗಿದೆ. ಜೂನ್ ತ್ರೈಮಾಸಿಕದ ಅಂತ್ಯದ ವೇಳೆಗೆ ಮರುಪಾವತಿ ಆಗಬೇಕಿರುವ ಸಾಲದ ಮೊತ್ತವು ₹ 80 ಸಾವಿರ ಕೋಟಿಯಷ್ಟು ಇದೆ.

ವಾಣಿಜ್ಯ ಬ್ಯಾಂಕ್‌ಗಳು ನೀಡಿರುವ ಶೈಕ್ಷಣಿಕ ಸಾಲದಲ್ಲಿ ಎನ್‌ಪಿಎ ಪ್ರಮಾಣ ಈಚೆಗೆ ತೀವ್ರ ಏರಿಕೆ ಕಂಡಿರುವುದು ಆತಂಕ ಮೂಡಿಸಿದೆ. ಇದರಿಂದಾಗಿ ದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಸಾಲ ನೀಡುವುದರ ಮೇಲೆ ಪರಿಣಾಮ ಉಂಟಾಗಬಹುದು ಎಂದು ಆರ್‌ಬಿಐ ಈಚೆಗೆ ಬಿಡುಗಡೆ ಮಾಡಿರುವ ಲೇಖನವೊಂದರಲ್ಲಿ ಹೇಳಲಾಗಿದೆ.

ಆರ್‌ಬಿಐ ಬಿಡುಗಡೆ ಮಾಡಿರುವ 'ಟ್ರೆಂಡ್ಸ್ ಆ್ಯಂಡ್ ಪ್ರೋಗ್ರೆಸ್ ಆಫ್ ಬ್ಯಾಂಕಿಂಗ್ ಇನ್ ಇಂಡಿಯಾ' ವರದಿಯ ಪ್ರಕಾರ, 2020ರ ಮಾರ್ಚ್ ಅಂತ್ಯಕ್ಕೆ ಮರುಪಾವತಿ ಆಗಬೇಕಿದ್ದ ಸಾಲದ ಮೊತ್ತವು ₹ 79,056 ಕೋಟಿ ಇತ್ತು. 2021ರ ಮಾರ್ಚ್ ಅಂತ್ಯಕ್ಕೆ ₹ 78,823 ಕೋಟಿ ಆಗಿತ್ತು. ಆದರೆ, 2022ರ ಮಾರ್ಚ್ 25ರ ಅಂತ್ಯಕ್ಕೆ ₹ 82,723 ಕೋಟಿಗೆ ಏರಿಕೆ ಆಗಿದೆ.

ಎನ್‌ಪಿಎಗೆ ಕಾರಣವೇನು?

ದೇಶದಲ್ಲಿ ಹೊಸದಾಗಿ ಸೃಷ್ಟಿಯಾಗುತ್ತಿರುವ ಉದ್ಯೋಗ ಅವಕಾಶಗಳು ಕಾಲೇಜು ಶಿಕ್ಷಣ ಮುಗಿಸುತ್ತಿರುವ ಪದವೀಧರರ ಸಂಖ್ಯೆಗೆ ಅನುಗುಣವಾಗಿಲ್ಲ. ಹೀಗಾಗಿ ಶಿಕ್ಷಣ ಸಾಲಗಳನ್ನು ಸಕಾಲಕ್ಕೆ ಮರುಪಾವತಿ ಮಾಡುವುದರ ಮೇಲೆ ಪರಿಣಾಮ ಉಂಟಾಗುತ್ತಿದೆ ಎಂದು ರಿಸರ್ಜೆಂಟ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಜ್ಯೋತಿ ಪ್ರಕಾಶ್ ಗಾಡಿಯಾ ಹೇಳಿದ್ದಾರೆ.

ಸಾಲ ಮರುಪಾವತಿ ಸಕಾಲಕ್ಕೆ ಆಗದೇ ಇರುವುದರಿಂದ ಎನ್‌ಪಿಎ ಪ್ರಮಾಣ ಹೆಚ್ಚಾಗುತ್ತಿದೆ. ಹೀಗಾಗಿ ಹೊಸ ಸಾಲ ನೀಡಲು ಬ್ಯಾಂಕ್‌ಗಳು ಹಿಂದೇಟು ಹಾಕುತ್ತಿವೆ. ಅದರಲ್ಲಿಯೂ ಯಾವುದೇ ಅಡಮಾನ ಮತ್ತು ಮೂರನೇ ವ್ಯಕ್ತಿಯ ಗ್ಯಾರಂಟಿ ಬೇಕಿರದ ₹ 7.50 ಲಕ್ಷದವರೆಗಿನ ಸಾಲ ನೀಡಲು ಬ್ಯಾಂಕ್‌ಗಳು ಮುಂದಾಗುತ್ತಿಲ್ಲ ಎಂದು ಅವರು ತಿಳಿಸಿದ್ದಾರೆ.

ಭಾರತದ ಮಾತಿಗೆ ವಿಶ್ವ ಮನ್ನಣೆ: ಜೈಶಂಕರ್

ನ್ಯೂಯಾರ್ಕ್ (ಪಿಟಿಐ): 'ಧ್ರುವೀಕರಣಗೊಂಡಿರುವ ಪ್ರಸ್ತುತ ಜಗತ್ತಿನಲ್ಲಿ ಭಾರತದ ಮಾತಿಗೆ ಹೆಚ್ಚು ಪ್ರಾಮುಖ್ಯತೆ ಇದೆ ಮತ್ತು ಜಗತ್ತಿನ ದಕ್ಷಿಣ ಭಾಗದ ಧ್ವನಿಯಾಗಿಯೂ ಭಾರತ ವ್ಯಾಪಕವಾಗಿ ಗ್ರಹಿಸಲ್ಪಟ್ಟಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ನ್ಯೂಯಾರ್ಕ್‌ನಲ್ಲಿ ಶನಿವಾರ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ಉದ್ದೇಶಿಸಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವ ಮತ್ತು ಅವರ ವರ್ಚಸ್ಸು ಹಾಗೂ ಅವರು ಜಾಗತಿಕ ಮಟ್ಟದಲ್ಲಿ ಮಾಡುತ್ತಿರುವ ಕೆಲಸಗಳು ಪ್ರಸ್ತುತ ಧ್ರುವೀಕೃತ ಜಗತ್ತಿನಲ್ಲಿ ಭಾರತದ ಪ್ರಾಮುಖ್ಯತೆಯನ್ನು ಹೆಚ್ಚಿಸಿದೆ' ಎಂದರು.

'ನಮ್ಮ ಸಮಸ್ಯೆಗಳನ್ನು ಜಾಗತಿಕಮಟ್ಟದಲ್ಲಿ ಕೇಳಲಾಗುತ್ತಿಲ್ಲ ಎನ್ನುವ ದೊಡ್ಡ ಹತಾಶೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿದೆ. ಈ ಭಾವನೆಗಳನ್ನು ಹೋಗಲಾಡಿಸುವ ಮತ್ತು ಧ್ವನಿ ನೀಡುವ ಯಾವುದಾದರೂ ರಾಷ್ಟ್ರವಿದ್ದರೆ ಅದು ಭಾರತ. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಭಾರತ ಸದಾ ಅಭಿವೃದ್ಧಿಶೀಲ ರಾಷ್ಟ್ರಗಳ ಪರ ದನಿ ಎತ್ತುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳು ಎದುರಿಸುತ್ತಿರುವ ಸಮಸ್ಯೆಗಳ ಮೇಲೂ ಹೆಚ್ಚು ಬೆಳಕು ಚೆಲ್ಲುತ್ತದೆ' ಎಂದು ಪ್ರತಿಪಾದಿಸಿದರು.

ವಿಶ್ವಸಂಸ್ಥೆಯ ಉನ್ನತಮಟ್ಟದ ಸಭೆಯಲ್ಲಿ ಭಾಗವಹಿಸುವ ಸಲುವಾಗಿ ಮೊದಲ ಹಂತದಲ್ಲಿ ನ್ಯೂಯಾರ್ಕ್‌ನಲ್ಲಿ ಒಂದು ವಾರ ವಾಸ್ತವ್ಯ ಮಾಡಿದ್ದ ಜೈಶಂಕರ್, ವಿಶ್ವದ 100ಕ್ಕೂ ಹೆಚ್ಚು ರಾಷ್ಟ್ರಗಳ ತಮ್ಮ ಸಹವರ್ತಿಗಳನ್ನು ಭೇಟಿ ಮಾಡಿ, ಹಲವು ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಸಭೆಗಳನ್ನು ನಡೆಸಿದರು.

ಭಾರತಕ್ಕೆ ಅಮೆರಿಕ, ರಷ್ಯಾ, ಬ್ರೆಜಿಲ್ ಬೆಂಬಲ: ವಿಶ್ವಸಂಸ್ಥೆಯ ಸುಧಾರಣೆಗಳ ವಿಷಯದಲ್ಲಿ ಅಂತರರಾಷ್ಟ್ರೀಯ ಸಮುದಾಯದಲ್ಲೂ ಪರಿಸ್ಥಿತಿ ಬದಲಾಗಿದೆ. ನಮ್ಮ ದನಿಗೆ ನೂಕುಬಲ ಸಿಕ್ಕಿದೆ. ಇದು ಉತ್ತಮ ಬೆಳವಣಿಗೆ ಎಂದು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರತಿ ಭಾರಿಯೂ ವಿಶ್ವಸಂಸ್ಥೆಯಲ್ಲಿ ಸುಧಾರಣೆ ಆಗಬೇಕೆಂದು ಚರ್ಚೆಯಾಗುತ್ತದೆ. ಆದರೆ, ಈ ಬಾರಿ ಇದರಲ್ಲಿ ಒಂದಿಷ್ಟು ಮಹತ್ವದ ಬೆಳವಣಿಗೆಗಳು ಆಗಿರುವುದನ್ನು ಎಲ್ಲರೂ ಗ್ರಹಿಸಿದ್ದಾರೆ. ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು, ಭದ್ರತಾ ಮಂಡಳಿಯಲ್ಲಿ ಕಾಯಂ ಮತ್ತು ಕಾಯಂ ಅಲ್ಲದ ಪ್ರತಿನಿಧಿ ದೇಶಗಳ ಸಂಖ್ಯೆ ಹೆಚ್ಚಿಸಬೇಕೆಂದು ಪ್ರತಿಪಾದಿಸಿದ್ದಾರೆ. ಹಾಗೆಯೇ ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಅವರು ಸಾಮಾನ್ಯ ಅಧಿವೇಶನದಲ್ಲಿ ನಿರ್ದಿಷ್ಟವಾಗಿ ಭಾರತದ ಹೆಸರು ಉಲ್ಲೇಖಿಸಿ, 'ಭದ್ರತಾ ಮಂಡಳಿ ಮತ್ತಷ್ಟು ಪ್ರಜಾಸತ್ತಾತ್ಮಕವಾಗಬೇಕು. ಮಂಡಳಿಯ ಕಾಯಂ ಸ್ಥಾನಕ್ಕೆ ಭಾರತ ಮತ್ತು ಬ್ರೆಜಿಲ್ ಹೆಚ್ಚು ಅರ್ಹವಾಗಿವೆ' ಎಂದು ರಷ್ಯಾದ ಬೆಂಬಲವನ್ನು ಘೋಷಿಸಿದ್ದಾರೆ. ಹಲವು ದೇಶಗಳು ತಮ್ಮ ಹೇಳಿಕೆಗಳಲ್ಲಿ ಭಾರತದ ಹೆಸರು ಉಲ್ಲೇಖಿಸಿ, ಸುಧಾರಣೆ ಬೆಂಬಲಿಸಿದ್ದಾರೆ' ಎಂದರು.

ಉಕ್ರೇನ್: ಮಾತುಕತೆಯೇ ಮಾರ್ಗ

ಉಕ್ರೇನ್ ಸಂಘರ್ಷ ಶಮನಕ್ಕೆ ಮಾತುಕತೆ ಮತ್ತು ರಾಜತಾಂತ್ರಿಕತೆಯೊಂದೇ ಮಾರ್ಗ ಎಂದು ಭಾರತ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಪುನರುಚ್ಚರಿಸಿದೆ.

'ಉಕ್ರೇನ್ ಸಂಘರ್ಷ ತೀವ್ರಗೊಂಡಂತೆ ನಾವು ಯಾರ ಕಡೆಗೆ ಇದ್ದೇವೆ ಎನ್ನುವ ಪ್ರಶ್ನೆಗಳು ಎದುರಾಗುತ್ತಲೇ ಇವೆ. ನಮ್ಮ ಉತ್ತರ, ಪ್ರತಿ ಬಾರಿಯೂ ನೇರ ಮತ್ತು ಪ್ರಾಮಾಣಿಕವಾಗಿರುತ್ತದೆ. ನಾವು ಯಾವಾಗಲೂ ಶಾಂತಿಯ ಕಡೆಗೆ ಇರುತ್ತೇವೆ. ನಾವು ಶಾಶ್ವತ ಶಾಂತಿಯ ಪರ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಪ್ರತಿಪಾದಿಸಿದರು.

ಮೂರನೇ ಬಾರಿಗೆ ಷಿ ಜಿನ್‌ಪಿಂಗ್‌ಗೆ ಅಧ್ಯಕ್ಷ ಪಟ್ಟ?

ಬೀಜಿಂಗ್ (ಎಎಫ್‌ಪಿ): ಚೀನಾದ ಕಮ್ಯುನಿಸ್ಟ್ ಪಾರ್ಟಿಯು ಅಕ್ಟೋಬರ್ 16ರಿಂದ ಆರಂಭವಾಗುವ ಪ್ರಮುಖ ರಾಜಕೀಯ ಸಭೆಯಲ್ಲಿ (ಕಾಂಗ್ರೆಸ್) ಪಾಲ್ಗೊಳ್ಳುವ ಎಲ್ಲ ಪ್ರತಿನಿಧಿಗಳನ್ನು ಆಯ್ಕೆ ಮಾಡಿದೆ. ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಮೂರನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗುವ ಸಾಧ್ಯತೆ ಇದೆ.

ಪಕ್ಷದ ನೀತಿ ನಿರೂಪಣೆಯ ಶಕ್ತಿಶಾಲಿಯಾದ 25 ಸದಸ್ಯರ ಪಾಲಿಟ್‌ಬ್ಯೂರೊ 5 ವರ್ಷಕ್ಕೊಮ್ಮೆ ಈ ಮಹತ್ವದ ಸಭೆ ಸೇರುತ್ತದೆ.

ಮಾವೋ ಅವರಂತೆ ಮತ್ತೊಬ್ಬ ಸರ್ವಾಧಿಕಾರಿ ಹುಟ್ಟಿಕೊಳ್ಳುವುದನ್ನು ತಡೆಯುವ ಸಲುವಾಗಿ ಮಾಜಿ ನಾಯಕ ಡೆಂಗ್ ಷಿಯೊಪಿಂಗ್ ಅವರು 1980ರ ದಶಕದಲ್ಲಿ ಅಧ್ಯಕ್ಷರಾಗುವುದನ್ನು ಎರಡು ಅವಧಿಗೆ ಮಿತಿಗೊಳಿಸಿ, ನಿಯಮ ಜಾರಿಗೊಳಿಸಿದ್ದರು. ಆದರೆ, ಹಾಲಿ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು 2018ರಲ್ಲಿ ಈ ನಿಯಮ ರದ್ದುಗೊಳಿಸಿದರು.

ಇರಾನ್ ಗಲಭೆಗೆ ಪ್ರಚೋದನೆ: ಕಠಿಣ ಕ್ರಮದ ಎಚ್ಚರಿಕೆ

ಪ್ಯಾರಿಸ್ (ಎಎಫ್‌ಪಿ): 'ಇರಾನ್‌ನಲ್ಲಿ ನಡೆಯುತ್ತಿರುವ ಹಿಜಾಬ್ ವಿರೋಧಿ ಹೋರಾಟದ ವೇಳೆ ಗಲಭೆಗೆ ಪ್ರಚೋದನೆ ನೀಡುತ್ತಿರುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಇರಾನ್ ನ್ಯಾಯಾಂಗದ ಮುಖ್ಯಸ್ಥ ಘೋಲಾಮ್ ಹೊಸೇನಿ ಮೊಹ್ಸೇನಿ ಇಜಿ ಭಾನುವಾರ ಎಚ್ಚರಿಸಿದ್ದಾರೆ.

ಹಿಜಾಬ್ ಸರಿಯಾಗಿ ಧರಿಸಿರಲಿಲ್ಲ ಎಂಬ ಕಾರಣಕ್ಕೆ ಮಹಸಾ ಅಮೀನಿ ಎಂಬ ಯುವತಿಯನ್ನು ಇರಾನಿನ ನೈತಿಕ ಪೊಲೀಸರು ಬಂಧಿಸಿದ್ದರು. ಬಳಿಕ ಆಕೆ ಮೃತಪಟ್ಟಿದ್ದಳು. ಇದನ್ನು ಖಂಡಿಸಿ ಮಹಿಳೆಯರು ದೇಶದಾದ್ಯಂತ ಸತತ 9 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಗಲಭೆ ಹಾಗೂ ಹಿಂಸಾಚಾರದಲ್ಲಿ ಈವರೆಗೆ ಒಟ್ಟು 41 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಎಸ್‌.ಡಿ.ಬರ್ಮನ್ ನಿವಾಸ ಸಾಂಸ್ಕೃತಿಕ ಸಂಕೀರ್ಣ

ಕುಮಿಲ್ಲಾ (ಬಾಂಗ್ಲಾದೇಶ) (ಪಿಟಿಐ): ಗಾಯಕ ಮತ್ತು ಸಂಗೀತ ನಿರ್ದೇಶಕ ಸಚಿನ್ ದೇವ್ ಬರ್ಮನ್ ಅವರ ಕುಮಿಲ್ಲಾ ಜಿಲ್ಲೆಯಲ್ಲಿರುವ ಭವ್ಯ ನಿವಾಸವನ್ನು ಸಾಂಸ್ಕೃತಿಕ ಸಂಕೀರ್ಣವಾಗಿ ಪರಿವರ್ತಿಸಲು ನಿರ್ಧರಿಸಲಾಗಿದೆ.

ಯೋಜನೆ ಅನುಷ್ಠಾನಕ್ಕೆ ಪ್ರಧಾನಿ ಶೇಖ್ ಹಸೀನಾ ಸರ್ಕಾರ ₹86 ಲಕ್ಷ ಬಿಡುಗಡೆ ಮಾಡಿದೆ.

1906ರಲ್ಲಿ ಜನಿಸಿದ ಎಸ್. ಡಿ.ಬರ್ಮನ್ ದೇವ್ ಅವರು ತಮ್ಮ ಮೊದಲ 18 ವರ್ಷ ಕುಮಿಲ್ಲಾದ ದಕ್ಷಿಣ ಚರ್ಥಾ ಗ್ರಾಮದ ರಾಜ್‌ಬರಿಯಲ್ಲಿ (ಅರಮನೆ) ಕಳೆದಿದ್ದರು ಎಂದು ವಕೀಲ, ಇತಿಹಾಸಕಾರ ಗೊಲಾಮ್ ಫಾರುಕ್ ತಿಳಿಸಿದ್ದಾರೆ. ಏಳು ಎಕರೆ ಪ್ರದೇಶದಲ್ಲಿ ಅರಮನೆ ನಿರ್ಮಿಸಲಾಗಿದ್ದು, ಕಾಲಾನುಕ್ರಮದಲ್ಲಿ ಒಂದಿಷ್ಟು ಪ್ರದೇಶ ಅತಿಕ್ರಮಣವಾಗಿದೆ ಎಂದು ತಿಳಿಸಿದ್ದಾರೆ.

ದೇವ್ ಅವರ ತಂದೆ ತ್ರಿಪುರ ರಾಜವಂಶಸ್ಥರಾಗಿದ್ದು, ಕುಮಿಲ್ಲಾಗೆ ಹೋಗಿ ನೆಲೆಸಿದ್ದರು. ಇಲ್ಲಿನ ಅರಮನೆಯಲ್ಲಿ ದೇವ್ ಬೆಳೆದಿದ್ದರು. 1947ರ ಬಳಿಕ ದೇವ್ ಅವರ ಕುಟುಂಬಸ್ಥರು ಮತ್ತೆ ಭಾರತಕ್ಕೆ ವಲಸೆ ಬಂದಿದ್ದರು.

ದೇವ್ ಅವರು ವಾಸವಿದ್ದ ಅರಮನೆಯ ಸಂರಕ್ಷಣೆಗೆ 2017ರಲ್ಲಿ ಬಾಂಗ್ಲಾ ಅಧಿಕಾರಿಗಳು ತೀರ್ಮಾನಿಸಿದ್ದರು.

ಅಮೆರಿಕದಿಂದ ಗೂಢಚರ್ಯ ಉಪಗ್ರಹ ಉಡಾವಣೆ

ವಾಂಡೆನ್ಬರ್ಗ್ ಬಾಹ್ಯಾಕಾಶ ನೆಲೆ, ಅಮೆರಿಕ (ಎಪಿ): ಅಮೆರಿಕದ ರಾಷ್ಟ್ರೀಯ ವಿಚಕ್ಷಣ ಕಚೇರಿಯು ಗೂಢಚರ್ಯ ಉಪಗ್ರಹವನ್ನು ಯುನೈಟೆಡ್ ಅಲ್ಲಿಯಾನ್ಸ್ ಡೆಲ್ಟಾ 4 ರಾಕೆಟ್ ಮೂಲಕ ಕಕ್ಷೆಗೆ ಉಡಾಯಿಸಿದೆ.

ಕ್ಯಾಲಿಫೋರ್ನಿಯಾದ ಸಾಂಟಾ ಬಾರ್ಬರಾ ಕೌಂಟಿಯಲ್ಲಿರುವ ವಾಂಡೆನ್ಬರ್ಗ್ ಬಾಹ್ಯಾಕಾಶ ನೆಲೆಯ ಮೂಲಕ ಮಧ್ಯಾಹ್ನ 3.25ಕ್ಕೆ (ಸ್ಥಳೀಯ ಕಾಲಮಾನ) ಎನ್‌ಆರ್‌ಒಎಲ್–91 ಗೂಢಚರ್ಯ ಉಪಗ್ರಹವನ್ನು ಉಡಾಯಿಸಲಾಗಿದೆ.

ರೋಹಿತ್ ಪಡೆಗೆ ಸರಣಿ ಕಿರೀಟ

ಬೆಳಗಿದ ಸೂರ್ಯ, ವಿರಾಟ್ ಆರ್ಭಟ; ಅಕ್ಷರ್ ಸ್ಪಿನ್ ಮೋಡಿ: ಭಾರತ ತಂಡಕ್ಕೆ ರೋಚಕ ಜಯ

ಹೈದರಾಬಾದ್ (ಪಿಟಿಐ): ಸೂರ್ಯಕುಮಾರ್ ಯಾದವ್ ಮಿಂಚಿನಾಟ ಹಾಗೂ ವಿರಾಟ್ ಕೊಹ್ಲಿಯ ಜವಾಬ್ದಾರಿಯುತ ಬ್ಯಾಟಿಂಗ್ ಬಲದಿಂದ ಭಾನುವಾರ ನಡೆದ ಆಸ್ಟ್ರೇಲಿಯಾ ಎದುರಿನ ಮೂರನೇ ಟಿ20 ಪಂದ್ಯದಲ್ಲಿ ಭಾರತ ತಂಡವು ರೋಚಕ ಜಯಸಾಧಿಸಿತು.

ಇದರೊಂದಿಗೆ 2–1ರಿಂದ ಸರಣಿಯನ್ನು ಗೆದ್ದ ತಂಡವು ಸಂಭ್ರಮಿಸಿತು. ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡಕ್ಕೆ ಆಸ್ಟ್ರೇಲಿಯಾವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 186 ರನ್ ಗಳಿಸಿ ಕಠಿಣ ಸವಾಲೊಡ್ಡಿತು.

ಗುರಿ ಬೆನ್ನಟ್ಟಿದ ಆತಿಥೇಯ ತಂಡವು ಪಂದ್ಯದಲ್ಲಿ ಇನ್ನೂ ಒಂದು ಎಸೆತ ಬಾಕಿಯಿರುವಾಗಲೇ 6 ವಿಕೆಟ್‌ಗಳಿಂದ ಜಯಿಸಿತು. ಸೂರ್ಯ (69; 36ಎ, 4X5, 6X5) ಹಾಗೂ ವಿರಾಟ್ (63; 48ಎ, 4X3, 6X4) ಮೂರನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 104 ರನ್‌ಗಳಿಂದಾಗಿ ತಂಡದ ಗೆಲುವು ಸಾಧ್ಯವಾಯಿತು. ಹಾರ್ದಿಕ್ ಪಾಂಡ್ಯ (ಔಟಾಗದೆ 25; 16ಎ) ಕೂಡ ಮಹತ್ವದ ಕಾಣಿಕೆ ನೀಡಿದರು.

ಆದರೆ ಹೋದ ಪಂದ್ಯದಲ್ಲಿ ಅಬ್ಬರಿಸಿದ್ದ ರೋಹಿತ್ ಶರ್ಮಾ ಹಾಗೂ ಕೆ.ಎಲ್. ರಾಹುಲ್ ಇಲ್ಲಿ ಉತ್ತಮ ಆರಂಭ ನೀಡುವಲ್ಲಿ ವಿಫಲರಾದರು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ಕೊಹ್ಲಿ ವಿಕೆಟ್ ಪತನ ತಡೆ ದರು. ಚೆಂದದ ಹೊಡೆತಗಳನ್ನೂ ಪ್ರಯೋಗಿಸಿದರು. ಆದರೆ, ಸೂರ್ಯಕುಮಾರ್ ಮಾತ್ರ ವಿರಾಟ್‌ಗಿಂತಲೂ ವೇಗವಾಗಿ ರನ್ ಗಳಿಸಿದರು. ಎಲ್ಲ ಬೌಲರ್‌ಗಳ ಎಸೆತಗಳನ್ನೂ ದಂಡಿಸಿದರು. 191.67ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು.

ಗ್ರೀನ್, ಡೇವಿಡ್ ಅರ್ಧಶತಕ: ಆಸ್ಟ್ರೇಲಿಯಾ ತಂಡದ ಕ್ಯಾಮರಾನ್ ಗ್ರೀನ್ (52; 21ಎ, 4X7, 6X3) ಹಾಗೂ ಟಿಮ್ ಡೇವಿಡ್ (54; 27ಎ, 4X3) ಅರ್ಧಶತಕಗಳುವ್ಯರ್ಥವಾದವು.

ಪಂದ್ಯದ ಆರಂಭದಲ್ಲಿ ಗ್ರೀನ್ ಮಿಂಚಿದರೆ, ಕೊನೆಯ ಹಂತದಲ್ಲಿ ಡೇವಿಡ್ ಅಬ್ಬರಿಸಿದ್ದರು. ಮಧ್ಯದಲ್ಲಿ ಅಕ್ಷರ್ ಪಟೇಲ್ (33ಕ್ಕೆ3) ಸ್ಪಿನ್ ಮೋಡಿಯು ಗಮನ ಸೆಳೆಯಿತು.

ಗ್ರೀನ್ ಅಬ್ಬರದಿಂದಾಗಿ ಆಸ್ಟ್ರೇಲಿಯಾ ತಂಡವು ಮೊದಲ ಐದು ಓವರ್‌ಗಳಲ್ಲಿಯೇ 62 ರನ್‌ಗಳು ತಂಡದ ಖಾತೆ ಸೇರಿದವು. ಡೇವಿಡ್ ಹಾಗೂ ಡೇನಿಲ್ ಸ್ಯಾಮ್ಸ್ (ಔಟಾಗದೆ 28) ಜೊತೆಯಾಟದಿಂದಾಗಿ ಕೊನೆಯ ಐದು ಓವರ್‌ಗಳಲ್ಲಿ 63 ರನ್‌ಗಳು ಸೇರ್ಪಡೆಯಾದವು.



ಸೂರ್ಯಕುಮಾರ್ ಯಾದವ್ ಮತ್ತು ವಿರಾಟ್ ಕೊಹ್ಲಿ– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ 7ಕ್ಕೆ 186 (20 ಓವರ್)
ಗ್ರೀನ್ ಸಿ ರಾಹುಲ್ ಬಿ ಭುವನೇಶ್ವರ್ 52 (21 ಎ., 4X7, 6X3), ಫಿಂಚ್ ಸಿ ಪಾಂಡ್ಯ ಬಿ ಅಕ್ಷರ್ 7 (6 ಎ., 4X1), ಸ್ಮಿತ್ ಸ್ಟಂಪ್ಡ್ ಕಾರ್ತಿಕ್ ಬಿ ಚಾಹಲ್ 9 (10 ಎ., 4X1), ಮ್ಯಾಕ್ಸ್‌ವೆಲ್ ರನೌಟ್ (ಅಕ್ಷರ್) 6 (11 ಎ., 4X1), ಇಂಗ್ಲಿಸ್ ಸಿ ರೋಹಿತ್ ಬಿ ಅಕ್ಷರ್ 24 (22 ಎ., 4X3), ಡೇವಿಡ್ ಸಿ ರೋಹಿತ್ ಬಿ ಹರ್ಷಲ್ 54 (27 ಎ., 4X2, 6X4), ವೇಡ್ ಸಿ ಮತ್ತು ಬಿ ಅಕ್ಷರ್ 1 (3 ಎ), ಸ್ಯಾಮ್ಸ್ ಔಟಾಗದೆ 28 (20 ಎ., 4X1, 6X2), ಕಮಿನ್ಸ್ ಔಟಾಗದೆ 0 (1 ಎ)
ಇತರ 5 (ಲೆಗ್‌ಬೈ–1, ನೋಬಾಲ್–1, ವೈಡ್–3)
ವಿಕೆಟ್ ಪತನ: 1–44 (ಆರನ್ ಫಿಂಚ್; 3.3), 2–62 (ಕ್ಯಾಮರಾನ್ ಗ್ರೀನ್; 4.6), 3–75 (ಗ್ಲೆನ್ ಮ್ಯಾಕ್ಸ್‌ವೆಲ್; 7.4), 4–84 (ಸ್ಟೀವನ್ ಸ್ಮಿತ್; 9.2), 5–115 (ಜೋಶ್ ಇಂಗ್ಲಿಸ್; 13.1), 6–117 (ಮ್ಯಾಥ್ಯೂ ವೇಡ್; 13.5), 7–185 (ಟಿಮ್ ಡೇವಿಡ್; 19.3)
ಬೌಲಿಂಗ್: ಭುವನೇಶ್ವರ್ ಕುಮಾರ್ 3–0–39–1, ಅಕ್ಷರ್ ಪಟೇಲ್ 4–0–33–3, ಜಸ್‌ಪ್ರೀತ್ ಬೂಮ್ರಾ 4–0–50–0, ಹಾರ್ದಿಕ್ ಪಾಂಡ್ಯ 3–0–23–0, ಯುಜುವೇಂದ್ರ ಚಾಹಲ್ 4–0–22–1, ಹರ್ಷಲ್ ಪಟೇಲ್ 2–0–18–1

ಭಾರತ 4ಕ್ಕೆ 187 (19.5 ಓವರ್)
ರಾಹುಲ್ ಸಿ ವೇಡ್ ಬಿ ಸ್ಯಾಮ್ಸ್ 1 (4 ಎ), ರೋಹಿತ್ ಸಿ ಸ್ಯಾಮ್ಸ್ ಬಿ ಕಮಿನ್ಸ್ 17 (14 ಎ., 4X2, 6X1), ಕೊಹ್ಲಿ ಸಿ ಫಿಂಚ್ ಬಿ ಸ್ಯಾಮ್ಸ್ 63 (48 ಎ., 4X3, 6X4), ಸೂರ್ಯಕುಮಾರ್ ಸಿ ಫಿಂಚ್ ಬಿ ಹ್ಯಾಜೆಲ್‌ವುಡ್ 69 (36 ಎ., 4X5, 6X5), ಪಾಂಡ್ಯ ಔಟಾಗದೆ 25 (16 ಎ., 4X2, 6X1), ಕಾರ್ತಿಕ್ ಔಟಾಗದೆ 1 (1 ಎ)
ಇತರ 11(ಬೈ–1, ಲೆಗ್‌ಬೈ–4, ವೈಡ್–6)
ವಿಕೆಟ್ ಪತನ: 1–5 (ಕೆ.ಎಲ್. ರಾಹುಲ್; 0.6), 2–30 (ರೋಹಿತ್ ಶರ್ಮಾ; 3.4), 3–134 (ಸೂರ್ಯಕುಮಾರ್ ಯಾದವ್; 13.6), 4–182 (ವಿರಾಟ್ ಕೊಹ್ಲಿ; 19.2)
ಬೌಲಿಂಗ್: ಡೇನಿಯಲ್ ಸ್ಯಾಮ್ಸ್ 3.5–0–33–2, ಜೋಶ್ ಹ್ಯಾಜೆಲ್‌ವುಡ್ 4–0–40–1, ಆ್ಯಡಮ್ ಜಂಪಾ 4–0–44–0, ಪ್ಯಾಟ್ ಕಮಿನ್ಸ್ 4–0–40–1, ಕ್ಯಾಮರಾನ್ ಗ್ರೀನ್ 3–0–14–0, ಗ್ಲೆನ್ ಮ್ಯಾಕ್ಸ್‌ವೆಲ್ 1–0–11–0

ಫಲಿತಾಂಶ: ಭಾರತಕ್ಕೆ 6 ವಿಕೆಟ್ ಗೆಲುವು

ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಬೌಲಿಂಗ್‌ನಲ್ಲಿ ಆ್ಯರನ್ ಫಿಂಚ್, ಜೋಷ್ ಇಂಗ್ಲಿಸ್ ಹಾಗೂ ಮ್ಯಾತ್ಯೂ ವೇಡ್ ಔಟಾಗದರು. ಗ್ಲೆನ್ ಮ್ಯಾಕ್ಸ್‌ವೆಲ್ ರನೌಟ್‌ಗೂ ಅಕ್ಷರ್ ಚುರುಕಿನ ಫೀಲ್ಡಿಂಗ್ ಮತ್ತು ನಿಖರ ಥ್ರೋ ಕಾರಣವಾದವು.

ಮ್ಯಾಕ್ಸ್‌ವೆಲ್‌ಗೆ ಕೈಕೊಟ್ಟ ಬೇಲ್ಸ್!: ಆಸ್ಟ್ರೇಲಿಯಾದ ಸ್ಫೋಟಕ ಬ್ಯಾಟ್ಸ್‌ಮನ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರಿಗೆ ಅದೃಷ್ಟ ಜೊತೆಗಿರಲಿಲ್ಲ. ಅದರಿಂದಾಗಿ ಅವರು ವಿಚಿತ್ರ ರೀತಿಯಲ್ಲಿ ರನ್‌ಔಟ್ ಆಗಬೇಕಾಯಿತು.

ಎಂಟನೇ ಓವರ್‌ನಲ್ಲಿ ಚಾಹಲ್ ಎಸೆತವನ್ನು ಡೀಪ್ ಸ್ಕ್ವೇರ್‌ಲೆಗ್‌ನತ್ತ ಹೊಡೆದು ಒಂದು ರನ್ ಗಳಿಸಿದರು. ಎರಡನೇ ರನ್‌ಗೆ ಮರಳಿದರು. ಈ ಸಂದರ್ಭದಲ್ಲಿ ಫೀಲ್ಡರ್ ಅಕ್ಷರ್ ಪಟೇಲ್ ಥ್ರೋ ಮಾಡಿದ ಚೆಂಡು ಕಲೆಕ್ಟ್ ಮಾಡುವ ಪ್ರಯತ್ನದಲ್ಲಿ ವಿಕೆಟ್‌ಕೀಪರ್ ದಿನೇಶ್ ಕೈಗವಸು ಸ್ಟಂಪ್‌ಗೆ ಬಡಿದಿತ್ತು. ಆದರೆ ಬೇಲ್ಸ್ ಉದುರಲಿಲ್ಲ. ಆದರೆ ಅಕ್ಷರ್ ಮಾಡಿದ ನಿಖರ ಥ್ರೋ ಸ್ಟಂಪ್ಸ್‌ಗೆ ಅಪ್ಪಳಿಸಿ ಬೇಲ್ಸ್ ಉದುರಿದವು. ಇದೆಲ್ಲವೂ ಕ್ಷಣಾರ್ಧದಲ್ಲಿ ನಡೆದುಹೋಗಿದ್ದು ಮೂರನೇ ಅಂಪೈರ್ ಪರಿಶೀಲನೆಯಲ್ಲಿ ಗೋಚರಿಸಿತು.

ಮ್ಯಾಕ್ಸ್‌ವೆಲ್ ಬೇಸರಗೊಂಡು ಪೆವಿಲಿಯನ್‌ನತ್ತ ಹೆಜ್ಜೆಹಾಕಿದರು.

ದಾಖಲೆ ಉತ್ತಮಪಡಿಸಿಕೊಂಡ ಕೆನ್ಯಾದ ಓಟಗಾರ

ಮ್ಯಾರಥಾನ್: ಕಿಪ್ಚೋಗಿ ವಿಶ್ವದಾಖಲೆ

ಬರ್ಲಿನ್ (ಎಪಿ): ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಕೆನ್ಯಾದ ಎಲಿಯುಡ್ ಕಿಪ್ಚೋಗಿ ಅವರು ಪುರುಷರ ಮ್ಯಾರಥಾನ್‌ನಲ್ಲಿ ತಮ್ಮದೇ ಹೆಸರಿನಲ್ಲಿದ್ದ ವಿಶ್ವದಾಖಲೆಯನ್ನು ಉತ್ತಮಪಡಿಸಿಕೊಂಡರು.

ಭಾನುವಾರ ನಡೆದ ಬರ್ಲಿನ್ ಮ್ಯಾರಥಾನ್‌ನಲ್ಲಿ ಅಮೋಘ ಪ್ರದರ್ಶನ ನೀಡಿದ ಅವರು 42.2 ಕಿ.ಮೀ ದೂರವನ್ನು 2 ಗಂಟೆ 1 ನಿಮಿಷ 9 ಸೆಕೆಂಡುಗಳಲ್ಲಿ ಮೊದಲಿಗರಾಗಿ ಗುರಿಮುಟ್ಟಿದರು. ನಾಲ್ಕು ವರ್ಷಗಳ ಹಿಂದೆ ಬರ್ಲಿನ್ ಮ್ಯಾರಥಾನ್‌ನಲ್ಲೇ ತಾವು ಸ್ಥಾಪಿಸಿದ್ದ ವಿಶ್ವದಾಖಲೆಯನ್ನು 30 ಸೆಕೆಂಡುಗಳಿಂದ ಉತ್ತಮಪಡಿಸಿಕೊಂಡರು. 2018 ರಲ್ಲಿ ನಡೆದ ಸ್ಪರ್ಧೆಯಲ್ಲಿ 2:01.39 ಸೆ.ಗಳಲ್ಲಿ ಗುರಿ ತಲುಪಿದ್ದರು.

ಎಥಿಯೋಪಿಯದ ಟಿಗಿಸ್ಟ್ ಅಸೆಫಾ ಮಹಿಳೆಯರ ವಿಭಾಗದಲ್ಲಿ ಅಚ್ಚರಿಯ ಗೆಲುವು ಪಡೆದರು. ಅವರು 2 ಗಂಟೆ 15 ನಿ. 37 ಸೆ.ಗಳಲ್ಲಿ ಗುರಿ ತಲುಪಿದರು.

ಪುರುಷರ ವಿಭಾಗದಲ್ಲಿ ಕೆನ್ಯಾದ ಮಾರ್ಕ್ ಕೊರಿರ್ (2 ಗಂ. 5 ನಿ. 58 ಸೆ.) ಎರಡನೇ ಸ್ಥಾನ ಪಡೆದರೆ, ಎಥಿಯೋಪಿಯದ ಟಡು ಅಬಾಟೆ (2 ಗಂ. 6 ನಿ. 28 ಸೆ.) ಮೂರನೆಯವರಾಗಿ ಸ್ಪರ್ಧೆ ಕೊನೆಗೊಳಿಸಿದರು.



ಬರ್ಲಿನ್ ಮ್ಯಾರಥಾನ್ ಗೆದ್ದ ಎಲಿಯುಡ್ ಕಿಪ್ಚೋಗಿ ಸಂಭ್ರಮ –ಎಎಫ್‌ಪಿ ಚಿತ್ರ

ಕಿಪ್ಚೋಗಿ ಅವರಿಗೆ ಬರ್ಲಿನ್‌ನಲ್ಲಿ ದೊರೆತ ನಾಲ್ಕನೇ ಗೆಲುವು ಇದು. ಈ ಮೂಲಕ ಎಥಿಯೋಪಿಯದ ದಿಗ್ಗಜ ಓಟಗಾರ ಹೈಲಿ ಗೆಬ್ರ್‌ಸೆಲಾಸಿ ಅವರ ಸಾಧನೆಯನ್ನು ಸರಿಗಟ್ಟಿದರು. ಕಿಪ್ಚೋಗಿ ಅವರಂತೆ ಗೆಬ್ರ್‌ಸೆಲಾಸಿ ಕೂಡಾ ಇಲ್ಲಿ ಎರಡು ಸಲ (2007 ಮತ್ತು 2008 ರಲ್ಲಿ) ವಿಶ್ವದಾಖಲೆ ಸ್ಥಾಪಿಸಿದ್ದರು.

ಕಿಪ್ಚೋಗಿ ಅವರು ಆರಂಭದಿಂದಲೇ ಉತ್ತಮ ವೇಗ ಕಾಯ್ದುಕೊಂಡರು. ಮೊದಲ 10 ಕಿ.ಮೀ ದೂರವನ್ನು ಕೇವಲ 28 ನಿ. 23 ಸೆ.ಗಳಲ್ಲಿ ಕ್ರಮಿಸಿದರು.

ಕಿಪ್ಚೋಗಿ ಮತ್ತು ಎಥಿಯೋಪಿಯದ ಅಂದಮ್ಲಾಕ್ ಬೆಲಿಹು ಅವರು ಅರ್ಧಹಾದಿಯನ್ನು 59.51 ಸೆ.ಗಳಲ್ಲಿ ಕ್ರಮಿಸಿದರು. 30 ಕಿ.ಮೀ ದೂರದವರೆಗೂ ಕಿಪ್ಚೋಗಿ ಜತೆಗಿದ್ದ ಬೆಲಿಹು ಆ ಬಳಿಕ ಹಿಂದೆ ಬಿದ್ದರು. ಕೊನೆಯ 10 ಕಿ.ಮೀನಲ್ಲಿ ಮುನ್ನಡೆ ಕಾಪಾಡಿಕೊಂಡ ಕಿಪ್ಚೋಗಿ, ಅಗ್ರಸ್ಥಾನ ಪಡೆದರು. ಬೆಲಿಹು (2ಗಂ. 6 ನಿ. 40 ಸೆ.) ನಾಲ್ಕನೆಯವರಾಗಿ ಸ್ಪರ್ಧೆ ಕೊನೆಗೊಳಿಸಿದರು.

ಪರ–ವಿರೋಧ ಚರ್ಚೆಗೆ ಕಾರಣವಾದ ರನೌಟ್

‘ಅಪರಾಧ’ ಮಾಡಿಲ್ಲ: ಹರ್ಮನ್

ಲಂಡನ್ (ಪಿಟಿಐ): ಇಂಗ್ಲೆಂಡ್ ಎದುರಿನ ಕೊನೆಯ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ನಮ್ಮ ತಂಡ ಯಾವುದೇ ‘ಅಪರಾಧ’ ಮಾಡಿಲ್ಲ ಎಂದು ಭಾರತ ಮಹಿಳಾ ತಂಡದ ನಾಯಕಿ ಹರ್ಮನ್‌ಪ್ರೀತ್ ಹೇಳಿದ್ದಾರೆ.

ಶನಿವಾರ ಲಾರ್ಡ್ಸ್‌ನಲ್ಲಿ ನಡೆದ ಪಂದ್ಯದಲ್ಲಿ ಭಾರತದ ದೀಪ್ತಿ ಶರ್ಮಾ, ಇಂಗ್ಲೆಂಡ್‌ನ ಚಾರ್ಲಿ ಡೀನ್ ಅವರನ್ನು ರನೌಟ್ ಮಾಡಿದ ರೀತಿ (ಮಂಕಡಿಂಗ್) ಪರ–ವಿರೋಧ ಚರ್ಚೆಗೆ ಕಾರಣವಾಗಿತ್ತು. ನಾನ್‌ಸ್ಟ್ರೈಕರ್‌ನಲ್ಲಿದ್ದ ಡೀನ್ ಅವರು, ದೀಪ್ತಿ ಬೌಲ್ ಮಾಡುವಾಗ ಎಸೆತ ಹಾಕುವ ಮುನ್ನವೇ ಕ್ರೀಸ್ ಬಿಟ್ಟು ಮುಂದೆ ಹೋಗಿದ್ದರು. ಆಗ ಅವರನ್ನು ದೀಪ್ತಿ ರನೌಟ್ ಮಾಡಿದ್ದರು. ನಾನ್‌ಸ್ಟ್ರೈಕರ್ ಬ್ಯಾಟರ್‌ಗಳು ಎಸೆತ ಹಾಕುವ ಮುನ್ನವೇ ಕ್ರೀಸ್‌ನಿಂದ ಹೊರಗಡಿಯಿಟ್ಟದ್ದರೆ ರನೌಟ್ ಮಾಡಲು ಬೌಲರ್‌ಗೆ ಈಗ ಅವಕಾಶ ಇದೆ. ಕೆಲದಿನಗಳ ಹಿಂದೆಯಷ್ಟೇ ಐಸಿಸಿ ಈ ನಿಯಮ ಜಾರಿಗೆ ತಂದಿತ್ತು. ಆದರೂ ಈ ರನೌಟ್ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಪರ–ವಿರೋಧ ಚರ್ಚೆ ನಡೆಯುತ್ತಿದೆ.

ಪಂದ್ಯದ ಬಳಿಕ ಈ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಹರ್ಮನ್‌ಪ್ರೀತ್, ‘ಅದು ಆಟದ ಒಂದು ಭಾಗ. ಐಸಿಸಿ ನಿಯಮದಲ್ಲೂ ಅದಕ್ಕೆ ಅವಕಾಶವಿದೆ. ದೀಪ್ತಿ ಅವರಿಗೆ ಆ ನಿಯಮದ ಬಗ್ಗೆ ಅರಿವು ಇದ್ದದ್ದು ಸಂತಸದ ವಿಷಯ. ಬ್ಯಾಟರ್ (ಡೀನ್) ಕ್ರೀಸ್ ಬಿಟ್ಟು ತುಂಬಾ ಮುಂದೆ ಹೋಗಿದ್ದರು. ದೀಪ್ತಿ ತಪ್ಪು ಮಾಡಿಲ್ಲ’ ಎಂದಿದ್ದಾರೆ.

ಪಂದ್ಯದ ಬಳಿಕ ಟಿ.ವಿ ನಿರೂಪಕರು ರನೌಟ್ ಬಗ್ಗೆಯೇ ಪದೇ ಪದೇ ಪ್ರಶ್ನೆ ಕೇಳಿದಾಗ ಹರ್ಮನ್‌ಪ್ರೀತ್ ಸಿಟ್ಟಾದರು. ‘ಆ ರನೌಟ್ ಬಗ್ಗೆ ಹೆಚ್ಚು ಚರ್ಚಿಸುವ ಅಗತ್ಯವಿಲ್ಲ. ನಾವು ಯಾವುದೇ ಅಪರಾಧ ಮಾಡಿಲ್ಲ’ ಎಂದು ತೀಕ್ಷ್ಣವಾಗಿ ಉತ್ತರಿಸಿದರು.

ಕೊನೆಯ ಪಂದ್ಯವನ್ನು 16 ರನ್‌ಗಳಿಂದ ಗೆದ್ದಿದ್ದ ಭಾರತ, ಮೂರು ಪಂದ್ಯಗಳ ಸರಣಿಯಲ್ಲಿ ‘ಕ್ಲೀನ್‌ಸ್ವೀಪ್’ ಸಾಧನೆ ಮಾಡಿತ್ತು.

ಬೌಲರ್‌ಗೆ ಶ್ರೇಯ ನೀಡಬೇಕು (ನವದೆಹಲಿ ವರದಿ): ದೀಪ್ತಿ ಶರ್ಮಾ ಅವರ ಪರವಾಗಿ ಮಾತನಾಡಿರುವ ಆಫ್‌ಸ್ಪಿನ್ನರ್ ಆರ್.ಅಶ್ವಿನ್, ‘ಆ ರೀತಿ ಔಟ್ ಮಾಡಿದಾಗ ಅದನ್ನು ರನೌಟ್ ಎಂದು ಪರಿಗಣಿಸದೆ, ವಿಕೆಟ್ ಪಡೆದ ಶ್ರೇಯವನ್ನು ಬೌಲರ್‌ಗೆ ನೀಡಬೇಕು’ ಎಂದಿದ್ದಾರೆ.

ಒತ್ತಡದ ಸಮಯದಲ್ಲೂ ಬೌಲರ್ ‘ಸಮಯಪ್ರಜ್ಞೆ’ ಮೆರೆದು ಆ ರೀತಿ ಔಟ್ ಮಾಡುವರು. ಆ ವಿಕೆಟ್ ಕೂಡಾ ಬೌಲರ್‌ನ ಖಾತೆ ಸೇರಬೇಕು ಎಂದು ಹೇಳಿದ್ದಾರೆ.



ದೀಪ್ತಿ ಶರ್ಮಾ ಅವರು ಇಂಗ್ಲೆಂಡ್‌ನ ಚಾರ್ಲಿ ಡೀನ್ ಅವರನ್ನು ರನೌಟ್ ಮಾಡಿದ ಕ್ಷಣ –ಟ್ವಿಟರ್ ಚಿತ್ರ

ಕುಲದೀಪ್ ಹ್ಯಾಟ್ರಿಕ್: ಭಾರತ ‘ಎ’ ಜಯಭೇರಿ

ಚೆನ್ನೈ (ಪಿಟಿಐ): ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ (51ಕ್ಕೆ 4) ಅವರ ಹ್ಯಾಟ್ರಿಕ್ ಮತ್ತು ಪೃಥ್ವಿ ಶಾ (77 ರನ್, 48 ಎ., 4X11, 6X3) ಅಬ್ಬರದ ಅರ್ಧಶತಕದ ನೆರವಿನಿಂದ ಭಾರತ ‘ಎ’ ತಂಡ ನ್ಯೂಜಿಲೆಂಡ್ ‘ಎ’ ವಿರುದ್ಧದ ಎರಡನೇ ಏಕದಿನ ಪಂದ್ಯದಲ್ಲಿ 4 ವಿಕೆಟ್‌ಗಳ ಜಯ ಸಾಧಿಸಿತು.

ಎಂ.ಎ ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್ ‘ಎ’ 47 ಓವರ್‌ಗಳಲ್ಲಿ 219 ರನ್‌ಗಳಿಗೆ ಆಲೌಟಾಯಿತು. ಸಂಜು ಸ್ಯಾಮ್ಸನ್ ನಾಯಕತ್ವದ ಭಾರತ ‘ಎ’ 34 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಗೆದ್ದಿತು. ಮೂರು ಪಂದ್ಯಗಳ ಸರಣಿಯನ್ನು 2–0 ರಲ್ಲಿ ತನ್ನದಾಗಿಸಿಕೊಂಡಿತು.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್ ‘ಎ’ 47 ಓವರ್‌ಗಳಲ್ಲಿ 219 (ರಚಿನ್ ರವೀಂದ್ರ 61, ಜೋ ಕಾರ್ಟರ್ 72, ಕುಲದೀಪ್ ಯಾದವ್ 51ಕ್ಕೆ 4, ರಾಹುಲ್ ಚಾಹರ್ 50ಕ್ಕೆ 2) ಭಾರತ ‘ಎ’ 34 ಓವರ್‌ಗಳಲ್ಲಿ 6 ವಿಕೆಟ್‌ಗೆ 222 (ಪೃಥ್ವಿ ಶಾ 77, ರುತುರಾಜ್ ಗಾಯಕವಾಡ್ 30, ಸಂಜು ಸ್ಯಾಮ್ಸನ್ 37, ಲೋಗನ್ ವ್ಯಾನ್ ಬೀಕ್ 46ಕ್ಕೆ 3)



ಕುಲದೀಪ್ ಯಾದವ್

ಯಶಸ್ವಿಯನ್ನು ಹೊರ ಕಳುಹಿಸಿದ ರಹಾನೆ



ಅಜಿಂಕ್ಯ ರಹಾನೆ

ದುಲೀಪ್ ಟ್ರೋಫಿ ಟೂರ್ನಿ ಫೈನಲ್ ಪಂದ್ಯದ ಅಂತಿಮ ದಿನದಾಟದಲ್ಲಿ ಅಜಿಂಕ್ಯ ರಹಾನೆ ಅವರು ಉತ್ತಮ ನಾಯಕತ್ವಕ್ಕೆ ಮಾದರಿಯಾಗಬಲ್ಲ ತೀರ್ಮಾನ ತೆಗೆದುಕೊಂಡು ಗಮನ ಸೆಳೆದರು. ಎದುರಾಳಿ ತಂಡದ ಬ್ಯಾಟ್ಸ್‌ಮನ್‌ಗಳನ್ನು ಕೆಣಕಿದ (ಸ್ಲೆಡ್ಜಿಂಗ್) ತಮ್ಮದೇ ತಂಡದ ಯಶಸ್ವಿ ಜೈಸ್ವಾಲ್ ಅವರನ್ನು ಶಿಸ್ತುಕ್ರಮದ ಭಾಗವಾಗಿ ಅಂಗಳದಿಂದ ಹೊರಕ್ಕೆ ಕಳುಹಿಸಿದರು.

ಜೈಸ್ವಾಲ್ ಅವರು ದಕ್ಷಿಣ ವಲಯ ತಂಡದ ಬ್ಯಾಟರ್ ರವಿ ತೇಜ ಅವರನ್ನು ಪದೇ ಪದೇ ಕೆಣಕುತ್ತಿದ್ದರು. ಅಂಪೈರ್ ಎಚ್ಚರಿಕೆ ನೀಡಿದ ಬಳಿಕವೂ 57ನೇ ಓವರ್‌ನಲ್ಲಿ ಮತ್ತೆ ಕೆಣಕಿದರು. ಈ ವೇಳೆ ಅಂಪೈರ್, ರಹಾನೆ ಬಳಿ ದೂರು ನೀಡಿದರು. ನೇರವಾಗಿ ಜೈಸ್ವಾಲ್ ಬಳಿ ತೆರಳಿದ ರಹಾನೆ, ಅಂಗಳ ತೊರೆಯುವಂತೆ ಅವರಿಗೆ ಸೂಚಿಸಿದರು.

ಏಳು ಓವರ್‌ಗಳ ಬಳಿಕ ಅವರು ಮತ್ತೆ ಫೀಲ್ಡಿಂಗ್‌ಗೆ ಬಂದರು. ಅದುವರೆಗೆ ಪಶ್ಚಿಮ ವಲಯ 10 ಮಂದಿಯೊಂದಿಗೆ ಆಡಿತು. ಈ ಪಂದ್ಯದಲ್ಲಿ ದ್ವಿಶತಕ ಗಳಿಸಿದ 20 ವರ್ಷದ ಜೈಸ್ವಾಲ್ ‘ಪಂದ್ಯಶ್ರೇಷ್ಠ’ ಪ್ರಶಸ್ತಿ ಪಡೆದರು.

ಪಂದ್ಯದ ಬಳಿಕ ಈ ಬಗ್ಗೆ ಪ್ರತಿಕ್ರಿಯಿಸಿದ ರಹಾನೆ, ‘ಎದುರಾಳಿ ತಂಡದ ಆಟಗಾರರು ಮತ್ತು ಅಂಪೈರ್‌ಗಳನ್ನು ಗೌರವಿಸಬೇಕು. ಆದ್ದರಿಂದ ಇಂತಹ ಘಟನೆಗಳನ್ನು ಇದೇ ರೀತಿ ನಿಭಾಯಿಸಬೇಕಾಗುತ್ತದೆ’ ಎಂದಿದ್ದಾರೆ.

ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿ

ನಾಲ್ಕನೇ ದಿನದಾಟದಲ್ಲೇ ಎದುರಾಳಿ ತಂಡದ ಆರು ವಿಕೆಟ್ ಪಡೆದಿದ್ದ ಅಜಿಂಕ್ಯ ರಹಾನೆ ನಾಯಕತ್ವದ ಪಶ್ಚಿಮ ವಲಯ ಗೆಲುವಿನ ಹಾದಿಯಲ್ಲಿತ್ತು.

ಪಶ್ಚಿಮ ವಲಯ ಚಾಂಪಿಯನ್

ಕೊಯಮತ್ತೂರು (ಪಿಟಿಐ): ದಕ್ಷಿಣ ವಲಯ ತಂಡವನ್ನು 294 ರನ್‌ಗಳಿಂದ ಮಣಿಸಿದ ಪಶ್ಚಿಮ ವಲಯ ತಂಡದವರು ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಗೆಲುವಿಗೆ 529 ರನ್‌ಗಳ ಕಠಿಣ ಗುರಿ ಪಡೆದಿದ್ದ ಹನುಮ ವಿಹಾರಿ ನೇತೃತ್ವದ ದಕ್ಷಿಣ ವಲಯ ತಂಡ ಅಂತಿಮ ದಿನವಾದ ಭಾನುವಾರ, ಎರಡನೇ ಇನಿಂಗ್ಸ್‌ನಲ್ಲಿ 234 ರನ್‌ಗಳಿಗೆ ಆಲೌಟಾಯಿತು.

ಅಂತಿಮ ದಿನದಾಟದ ಭೋಜನ ವಿರಾಮಕ್ಕೆ ಮುನ್ನವೇ ಪಶ್ಚಿಮ ವಲಯ ಗೆಲುವಿನ ವ್ಯವಹಾರ ಪೂರ್ಣಗೊಳಿಸಿತು.

154 ರನ್‌ಗಳಿಂದ ಆಟ ಮುಂದುವರಿಸಿದ ದಕ್ಷಿಣ ವಲಯ ಬೆಳಿಗ್ಗೆ ಅಲ್ಪ ಪ್ರತಿರೋಧ ತೋರಿತು. ರವಿ ತೇಜ ಮತ್ತು ಸಾಯಿ ಕಿಶೋರ್ ಸುಮಾರು ಎರಡು ಗಂಟೆ ಕಾಲ ಎದುರಾಳಿ ಬೌಲಿಂಗ್ ದಾಳಿಯನ್ನು ಎದುರಿಸಿ ನಿಂತರು.

ಈ ಜೋಡಿ 157 ಎಸೆತಗಳಲ್ಲಿ 57 ರನ್ ಸೇರಿಸಿತು. 82 ಎಸೆತಗಳಲ್ಲಿ 7 ರನ್ ಗಳಿಸಿದ ಸಾಯಿ ಕಿಶೋರ್ ವಿಕೆಟ್ ಪಡೆದ ಚಿಂತನ್ ಗಜ ಈ ಜತೆಯಾಟ ಮುರಿದರು. ರವಿ ಅವರನ್ನು ಜತೆಯಾದ ಕರ್ನಾಟಕದ ಕೆ.ಗೌತಮ್ (17 ರನ್, 28 ಎ) ಅವರೂ ಕೆಲಹೊತ್ತು ಎದುರಾಳಿ ತಂಡವನ್ನು ಕಾಡಿದರು.

97 ಎಸೆತಗಳಲ್ಲಿ 53 ರನ್ ಗಳಿಸಿದ ರವಿ ತೇಜ ವಿಕೆಟ್ ಪಡೆದ ಶಮ್ಸ್ ಮುಲಾನಿ ಅವರು ಪಶ್ಚಿಮ ವಲಯ ತಂಡದಲ್ಲಿ ಹರ್ಷ ತಂದಿತ್ತರು. ಬಾಸಿಲ್ ಥಂಪಿ (0) ಅವರನ್ನು ಮುಲಾನಿ ಹಾಗೂ ಗೌತಮ್ ಅವರನ್ನು ತನುಷ್ ಕೋಟ್ಯಾನ್ ಔಟ್ ಮಾಡುವುದರೊಂದಿಗೆ ಪಶ್ಚಿಮ ವಲಯ ಗೆಲುವಿನ ಸಂಭ್ರಮ ಆಚರಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಶ್ಚಿಮ ವಲಯ: 96.3 ಓವರ್‌ಗಳಲ್ಲಿ 270. ದಕ್ಷಿಣ ವಲಯ: 83.1 ಓವರ್‌ಗಳಲ್ಲಿ 327. ಎರಡನೇ ಇನಿಂಗ್ಸ್: ಪಶ್ಚಿಮ ವಲಯ: 128 ಓವರ್‌ಗಳಲ್ಲಿ 4 ವಿಕೆಟ್‌ಗೆ 585 ಡಿಕ್ಲೇರ್ಡ್. ದಕ್ಷಿಣ ವಲಯ:71.2 ಓವರ್‌ಗಳಲ್ಲಿ 234 (ಸಾಯಿ ಕಿಶೋರ್ 7, ರವಿ ತೇಜ 53, ಕೆ.ಗೌತಮ್ 17, ಜಯದೇವ್ ಉನದ್ಕತ್ 28ಕ್ಕೆ 2, ಅತಿಥ್ ಶೇಟ್ 29ಕ್ಕೆ 2, ಶಮ್ಸ್ ಮುಲಾನಿ 51ಕ್ಕೆ 4) ಫಲಿತಾಂಶ: ಪಶ್ಚಿಮ ವಲಯಕ್ಕೆ 294 ರನ್ ಗೆಲುವು

ಟೆಂಟ್ ಪೆಗ್ಗಿಂಗ್: ಭಾರತಕ್ಕೆ ಕಂಚು

ನವದೆಹಲಿ (ಪಿಟಿಐ): ಭಾರತದ ಈಕ್ವೆಸ್ಟ್ರಿಯನ್ ತಂಡವು ಜೋರ್ಡಾನ್‌ನ ವಾಡಿ ರಮ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಟೆಂಟ್ ಪೆಗ್ಗಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಐತಿಹಾಸಿಕ ಕಂಚಿನ ಪದಕ ಗೆದ್ದುಕೊಂಡಿದೆ.

ಭಾರತ ತಂಡವು ಇದೇ ಮೊದಲ ಬಾರಿ ಈ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿತ್ತು. ರಿತಿಕಾ ದಹಿಯಾ, ಪ್ರಿಯಾಂಕಾ ಭಾರದ್ವಾಜ್ ಮತ್ತು ಖುಷಿ ಸಿಂಗ್ ಅವರು ತಂಡದಲ್ಲಿದ್ದರು.

ಭಾರತ ತಂಡವು ಒಟ್ಟು 136 ಪಾಯಿಂಟ್ಸ್ ಕಲೆಹಾಕಿತು. ಚಿನ್ನ ಗೆದ್ದ ದಕ್ಷಿಣ ಆಫ್ರಿಕಾ 170.5 ಪಾಯಿಂಟ್ಸ್ ಗಳಿಸಿದರೆ, ಒಮನ್ (146) ಬೆಳ್ಳಿ ಪದಕ ತನ್ನದಾಗಿಸಿಕೊಂಡಿತು ಎಂದು ಭಾರತ ಈಕ್ವೆಸ್ಟ್ರಿಯನ್ ಫೆಡರೇಷನ್ ಪ್ರಕಟಣೆಯಲ್ಲಿ ತಿಳಿಸಿದೆ.

ಚಾಂಪಿಯನ್‌ಷಿಪ್‌ನಲ್ಲಿ 14 ದೇಶಗಳ ತಂಡಗಳು ಭಾಗವಹಿಸಿವೆ.



ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ (ಬಿಜಿಸಿ) ಭಾನುವಾರ ನಡೆದ ಕರ್ನಾಟಕ ಓಪನ್ ಅಮೆಚೂರ್ ಗಾಲ್ಫ್ ಚಾಂಪಿಯನ್‌ಷಿಪ್‌ನ ಓಪನ್ ಗ್ರಾಸ್ ವಿಭಾಗದಲ್ಲಿ ಚಾಂಪಿಯನ್ ಆದ ವರುಣ್ ಮುತ್ತಪ್ಪ (ಎಡ) ಅವರಿಗೆ ಅವರ ತಾತ, ಬಿಜಿಸಿ ಮಾಜಿ ಕ್ಯಾಪ್ಟನ್ ಬಿ.ಜಿ. ಮತ್ತಪ್ಪ ಟ್ರೋಫಿ ವಿತರಿಸಿದರು.

ಚೆಸ್: ಚಿನ್ಮಯ್, ಸಿದ್ಧಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಬೆಂಗಳೂರಿನ ಚಿನ್ಮಯ್ ಕೌಶಿಕ್ ಹಾಗೂ ಸಿದ್ಧಿ ರಾವ್ ಇಲ್ಲಿ ನಡೆದ 11 ವರ್ಷದೊಳಗಿನವರ ಮುಕ್ತ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ವಿಭಾಗದ ಪ್ರಶಸ್ತಿ ಜಯಿಸಿದರು.

ಮುಕ್ತ ವಿಭಾಗದಲ್ಲಿ ಚಿನ್ಮಯ್ ಅವರು ಎಂಟು ಸುತ್ತುಗಳಿಂದ ಎಂಟು ಪಾಯಿಂಟ್ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ಸಿದ್ಧಿ ರಾವ್ ಏಳು ಅಂಕಗಳನ್ನು ಗಳಿಸಿ ಪ್ರಶಸ್ತಿ ಜಯಿಸಿದರು.

ತಲಾ ಆರೂವರೆ ಪಾಯಿಂಟ್‌ಗಳನ್ನು ಗಳಿಸಿದ ಹೊಸಪೇಟೆಯ ಸೈಯದ್ ಅಬ್ದುಲ್ ಖಾದರ್ (10) ಹಾಗೂ ಬೆಂಗಳೂರಿನ ಪ್ರಥಮೇಶ್ ಶಶಿಕಾಂತ ದೇಶಮುಖ್ (11) ಮುಕ್ತ ವಿಭಾಗದಲ್ಲಿ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಗಳಿಸಿದರು.

ಬಾಲಕಿಯರ ವಿಭಾಗದಲ್ಲಿ 7 ಪಾಯಿಂಟ್‌ಗಳನ್ನು ಕಲೆ ಹಾಕಿದ ಮಂಗಳೂರಿನ ರುದ್ರಾ ರಾಜೀವ್ (11) ಎರಡನೇ ಸ್ಥಾನ ಹಾಗೂ 6.5 ಪಾಯಿಂಟ್‌ಗಳನ್ನು ಗಳಿಸಿದ ಬೆಂಗಳೂರಿನ ಶ್ರೇಯಾ ರಾಜೇಶ್ ಮೂರನೇ ಸ್ಥಾನ ಗಳಿಸಿದರು.

ರಾಷ್ಟ್ರಮಟ್ಟಕ್ಕೆ ಆಯ್ಕೆ: ಎರಡೂ ವಿಭಾಗಗಳಲ್ಲಿ ಮೊದಲ ಎರಡು ಸ್ಥಾನಗಳನ್ನು ಗಳಿಸಿದ ನಾಲ್ವರು (ಚಿನ್ಮಯ ಕೌಶಿಕ್, ಸಿದ್ಧಿರಾವ್, ಅಬ್ದುಲ್ ಖಾದರ್ ಮತ್ತು ರುದ್ರ ರಾಜೀವ್) ರಾಷ್ಟ್ರಮಟ್ಟಕ್ಕೆ ಆಯ್ಕೆಯಾದರು. ಹರಿಯಾಣದ ಗುರುಗ್ರಾಮದಲ್ಲಿ ಅ. 28ರಿಂದ ನಡೆಯಲಿರುವ ಟೂರ್ನಿಯಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಚಾಮರಾಜನಗರದಲ್ಲಿ ಇದೇ ಮೊದಲ ಬಾರಿಗೆ ನಡೆದ ಟೂರ್ನಿಯಲ್ಲಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ 152 ಮಕ್ಕಳು ಭಾಗವಹಿಸಿದ್ದರು.



ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ಗೆ ಆಯ್ಕೆಯಾದ ಚಿನ್ಮಯ್ ಕೌಶಿಕ್, ಸೈಯದ್ ಅಬ್ದುಲ್ ಖಾದರ್, ಸಿದ್ಧಿರಾವ್ ಮತ್ತು ರುದ್ರ ರಾಜೀವ್

ನಿಗದಿಯಾಗದ ಬಹುಮಾನ ಮೊತ್ತ; ಸ್ಪರ್ಧೆಗಳ ಪಟ್ಟಿಯೂ ಇಲ್ಲ; ಕೂಟ ಮುಂದೂಡಿಕೆ

ದಸರಾ ಕ್ರೀಡಾಕೂಟಕ್ಕೆ ಅನುದಾನವಿಲ್ಲ!

ಪ್ರಜಾವಾಣಿ ವಾರ್ತೆ

ಮೈಸೂರು: ಕೋವಿಡ್ ಬಳಿಕ ಅದ್ದೂರಿ ದಸರಾ ಆಯೋಜನೆಗೊಂಡಿದ್ದರೂ ದಸರಾ ಕ್ರೀಡಾಕೂಟಕ್ಕೆ ಮಾತ್ರ ಉತ್ಸವದ ದಿನವಾದ ಸೆ.26ರಂದೇ ಉದ್ಘಾಟನೆಯ ಭಾಗ್ಯವಿಲ್ಲ.

ಕ್ರೀಡಾಕೂಟದ ಸ್ಥಳ, ಸ್ಪರ್ಧೆಗಳ ಪಟ್ಟಿಯೇ ಸಿದ್ಧಗೊಂಡಿಲ್ಲ. ಅನುದಾನ, ವಿಜೇತರ ಬಹುಮಾನದ ಮೊತ್ತವೂ ನಿಗದಿಯಾಗಿಲ್ಲ. ಕೊರೊನಾದಿಂದಾಗಿ ಕ್ಷೀಣವಾಗಿದ್ದ ಕ್ರೀಡಾ ಚಟುವಟಿಕೆಗಳಿಗೆ ಈ ಬಾರಿಯ ದಸರಾದಲ್ಲಿ ಹುರುಪು ಸಿಗಬಹುದು ಎಂಬ ಕ್ರೀಡಾಪಟುಗಳ ಕನಸು ನನಸಾಗಿಲ್ಲ.

ಈ ಹಿಂದಿನ ಕ್ರೀಡಾಕೂಟಗಳಲ್ಲಿ ಗೆದ್ದ ಕೆಲವರಿಗೆ ಇದುವರೆಗೂ ಬಹುಮಾನ ಸಿಕ್ಕಿಲ್ಲ. ಈ ಬಾರಿಯೂ ಟಿ ಶರ್ಟ್, ಭತ್ಯೆಗೆ ಪರದಾಡಬೇಕಾಗಬಹುದೆಂಬ ಆತಂಕವೂ ಕ್ರೀಡಾಪಟುಗಳಲ್ಲಿದೆ.

ಚಾಮುಂಡಿಬೆಟ್ಟದಲ್ಲಿ ನಾಡಹಬ್ಬಕ್ಕೆ ಚಾಲನೆ ನೀಡುವ ಸಂದರ್ಭದಲ್ಲೇ ದಸರಾ ಕ್ರೀಡಾಕೂಟವನ್ನು ಉದ್ಘಾಟಿಸುವುದು ಸಂಪ್ರದಾಯ. ಈ ಬಾರಿ ಸೆ.29ಕ್ಕೆ ಮುಂದೂಡಲಾಗಿದೆ. ಒಲಿಂಪಿಯನ್, ಕುಸ್ತಿಪಟು ಸಾಕ್ಷಿ ಮಲ್ಲಿಕ್ ಅವರನ್ನು ಕ್ರೀಡಾಕೂಟ ಉದ್ಘಾಟಿಸಲು ಆಹ್ವಾನಿಸಲಾಗಿತ್ತು.

‘ನಾಡಹಬ್ಬಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಚಾಲನೆ ನೀಡಲಿರುವುದರಿಂದ ಭದ್ರತೆಯ ಸಲುವಾಗಿ ಹಾಗೂ ಅತಿಥಿಗಳ ದಿನಾಂಕದಲ್ಲಿ ವ್ಯತ್ಯಾಸವಾಗಿದ್ದರಿಂದ ಕ್ರೀಡಾಕೂಟವನ್ನು ಮುಂದೂಡಲಾಗಿದೆ’ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ರೋಹಿತ್ ‘ಪ್ರಜಾವಾಣಿ’ಗೆ ತಿಳಿಸಿದರು.

> **ದಸರಾದ ಇತರ ಚಟುವಟಿಕೆಗಳ ರೀತಿ ಕ್ರೀಡಾ ಚಟುವಟಿಕೆಗಳಿಗೂ ಅನುದಾನ ನೀಡಬೇಕು. ಸೀಮಿತ ಕ್ರೀಡಾಕೂಟ ಏರ್ಪಡಿಸುವುದು ಸರಿಯಲ್ಲ.**
> **ಟಿ.ಎಸ್.ರವಿ,** ಸಹಾಯಕ ನಿರ್ದೇಶಕ, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿವಿ

> **ದಸರಾ ಕ್ರೀಡಾಕೂಟಗಳಿಗೆ ಅನುದಾನದ ಲಭ್ಯತೆ ಆಧರಿಸಿ ವಿಜೇತರ ಬಹುಮಾನದ ಮೊತ್ತವನ್ನು ನಿಗದಿ ಮಾಡಲಾಗುವುದು.**
> **ರೋಹಿತ್,** ಸಹಾಯಕ ನಿರ್ದೇಶಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಮುಖ್ಯಾಂಶಗಳು
- ಸೆ.29ರಿಂದ ಅ.2ರವರೆಗೆ ನಡೆಯಲಿರುವ ಕ್ರೀಡಾಕೂಟ
- ವಾಣಿಜ್ಯೀಕರಣಗೊಂಡ ದಸರಾ ಕ್ರೀಡಾಕೂಟ; ಬೇಸರ
- ಯೋಗ ಸೇರಿ 27 ಕ್ರೀಡಾಕೂಟಗಳ ಆಯೋಜನೆ

‘ಯೋಗವೂ ಸೇರಿದಂತೆ 27 ಕ್ರೀಡೆಗಳು ಸೆ.29ರಿಂದ ಅ.2ರವರೆಗೆ ನಡೆಯಲಿದೆ. ಬಹುತೇಕ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ, ಕೆಲವು ಮೈಸೂರು ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ ನಡೆಯಲಿವೆ. ಕೆಲವು ಕಾಲೇಜುಗಳು ಮೈದಾನಗಳನ್ನೂ ಬಿಟ್ಟುಕೊಡಲು ಒಪ್ಪಿಕೊಂಡಿವೆ’ ಎಂದರು.


ವೈಯಕ್ತಿಕ ಕ್ರೀಡೆಗಳಲ್ಲಿ ಮೊದಲ ಸ್ಥಾನ ಪಡೆಯುವ ಸ್ಪರ್ಧಿಗಳಿಗೆ ₹ 8,000 ಸಾವಿರ, ಎರಡು ಮತ್ತು ಮೂರನೇ ಸ್ಥಾನ ಪಡೆಯುವವರಿಗೆ ಕ್ರಮವಾಗಿ ₹ 5,000 ಹಾಗೂ ₹ 2,500 ನಗದು ಬಹುಮಾನವನ್ನು 2019ರಲ್ಲಿ ನೀಡಲಾಗಿತ್ತು.

‘ಕೊನೆಯ ಕ್ಷಣದ ಸಿದ್ಧತೆಗಳಿಂದಾಗಿ ಅವ್ಯವಸ್ಥೆಯಾಗಿದೆ. ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕ ಗೆಲ್ಲುವುದು ಸಂಭ್ರಮವಾಗಿತ್ತು. ಈಗ ಕ್ರೀಡಾ ದಸರಾ ವಾಣಿಜ್ಯೀಕರಣಗೊಂಡಿದೆ’ ಎಂದು ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಕಾರ್ಯದರ್ಶಿ ಮಾದಪ್ಪ ಯೋಗೇಂದ್ರ ವಿಷಾದಿಸಿದರು.

‘ಅದ್ದೂರಿ ದಸರಾಗೆ ಹಣ ವಿನಿಯೋಗಿಸುವ ಸರ್ಕಾರವು ಕ್ರೀಡಾಪಟುಗಳ ಬಹುಮಾನದ ಹಣವನ್ನು ತಡವಾಗಿ ನೀಡಲು ನಿರ್ಧರಿಸಿರುವುದು ಸರಿಯಲ್ಲ. ಹಿಂದಿನ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ನೀಡಿಲ್ಲ. ಇದೊಂದು ಕಣ್ಣೊರೆಸುವ ತಂತ್ರವಾಗಬಾರದು’ ಎಂದು ಮೈಸೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಟಿ.ಎಸ್.ರವಿ ಅಭಿಪ್ರಾಯಪಟ್ಟರು.

‘ದಸರಾ ಕ್ರೀಡಾಕೂಟವನ್ನು 10 ದಿನವೂ ನಡೆಸಬೇಕು. ನಾಲ್ಕು ದಿನದ ತರಾತುರಿಯ ಆಯೋಜನೆಯೂ ಸರಿಯಲ್ಲ’ ಎಂದು ರಾಜ್ಯ ಸೈಕ್ಲಿಂಗ್ ಸಂಸ್ಥೆ ಅಧ್ಯಕ್ಷ ರಾಜು ಬಿರಾದಾರ್ ಬೇಸರ ವ್ಯಕ್ತಪಡಿಸಿದರು.

ಆನ್‌ಲೈನ್ ಚೆಸ್: ಕಾರ್ಲ್‌ಸನ್ ಮುನ್ನಡೆ



ಕಾರ್ಲ್‌ಸನ್

ನ್ಯೂಯಾರ್ಕ್ (ಪಿಟಿಐ): ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಜೂಲಿಯಸ್ ಬಾರ್ ಜೆನರೇಷನ್ ಕಪ್ ಆನ್‌ಲೈನ್ ರ್‍ಯಾಪಿಡ್ ಚೆಸ್ ಟೂರ್ನಿಯ ಫೈನಲ್‌ನ ಮೊದಲ ಹಂತದಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಎದುರು ಸ್ಪರ್ಧಿಸಿರುವ ಅವರು ಎರಡು ಪಂದ್ಯಗಳ ಸೆಟ್‌ನ ಫೈನಲ್‌ನಲ್ಲಿ, ಮೊದಲ ಪಂದ್ಯದಲ್ಲಿ 2.5–0.5ರಿಂದ ಗೆಲುವು ಸಾಧಿಸಿದರು. ಈಗ ಅರ್ಜುನ್ ಅವರು ನಾಲ್ಕು ಗೇಮ್‌ಗಳ ಎರಡನೇ ಪಂದ್ಯದಲ್ಲಿ ಗೆದ್ದರೆ ಮಾತ್ರ ಹಣಾಹಣಿ ಬ್ಲಿಟ್ಜ್ ಮಾದರಿಯ ಟೈಬ್ರೇಕರ್‌ಗೆ ಸಾಗಲಿದೆ.

ಮೊದಲ ಪಂದ್ಯದಲ್ಲಿ ನಾರ್ವೆ ಆಟಗಾರ ಅತ್ಯುತ್ತಮ ಆಟವಾಡಿದರು. ಬಿಳಿಕಾಯಿಗಳೊಂದಿಗೆ ಆಡಿದ ಮೊದಲ ಗೇಮ್‌ಅನ್ನು 40 ನಡೆಗಳಲ್ಲಿ ವಶಪಡಿಸಿಕೊಂಡ ಅವರು, ಎರಡನೇ ಗೇಮ್‌ನಲ್ಲೂ 29 ನಡೆಗಳಲ್ಲಿ ಗೆಲುವು ಒಲಿಸಿಕೊಂಡರು. ಮೂರನೇ ಗೇಮ್‌ಅನ್ನು ಅರ್ಜುನ್ ಡ್ರಾ ಮಾಡಿಕೊಂಡರೂ ವಿಶ್ವ ಚಾಂಪಿಯನ್ ಆಟಗಾರ ಪಂದ್ಯ ಗೆಲ್ಲುವುದನ್ನು ತಡೆಯಲಾಗಲಿಲ್ಲ.

ಸಂಕ್ಷಿಪ್ತ ಸುದ್ದಿ

ಅ. 3ರಿಂದ ರಾಷ್ಟ್ರೀಯ ಸೆಪಕ್ ಟಕ್ರಾ

ಚಂದರಗಿ (ಬೆಳಗಾವಿ ಜಿಲ್ಲೆ): ಇಲ್ಲಿನ ಚಂದರಗಿ ಕ್ರೀಡಾಶಾಲೆ ಆವರಣದಲ್ಲಿ ಅಕ್ಟೋಬರ್ 3ರಿಂದ 7ರವರೆಗೆ ನಡೆಯಲಿರುವ ಬಾಲಕ– ಬಾಲಕಿಯರ 25ನೇ ಸಬ್‌ಜ್ಯೂನಿಯರ್ ಸೆಪಕ್ ಟಕ್ರಾ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಸಿದ್ಧತೆ ಭರದಿಂದ ನಡೆದಿದೆ.

ಸೆಪಕ್ ಟಕ್ರಾ ಫೆಡರೇಷನ್ ಆಫ್ ಇಂಡಿಯಾ, ಕರ್ನಾಟಕ ಅಮೆಚೂರ್ ಸೆಪಕ್ ಟಕ್ರಾ ಸಂಸ್ಥೆ–ದಾವಣಗೆರೆ, ಚಂದರಗಿಯ ಕ್ರೀಡಾ ಉತ್ತೇಜನ, ಅಭಿವೃದ್ಧಿ ಹಾಗೂ ಸಹಕಾರ ನಿಯಮಿತದ ಆಶ್ರಯದಲ್ಲಿ, ಜಿಲ್ಲೆಯಲ್ಲಿ ಮೊದಲ ಬಾರಿಗೆ ಈ ಕ್ರೀಡೆ ಆಯೋಜಿಸಲಾಗಿದೆ.

ದೇಶದ 600 ತಂಡಗಳು ಈಗಾಗಲೇ ನೋಂದಣಿ ಮಾಡಿಕೊಂಡಿವೆ. ಆಟಗಾರರಿಗಾಗಿ ವಿವಿಧ ಆರು ಕ್ರೀಡಾಂಗಣಗಳನ್ನೂ ಸಿದ್ಧಪಡಿ ಸಲಾಗಿದೆ. 50 ಪರಿಣತ ಅಂಪೈರ್‌ಗಳನ್ನೂ ನಿಯೋಜಿಸಲಾಗಿದೆ. ಐದು ದಿನಗಳವರೆಗೆ ನಡೆಯುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಬರುವ ಎಲ್ಲರಿಗೂ ಕ್ರೀಡಾ ಶಾಲೆಯಿಂದ ವಸತಿ, ಊಟದ ವ್ಯವಸ್ಥೆ ಮಾಡಲಾಗಿದೆ ಎಂದು ವ್ಯವಸ್ಥಾಪಕ ಜಗದೀಶ ಮುರಗೋಡ ಮಾಹಿತಿ ನೀಡಿದರು.

ಅಗರ್‌ಗೆ ಮಣಿದ ಜೊಕೊವಿಚ್

ಲಂಡನ್ (ಎಪಿ): ‘ಟೀಮ್ ವರ್ಲ್ಡ್’ ತಂಡವು ಮೊದಲ ಬಾರಿ ಲೇವರ್ ಕಪ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ. ಭಾನುವಾರ ತಂಡವು 13–8ರಿಂದ ಟೀಮ್ ಯೂರೋಪ್‌ಅನ್ನು ಸೋಲಿಸಿತು.

‘ಟೀಮ್ ವರ್ಲ್ಡ್‘ ತಂಡದ ಕೆನಡಾ ಆಟಗಾರ ಅಗರ್ ಅಲಿಯಾಸ್ಸಿಮ್ 6-3, 7-6 (7/3) ರಿಂದ ನೊವಾಕ್ ಜೊಕೊವಿಚ್ ಅವರನ್ನು ಸೋಲಿಸಿದರೆ, ಫ್ರಾನ್ಸೆಸ್ ಟೈಫೊ 1-6,7-6 (13/11), 10–8ರಿಂದ ಸ್ಟೆಫನೊಸ್ ಸಿಟ್ಸಿಪಾಸ್ ಅವರನ್ನು ಮಣಿಸಿದರು.